# ವಿಶ್ವವಾಣಿ
ವಿಶ್ವಾಸವೇ ವಿಶ್ವ


ಮಾರ್ಚ್ 22ರಂದು ಆರಂಭ
ಮೇ 25ರಂದು ಫೈನಲ್ ಪಂದ್ಯ

## ಐಪಿಎಲ್ ವೇಳಾಪಟ್ಟಿ ಬಿಡುಗಡೆ

ಬಹುನಿರೀಕ್ಷಿತ ಇಂಡಿಯನ್ ಪ್ರೀಮಿಯರ್ ಲೀಗ್ 2025ನೇ ಸಾಲಿನ ಟ್ವೆಂಟಿ-20 ಕ್ರಿಕೆಟ್ ಟೂರ್ನಿಯ ವೇಳಾಪಟ್ಟಿಯನ್ನು ಬಿಸಿಸಿಐ ಭಾನುವಾರ ಬಿಡುಗಡೆಗೊಳಿಸಿದೆ. 18ನೇ ಆವೃತ್ತಿಯ ಟೂರ್ನಿಯು ಮಾರ್ಚ್ 22ರಂದು ಆರಂಭವಾಗಲಿದ್ದು, ಮೇ 25ರಂದು ಫೈನಲ್ ಪಂದ್ಯ ನಡೆಯಲಿದೆ.

### ದೆಹಲಿಯ ರೈಲು ನಿಲ್ದಾಣದಲ್ಲಿ ಕಾಲ್ತುಳಿತ: 18 ಜನರ ಸಾವು
### 1500 ಜನರಿಗೆ ಟಿಕೆಟ್, ಕಡೇಕ್ಷಣ ಪ್ಲ್ಯಾಟ್‌ಫಾರ್ಮ್ ಬದಲು

# ಎರಡು ರೈಲುಗಳ ಹೆಸರಿನ ಗೊಂದಲದಿಂದ ಕಾಲ್ತುಳಿತ

**ದೆಹಲಿ:** ದೆಹಲಿ ರೈಲು ನಿಲ್ದಾಣದಲ್ಲಿ ಶನಿವಾರ ರಾತ್ರಿ ಸಂಭವಿಸಿದ ಭೀಕರ ಕಾಲ್ತುಳಿತದಲ್ಲಿ 11 ಮಹಿಳೆಯರು ಮತ್ತು 4 ಮಕ್ಕಳು ಸೇರಿ ಒಟ್ಟು 18 ಮಂದಿ ಸಾವನ್ನಪ್ಪಿದ್ದಾರೆ. ಪ್ರಯಾಗರಾಜ್ ಎಕ್ಸ್‌ಪ್ರೆಸ್ ಮತ್ತು ಪ್ರಯಾಗರಾಜ್ ಸ್ಪೆಷಲ್ ಹೆಸರಿನ ರೈಲುಗಳ ಗೊಂದಲದಿಂದಾಗಿ ಕಾಲ್ತುಳಿತ ಸಂಭವಿಸಿದೆ ಎಂದು ಪೊಲೀಸರ ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

ದೆಹಲಿಯಿಂದ ಹೆಚ್ಚುವರಿಯಾಗಿ ನಾಲ್ಕು ರೈಲುಗಳು ಪ್ರಯಾಗರಾಜ್‌ಗೆ ಹೋಗುತ್ತಿದ್ದವು. ಅದರಲ್ಲಿ ಮೂರು ರೈಲುಗಳು ವಿಳಂಬವಾಗಿದ್ದವು. ಇದು ಅನಿರೀಕ್ಷಿತ ಜನದಟ್ಟಣೆಗೆ ಕಾರಣವಾಗಿತ್ತು. ಪ್ಲ್ಯಾಟ್‌ಫಾರ್ಮ್ 14 ಮತ್ತು 15 ರಿಂದ ಪ್ರಯಾಗರಾಜ್‌ಗೆ ತೆರಳಬೇಕಿದ್ದ ರೈಲುಗಳನ್ನು ರದ್ದುಗೊಳಿಸಿದ್ದರಿಂದ ಏಕಾಏಕಿ ನೂಕುನುಗ್ಗಲು ಉಂಟಾಗಿದ್ದು ಕಾಲ್ತುಳಿತಕ್ಕೆ ಕಾರಣವಾಗಿದೆ. ಪ್ರಯಾಗರಾಜ್ ಹೆಸರಿನ ಎರಡು ರೈಲುಗಳ ಘೋಷಣೆಯಿಂದಾಗಿ ಗೊಂದಲ ಉಂಟಾಗಿದೆ. ಪ್ರಯಾಣಿಕರು ತಾವು ಪ್ರಯಾಣಿಸಬೇಕಿರುವ ರೈಲು ಹೊರಟು ಬಿಡಬಹುದೆಂದು ಭಾವಿಸಿ ಏಕಾಏಕಿ ಧಾವಿಸಿದ್ದಾರೆ. ಇದರಿಂದ ನೂಕುನುಗ್ಗಲು ಉಂಟಾಗಿ ಕಾಲ್ತುಳಿತ ಸಂಭವಿಸಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

**1500ಕ್ಕೂ ಅಧಿಕ ಟಿಕೆಟ್ ವಿತರಣೆ:** ಅತಿ ಹೆಚ್ಚು ಟಿಕೆಟ್ ಮಾರಾಟವೇ ಈ ಕಾಲ್ತುಳಿತಕ್ಕೆ ಕಾರಣ ಎಂದೂ ಹೇಳಲಾಗುತ್ತಿದೆ. ಜನರನ್ನು ನಿಯಂತ್ರಿಸುವಲ್ಲಿ ರೈಲ್ವೆ ಇಲಾಖೆ ವಿಫಲವಾಗಿದೆ ಎಂದು ಜನರು ದೂರುತ್ತಿದ್ದಾರೆ. ರೈಲ್ವೆ ಪ್ರತಿ ಗಂಟೆಗೆ 1,500 ಸಾಮಾನ್ಯ ಟಿಕೆಟ್‌ಗಳನ್ನು ಮಾರಾಟ ಮಾಡುತ್ತಿದೆ, ಇದರಿಂದಾಗಿ ನಿಲ್ದಾಣದಲ್ಲಿ ಜನಸಂದಣಿ ಹೆಚ್ಚಾಯಿತು ಮತ್ತು ಪರಿಸ್ಥಿತಿ ನಿಯಂತ್ರಣಕ್ಕೆ ಬಾರದಂತಾ ಯಿತು. ಪ್ಲ್ಯಾಟ್‌ಫಾರ್ಮ್ ಸಂಖ್ಯೆ 14 ಮತ್ತು ಪ್ಲ್ಯಾಟ್‌ಫಾರ್ಮ್ ಸಂಖ್ಯೆ 16 ರ ಬಳಿಯ ಎಸ್ಕಲೇಟರ್ ಬಳಿ ಕಾಲ್ತುಳಿತ ಸಂಭವಿಸಿದೆ ಎಂಬುದು ತಿಳಿದುಬಂದಿದೆ.

### ತನಿಖೆಗೆ ಸಮಿತಿ ರಚನೆ

ಕಾಲ್ತುಳಿತ ಪ್ರಕರಣದ ತನಿಖೆ ನಡೆಸಲು ಇಬ್ಬರು ಸದಸ್ಯರ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ ಎಂದು ರೈಲ್ವೆ ಮಂಡಳಿಯ ಮಾಹಿತಿ ಮತ್ತು ಪ್ರಚಾರದ ಕಾರ್ಯನಿರ್ವಾಹಕ ನಿರ್ದೇಶಕ ದಿಲೀಪ್ ಕುಮಾರ್ ತಿಳಿಸಿದ್ದಾರೆ. ಉತ್ತರ ರೈಲ್ವೆಯ ಪ್ರಧಾನ ಮುಖ್ಯ ವಾಣಿಜ್ಯ ವ್ಯವಸ್ಥಾಪಕ ನರಸಿಂಗ್ ದೇವು ಮತ್ತು ಉತ್ತರ ರೈಲ್ವೆಯ ಪ್ರಧಾನ ಮುಖ್ಯ ಭದ್ರತಾ ಆಯುಕ್ತ ಪಂಕಜ್ ಗಂಗ್ವಾರ್ ಸಮಿತಿಯ ಸದಸ್ಯರಾಗಿದ್ದಾರೆ. ಇಂದಿನಿಂದಲೇ (ಭಾನುವಾರ) ತನಿಖೆ ಆರಂಭಿಸಿರುವ ಸಮಿತಿಯು ರೈಲು ನಿಲ್ದಾಣದ ಎಲ್ಲಾ ಸಿಸಿಟಿವಿ ದೃಶ್ಯಾವಳಿಗಳನ್ನು ಸುರಕ್ಷಿತವಾಗಿರಿಸುವಂತೆ ಆದೇಶಿಸಲಾಗಿದೆ ಎಂದು ತಿಳಿಸಿದ್ದಾರೆ.

ದೆಹಲಿ ರೈಲು ನಿಲ್ದಾಣದಲ್ಲಿ ಸಂಭವಿಸಿದ ಕಾಲ್ತುಳಿತದಿಂದ ನನಗೆ ದುಃಖವಾಗಿದೆ. ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಎಲ್ಲರಿಗೂ ನನ್ನ ಸಂತಾಪಗಳು. ಗಾಯಗೊಂಡವರು ಬೇಗ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸುತ್ತೇನೆ. ಕಾಲ್ತುಳಿತದಿಂದ ತೊಂದರೆಗೊಳಗಾದ ಎಲ್ಲರಿಗೂ ಅಧಿಕಾರಿಗಳು ಸಹಾಯ ಮಾಡುತ್ತಿದ್ದಾರೆ.
– **ನರೇಂದ್ರ ಮೋದಿ** ಪ್ರಧಾನಿ

### 10 ಲಕ್ಷ ರು. ಪರಿಹಾರ ಘೋಷಣೆ

ಕಾಲ್ತುಳಿತದಲ್ಲಿ ಮೃತರ ಕುಟುಂಬಗಳಿಗೆ ರೈಲ್ವೆ ಇಲಾಖೆ ತಲಾ 10 ಲಕ್ಷ ರು. ಪರಿಹಾರ ಘೋಷಿಸಿದೆ. ದುರಂತದಲ್ಲಿ ಗಂಭೀರವಾಗಿ ಗಾಯಗೊಂಡವರಿಗೆ ತಲಾ 2.5 ಲಕ್ಷ ರು. ಮತ್ತು ಸಣ್ಣಪುಟ್ಟ ಗಾಯಗಳಾದವರಿಗೆ ತಲಾ 1 ಲಕ್ಷ ರು. ಪರಿಹಾರ ಘೋಷಿಸಲಾಗಿದೆ ಎಂದು ರೈಲ್ವೆ ಪ್ರಕಟಣೆ ತಿಳಿಸಿದೆ.

### ಸಿದ್ದರಾಮಯ್ಯ ನೇತೃತ್ವದಲ್ಲೇ ಮುಂದಿನ ಚುನಾವಣೆ: ಡಿಕೆಶಿ
### ರಾಜ್ಯ ರಾಜಕೀಯದಲ್ಲಿ ಅಚ್ಚರಿಗೆ ಕಾರಣವಾದ ಡಿಸಿಎಂ ಹೇಳಿಕೆ

# ಸಿದ್ದು ನಾಯಕತ್ವಕ್ಕೆ ಜೈ

ವಿಶ್ವವಾಣಿ ಸುದ್ದಿಮನೆ

**ಬೆಂಗಳೂರು:** ಒಂದೆಡೆ ಸಿದ್ದರಾಮಯ್ಯ ಬೆಂಬಲಿಗರಿಂದ 'ಸಿದ್ದರಾಮಯ್ಯ ಅವರೇ ನಮ್ಮ ನಾಯಕರು' ಎನ್ನುವ ಹೇಳಿಕೆಗಳನ್ನು ನೀಡುವ ಮೂಲಕ ಕಾಂಗ್ರೆಸ್‌ನಲ್ಲಿನ 'ಬಣ' ರಾಜಕೀಯವನ್ನು ಬಯಲು ಮಾಡುತ್ತಿದ್ದರೆ, ಇನ್ನೊಂದೆಡೆ ಇದೀಗ ಕೆಪಿಸಿಸಿ ಅಧ್ಯಕ್ಷ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೇ ಸ್ವತಃ 'ಸಿದ್ದರಾಮಯ್ಯ ನೇತೃತ್ವದಲ್ಲೇ ಮುಂದಿನ ಚುನಾವಣೆ' ಎಂದಿರುವುದು ಅನೇಕರ ಅಚ್ಚರಿಗೆ ಕಾರಣವಾಗಿದೆ.

ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ, ಸಚಿವ ಸತೀಶ್ ಜಾರಕಿಹೊಳಿ, ಕೆ.ಎನ್.ರಾಜಣ್ಣ, ಡಾ.ಜಿ.ಪರಮೇಶ್ವರ ಸೇರಿದಂತೆ ಅನೇಕರು ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿರಲಿದ್ದಾರೆ ಎನ್ನುವ ಹೇಳಿಕೆ ನೀಡುತ್ತಾ ಬಂದಿದ್ದರು. ಸತೀಶ್ ಜಾರಕಿಹೊಳಿ ಒಂದು ಹೆಜ್ಜೆ ಮುಂದೆ ಹೋಗಿ, 'ಹೊಸ ನಾಯಕತ್ವ ಸಿಗುವ ತನಕ ಸಿದ್ದರಾಮಯ್ಯ ನಾಯಕರಾಗಿರಬೇಕು' ಎಂದು ಹೇಳಿದ್ದರು.

ಈ ಮಾತು ಡಿಕೆ ಬಣಕ್ಕೆ ತೀವ್ರ ಹಿನ್ನಡೆ ಎಂದು ವಿಶ್ಲೇಷಿಸಲಾಗಿತ್ತು. ಆದರೀಗ, ಸ್ವತಃ ಡಿ.ಕೆ. ಶಿವಕುಮಾರ್ ಅವರೇ 'ಸಿದ್ದರಾಮಯ್ಯ ನಮ್ಮ ನಾಯಕರು. ಅವರ ನೇತೃತ್ವದಲ್ಲಿಯೇ ಮುಂದಿನ ಚುನಾವಣೆ ಎದುರಿಸಲಾಗುವುದು' ಎನ್ನುವ ಮೂಲಕ ತಮ್ಮಿಬ್ಬರ ನಡುವೆ ಯಾವುದೇ ಭಿನ್ನಾಭಿಪ್ರಾಯವಿಲ್ಲ ಎನ್ನುವ ಸಂದೇಶ ರವಾನಿಸುವ ಪ್ರಯತ್ನ ಮಾಡಿದ್ದಾರೆ.

ಸಿದ್ದರಾಮಯ್ಯ ಅವರು ಪಕ್ಷಕ್ಕೆ ಅನಿವಾರ್ಯ ಎಂಬ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಸಿದ್ದರಾಮಯ್ಯ ಅವರು ನಮ್ಮ ನಾಯಕರು. ಅವರು ಎಲ್ಲ ಚುನಾವಣೆಗೂ ಬೇಕು. ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ, ವಿಧಾನಸಭೆ, ಸಂಸತ್ ಚುನಾವಣೆ ಎಲ್ಲದಕ್ಕೂ ಬೇಕು. ಅವರನ್ನು ಪಕ್ಷ ಎರಡು ಬಾರಿ ಮುಖ್ಯಮಂತ್ರಿ ಮಾಡಿದೆ. ಸಿದ್ದರಾಮಯ್ಯ ಅವರು ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರ ಹೆಸರು ಮಾಧ್ಯಮಗಳಿಗೆ ಆಹಾರವಾಗುವಂತೆ ಗೊಂದಲದ ಹೇಳಿಕೆ ಬೇಡ' ಎಂದು ಹೇಳಿದ್ದಾರೆ.



ಕಾಂಗ್ರೆಸ್‌ನಲ್ಲಿ ಯಾವುದೇ ಗೊಂದಲವಿಲ್ಲ. ಪಕ್ಷದ ಹೈಕಮಾಂಡ್ ನಿತ್ಯ ಎಲ್ಲವನ್ನೂ ಗಮನಿಸುತ್ತಿದೆ. ಯಾವ ಸಮಯದಲ್ಲಿ ಯಾವ ತೀರ್ಮಾನ ಕೈಗೊಳ್ಳಬೇಕೋ, ಆ ತೀರ್ಮಾನವನ್ನು ಕೈಗೊಳ್ಳಲಿದೆ. ಆದರೆ ಯಾರ ಹೇಳಿಕೆಯೂ ಮಾಧ್ಯಮಗಳಿಗೆ ಆಹಾರವಾಗುವಂತಿರಬಾರದು.
– **ಡಿ.ಕೆ.ಶಿವಕುಮಾರ್** ಕೆಪಿಸಿಸಿ ಅಧ್ಯಕ್ಷ

### ಸತೀಶ್, ರಾಜಣ್ಣಗೆ ಟಾಂಗ್

'ಕೆಲವರು ದಿನಬೆಳಗಾದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರನ್ನು ಮುಂದಿಟ್ಟುಕೊಂಡು ದುರ್ಬಳಕೆ ಮಾಡಿಕೊಳ್ಳುವುದು ಬೇಡ. ಈ ರೀತಿಯ ಹೇಳಿಕೆಗಳಿಂದ ಅನಗತ್ಯ ಗೊಂದಲ ಸೃಷ್ಟಿಸುವುದರೊಂದಿಗೆ ಪ್ರತಿಪಕ್ಷ ಹಾಗೂ ಮಾಧ್ಯಮಗಳಿಗೆ ಆಹಾರವಾಗುತ್ತದೆ. ಆದ್ದರಿಂದ ಈ ವಿಷಯದಲ್ಲಿ ನಾಯಕರು ಎಚ್ಚರಿಕೆಯಿಂದ ಇರಬೇಕು' ಎಂದು ಪರೋಕ್ಷವಾಗಿ ಸಚಿವ ರಾಜಣ್ಣ, ಸತೀಶ್ ಜಾರಕಿಹೊಳಿ ಅವರಿಗೆ ಡಿಕೆಶಿ ಟಾಂಗ್ ನೀಡಿದ್ದಾರೆ.

ಒಂದೆಡೆ ಸಿದ್ದರಾಮಯ್ಯ ಬೆಂಬಲಿಗರಿಂದ 'ಸಿದ್ದರಾಮಯ್ಯ ಅವರೇ ನಮ್ಮ ನಾಯಕರು' ಎನ್ನುವ ಹೇಳಿಕೆಗಳನ್ನು ನೀಡುವ ಮೂಲಕ ಕಾಂಗ್ರೆಸ್‌ನಲ್ಲಿನ 'ಬಣ' ರಾಜಕೀಯವನ್ನು ಬಯಲು ಮಾಡುತ್ತಿದ್ದರೆ, ಇನ್ನೊಂದೆಡೆ ಇದೀಗ ಕೆಪಿಸಿಸಿ ಅಧ್ಯಕ್ಷ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೇ ಸ್ವತಃ 'ಸಿದ್ದರಾಮಯ್ಯ ನೇತೃತ್ವದಲ್ಲೇ ಮುಂದಿನ ಚುನಾವಣೆ' ಎಂದಿರುವುದು ಅನೇಕರ ಅಚ್ಚರಿಗೆ ಕಾರಣವಾಗಿದೆ.


**ಸೊಂಪಾದ ಪುಟಗಳು**

ಕೇಂದ್ರ ಮಂತ್ರಿ ಕುಮಾರಣ್ಣನ ಲೇಟೆಸ್ಟು ಸಂಕಟ
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ನಮ್ಮ ದೇಶ ಯಾವಾಗ ಎಚ್ಚೆತ್ತುಕೊಳ್ಳುತ್ತದೋ?
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7


### ದಾರಿದೀಪೋಕ್ತಿ

ಜನ ತಮಗೆ ಏನು ಇಷ್ಟವಾಗುವುದೋ ಅದನ್ನೇ ಕೇಳಲು ಬಯಸುತ್ತಾರೆ. ಹೀಗಾಗಿ ಯಾವುದೇ ವಿಷಯದಲ್ಲಾದರೂ ಯಾರಿಗೂ ಸುದೀರ್ಘವಾದ ಸ್ಪಷ್ಟನೆ ನೀಡಲು ಹೋಗಬಾರದು. ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ.

### ವಕ್ರತುಂಡೋಕ್ತಿ

ಬಹಳ ಕಷ್ಟಪಟ್ಟು ಪ್ರಶಸ್ತಿ ಪಡೆದವರಿಗೆ ಪ್ರಶಸ್ತಿ ವಿಜೇತರು ಎನ್ನಬಹುದು.

### ಹಾಫ್ ಮ್ಯಾರಥಾನ್ ಕಿಪ್ಲಿಮೊ ವಿಶ್ವದಾಖಲೆ



**ಪ್ಯಾರಿಸ್:** ಉಗಾಂಡಾದ ಜಾಕೋಬ್ ಕಿಪ್ಲಿಮೊ ಅವರು ಹಾಫ್ ಮ್ಯಾರಥಾನ್ ಓಟವನ್ನು 57 ನಿಮಿಷಗಳ ಒಳಗೆ ಕ್ರಮಿಸುವ ಮೂಲಕ ವಿಶ್ವ ದಾಖಲೆ ಬರೆದಿದ್ದಾರೆ. ಬಾರ್ಸಿಲೋನಾದಲ್ಲಿ ಭಾನುವಾರ ನಡೆದ ಈ ಓಟದಲ್ಲಿ ಅವರು 56 ನಿಮಿಷ 42 ಸೆಕೆಂಡುಗಳಲ್ಲಿ ಈ ದೂರ ಕ್ರಮಿಸಿದರು. ಇಥಿಯೋಪಿಯಾದ ಯೊಮಿಫ್ ಕೆಜೆಲ್ಚಾ ಹೆಸರಿನಲ್ಲಿದ್ದ (ಕಳೆದ ಅಕ್ಟೋಬರ್‌ನಲ್ಲಿ 57ನಿ. 30ಸೆ.) ದಾಖಲೆಯನ್ನು ಮುರಿದಿದ್ದಾರೆ. 24 ವರ್ಷ ವಯಸ್ಸಿನ ಕಿಪ್ಲಿಮೊ 2021 ರಿಂದ 2024ರ ಅವಧಿಯಲ್ಲಿ 2 ಬಾರಿ ಹಾಫ್ ಮ್ಯಾರಥಾನ್ ದಾಖಲೆ ಸ್ಥಾಪಿಸಿದ್ದರು.

### ಡಿಸೆಂಬರ್‌ಗೆ ಹೋಲಿಸಿದರೆ ಜನವರಿಯಲ್ಲಿ ಹೆಚ್ಚು ತೆರಿಗೆ ಸಂಗ್ರಹ

# 84ಸಾವಿರ ಕೋಟಿ ವಾಣಿಜ್ಯ ತೆರಿಗೆ ಸಂಗ್ರಹ

**ಬೆಂಗಳೂರು:** ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಇದುವರೆಗೆ 84,624.05 ಕೋಟಿ ರು. ರಾಜ್ಯದಲ್ಲಿ ವಾಣಿಜ್ಯ ತೆರಿಗೆಗಳ ಸಂಗ್ರಹವಾ ಗಿದೆ. ಡಿಸೆಂಬರ್‌ಗೆ ಹೋಲಿಸಿದರೆ ಜನವರಿ ಯಲ್ಲಿ ಹೆಚ್ಚು ತೆರಿಗೆ ಸಂಗ್ರಹವಾಗಿದೆ.

ವಾಣಿಜ್ಯ ತೆರಿಗೆಗಳ ಇಲಾಖೆ ನೀಡಿರುವ ಮಾಹಿತಿ ಪ್ರಕಾರ, ಡಿಸೆಂಬರ್‌ನಲ್ಲಿ 8185.69 ಕೋಟಿ ರು. ತೆರಿಗೆ ಸಂಗ್ರಹವಾಗಿತ್ತು. ಜನವರಿಯಲ್ಲಿ 8865.81 ಕೋಟಿ ತೆರಿಗೆ ಸಂಗ್ರಹವಾಗಿದೆ. ಈ ಮೂಲಕ ಡಿಸೆಂಬರ್‌ಗೆ ಹೋಲಿಸಿದರೆ, ಜನವರಿಯಲ್ಲಿ 680.12 ಕೋಟಿ ಹೆಚ್ಚು ಸಂಗ್ರಹವಾಗಿದೆ. ಕಳೆದ ಹತ್ತು ತಿಂಗಳಲ್ಲಿ ಸರಕು ಮತ್ತು ಸೇವಾ ತೆರಿಗೆ 64,017.29 ಕೋಟಿ ರು., ಕರ್ನಾಟಕ ಮಾರಾಟ ತೆರಿಗೆ 19,472.16 ಕೋಟಿ ರು. ಹಾಗೂ ವೃತ್ತಿ ತೆರಿಗೆ 1134.60 ಕೋಟಿ ಸಂಗ್ರಹವಾಗಿದೆ. ಕಳೆದ ಆರ್ಥಿಕ ಸಾಲಿನಲ್ಲಿ ಈ ಮೂರು ತೆರಿಗೆಗಳು ಸೇರಿ ಒಟ್ಟು 94363.27 ಕೋಟಿ ಸಂಗ್ರಹವಾಗಿತ್ತು.

**ಕಳೆದ ಹತ್ತು ತಿಂಗಳಲ್ಲಿ ಸಂಗ್ರಹ**

| ಸರಕು ಮತ್ತು ಸೇವಾ ತೆರಿಗೆ | ಕರ್ನಾಟಕ ಮಾರಾಟ ತೆರಿಗೆ | ವೃತ್ತಿ ತೆರಿಗೆ |
|---|---|---|
| 64,017.29 ಕೋಟಿ ರು. | 19,472.16 ಕೋಟಿ ರು. | 1134.60 ಕೋಟಿ ರು. |

ಒಟ್ಟು ಸಂಗ್ರಹ 94363.27 ಕೋಟಿ ರು.

ಫೆಬ್ರವರಿ ಹಾಗೂ ಮಾರ್ಚ್ ತಿಂಗಳ ತೆರಿಗೆ ಬರಲಿದ್ದು, ಈ ಬಾರಿ ಕಳೆದ ವರ್ಷಕ್ಕಿಂತಲೂ ಹೆಚ್ಚು ತೆರಿಗೆ ಸಂಗ್ರಹವಾಗುವ ನಿರೀಕ್ಷೆಯಿದೆ.

### ವಿಶ್ವಸಂಸ್ಥೆಯಲ್ಲಿ ಹಿಂದಿ ಭಾಷೆಗೆ ಮಹತ್ವ ಸ್ಥಾನ

**ನ್ಯೂಯಾರ್ಕ್:** 600 ಮಿಲಿಯನ್ ಭಾಷಿಕರನ್ನು ಹೊಂದಿರುವ ಹಿಂದಿ ಭಾಷೆಯು ಮಹತ್ವದ ಸ್ಥಾನವನ್ನು ಹೊಂದಿದೆ ಎಂದು ವಿಶ್ವಸಂಸ್ಥೆಯ ಉನ್ನತ ಅಧಿಕಾರಿಯೊಬ್ಬರು ಹೇಳಿದ್ದಾರೆ. 'ಬಹುಭಾಷೆ ಮತ್ತು ವಿದೇಶದಲ್ಲಿ ಹಿಂದಿ ಪ್ರಚಾರ' ಕಾರ್ಯಕ್ರಮದಲ್ಲಿ ಮಾತನಾಡಿದ ವಿಶ್ವಸಂಸ್ಥೆ ಗ್ಲೋಬಲ್ ಕಮ್ಯುನಿಕೇಷನ್ಸ್‌ನ ಅಂಡರ್-ಸೆಕ್ರೆಟರಿ-ಜನರಲ್ ಮೆಲಿಸ್ಸಾ ಫ್ಲೆಮಿಂಗ್, ಹಿಂದಿ ಭಾಷಿಕರಿಗೆ ವಿಶ್ವಸಂಸ್ಥೆಯ ವಿವಿಧ ಕಾರ್ಯಕ್ರಮಗಳ ಕುರಿತು ಮಾಹಿತಿ ತಲುಪಿಸಲು ಸಾಮಾಜಿಕ ಮಾಧ್ಯಮಗಳಲ್ಲಿ ಹಿಂದಿ ಭಾಷೆಯನ್ನು ಪರಿಣಾಮಕಾರಿ ಬಳಕೆ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಆಗ್ರಾದಲ್ಲಿರುವ ಐತಿಹಾಸಿಕ ಸ್ಮಾರಕ ತಾಜ್ ಮಹಲ್‌ಗೆ ಬ್ರಿಟನ್ ಮಾಜಿ ಪ್ರಧಾನಿ ರಿಷಿ ಸುನಕ್ ಅವರು ಪತ್ನಿ ಅಕ್ಷತಾ ಅವರೊಂದಿಗೆ ಭೇಟಿ ನೀಡಿದರು.

### ದೇವೇಗೌಡರಿಗೆ ಬರೆದ ಪತ್ರದಲ್ಲಿ ಪರೋಕ್ಷ ಟಾಂಗ್

# ದೇವೇಗೌಡ್ರ ಹೇಳಿಕೆಗೆ ಸಿಎಂ, ಡಿಸಿಎಂ ಬೆಂಬಲ

**ಬೆಂಗಳೂರು:** ನೀರಾವರಿ ವಿಷಯದಲ್ಲಿ ಬಿಜೆಪಿ-ಕಾಂಗ್ರೆಸ್-ಜೆಡಿಎಸ್ ಅಂತಾ ರಾಜಕೀಯ ಮಾಡುವುದಕ್ಕಿಂತ ರಾಜ್ಯದ ಒಳಿತಾಗಿ ಎಲ್ಲರೂ ಪಕ್ಷಾತೀತವಾಗಿ ಶ್ರಮಿಸಬೇಕು ಎನ್ನುವ ಮಾಜಿ ಪ್ರಧಾನಿ ದೇವೇಗೌಡರ ಹೇಳಿಕೆಯನ್ನು ಸಿಎಂ, ಡಿಸಿಎಂ ಸ್ವಾಗತಿಸುವ ಜತೆಜತೆಗೆ ದೇವೇಗೌಡರ ಹೇಳಿಕೆಗೆ ಪರೋಕ್ಷವಾಗಿ ಟಾಂಗ್ ನೀಡಿದ್ದಾರೆ.

ರಾಜ್ಯದ ನೀರಾವರಿ ವಿಷಯದಲ್ಲಿ ಎಂದಿಗೂ ಕಾಂಗ್ರೆಸ್ ರಾಜಕೀಯ ಮಾಡಿಲ್ಲ. ಬಿಜೆಪಿ ಅಧಿಕಾರಕ್ಕೆ ಬಂದರೆ ಒಂದೇ ದಿನದಲ್ಲಿ ರಾಜ್ಯದ ನೀರಾವರಿ ಯೋಜನೆಗಳಿಗೆ ಸಹಿ ಹಾಕಿಸಿಕೊಂಡು ಬರುವುದಾಗಿ ಹೇಳಿದ್ದ ದೇವೇಗೌಡ, ಕುಮಾರಸ್ವಾಮಿ ಅವರು ಈಗೇಕೆ ಮೌನವಾಗಿದ್ದಾರೆ? ಈ ಎಲ್ಲದರ ಹೊರತಾಗಿಯೂ, ರಾಜ್ಯದ ನೀರಾವರಿ ಯೋಜನೆಗಳಿಗೆ ದೇವೇಗೌಡರಿಗೆ ಕಾಂಗ್ರೆಸ್ ಸಂಪೂರ್ಣ ಬೆಂಬಲ ನೀಡಲಿದೆ ಎಂದು ಹೇಳಿದ್ದಾರೆ.

ದೇವೇಗೌಡರ ಮಾತಿಗೆ ಸುದೀರ್ಘ ಉತ್ತರ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ದೈಹಿಕವಾಗಿ ನೀವು ಸ್ವಲ್ಪ ಕುಗ್ಗಿದಂತೆ ಕಂಡರೂ ಮಾನಸಿಕವಾಗಿ ನೀವಿನ್ನೂ ದೃಢವಾಗಿದ್ದೀರಿ. ದಯವಿಟ್ಟು ಈಗಲಾದರೂ ಪಕ್ಷ ರಾಜಕಾರಣವನ್ನು ಮೀರಿ ಒಬ್ಬ ಮುತ್ಸದ್ದಿ ನಾಯಕನ ರೀತಿಯಲ್ಲಿ ಕನ್ನಡ, ಕನ್ನಡಿಗ ಹಾಗೂ ಕರ್ನಾಟಕದ ಹಿತ ರಕ್ಷಣೆಗೆ ಮುಂದಾಗಬೇಕೆಂದು ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಈ ನಿಟ್ಟಿನಲ್ಲಿ ನೀವು ಮಾಡುವ ಪ್ರಯತ್ನಕ್ಕೆ ನಮ್ಮ ಸರಕಾರದ ಸಂಪೂರ್ಣ ಬೆಂಬಲವಿದೆ. ಏಳು ಕೋಟಿ ಕನ್ನಡಿಗರೂ ನಿಮ್ಮ ಜತೆಯಲ್ಲಿ ಇರುತ್ತಾರೆ ಎಂಬ ಭರವಸೆಯೂ ನನಗಿದೆ.

→ 4



- ಒಂದೇ ದಿನದಲ್ಲಿ ನೀರಾವರಿ ಯೋಜನೆಗಳಿಗೆ ಸಹಿ ಹಾಕಿಸಿಕೊಂಡು ಬರುವುದಾಗಿ ಹೇಳಿದ್ದ ದೇವೇಗೌಡ, ಕುಮಾರಸ್ವಾಮಿ ಈಗೇಕೆ ಮೌನವಾಗಿದ್ದಾರೆ?
- ಈಗಲಾದರೂ ಪಕ್ಷ ರಾಜಕಾರಣವನ್ನು ಮೀರಿ ಒಬ್ಬ ಮುತ್ಸದ್ದಿ ನಾಯಕನ ರೀತಿಯಲ್ಲಿ ಕನ್ನಡ, ಕನ್ನಡಿಗ ಹಾಗೂ ಕರ್ನಾಟಕದ ಹಿತ ರಕ್ಷಣೆಗೆ ಮುಂದಾಗಬೇಕು
- ನೀವು ಮಾಡುವ ಪ್ರಯತ್ನಕ್ಕೆ ನಮ್ಮ ಸರಕಾರದ ಸಂಪೂರ್ಣ ಬೆಂಬಲವಿದೆ. ಏಳು ಕೋಟಿ ಕನ್ನಡಿಗರೂ ನಿಮ್ಮ ಜತೆಯಲ್ಲಿ ಇರುತ್ತಾರೆ ಎಂಬ ಭರವಸೆಯೂ ಇದೆ

ನೀರಾವರಿ ವಿಚಾರದಲ್ಲಿ ಕರ್ನಾಟಕಕ್ಕೆ ಆಗಿರುವ ಅನ್ಯಾಯದ ವಿರುದ್ಧ ಹೋರಾಡುವ ದೇವೇಗೌಡರ ಜತೆ ನಾವೂ ನಿಲ್ಲುತ್ತೇವೆ. ರಾಜ್ಯದ ನೀರಾವರಿ ಯೋಜನೆಯ ವಿಷಯದಲ್ಲಿ ದೇವೇಗೌಡರ ಅಭಿಪ್ರಾಯವೂ ವೈಯಕ್ತಿವಾಗಿ ನನ್ನ ಅಭಿಪ್ರಾಯವಾಗಿದೆ. ನೆಲ-ಜಲ-ಭಾಷೆ ವಿಚಾರದಲ್ಲಿ ನಾನು ಸದಾ ಕನ್ನಡಿಗನಾಗಿ ನಡೆದುಕೊಂಡಿದ್ದೇನೆಯೇ ಹೊರತು ರಾಜಕಾರಣಿಯಾಗಿ ಅಲ್ಲ ಎನ್ನುವುದನ್ನು ಹಿರಿಯರಾದ ದೇವೇಗೌಡರ ಗಮನಕ್ಕೆ ತರಬಯಸುತ್ತೇನೆ. ಅವರ ಹೋರಾಟಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ.
– **ಸಿದ್ದರಾಮಯ್ಯ**, ಮುಖ್ಯಮಂತ್ರಿ

### ಎರಡು ವರ್ಷಗಳ ಅಂತರದಲ್ಲಿ ಕಾಂಗ್ರೆಸ್-ಬಿಜೆಪಿ-ಜೆಡಿಎಸ್ ಟೂರ್

# 3ನೇ ಬಾರಿಗೆ ಕೈ ಹಿಡಿದ ಶಿವರಾಮೇಗೌಡ!

**ಬೆಂಗಳೂರು:** ರಾಜಕೀಯದಲ್ಲಿ ಪಕ್ಷಾಂತರ ವೇನು ಹೊಸದಲ್ಲ. ಆದರೆ ಎರಡು ವರ್ಷಗಳ ಅವಧಿಯಲ್ಲಿ ಮೂರು ಪಕ್ಷ ಸುತ್ತಿರುವುದು ಮಾತ್ರ ವಿಚಿತ್ರ ಸಂಗತಿ!

ಹೌದು, ಮಾಜಿ ಸಂಸದ, ಶಾಸಕ ಶಿವರಾಮೇಗೌಡರು ಭಾನುವಾರ ಕೆಪಿಸಿಸಿ ಕಚೇರಿ ಯಲ್ಲಿ ಮತ್ತೆ ಕಾಂಗ್ರೆಸ್ ಬಾವುಟ ಹಿಡಿಯುವ ಮೂಲಕ ಪಕ್ಷಕ್ಕೆ ಮೂರನೇ ಬಾರಿ ವಾಪಸ್ಸಾಗಿ ದ್ದಾರೆ. ಪಕ್ಷೇತರ ಶಾಸಕರಾಗಿ ರಾಜಕೀಯ ಆರಂಭಿಸಿದ್ದ ಶಿವರಾಮೇಗೌಡರು ಬಳಿಕ ಜನತಾದಳ ಸೇರ್ಪಡೆಯಾದರು. ಅಲ್ಲಿಂದ, ಕಾಂಗ್ರೆಸ್‌ಗೆ ಮತ್ತೆ ಬಿಜೆಪಿಗೆ, ಬಿಜೆಪಿಯಿಂದ ಜೆಡಿಎಸ್‌ಗೆ, ಜೆಡಿಎಸ್‌ನಿಂದ ಬಿಜೆಪಿಗೆ ಹೋಗಿದ್ದ ಶಿವರಾಮೇಗೌಡರು, ಇದೀಗ ಬಿಜೆಪಿಯಿಂದ ಪುನಃ ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದಾರೆ. ಈ ಹಿಂದೆ ಜೆಡಿಎಸ್‌ನಲ್ಲಿದ್ದಾಗ ಸುಮಲತಾ ಹಾಗೂ ಮಾದೇಗೌಡರ ವಿರುದ್ಧ ಮಾತನಾಡಿದ್ದರಿಂದ ಪಕ್ಷದಿಂದ ಉಚ್ಚಾಟನೆಯಾಗಿದ್ದ ಶಿವರಾಮೇಗೌಡರು ಕಳೆದ ವಿಧಾನಸಭಾ ಚುನಾವಣೆ ವೇಳೆಗೆ ಬಿಜೆಪಿಗೆ ಸೇರಿ ಅವರ ಪತ್ನಿಗೆ ಟಿಕೆಟ್ ಕೊಡಿಸುವಲ್ಲಿ ಯಶಸ್ವಿಯಾಗಿದ್ದರು. ಆದರೆ ಲೋಕಸಭಾ ಚುನಾವಣಾ ವೇಳೆಗೆ ಬಿಜೆಪಿಯಲ್ಲಿ ಸಂಪೂರ್ಣ ನಿರ್ಲಕ್ಷ್ಯಕ್ಕೆ ಒಳಗಾಗಿದ್ದರಿಂದ ಇದೀಗ ಮರಳಿ ಗೂಡಿಗೆ ಸೇರಿದ್ದಾರೆ ಎನ್ನಲಾಗುತ್ತಿದೆ.

→ 4

ಮಾಜಿ ಸಂಸದ, ಶಾಸಕ ಶಿವರಾಮೇಗೌಡ ಮತ್ತು ಬ್ರಿಜೇಶ್ ಕಾಳಪ್ಪ ಅವರು ಭಾನುವಾರ ಕೆಪಿಸಿಸಿ ಕಚೇರಿಯಲ್ಲಿ ಡಿ.ಕೆ.ಶಿವಕುಮಾರ್ ಸಮ್ಮುಖದಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಯಾದರು.

### 157 ಭಾರತೀಯರ 3ನೇ ತಂಡ ಆಗಮನ

**ಅಮೃತಸರ:** ಅಮೆರಿಕಕ್ಕೆ ಅಕ್ರಮ ಮಾರ್ಗದಲ್ಲಿ ವಲಸೆ ಹೋಗಿದ್ದವರು, ಸರಿಯಾದ ದಾಖಲೆಗಳಿಲ್ಲದೇ ಅಮೆರಿಕಕ್ಕೆ ನುಸುಳಿಕೊಂಡಿದ್ದವರ ಸಾಮೂಹಿಕ ಗಡಿಪಾರು ಪ್ರಕ್ರಿಯೆ ಮುಂದುವರಿದಿದೆ. 157 ವಲಸಿಗರ 3ನೇ ತಂಡ ಅಮೆರಿಕದ ಸೇನಾ ವಿಮಾನದಲ್ಲಿ ಆಗಮಿಸಿದ್ದು, ಭಾನುವಾರ ಸಂಜೆ ಅಮೃತಸರದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿದಿದೆ. ಹೀಗೆ ಬಂದವರ ಪೈಕಿ ವ್ಯಕ್ತಿಯೊಬ್ಬನನ್ನು ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಬಂಧಿಸಲಾಗಿದೆ. ಈ 3ನೇ ತಂಡದಲ್ಲಿ ಹರಿಯಾಣದವರೇ ಅಧಿಕ ಸಂಖ್ಯೆಯಲ್ಲಿದ್ದಾರೆ ಎಂದು ಅಧಿ ಕಾರಿಗಳು ತಿಳಿಸಿದ್ದಾರೆ. ವಿವಿಧ ದೇಶಗಳಿಂದ ಬಂದಿರುವ ಅಕ್ರಮ ವಲಸಿಗರನ್ನು ಗಡೀಪಾರು ಮಾಡಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೇತೃತ್ವದ ಸರಕಾರ ತೆಗೆದುಕೊಂಡ ನಿರ್ಧಾರದ ಭಾಗವಾಗಿ ಈ ಪ್ರಕ್ರಿಯೆ ನಡೆದಿದೆ. ಕಳೆದ ವಾರ 104 ಅಕ್ರಮ ವಲಸಿಗರಿದ್ದ ಅಮೆರಿಕದ ಸೇನಾ ವಿಮಾನವು ಅಮೃತಸರ ವಿಮಾನ ನಿಲ್ದಾಣದಲ್ಲಿ ಬಂದಿಳಿದಿತ್ತು.

### ಬಾಂಗ್ಲಾದೇಶಕ್ಕೆ ದೊಡ್ಡ ಪೆಟ್ಟು: 2.90 ಕೋಟಿ ಡಾಲರ್ ನೆರವು ಸ್ಥಗಿತ

# ಡೋಜ್ ಕ್ರಿಯಾಶೀಲ: ವೆಚ್ಚ ಕಡಿತಕ್ಕೆ ಮಸ್ಕ್ ಕ್ರಮ

**ವಾಷಿಂಗ್ಟನ್:** ಡೊನಾಲ್ಡ್ ಟ್ರಂಪ್ 2.0 ಸರಕಾರ ಅಧಿಕಾರಕ್ಕೆ ಬರುವ ಮುನ್ನವೇ 'ಡಿಒಜಿಇ' ಇಲಾಖೆ ರಚಿಸಿ ಅದಕ್ಕೆ ವಿಶ್ವದಲ್ಲೇ ಸಿರಿವಂತ ಉದ್ಯಮಿಯಾದ ಎಲಾನ್ ಮಸ್ಕ್ ಅವರನ್ನು ಮುಖ್ಯಸ್ಥರಾಗಿ ರಚಿಸಿದ್ದರು. ಸರಕಾರದ ಆಡಳಿತಕ್ಕೆ ಕ್ಷಮತೆ ತರುವುದು 'ಡೋಜ್' (ಡಿಒಜಿಇ) ಮುಖ್ಯ ಕೆಲಸವಾಗಿದೆ. ಅದೇ ದಿಶೆಯಲ್ಲಿ ಕಾರ್ಯಪ್ರವೃತ್ತರಾಗಿರುವ ಎಲಾನ್ ಮಸ್ಕ್, ಟ್ರಂಪ್ ಅವರ ಒಪ್ಪಿಗೆ ಪಡೆದು ಮೊದಲಿಗೆ ಹೆಚ್ಚುವರಿಯಾಗಿರುವ 10 ಸಾವಿರ ಸರಕಾರಿ ನೌಕರರನ್ನು ಕೆಲಸದಿಂದ ಕಿತ್ತೊಗೆಯಲು ನಿರ್ಧರಿಸಿದ್ದಾರೆ. ಇನ್ನೊಂದೆಡೆ, ವೆಚ್ಚ ಕಡಿತ ಕ್ರಮವನ್ನೂ ಕೈಗೊಳ್ಳುತ್ತಿದ್ದಾರೆ. ಅಮೆರಿಕ ಪ್ರಜೆಗಳ ತೆರಿಗೆ ಪಾವತಿ ಹಣ ಬಾಹ್ಯ ಶಕ್ತಿಗಳ ಮೇಲೆ ವ್ಯರ್ಥವಾಗಿ ವಿನಿಯೋಗ ಆಗುವುದನ್ನು ತಡೆಯಲು ತಕ್ಷಣದಿಂದಲೇ ಜಾರಿಗೆ ಬರುವಂತೆ ವೆಚ್ಚ ಕಡಿತ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಎಲಾನ್ ಮಸ್ಕ್ 'ಎಕ್ಸ್' ಸಂದೇಶದಲ್ಲಿ ಭಾನುವಾರ ತಿಳಿಸಿದ್ದಾರೆ.

ಮಸ್ಕ್ ಕೈಗೊಂಡಿರುವ ವೆಚ್ಚ ಕಡಿತದ ಕ್ರಮದಲ್ಲಿ ಬಾಂಗ್ಲಾದೇಶಕ್ಕೆ ದೊಡ್ಡ ಪೆಟ್ಟು ಬಿದ್ದಿದೆ. ಹಿಂದಿನ ಅಧ್ಯಕ್ಷ ಜೋ ಬೈಡನ್ ಸರಕಾರ ಬಾಂಗ್ಲಾದೇಶದಲ್ಲಿನ ರಾಜಕೀಯ ನೆಲೆಯ ಶಕ್ತಿವೃದ್ಧಿಗಾಗಿ 2.90 ಕೋಟಿ ಡಾಲರ್ (ಭಾರತದ ರು. ಲೆಕ್ಕದಲ್ಲಿ 251.35 ಕೋಟಿ) ಅನುದಾನ ನೀಡುತ್ತಿತ್ತು. ಆ ಅನುದಾನಕ್ಕೆ ಈಗ ಮಸ್ಕ್ ಕತ್ತರಿ ಪ್ರಯೋಗ ಮಾಡಿದ್ದಾರೆ. ಇನ್ನೊಂದೆಡೆ, ಲಿಂಗ ಸಮಾನತೆ ಕ್ರಮಗಳಿಗಾಗಿ ಅಮೆರಿಕ ಸರಕಾರದಿಂದ 4 ಕೋಟಿ ಡಾಲರ್ ನೆರವು ನೀಡಲಾಗುತ್ತಿದ್ದು, ಅದನ್ನೂ ಈಗ ರದ್ದುಗೊಳಿಸಲಾಗಿದೆ. ಮೊಜಾಂಬಿಕ್ ದೇಶದಲ್ಲಿ ಪುರುಷರ ಸಂತಾನಶಕ್ತಿ ಹರಣ ಚಿಕಿತ್ಸೆಗಾಗಿ ಅಮೆರಿಕ ಸರಕಾರದಿಂದ ನೀಡಲಾಗುತ್ತಿದ್ದ 1 ಕೋಟಿ ಡಾಲರ್ ನೆರವನ್ನೂ ಮಸ್ಕ್ ರದ್ದುಗೊಳಿಸಿದ್ದಾರೆ.

### ಭಾರತಕ್ಕೆ ನೀಡುತ್ತಿದ್ದ ನೆರವು ಕಡಿತ!

ಭಾರತದಲ್ಲಿನ ಚುನಾವಣೆಗಳಲ್ಲಿ ಮತದಾನ ಪ್ರಮಾಣ ಹೆಚ್ಚಳಕ್ಕಾಗಿ ಹಿಂದಿನ ಅಮೆರಿಕ ಸರಕಾರ 2.10 ಕೋಟಿ ಡಾಲರ್ (812 ಕೋಟಿ ರು.) ಹಣ ನೀಡುತ್ತಿತ್ತು. ಆ ಅನುದಾನಕ್ಕೂ ಮಸ್ಕ್ ಕತ್ತರಿ ಆಡಿಸಿದ್ದಾರೆ. ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಚುನಾವಣಾ ಪ್ರಕ್ರಿಯೆಯಲ್ಲಿ ವಿದೇಶಿ ಹಸ್ತಕ್ಷೇಪ ಬೇಡ ಎಂದೇ ಬಿಜೆಪಿ ಮೊದಲಿನಿಂದಲೂ ಹೇಳುತ್ತಿತ್ತು. ಮಸ್ಕ್ ಅವರ ಈ ಕ್ರಮದಿಂದ ಬಿಜೆಪಿ ಬೇಡಿಕೆ ಈಡೇರಿದಂತಾಗಿದೆ. ಬಿಜೆಪಿ ನಾಯಕ ಅಮಿತ್ ಮಾಳವೀಯ, ಮಸ್ಕ್ ಅವರು ಈ ನೆರವು ನಿಲ್ಲಿಸಿದ್ದು ಒಳ್ಳೆಯದೇ ಆಯಿತು. ಈ ಹಣದಿಂದ ಯಾರಿಗೆ ಪ್ರಯೋಜನವಾಗುತ್ತಿತ್ತೊ ತಿಳಿಯದು. ಬಿಜೆಪಿ ಮಾತ್ರ ಖಂಡಿತ ಫಲಾನುಭವಿ ಆಗಿರಲಿಲ್ಲ ಎಂದು ಮಾರ್ಮಿಕವಾಗಿ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

### ಮಾತಂದ್ರೆ ಮಾತು

**ಕುಂಭಮೇಳಕ್ಕೆ ಇದುವರೆಗೆ 50 ಕೋಟಿಗೂ ಹೆಚ್ಚು ಜನರು ಭೇಟಿ ನೀಡಿದ್ದಾರೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿದ್ದಾರೆ. ಆದರೆ, ಕುಂಭಮೇಳದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಮೃತಪಟ್ಟವರು ಎಷ್ಟು? ಕುಂಭಮೇಳದಲ್ಲಿ ನಾಪತ್ತೆಯಾಗಿರುವ 7,000 ಜನರು ಎಲ್ಲಿಗೆ ಹೋಗಿದ್ದಾರೆ?**

– **ಸಂಜಯ್ ರಾವುತ್**
ಶಿವಸೇನಾ (ಯುಬಿಟಿ) ನಾಯಕ

### ಫನ್‌ತರಂಗ
– ರಘುಪತಿ ಶೃಂಗೇರಿ –



## ಸಮಾಚಾರ ಸಣ್ಣದಲ್ಲ

### ಶ್ರೀ ಬನಶಂಕರಿದೇವಿ ಜಾತ್ರಾ ಮಹೋತ್ಸವ

**ಹುಕ್ಕೇರಿ:** ಪಟ್ಟಣದ ಹಳ್ಳದಕೇರಿಯಲ್ಲಿ ನೇಕಾರಗಲ್ಲಿ ಬನಶಂಕರಿ ದೇವಿಯ ಜಾತ್ರಾಮಹೋತ್ಸವ ಸಂಭ್ರದಿಂದ ಜರುಗಿತ್ತು. ಬೆಳಗ್ಗೆ, ಪೂಜೆ, ಅಭಿಷೇಕ, ಮಹಾಆರತಿ, ಮಂಗಳಾರತಿ, ಜರುಗಿತ್ತು. ಪಟ್ಟಣದ ಪ್ರಮುಖ ಮಾರ್ಗದಿಂದ ಕುಂಭ ಹೊತ್ತ ಮಹಿಳೆಯರಿಂದ ಸಕಲ ವಾದ್ಯಮೇಳದೊಂದಿಗೆ ದೇವಿಯ ಪಲಕ್ಕಿ ಉತ್ಸವ ಜರುಗಿತ್ತು. ವಾದ್ಯ ನುಡಿಸುವವರ ಮೈಮೇಲೆ ಚುರುಮರಿ ಎಸೆದು ಯವಕರು ಸಂಗಸಪಟ್ಟರು. ವಾದ್ಯದವರು ಹಾಕಿ ಟೋಪಿ ರುಮಾಲಿಗೆ ನೂರರ ನೋಟು ಹುರುದುಂಬಿಸಿದರು. ಮನೆ ಮುಂದೆ ಪಲ್ಲಕ್ಕಿಗೆ ಭಕ್ತರು ನೀರು ಹಾಕಿ ದೇವಿ ಮೂರ್ತಿಗೆ ಹೂಮಾಲೆ ಹಾಕಿ ಆರತಿ ಬೆಳಗಿ ಬೀಳ್ಕೊಟರು. ನಂತರ ಪಲಕ್ಕಿಯ ಮಂದಿರಕ್ಕೆ ತಲುಪಿದ ಬಳಿಕ ಮಂಗಳಾರತಿ ಮಾಡಿ ಪ್ರದರ್ಶನಕ್ಕೆ ಹಾಕಲಾಯಿತು ತಾಯಿ ಬನಶಂಕರಿ ಕುರಿತು ಮಹಿಳೆಯರು ಗೀತೆ ಹಾಡಿದರು. ಭಕ್ತರಿಗೆ ಮಹಾಪ್ರಸಾದ ವ್ಯವಸ್ಥೆ ಮಾಡಲಾಯಿತು. ಸಮಾಜದ ಅಧ್ಯಕ್ಷ ಮುರಗೆಪ್ಪ ದಡ್ಡಿಮನಿ, ಉಪಾಧ್ಯಕ್ಷ ಮಹಾದೇವ ಸುಲದಾಳ, ಮುಖಂಡರಾದ ಮಹಾದೇವ ದಡ್ಡಿಮನಿ, ದುರದುಂಡಿ ನಾಯಿಕ, ಗುರು ಚಿಕ್ಕೋಡಿ, ಉಮೇಶ ದಡ್ಡಿಮನಿ, ಹೇಮಂತ ಮದಿಹಳ್ಳಿ, ಮಹಾಂತೇಶ ದಡ್ಡಿಮನಿ, ಕಿರಣ ಶಿವಮೊಗಿಮಠ, ರವೀಂದ್ರ ದಡ್ಡಿಮನಿ, ಅಶೋಕ ನಾಯಿಕ, ಡಿ.ಎಲ್. ಕುಲಕರ್ಣಿ, ಸಜೀವ ಮುತ್ತಾಲಿಕ ಮತ್ತಿತರು ಉಪಸ್ಥಿತರಿದ್ದರು.

### ವಿದ್ಯುತ್ ಪೂರೈಕೆ ವ್ಯತ್ಯಯ ಇಂದು

**ಹುಕ್ಕೇರಿ:** ತಾಲೂಕಿನ ಇಸ್ಲಾಂಪೂರ ವಿದ್ಯುತ್ ಉಪ ಕೇಂದ್ರದಲ್ಲಿ ನಿರ್ವಹಣೆ ಕಾರ್ಯದ ನಿಮಿತ್ತ ಫೆ.17. ರಂದು ಬೆಳಗ್ಗೆ 10ರಿಂದ ಸಂಜೆ 5.ವರೆಗೆ ವಿದ್ಯುತ್ ಪೂರೈಕೆ ಸ್ಥಗೀತಗೊಳ್ಳಲಿದೆ. ಇಸ್ಲಾಂಪೂರ ವಿದ್ಯುತ್ ಉಪ ಕೇಂದ್ರದಗಳ ಮೇಲೆ ಬರುವ ಗ್ರಾಮಗಳಾದ ಬಸ್ಸಾಪೂರ, ಹಗೆದಾಳ, ಶಿರೂರ, ಭರಮಾಪೂರ, ಶಹಾಬಂದರ, ಚಿಕ್ಕಲದನ್ನಿ, ಹೊಸಗಡ, ಗಜಪತಿ, ರಾಜಕಟ್ಟಿ, ಆರ್. ಯಲ್ಲಾಪೂರ, ಇಸ್ಲಾಂಪೂರ, ಕಲ್ಲಟ್ಟಿ, ಜಾರಕಿಹೊಳಿ, ಹಳೇ ವಂಟಮೂರಿ, ಬೀರನಹೊಳಿ, ಕಾಟಾಬಳಿ, ಸುತ್ತುಮುತ್ತ ಗ್ರಾಮಗಳಲ್ಲಿ ವಿದ್ಯುತ್ ಪೂರೈಕೆ ನಿಲುಗಡೆಯಾಗಲಿದೆ ಎಂದು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಅಗಲಿದ ಜೀವ

### ಹನುಮಂತಪ್ಪ ಪತ್ತಾರ

**ಗೋಕಾಕ:** ಯರಗಟ್ಟಿ: ಸ್ಥಳೀಯ ನಿವಾಸಿ ವಿಶ್ವಕರ್ಮ ಸಮಾಜದ ಹಿರಿಯರು, ನಿವೃತ್ತ ಶಿಕ್ಷಕ ಹನುಮಂತಪ್ಪ ಬಸವಂತಪ್ಪ ಪತ್ತಾರ (67) ನಿಧನರಾಗಿದ್ದಾರೆ. ಮೃತರಿಗೆ ಪತ್ನಿ, ಇಬ್ಬರು ಪುತ್ರರು, ಒಬ್ಬ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ವಿರಾಮ
ಪ್ರತಿ ಭಾನುವಾರ

# ಗಡಿ ಭಾಗದ ಕನ್ನಡ ರಕ್ಷಣೆ ಶ್ಲಾಘನೆ

## ಪ್ರಶಸ್ತಿ ಪ್ರದಾನ ಸಮಾರಂಭ | ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸೋಮಶೇಖರ್

**ಬೆಳಗಾವಿ:** ಗಡಿಭಾಗದಲ್ಲಿ ಕನ್ನಡ ಸಾಂಸ್ಕೃತಿಕ ಚಟುವಟಿಕೆಗಳು ನಿರಂತರವಾಗಿ ಪೋಷಿಸಿಕೊಂಡು ಹೋಗುವುದು ಅಗತ್ಯವಾಗಿದೆ. ಸರಕಾರದ ಯಾವುದೇ ಅನುದಾನವಿಲ್ಲದೆ ಅನೇಕ ಕನ್ನಡಪರ ಸಂಘ ಸಂಸ್ಥೆಗಳು ಇಲ್ಲಿ ಕಾರ್ಯನಿರ್ವಹಿಸುತ್ತಿರುವುದು. ಕನ್ನಡದ ಪ್ರೀತಿಯೇ ಇದಕ್ಕೆ ಕಾರಣ. ಸರಕಾರ ಈ ಕಡೆಗೆ ಗಮನ ಹರಿಸಬೇಕು ಎಂದು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಸೋಮಶೇಖರ್ ಹೇಳಿದರು.

ಭಾನುವಾರ ನಗರದ ಕನ್ನಡ ಭವನದಲ್ಲಿ ಜರುಗಿದ ಬಿ. ಎಸ್ ಗವಿಮಠ ಸಾಂಸ್ಕೃತಿಕ ಪ್ರತಿಷ್ಠಾನದ ಪ್ರಶಸ್ತಿ ಪ್ರದಾನ ಸಮಾರಂಭ ಉದ್ದೇಶಿಸಿ ಮಾತನಾಡಿದರು. 12 ನೇ ಶರಣ ಪರಂಪರೆಯಿಂದ ಈವರೆಗೂ ಕನ್ನಡ ಕಟ್ಟುವ ಕಾಯಕ ಮುಂದುವರಿದುಕೊಂಡು ಬಂದಿದೆ. ಬಿ. ಎಸ್ ಗವಿಮಠ ಅಭಿಮಾನಿ ಬಳಗ ಸಾಹಿತ್ಯ ಪ್ರತಿಷ್ಠಾನ ಹುಟ್ಟುಹಾಕಿ ಕನ್ನಡ ಹಾಗೂ ಸಂಸ್ಕೃತಿ ಉಳಿಸುವ ನಿಟ್ಟಿನಲ್ಲಿ ಸೇವೆ ಸಲ್ಲಿಸಿದ ಸಾಧಕರನ್ನು ಗುರುತಿಸುವ ಕೆಲಸ ಮಾಡುತ್ತಿರುವುದು ಸಂತೋಷದ ಸಂಗತಿ ಎಂದರು.

ಪ್ರಾ. ಬಿ.ಎಸ್ ಗವಿಮಠ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನವು ರಚನಾತ್ಮಕ ಕೆಲಸ ಮಾಡುತ್ತ ಇನ್ನಷ್ಟು ಬೆಳೆಯಲಿ. ಗವಿಮಠ ಅವರು ಎಸ್ ಡಿ ಇಂಚಲ ಅವರಂತಹ ಮಹಾಕವಿಗಳನ್ನನ ಚಿರಸ್ಥಾಯಿಯಾಗಿ ಉಳಿಯುವಂತೆ ಮಾಡಿದ್ದಾರೆ. ಗಡಿಭಾಗದಲ್ಲಿರುವ ಕನ್ನಡ ಕೊಡುಗೆ ಅನನ್ಯ. ಇಂದು ಪ್ರತಿಷ್ಠಾನವು ನಿಜವಾದ ಸಾಧಕರನ್ನು ಗುರುತಿಸಿ ಪ್ರಶಸ್ತಿಯನ್ನು ನೀಡುತ್ತಿರುವುದು ಅಭಿಮಾನ ತಂದಿದೆ. ಈ ಸೇವೆ ನಿರಂತರವಾಗಿ ಮುಂದುವರಿಯಲಿ ಎಂದು ಹೇಳಿದರು.

ಸಾನಿಧ್ಯ ವಹಿಸಿದ್ದ ಕಾರಂಜಿ ಮಠದ ಪೂಜ್ಯ ಶ್ರೀಗುರುಸಿದ್ಧ ಮಹಾಸ್ವಾಮೀಜಿಯವರು ಆಶೀರ್ವಚನ ನೀಡಿದರು. ಡಾ. ವಿ ಎಸ್ ಮಾಳಿ ಅಭಿನಂದನಪರ ಮಾತನಾಡಿದರು. ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ ಎಲ್ ವಿ ಪಾಟೀಲ್ ಅಧ್ಯಕ್ಷೀಯ ನುಡಿಗಳ ನಾಡಿದರು.

ವಿವಿಧ ರಂಗದ ಸಾಧಕರಿಗೆ 2025 ನೇ ಸಾಲಿನ ಪ್ರಶಸ್ತಿ ಪ್ರದಾನ ಮಾಡಿದ ಗಣ್ಯರು.

ಈ ಸಂದರ್ಭದಲ್ಲಿ ಹಿರಿಯ ವೈದ್ಯರಾದ ಡಾ. ದಯಾನಂದ ನೂಲಿ ಅವರಿಗೆ ಶರಣ ಸಾಹಿತ್ಯಸಿರಿ ಪ್ರಶಸ್ತಿ, ಡಾ ಗುರುದೇವಿ ಹುಲೆಪ್ಪನವರಮಠ ಅವರಿಗೆ ಸಾಹಿತ್ಯ ಸಿರಿ ಪ್ರಶಸ್ತಿ, ಜಾಕಿರ್ ನದಾಫ್ ಅವರಿಗೆ ರಂಗ ಚೇತನ ಪ್ರಶಸ್ತಿ , ಸಂತೋಷ ನಾಯಿಕ್ ಅವರಿಗೆ ಕಾವ್ಯ ಸಿರಿ ಪ್ರಶಸ್ತಿ ಗಳನ್ನು ಪ್ರತಿಷ್ಠಾನದಿಂದ ನೀಡಿ ಗೌರವಿಸಲಾಯಿತು. ಇದೆ ಸಂದರ್ಭದಲ್ಲಿ ಡಾ ಅಶೋಕ್ ನರೋಡೆ ಅವರು ಸಂಪಾದಿಸಿದ ಡಾ.ಪ್ರಭಾಕರ ಕೋರೆಯವರ ಅಭಿನಂದನ ಗ್ರಂಥ ಸಮಾಜಭೂಷಣದ ದ್ವಿತೀಯ ಮುದ್ರಣವನ್ನು ಬಿಡುಗಡೆಗೊಳಿಸಲಾಯಿತು. ನಯನಾ ಗಿರಿಗೌಡರ್ ಪ್ರಾರ್ಥಿಸಿದರು. ಡಾ. ಪಿ.ಜಿ. ಕೆಂಪಣ್ಣವರ್ ಸ್ವಾಗತಿಸಿದರು. ಬಸವರಾಜ್ ಗಾರ್ಗಿ ನಿರೂಪಿಸಿದರು. ಅಕ್ಬರ್ ಸನದಿ ವಂದಿಸಿದರು.

ಪ್ರಾಚಾರ್ಯ ಬಿ. ಎಸ್ ಗವಿಮಠ, ಡಾ. ಬಸವರಾಜ್ ಜಗಜಂಪೀ, ಎಂ ಎಸ್ ಇಂಚಲ ಡಾ ಅಶೋಕ್ ನರೋಡೆ, ಯ.ರು. ಪಾಟೀಲ್, ಏಣಗಿ ಸುಭಾಷ್, ಎಫ್ ವಿ ಮಾನ್ವಿ, ಡಾ ಎಂ ವಿ ಜಾಲಿ ಡಾ ಇಚ್ಚಂಗಿ, ಡಾ ಎಂಟೆತ್ತಿನವರ ಬೆಂಗಳೂರಿನ ಕನ್ನಡ ಪರ ಹೋರಾಟಗಾರ ಶ್ರೀಪಾಲನೇತ್ರ, ಶ್ರೀಗಾಂಜಿ, ಶಾಂತಾದೇವಿ ಹುಲೆಪ್ಪನವರಮಠ , ನೀಲಗಂಗಾ ಚರಂತಿಮಠ, ಡಿಎಸ್ ಚೌಗಲಾ ಪ್ರತಿಷ್ಠಾನದ ಸದಸ್ಯರು ಉಪಸ್ಥಿತರಿದ್ದರು.

> ಗವಿಮಠ ಅವರ ಸಾಂಸ್ಕೃತಿಕ ಮನಸ್ಸು ತುಂಬಾ ದೊಡ್ಡದು. ಕವಿ ಎಚ್ ಡಿ ಇಂಚಲ್ ಹಾಗೂ ರಂಗ ಕಲಾವಿದರಾಗಿದ್ದ ಏಣಗಿ ಬಾಳಪ್ಪ ರಂತಹ ಮಹನೀಯರನ್ನು ಜೀವಂತವಾಗಿ ಉಳಿಸಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. ಕೆಎಲ್‌ಇ ಸಂಸ್ಥೆಯ ಇತಿಹಾಸಕಾರರಾಗಿ ಅದರ ಸಾಂಸ್ಕೃತಿಕ ಕೊಡುಗೆ ದಾಖಲಿಸುವ ಮಹತ್ವದ ಕಾರ್ಯ ಮಾಡಿರುವ ಗವಿಮಠರ ಸೇವೆ ಶ್ಲಾಘನೀಯ.
>
> ಡಾ.ಎಚ್.ಬಿ ರಾಜಶೇಖರ್, ಖ್ಯಾತ ವೈದ್ಯ

# ಶಾಸಕ ಸವದಿ ಹುಟ್ಟು ಹಬ್ಬ: ಅನ್ನ ಸಂತರ್ಪಣೆ

**ಅಥಣಿ:** ಶಾಸಕ ಹಾಗೂ ರೈತನಾಯಕ ಲಕ್ಷ್ಮಣ ಸವದಿ ಅವರ 65ನೇ ಹುಟ್ಟುಹಬ್ಬವನ್ನು ಅವರ ಅಭಿಮಾನಿಗಳು ಪಟ್ಟಣದ ಸ್ನೇಹ ಜ್ಯೋತಿ ಅಂಧ ಮಕ್ಕಳ ಶಾಲೆಯಲ್ಲಿ ಸರಳ ರೀತಿಯಲ್ಲಿ ಆಚರಿಸಿದರು. ಯುವ ಮುಖಂಡ ಮಲ್ಲು ಕುಳ್ಳೋಳಿ ನೇತ್ರತ್ವದಲ್ಲಿ ಸ್ನೇಹಜೂತಿ ಅಂಧ ಮಕ್ಕಳ ಶಾಲೆಯಲ್ಲಿ ವಿಶೇಷ ಪ್ರಾರ್ಥನೆಯ ಸಲ್ಲಿಸಿ, ಇಲ್ಲಿನ ಮಕ್ಕಳಿಗೆ ಸಿಹಿ ಹಾಗೂ ಅನ್ನ ಸಂತರ್ಪಣೆ ಮಾಡುವ ಮೂಲಕ ಶಾಸಕರ ಹುಟ್ಟುಹಬ್ಬವನ್ನ ಆಚರಿಸಲಾಯಿತು.

ಈ ವೇಳೆ ಹಿರಿಯ ಮುಖಂಡ ಶಿವರುದ್ರಪ್ಪ ಗೂಳಪ್ಪನವರ ಮಾತನಾಡಿ ನಮ್ಮೆಲ್ಲರ ಜನಪ್ರಿಯ ಶಾಸಕರು ಹಾಗೂ ಮಾಜಿ ಉಪ ಮುಖ್ಯಮಂತ್ರಿ ಆಗಿರುವ ಲಕ್ಷ್ಮಣ ಸವದಿ ಅವರು ಮತಕ್ಷೇತ್ರದ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ. ಅವರ ಹುಟ್ಟುಹಬ್ಬವನ್ನು ಯಾವುದೇ ಆಡಂಬರವಿಲ್ಲದೆ ಸರಳ ರೀತಿಯಲ್ಲಿ ಸ್ನೇಹ ಜ್ಯೋತಿ ಅಂದ ಮಕ್ಕಳ ಜೊತೆಗೆ ಆಚರಿಸುತ್ತಿರುವುದು ನಮ್ಮೆಲ್ಲರಿಗೆ ಸಂತಸ ಎನಿಸುತ್ತದೆ. ಶಾಸಕ ಲಕ್ಷ್ಮಣ ಸವದಿ ಅವರು ಮತಕ್ಷೇತ್ರದ ಅಭಿವೃದ್ಧಿಗಾಗಿ ಹಲವು ಕನಸುಗಳನ್ನು ಹೊತ್ತುಕೊಂಡು ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ. ಶಿವಯೋಗಿಗಳು ಅವರಿಗೆ ಇನ್ನಷ್ಟು ಆರೋಗ್ಯ ಮತ್ತು ಆಯುಷ್ಯ ಮತ್ತು ಅಧಿಕಾರವನ್ನು ಕರುಣಿಸಲಿ ಎಂದು ಶುಭ ಹಾರೈಸಿದರು. ಶಿವಾನಂದ ನಾಯಿಕ, ಅರ್ಜುನ ನಾಯಿಕ, ವಿಜಯಕುಮಾರ ಮಂಗಸೂಳಿ, ಮುತ್ತು ಮೊಕಾಶಿ, ಬಸವರಾಜ ತೇರದಾಳ, ಶ್ರೀನಿವಾಸ ಪಟ್ಟಣ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಶಾಸಕ ಲಕ್ಷ್ಮಣ ಸವದಿ ಅವರ ಹುಟ್ಟುಹಬ್ಬವನ್ನು ಅಭಿಮಾನಿಗಳು ಸರಳ ರೀತಿಯಲ್ಲಿ ಆಚರಿಸಿದರು.

# ದೇಶದ ಸಂಸ್ಕೃತಿ, ಪರಂಪರೆ ಕಣ್ಮರೆ: ಶೆಟ್ಟರ್

**ರಾಮದುರ್ಗ:** ಕಾಲಕ್ಕೆ ತಕ್ಕಂತೆ ಆಧುನಿಕ ಯುಗದಲ್ಲಿ ಜನರ ಜೀವನ ಶೈಲಿ ಬದಲಾವಣೆಯಾಗುತ್ತಿದ್ದು, ಸಂಸ್ಕೃತಿ ಮತ್ತು ಪರಂಪರೆಗಳು ಕಣ್ಮರೆಯಾಗುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಜಗದೀಶ ಶೆಟ್ಟರ ಕಳವಳ ವ್ಯಕ್ತಪಡಿಸಿದರು.

ತಾಲೂಕಿನ ಮುದಕವಿ ಗ್ರಾಮದಲ್ಲಿ ಶ್ರೀಬನಶಂಕರಿ ಮೂರ್ತಿ ಹಾಗೂ ನವಗ್ರಹ ಮೂರ್ತಿಗಳ ಪ್ರತಿಷ್ಠಾಪನೆ ನಿಮಿತ್ತ ಶನಿವಾರ ಸಂಜೆ ದೇವಾಂಗ ಸಮಾಜ ಏರ್ಪಡಿಸಿದ್ದ ಧರ್ಮಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಾವಿರಾರು ವರ್ಷಗಳ ಇತಿಹಾಸವಿರುವ ಭಾರತ ದೇಶದ ಗ್ರಾಮೀಣ ಪ್ರದೇಶದಲ್ಲಿ ಮಾತ್ರ ನಮ್ಮ ಪೂರ್ವಿಕರ ಆಚರಣೆ ಮತ್ತು ಉತ್ಸವಗಳು ಇಂದಿಗೂ ಚಾಲ್ತಿಯಲ್ಲಿವೆ. ಉತ್ಸವ ಮತ್ತು ಧಾರ್ಮಿಕ ಆಚರಣೆಗಳಿಂದ ಮಾನವರ ನಡುವಿನ ಸಂಘರ್ಷಗಳು ದೂರಾಗಿ ಸಾಮರಸ್ಯ ಮೂಡಬೇಕು. ಅಂದಾಗ ಆಚರಣೆಗಳಿಗೆ ನಿಜವಾದ ಅರ್ಥ ಬರುತ್ತದೆ ಎಂದು ಹೇಳಿದರು.

ಹಂಪೆ ಹೇಮಕೂಟ ಗಾಯತ್ರಿ ಪೀಠಾಧಿಪತಿ ಶ್ರೀದಯಾನಂದಪುರಿ ಸ್ವಾಮೀಜಿ ಅವರು ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿ, ನೇಕಾರ ಸಮುದಾಯದ ಜನರು ಬಹಳ ಶ್ರಮಜೀವಿಗಳಾಗಿದ್ದು, ಸಂಘಟನಾತ್ಮಕವಾಗಿ ಸಮುದಾಯ ಇನ್ನು ಹೆಚ್ಚು ಅಭಿವೃದ್ಧಿ ಹೊಂದಬೇಕಾಗಿದೆ ಎಂದು ನುಡಿದರು. ಕವಲಗೇರಿಯ ಶ್ರೀಶಿವಾನಂದ ಸರಸ್ವತಿ ಸ್ವಾಮೀಜಿ, ಕೆರೂರಿನ ವೇದಮೂರ್ತಿ ಶ್ರೀರುದ್ರಮುನಿ ಸ್ವಾಮೀಜಿ, ಶ್ರೀಶಂಕ್ರಯ್ಯಸ್ವಾಮಿ ದೇವಾಂಗಮಠ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಧರ್ಮಸಭೆ ಕಾರ್ಯಕ್ರಮವನ್ನು ಸಂಸದ ಜಗದೀಶ ಶೆಟ್ಟರ್ ಅವರು ಉದ್ಘಾಟಿಸಿದರು.

ಮಾಜಿ ಶಾಸಕ ಮತ್ತು ನೇಕಾರ ಮುಖಂಡ ಎಂ.ಡಿ. ಲಕ್ಷ್ಮೀನಾರಾಯಣ, ದೇವಾಂಗ ಸಂಘದ ರಾಜ್ಯಾಧ್ಯಕ್ಷ ರವೀಂದ್ರ ಕಲಬುರ್ಗಿ, ನಿರ್ದೇಶಕರಾದ ಶಿವಾನಂದ ಬಳ್ಳಾರಿ, ಸಂಕಣ್ಣ ಕರಡಿಗುಡ್ಡ, ಶ್ರೀಧನಲಕ್ಷ್ಮೀ ಸಹಕಾರಿ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಮಲ್ಲಣ್ಣ ಯಾದವಾಡ, ಬಿಜೆಪಿ ತಾಲೂಕು ಅಧ್ಯಕ್ಷ ಡಾ. ಕೆ.ವಿ. ಪಾಟೀಲ, ದಿನೇಶ ಗಿಡ್ನಂದಿ, ನೂರಂದಪ್ಪ ಕೌಶಿದ್ದನವರ, ಸಂಕಪ್ಪ ಮುಗಳಿ, ಗಿರಿಯಪ್ಪ ಧಡಿ, ಮುತ್ತಪ್ಪ ಮುಗಳಿಗೌಡ್ರ, ಪಾಂಡಪ್ಪ ಮುಗಳಿ, ಮಾಗುಂಡಪ್ಪ ಮುರುಡಿ, ದುರ್ವಾಸಪ್ಪ ಹೆಬ್ಬಳ್ಳಿ, ರಾಜು ಕೊಳದೂರ ಸೇರಿದಂತೆ ಇತರರಿದ್ದರು. ಶ್ರೀಕಾಂತ ಹೊಸಮನಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ಟಿ.ಜಿ. ಕರದಿನ ಕಾರ್ಯಕ್ರಮ ನಿರೂಪಿಸಿದರು. ಜೀವಪ್ಪ ಕಡ್ಡಿ ವಂದಿಸಿದರು.

# ವಿದ್ಯಾರ್ಥಿಗಳಿಗೆ ದ್ವಿತೀಯ ಪಿಯುಸಿ ಪ್ರಮುಖ ಘಟ್ಟ

**ಹುಕ್ಕೇರಿ:** ತಾಲೂಕಿನ ಹಿಡಕಲ್ ಡ್ಯಾಮದ ಶ್ರೀಬಸವೇಶ್ವರ ಸ್ವತಂತ್ರ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ದ್ವಿತೀಯ ವರ್ಷದ ವಿದ್ಯಾರ್ಥಿಗಳ ಬಿಳ್ಕೋಡುಗೆ ಸಮಾರಂಭ ಹಾಗೂ ವಾರ್ಷಿಕ ಸ್ನೇಹ ಸಮ್ಮೇಳನ ಜರುಗಿತು.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಹಿಸಿ ಬೆಳವಿ ಗ್ರಾಮದ ಶರಣಬಸವ ದೇವರು ಮಾತನಾಡಿ ಪಿ.ಯು.ಸಿ ಎಂಬುದು ವಿದ್ಯಾರ್ಥಿಗಳ ಜೀವನದಲ್ಲಿ ಅತ್ಯಮೂಲ್ಯವಾದ ಘಟ್ಟವಾಗಿದ್ದು ದುಶ್ಚಟಗಳಿಂದ ದೂರವಿದ್ದಾಗ ಮಾತ್ರ ಸಾಧನೆ ಇರಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಮೂಡಲಗಿಯ ಶ್ರೀಶಿವ ಬೋದರಂಗ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಕನ್ನಡ ಉಪನ್ಯಾಸಕರಾದ ಎ.ಜಿ ನಸಬಿ ಮಾತನಾಡಿ ವಿದ್ಯಾರ್ಥಿಗಳು ಜೀವನದ ಪ್ರತಿಯೊಂದು ಹಂತದಲ್ಲಿ ಪರಿಶ್ರಮ ಪಟ್ಟು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗಿ ತಮ್ಮ ಜೀವನವನ್ನು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಶ್ರೀಬಸವೇಶ್ವರ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀಗುರಪ್ಪ ತಳವಾರ ಅವರು ಸತತ 30 ವರ್ಷಗಳಿಂದ ಈ ಭಾಗದ ಪೂಜ್ಯರ ಆಶೀರ್ವಾದ ಹಾಗೂ ಶಿಕ್ಷಣ ಪ್ರೇಮಿಗಳ ಪ್ರೋತ್ಸಾಹದೊಂದಿಗೆ ಇಂದು ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿಸುತ್ತಾ ಬಂದಿದ್ದು ಸಂತೋಷಕರವಾಗಿದೆ ಮಹಾವಿದ್ಯಾಲಯದ ಹೇಳಿಕೆಗಾಗಿ ದುಡಿಯುತ್ತಿರುವ ಎಲ್ಲಾ ಸಿಬ್ಬಂದಿಗಳ ಪಾತ್ರವನ್ನು ನೆನೆಯಲೇಬೇಕು ಎಂದು ಹೇಳಿದರು. ಮಹಾವಿದ್ಯಾಲಯದ ಪ್ರಾಚಾರ್ಯರಾದ ಆರ್ ಎಸ್ ನಾಶಿಪುಡಿ ಅತಿಥಿ ಪರಿಚಯ ಹಾಗೂ ಸ್ವಾಗತ ಭಾಷಣವನ್ನು ನೆರವೇರಿಸಿದರು.

ದ್ವಿತೀಯ ವರ್ಷದ ವಿದ್ಯಾರ್ಥಿಗಳ ಬಿಳ್ಕೋಡುಗೆ ಸಮಾರಂಭ ಹಾಗೂ ವಾರ್ಷಿಕ ಸ್ನೇಹ ಸಮ್ಮೇಳನ ಜರುಗಿತು.

ಕಾರ್ಯಕ್ರಮದಲ್ಲಿ ಶ್ರೀ ಬಸವೇಶ್ವರ ಶಿಕ್ಷಣ ಸಂಸ್ಥೆಯ ಯುವ ಅಧ್ಯಕ್ಷರಾದ ಅನಿಲ ತಳವಾರ ಪದವಿಪೂರ್ವ ಹಾಗೂ ಪದವಿ ವಿಭಾಗದ ಎಲ್ಲ ಸಿಬ್ಬಂದಿ ವರ್ಗದವರು ಹಾಗು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಮಹಾವಿದ್ಯಾಲಯದ ಕನ್ನಡ ಉಪನ್ಯಾಸಕಿಯದ ಶ್ರೀಮತಿ ಆರ್. ಆರ್. ಹಿರೇಮನಿ ಮಾಲಾರ್ಪಣೆ ಕಾರ್ಯಕ್ರಮ ನೆರವೇರಿಸಿ ಕೊಟ್ಟರು. ಆರ್ ಪಿ ನಾಯಕ್ ಹಾಗೂ ಆರ.ಜಿ ಹವಾಲ್ದಾರ್ ಉಪನ್ಯಾಸಕರು ಜಂಟಿಯಾಗಿ ಬಹುಮಾನ ವಿತರಣೆ ಕಾರ್ಯಕ್ರಮವನ್ನು ನೆರವೇರಿಸಿದರು. ವಾಣಿಜ್ಯಶಾಸ್ತ್ರದ ಉಪನ್ಯಾಸಕರಾದ ಎಸ್ ಸಿ ಪಾಟೀಲ್ ಕಾರ್ಯಕ್ರಮ ನಿರೂಪಿಸಿದರು. ರಾಜ್ಯಶಾಸ್ತ್ರ ಉಪನ್ಯಾಸಕಿದ ನಿಕಿತಾ ಮಲನಾಯಕ ವಂದಿಸಿದರು.

# ನಕ್ಷಾ ಸರ್ವೇ ಕಾರ್ಯಕ್ಕೆ ನಾಳೆ ಚಾಲನೆ

**ಗೋಕಾಕ:** ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ಹಾಗೂ ನಗರಸಭೆ ಗೋಕಾಕ ಇವರ ಸಂಯುಕ್ತ ಆಶ್ರಯದಲ್ಲಿ ಕೇಂದ್ರ ಸರಕಾರದ ಮಹತ್ವಾಕಾಂಕ್ಷಿ ಯೋಜನೆ ''ನಕ್ಷಾ'' ಸರ್ವೆ ಕಾರ್ಯ ಚಾಲನೆ ಸಮಾರಂಭ ಇದೆ ದಿ.18ರ ಮಂಗಳವಾರದಂದು ಬೆಳಗ್ಗೆ 11ಗಂಟೆಗೆ ನಗರದ ನಗರಸಭೆ ಸಭಾ ಭವನದಲ್ಲಿ ಜರುಗಲಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ನೆರವೇರಿಸುವರು.

ಅಧ್ಯಕ್ಷತೆಯನ್ನು ಶಾಸಕ ರಮೇಶ ಜಾರಕಿಹೊಳಿ ವಹಿಸುವರು. ಘನ ಉಪಸ್ಥಿತಿ ಶಾಸಕ ಬಾಲಚಂದ್ರ ಜಾರಕಿಹೊಳಿ, ಮುಖ್ಯ ಅತಿಥಿಗಳಾಗಿ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಸಂಸದ ಜಗದೀಶ ಶೆಟ್ಟರ, ಸಂಸದೆ ಪ್ರಿಯಾಂಕಾ ಜಾರಕಿಹೊಳಿ, ವಿಧಾನ ಪರಿಷತ ಸದಸ್ಯರಾದ ಲಖನ ಜಾರಕಿಹೊಳಿ, ಪ್ರಕಾಶ ಹುಕ್ಕೇರಿ, ಚನ್ನರಾಜ ಹಟ್ಟಿಹೊಳಿ, ಹನಮಂತ ನಿರಾಣಿ, ನಗರಸಭೆ ಅಧ್ಯಕ್ಷ ಪ್ರಕಾಶ ಮುರಾರಿ ವಹಿಸುವರು. ತಹಶೀಲದಾರ ಡಾ.ಮೋಹನ ಭಸ್ಮೆ, ಡಿವೈಎಸ್‌ಪಿ ಡಿ ಎಚ್ ಮುಲ್ಲಾ, ಪೌರಾಯುಕ್ತ ರಮೇಶ ಜಾಧವ ಉಪಸ್ಥಿತರಿರಲಿದ್ದು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಭೂ ದಾಖಲೆಗಳ ಸಹಾಯಕ ನಿರ್ದೇಶಕ ಆರ್ ಆರ್ ಪಾಟೀಲ ಕೋರಿದ್ದಾರೆ.

# ದೇವಿ ಜಾತ್ರೆ ಮೆಚ್ಚಿದ ಸ್ವಾಮೀಜಿ



ಬನಶಂಕರಿದೇವಿ ಶತಮಾನದ ಜಾತ್ರಾ ಮಹೋತ್ಸವ ಪ್ರಯುಕ್ತ ಉಚಿತ ಸಾಮೂಹಿಕ ವಿವಾಹ ಸಮಾರಂಭ ಜರುಗಿತು.

**ರಾಮದುರ್ಗ:** ಹಿರಿಯರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಡೆಯ ಬೇಕಾದದು ಪ್ರತಿಯೊಬ್ಬರ ಜವಾಬ್ದಾರಿ. ಆ ನಿಟ್ಟಿನಲ್ಲಿ ನೇಕಾರ ಪೇಟೆಯ ದೇವಾಂಗ ಸಮಾಜ ಇತರ ಸಣ್ಣ ಸಮುದಾಯದ ಜನರನ್ನು ಒಗ್ಗೂಡಿಸಿಕೊಂಡು ಬನಶಂಕರಿದೇವಿ ಶತಮಾನದ ಜಾತ್ರಾ ಮಹೋತ್ಸವವನ್ನು ಅದ್ದೂರಿಯಾಗಿ ಆಚರಣೆ ಮಾಡುತ್ತಿರುವುದು ಶ್ಲಾಘನೀಯ ಎಂದು ಹಂಪೆ ಹೇಮಕೂಟ ಗಾಯತ್ರಿ ಪೀಠಾಧಿಪತಿ ಶ್ರೀದಯಾನಂದಪುರಿ ಸ್ವಾಮೀಜಿ ಹರ್ಷ ವ್ಯಕ್ತಪಡಿಸಿದರು.

ಪಟ್ಟಣದ ನೇಕಾರ ಪೇಠೆಯ ಬನಶಂಕರಿದೇವಿ ಶತಮಾನೋತ್ಸವ ಜಾತ್ರಾ ಮಹೋತ್ಸವ ಸಮಾರಂಭದ ಅಂಗವಾಗಿ ಭಾನುವಾರ ಏರ್ಪಡಿಸಿದ್ದ ಸಪ್ತಪದಿ ಉಚಿತ ಸಾಮೂಹಿಕ ವಿವಾಹ ಸಮಾರಂಭದ ಸಾನಿಧ್ಯ ವಹಿಸಿ ಅವರು ಮಾತನಾಡಿ, ಕಳೆದ 9 ದಿನಗಳಿಂದ ನಿರಂತರ ಜಾತ್ರೆ ನಡೆಸಿ ಬಂದವರಿಗೆ ಅನ್ನ, ಸಾಮೂಹಿಕ ವಿವಾಹ ಹಾಗೂ ರಥೋತ್ಸವವನ್ನು ಆಚರಿಸುತ್ತಿರುವುದು ಸಂಘಟನೆಯ ಹಾಗೂ ಜಾಗೃತಿಯ ಸಂಕೇತವಾಗಿದೆ.

ರಾಜ್ಯ ದೇವಾಂಗ ಸಂಘದ ಅಧ್ಯಕ್ಷ ರವೀಂದ್ರ ಕಲಬುರ್ಗಿ ಅವರು ಮಾತನಾಡಿದರು. ಕವಲಗೇರಿಯ ಶ್ರೀಶಿವಾನಂದ ಸರಸ್ವತಿ ಸ್ವಾಮೀಜಿ, ಕೆರೂರಿನ ವೇದಮೂರ್ತಿ ಶ್ರೀರುದ್ರಮುನಿ ಸ್ವಾಮೀಜಿ, ರವಿಸ್ವಾಮಿ ಆಚಾರ್ಯ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಸಾಮೂಹಿಕ ವಿವಾಹ ಸಮಾರಂಭದಲ್ಲಿ ನಾಲ್ಕು ಜೋಡಿ ನವ ದಂಪತಿಗಳು ವೈವಾಹಿಕ ಜೀವನಕ್ಕೆ ಕಾಲಿಟ್ಟರು. ಈ ಸಂದರ್ಭದಲ್ಲಿ ನೇಕಾರ ಸಮುದಾಯಗಳ ಒಕ್ಕೂಟದ ರಾಜ್ಯಾಧ್ಯಕ್ಷ ಬಿ.ಎಸ್. ಸೋಮಶೇಖರ, ಬೆಂಗಳೂರು ದೇವಾಂಗ ಸಂಘದ ಅಧ್ಯಕ್ಷ ಡಾ. ಜಿ. ರಮೇಶ ಮಾತನಾಡಿದರು.

ರಾಜ್ಯ ದೇವಾಂಗ ಸಂಘದ ಉಪಾಧ್ಯಕ್ಷ ಶಂಕ್ರಣ್ಣ ಮುರುಡಿ, ನಿರ್ದೇಶಕರಾದ ಶಿವಾನಂದ ಬಳ್ಳಾರಿ, ಸಂಕಣ್ಣ ಕರಡಿಗುಡ್ಡ, ಬನಶಂಕರಿ ದೇವಾಂಗ ಸಮಾಜದ ಅಧ್ಯಕ್ಷ ನಾರಾಯಣಪ್ಪ ಬೆನ್ನೂರ, ಉಪಾಧ್ಯಕ್ಷ ವಿಠ್ಠಲ ಕಲ್ಲೂರ, ಮುಖಂಡರಾದ ಏಕನಾಥ ಕೊಣ್ಣೂರ, ಕುಬೇರ ಗರಡಿಮನಿ, ನಾರಾಯಣ ಹೂಲಿ, ಈರಪ್ಪಜ್ಜ ಕೊಣ್ಣೂರ ಸೇರಿದಂತೆ ಇತರರಿದ್ದರು.

**ಸಾರ್ವಜನಿಕ ಪ್ರಕಟಣೆ**

ನಾನು ಶ್ರೀ ಬಿ. ಬಿ. ಕೊಟ್ಟಲಗಿ ನ್ಯಾಯವಾದಿಗಳು ಇಂಡಿ ಇವರು ತಮ್ಮ ಪಕ್ಷಗಾರನಾದ ಅಂದರೆ ವಿಜಯಪೂರ ಜಿಲ್ಲೆ ಇಂಡಿ ತಾಲೂಕಾ ಪೈಕಿ ಇಂಡಿ ಪಟ್ಟಣದ ರಹವಾಸಿಯಾದ ಸದಾನಂದ ಬಾಬುರಾಯ ಬಿರಾದಾರ ಇವರು ಕೊಟ್ಟ ಅಧಿಕಾರದ ಮಾಹಿತಿ ಮೇಲಿಂದ ಸಾರ್ವಜನಿಕ ಪ್ರಕಟಣೆ ಮೂಲಕ ತಿಳಿಯಪಡಿಸುವುದೇನೆಂದರೆ, ವಿಜಯಪೂರ ಜಿಲ್ಲೆಯ ಇಂಡಿ ತಾಲೂಕಾ ಪೈಕಿ ಇಂಡಿ ಪಟ್ಟಣದ ಬಿನ್ಶೇತಿ ಜಮೀನು ಸ. ನಂ. 582/ಅ ಪ್ಲಾಟ ನಂ.46 ಕ್ಷೇತ್ರ 00-02-02-02 ಇದನ್ನು ಖರೀದಿಸಿದ್ದು ಇರುತ್ತದೆ ಮತ್ತು ಖರೀದಿ ಸಮಯದಲ್ಲಿ ಮೊದಲಿನ (ಹಿಂದಿನ) ಮೂಲ ಖರೀದಿ ಪತ್ರಗಳು ಇವರ ತಾಬಾಕ್ಕೆ ತೆಗೆದುಕೊಂಡಿದ್ದು ಇರುತ್ತದೆ. ಆದರೆ ಮೂಲ ಖರೀದಿ ಪತ್ರಗಳಲ್ಲಿ ಒಂದಾದ ದಸ್ತ ನಂ. 2902/07-08 ಈಗ ನಜರ ಚೂಕಿನಿಂದ ಸದರಿ ಖರೀದಿ ಪತ್ರ ಕಳೆದು ಹೋಗಿರುತ್ತದೆ. ಅದರಂತೆ ಕಳೆದು ಹೋದ ಖರೀದಿ ಪತ್ರವನ್ನು ಸಾಕಷ್ಟು ಹುಡುಕಾಡಿದರೂ ಸಿಕ್ಕಿರುವುದಿಲ್ಲ, ಆದುದರಿಂದ ದಿನಾಂಕ 14/2/2025 ರಂದು ಆನ್‌ಲೈನ್ ಮೂಲಕ ಎಫ್.ಐ.ಆರ್. ಕೂಡ ರೆಜಿಸ್ಟರ್ ಆಗಿರುತ್ತದೆ. ಅದರಂತೆ ಮುಂದುವರೆದು ಸದರ ನಮ್ಮ ಪಕ್ಷಗಾರನು ಸ್ಟೇಟ್ ಬ್ಯಾಂಕ್ ನಲ್ಲಿ ಸದರ ಆಸ್ತಿ ಪತ್ರ ಅಡವಿಟ್ಟು ಸಾಲ ಪಡೆಯುವ ನಿಟ್ಟಿನಲ್ಲಿ ಅರ್ಜಿ ಸಲ್ಲಿಸಿದ್ದು ಇರುತ್ತದೆ. ಕಾರಣ ಸದರ ಈ ಪ್ರಕಟಣೆ ಮೂಲಕ ತಿಳಿಪಡಿಸುವದೇನೆಂದರೆ ಯಾರಿಗಾದರೂ ಸದರ ನೋಂದಾಯಿತ ಖರೀದಿ ಪತ್ರ ಸಿಕ್ಕರೆ ಅದನ್ನು ಕೂಡಲೇ ಮೋಬೈಲ್ ನಂ. 9880795937 ಕ್ಕೆ ಸಂಪರ್ಕಿಸಿ ತಂದು ಕೊಡಬೇಕಾಗಿ ವಿನಂತಿ ಅದೆ ಮತ್ತು ಈ ಸಂಬಂಧವಾಗಿ ಎಲ್ಲ ಖರ್ಚುಗಳನ್ನು ಕೊಡುವುದಾಗಿ ತಿಳಿಸಲಾಗಿದೆ.

ಸಹಿ/-
ಶ್ರೀ ಬಿ. ಬಿ. ಕೊಟ್ಟಲಗಿ,
ನ್ಯಾಯವಾದಿಗಳು, ಇಂಡಿ.

ಸ್ಥಳ: ಇಂಡಿ ದಿನಾಂಕ : 15/2/2025

# ಸತೀಶ ಶುಗರ್ಸ್ ಅವಾರ್ಡ್ಸ್: ಮಕ್ಕಳ ಪ್ರತಿಭೆ ಅನಾವರಣ

**ಗೋಕಾಕ:** ಸಚಿವ ಸತೀಶ ಜಾರಕಿಹೊಳಿ ಅವರು ಶಿಕ್ಷಣ ಮತ್ತು ಸಂಸ್ಕೃತಿಕ ರಂಗದಲ್ಲಿ ಮಕ್ಕಳನ್ನು ಉತ್ತೇಜಿಸಲು 20ವರ್ಷಗಳ ಹಿಂದೆ ಪ್ರಾರಂಭಿಸಿದ ಈ ವೇದಿಕೆ ಇಂದು ಹೆಮ್ಮರವಾಗಿ ಬೆಳೆದು ಅವರ ಕನಸನ್ನು ನನಸಾಗಿಸುತ್ತಿದೆ ಎಂದು ಸತೀಶ ಶುಗರ್ಸ್ ಅವಾರ್ಡ್ಸನ ಮುಖ್ಯಸ್ಥರು ಹಾಗೂ ಯುವ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಹುಲ ಜಾರಕಿಹೊಳಿ ಹೇಳಿದರು.

ಅವರು, ರವಿವಾರದಂದು ನಗರದ ಹಿಲ್ ಗಾರ್ಡನ ಆವರಣದಲ್ಲಿ ಆಯೋಜಿಸಿದ್ದ ಸತೀಶ ಶುಗರ್ಸ ಅವಾರ್ಡ್ಸನಲ್ಲಿ ವಿಜೇತರಿಗೆ ಬಹುಮಾನ ಹಾಗೂ ಔತನಕೂಟದಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದರು.

ಈ ವೇದಿಕೆಯಿಂದ ಹಲವಾರು ಬೆಳಗಾವಿ ನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಶ್ರೀಮಂತಗೊಳಿಸುತ್ತಿದೆ. ಗೋಕಾಕನಲ್ಲಿ ಪ್ರಾರಂಭಗೊಂಡ ಈ ಕಾರ್ಯಕ್ರಮ ಯಮಕನಮರ್ಡಿ ಹಾಗೂ ಚಿಕ್ಕೋಡಿಯಲ್ಲೂ ಕೂಡ ವಿಸ್ತಾರಗೊಳಿಸಲಾಗಿದೆ. ಈ ಬಾರಿ ಸಂಗೀತ ಮತ್ತು ನೃತ್ಯ ಸ್ಪರ್ಧೆಗಳನ್ನು ರಾಜ್ಯ ಮಟ್ಟಕ್ಕೂ ವಿಸ್ತರಿಸಲಾಗಿದೆ.

ಕಾರ್ಯಕ್ರಮಗಳಲ್ಲಿ ಪ್ರಸಕ್ತಸಾಲಿನಲ್ಲಿ 8ಸಾವಿರ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ತಲಾ 15ಸಾವಿರ ನಗದು ಬಹುಮಾನ ನೀಡಿ ಅವರನ್ನು ಪ್ರೋತ್ಸಾಹಿಸಲಾಗುತ್ತಿದೆ ಎಂದರು.

ಗೋಕಾಕ: ಸತೀಶ ಶುಗರ್ಸ ಅವಾರ್ಡ್ಸನ ಮುಖ್ಯಸ್ಥರು ಹಾಗೂ ಯುವ ಕಾಂಗ್ರೇಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಹುಲ ಜಾರಕಿಹೊಳಿ ಮಾತನಾಡುತ್ತಿರುವದು.

ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆ ಉಪನಿರ್ದೇಶಕ ಸೀತಾರಾಮು ಆರ್ ಎಸ್, ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಗಜಾನನ ಮನ್ನಿಕೇರಿ, ತಹಸೀಲದಾರ ಡಾ.ಮೋಹನ ಭಸ್ಮೆ, ಡಿವೈಎಸ್‌ಪಿ ಡಿ ಎಚ್ ಮುಲ್ಲಾ, ಕ್ಷೇತ್ರಶಿಕ್ಷಣಾಧಿಕಾರಿಗಳಾದ ಜಿ ಬಿ ಬಳಗಾರ, ಅಜೀತ ಮನ್ನಿಕೇರಿ, ಪ್ರಭಾವತಿ ಪಾಟೀಲ, ಸಮಾಜ ಕಲ್ಯಾಣ ಇಲಾಖೆ ಎ ಬಿ ಮಲಬನ್ನವರ, ಸಂಘಟಕರಾದ ಪ್ರಕಾಶ ಲಕ್ಷೆಟ್ಟಿ, ರೀಯಾಜ ಚೌವಲಾ ಇದ್ದರು.

> ತಂದೆ ಸತೀಶ್, ಅಕ್ಕ ಪ್ರಿಯಾಂಕಾ ಜಾರಕಿಹೊಳಿ ಅವರ ಮಾರ್ಗದರ್ಶನದಲ್ಲಿ ಈ ಕಾರ್ಯಕ್ರಮಗಳನ್ನು ಸದಾ ಮುನ್ನಡಸಲಾಗುವುದು. ಇದಕ್ಕೆ ತಮ್ಮೆಲ್ಲರ ಸಹಕಾರ ನೀಡುವಂತೆ ಕೋರಿದರು.
>
> ರಾಹುಲ್ ಜಾರಕಿಹೊಳಿ,
> ಯುವ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ

ಕರ್ನಾಟಕ ಸರ್ಕಾರ

**ಪುರಸಭೆ ಕಾರ್ಯಾಲಯ ಇಂಡಿ**

Website: www.inditown.mrc.gov.in E-Mail ID:itstaff_ulb_indi@yahoo.co.in
ಜಿಲ್ಲೆ: ವಿಜಯಪೂರ. Phone/Fax : (08359,225025) ರಾಜ್ಯ: ಕರ್ನಾಟಕ

ಕ್ರ.ಸಂ:ಪು.ಸ.ಇಂ/ತಾ.ವಿ/ಎಮ್.ಆರ್.ಎಫ್/2024-25 ದಿನಾಂಕ:12-02-2025

**ಅಲ್ಪಾವಧಿ ಟೆಂಡರ ಪ್ರಕಟಣೆ**
(ಇ-ಪ್ರಕ್ಯೂರಮೆಂಟ್ ಪೋರ್ಟಲ್ ಮುಖಾಂತರ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಗೆ, ಈ ಮೂಲಕ ತಿಳಿಯಪಡಿಸುವದೇನಂದರೆ, (ಎಮ್.ಆರ್.ಎಫ್) ಎಸ್.ಬಿ.ಎಮ್ ಅನುದಾನದಲ್ಲಿ ಇಂಡಿ ಪುರಸಭೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣಾ ಘಟಕದಲ್ಲಿ ಎಮ್.ಆರ್.ಎಫ್ ಸೆಂಟರ್ ಶೆಡ್ ನಿರ್ಮಾಣ ಕಾಮಗಾರಿ ಕೈಗೊಳ್ಳುವ ಕುರಿತು, ಇ-ಪ್ರಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಟೆಂಡರ ಕರೆಯಲಾಗಿದ್ದು ಲೋಕೋಪಯೋಗಿ ಇಲಾಖೆ 2ನೇ ದರ್ಜೆ ಹಾಗೂ ಮೇಲ್ದರ್ಜೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ಅದರಂತೆ ಆಸಕ್ತಿಯುಳ್ಳವರು ತಮ್ಮ ದರವಾರುಗಳನ್ನು http://kppp.karnataka.gov.in ಮೂಲಕ ಸಲ್ಲಸಬಹುದಾಗಿದೆ.

| ಅ ನಂ | ಕಾಮಗಾರಿ ಹೆಸರು | ಟೆಂಡರಿಗಿಟ್ಟ ಮೊತ್ತ | ಕಾಮಗಾರಿ ಪೂರ್ಣಗೊಳಿಸಲು ನಿಗಧಿಪಡಿಸಿದ ಅವಧಿ ತಿಂಗಳು |
|---|---|---|---|
| 01 | ಇಂಡಿ ಪುರಸಭೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣಾ ಘಟಕದಲ್ಲಿ ಎಮ್.ಆರ್.ಎಫ್. ಸೆಂಟರ್ ಶೆಡ್ ನಿರ್ಮಾಣ ಕಾಮಗಾರಿ DMA/2024-25/BD/WORK_INDENT31132/Call-2 | 40.00 ಲಕ್ಷ | 3 ಅವಧಿ ತಿಂಗಳು |

1. ಟೆಂಡರ ಸಲ್ಲಿಸಲು ಕೊನೆಯ ದಿನಾಂಕ:20-02-2025 ರಂದು ಸಂಜೆ 5:00 ಘಂಟೆಯವರೆಗೆ. ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳನ್ನು ವೆಬ್ ಸೈಟ್ http://kppp.karnataka,gov.in ನಲ್ಲಿ ಪಡೆಯಬಹುದು ಹಾಗೂ ಕಾರ್ಯಾಲಯದ ತಾಂತ್ರಿಕ ಶಾಖೆಯಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/-
ಮುಖ್ಯಾಧಿಕಾರಿ
ಪುರಸಭೆ, ಇಂಡಿ

ಸಹಿ/-
ಅಧ್ಯಕ್ಷರು
ಪುರಸಭೆ, ಇಂಡಿ

ಸಂತ ನಿರಂಕಾರ ಮಂಡಳ ದೆಹಲಿ ಶಾಖೆ ರಾಯಬಾಗ ಇವರು ಸಂತ ನಿರಂಕಾರ ಮಂಡಳ ವತಿಯಿಂದ ಚಿಂಚಲಿ ಮಾಯಕ್ಕದೇವಿ ಜಾತ್ರೆಗೆ ಬರುವ ಲಕ್ಷಾಂತರ ಭಕ್ತಾದಿಗಳು ಬೇಸಿಗೆಯಲ್ಲಿ ನೀರಡಿಕೆಯಿಂದ ಬಳಲಬಾರದೆಂದು ಉಚಿತ ಶುದ್ಧ ಕುಡಿಯುವ ನೀರು ಒಣ ದ್ರಾಕ್ಷಿ, ಬೆಲ್ಲ ಪೂರೈಸುತ್ತಿದ್ದಾರೆ. ಅಲ್ಲದೇ 5 ಜನ ವೈದ್ಯರು ಉಚಿತ ಆರೋಗ್ಯತಪಾಸಣೆ ಮಾಡುತ್ತ ಭಕ್ತರ ಸೇವೆಯಲ್ಲಿ ನಿರತರಾಗಿದ್ದಾರೆ. ಈ ಸಂದರ್ಭದಲ್ಲಿ ಮಾಯಕ್ಕದೇವಿ ಟ್ರಸ್ಟ್ ಕಮಿಟಿ ಅಧ್ಯಕ್ಷಜಿ ತೇಂದ್ರ ಜಾಧವ, ಸೇವಾದಳ ಸಂಚಾಲಕರಾದ ಗೋಪಿ ಜೀ, ಯೋಗೀಶ ಜೀ, ಗಣಪತಿ ಗಾಡಿವಡ್ಡರ, ವಿಜಯ ಮಾನೆ, ಮಾರುತಿ ಮೋರೆ, ಮಹಾದೇವ ಹೊನಕುಪ್ಪೆ ಹಲವಾರು ಸಂತರು ಉಪಸ್ಥಿತರಿದ್ದರು.

# ಅಭಿವೃದ್ಧಿಗೆ ಶ್ರಮಿಸುವ ಶ್ರೀಗಳ ಕಾರ್ಯ ಶ್ಲಾಘನೆ

**ಬೈಲಹೊಂಗಲ:** ಮಹಾತ್ಮರ ಜೀವನ ಚರಿತ್ರೆಯ ಪ್ರವಚನಗಳನ್ನು ಆಲಿಸಿ, ಜೀವನದಲ್ಲಿ ಅಳವಡಿಸಿಕೊಳ್ಳುವುದರಿಂದ ಬದುಕು ಬಂಗಾರವಾಗಲಿದೆ ಎಂದು ಹೊಸೂರ ಮಡಿವಾಳೇಶ್ವರ ಮಠದ ಗಂಗಾಧರ ಸ್ವಾಮೀಜಿ ಹೇಳಿದರು. ಅವರು ಪಟ್ಟಣದ ಶಾಖಾ ಮೂರುಸಾವಿರ ಮಠದ ಶ್ರೀನೀಲಕಂಠ ಮಹಾಶಿವಯೋಗಿಶ್ವರರ ಜಾತ್ರಾ ಮಹೋತ್ಸವ-2025 ಹಾಗೂ ಶಿಕ್ಷಣ ಕ್ಷೇತ್ರದ ಹರಿಕಾರ ಲಿಂ. ಗಂಗಾಧರ ಮಹಾಸ್ವಾಮೀಜಿ ಅವರ 72 ನೇ ಜಯಂತ್ಯೋತ್ಸವ ಹಾಗೂ ಮಹಾ ಶಿವರಾತ್ರಿ ಉತ್ಸವ ಅಂಗವಾಗಿ ಫೆ. 25 ರವರೆಗೆ ನಡೆಯಲಿರುವ ಮಹಾದಾಸೋಹಿ ಕಲಬುರ್ಗಿ ಶರಣ ಬಸವೇಶ್ವರ ಪುರಾಣ ಉದ್ಘಾಟನಾ ಸಮಾರಂಭದ ದಿವ್ಯ ಸಾನಿಧ್ಯವಹಿಸಿ ಮಾತನಾಡಿ, ಸಮಾಜದ ಅಭಿವೃದ್ದಿಗೆ ಶ್ರಮಮಿಸುತ್ತಿರುವ ಪ್ರಭುನೀಲಕಂಠ ಸ್ವಾಮೀಜಿ ಅವರ ಕಾರ್ಯ ಶ್ಲಾಘನೀಯ ಎಂದರು. ಶ್ರೀಮಠದ ಪೀಠಾಧಿಪತಿ ಪ್ರಭುನೀಲಕಂಠ ಸ್ವಾಮೀಜಿ ಮಾತನಾಡಿ, ಎಲ್ಲರೂ ಪಾಲ್ಗೊಂಡು ಜಾತ್ರಾ ಮಹೋತ್ಸವದ ಯಶಸ್ಸಿಗೆ ಕೈಜೋಡಿಸಬೇಕೆಂದರು. ಸಿದ್ದರಾಮ ಶಾಸ್ತ್ರಿ, ಪ್ರಮೋದಕುಮಾರ ವಕ್ಕುಂದಮಠ, ತಿಪ್ಪಣ್ಣ ಬಿಳ್ಳೂರ, ರವಿ ಮೂಗಬಸವ, ಮಡಿವಾಳಪ್ಪ ಹೋಟಿ, ಆರ್.ಎಸ್.ಮರಿಗೌಡರ, ಎಸ್.ಆರ್.ಕಲಹಾಳ, ಶಿವಬಸಪ್ಪ ತುರಮರಿ, ಬಿ.ಎಸ್.ಗುರನವರ, ವಿ.ಕೆ.ಬಡಿಗೇರ, ಮಹಾಂತೇಶ ಅಕ್ಕಿ, ಎಂ.ಎಸ್.ಚಿಲಮೂರ, ನಿವೃತ್ತ ಸೈನಿಕರು ಹಾಗೂ ಶಿಕ್ಷಣ ಸಂಸ್ಥೆಯ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.

ಶ್ರೀ ಶ್ರೀಮದ್
ಎ.ಸಿ.ಭಕ್ತಿವೇದಾಂತ ಸ್ವಾಮಿ ಶ್ರೀಲ ಪ್ರಭುಪಾದರು
ಇಸ್ಕಾನ್ ಮತ್ತು ವಿಶ್ವವ್ಯಾಪಿ ಹರೇ ಕೃಷ್ಣ ಆಂದೋಲನದ
ಸಂಸ್ಥಾಪಕ–ಆಚಾರ್ಯರು

# ಮಹಾಕುಂಭ 2025

ಅತ್ಯಂತ ಪ್ರತಿಷ್ಠಿತ

## ಅಖಿಲ ಭಾರತೀಯ ಅಖಾಡ ಪರಿಷತ್ತು

ಶ್ರೀ ಶ್ರೀಮದ್ ಓಂ ವಿಷ್ಣುಪಾದ 108
ಎ.ಸಿ.ಭಕ್ತಿವೇದಾಂತ ಸ್ವಾಮಿ

# ಶ್ರೀಲ ಪ್ರಭುಪಾದ

(ಬ್ರಹ್ಮ–ಮಧ್ವ–ಗೌಡೀಯ ವೈಷ್ಣವ ಪರಂಪರೆಯ 32ನೆಯ ಆಚಾರ್ಯ)

ಅವರಿಗೆ

**ಸನಾತನ ಧರ್ಮವನ್ನು ಹರಡಿದ, ವಿಶ್ವಾದ್ಯಂತ ಭಗವದ್ಗೀತೆಯ ಸಂದೇಶವನ್ನು ಹಂಚಿದ ಮತ್ತು ಜಾಗತಿಕವಾಗಿ ಹರಿನಾಮ ಸಂಕೀರ್ತನೆಯನ್ನು ಪ್ರಚುರ ಪಡಿಸಲು ನೀಡಿದ ಅಪೂರ್ವ ಕೊಡುಗೆಗಾಗಿ**

# ವಿಶ್ವ ಗುರು

**ವಿಶೇಷ ಉಪಾಧಿಯನ್ನು ಸಂತರ ಸಮ್ಮುಖದಲ್ಲಿ ನೀಡಿ ಗೌರವಿಸಲಾಗಿದೆ**

ಆಚಾರ್ಯ ಮಹಾಮಂಡಲೇಶ್ವರ
**ಶ್ರೀ ಕೈಲಾಶಾನಂದ ಗಿರಿಜೀ ಮಹಾರಾಜ್**
ನಿರಂಜನಿ ಅಖಾಡ

ಶ್ರೀ ಮಹಂತ್
**ರವಿಂದ್ರ ಪುರಿಜೀ ಮಹಾರಾಜ್**
ಅಧ್ಯಕ್ಷರು, ಅಖಿಲ ಭಾರತೀಯ ಅಖಾಡ ಪರಿಷತ್ತು

ಮತ್ತು ವಿವಿಧ ಅಖಾಡಗಳ ಪೂಜ್ಯ ಸಂತರ
ಪವಿತ್ರ ಉಪಸ್ಥಿತಿಯಲ್ಲಿ

**ಫೆಬ್ರವರಿ 10, 2025 ರಂದು ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭದ ಸಂದರ್ಭದಲ್ಲಿ ಅರ್ಪಿಸಲಾಯಿತು.**

ಅಧ್ಯಕ್ಷತೆ
**ಶ್ರೀ ಮಧು ಪಂಡಿತ ದಾಸ**
ಅಧ್ಯಕ್ಷರು–ಇಸ್ಕಾನ್ ಬೆಂಗಳೂರು, ಸ್ಥಾಪಕರು ಮತ್ತು ಅಧ್ಯಕ್ಷರು–ಅಕ್ಷಯ ಪಾತ್ರ ಪ್ರತಿಷ್ಠಾನ,
ಅಧ್ಯಕ್ಷರು–ವೃಂದಾವನ ಚಂದ್ರೋದಯ ಮಂದಿರ, ಅಧ್ಯಕ್ಷರು ಮತ್ತು ಮಾರ್ಗದರ್ಶಕರು–ಗ್ಲೋಬಲ್ ಹರೇ ಕೃಷ್ಣ ಮೂವ್‌ಮೆಂಟ್

ಇಸ್ಕಾನ್ ಬೆಂಗಳೂರಿನ ಶ್ರೀ ಮಧು ಪಂಡಿತ ದಾಸ ಮತ್ತು ಶ್ರೀ ಚಂಚಲಾಪತಿ ದಾಸ ಅವರು ಶ್ರೀಲ ಪ್ರಭುಪಾದರ ಪರವಾಗಿ ಆಚಾರ್ಯ ಮಹಾಮಂಡಲೇಶ್ವರ ಶ್ರೀ ಕೈಲಾಶಾನಂದ ಗಿರಿಜೀ ಮಹಾರಾಜ್ ಅವರಿಂದ ಅಭಿನಂದನಾ ಪತ್ರವನ್ನು ಸ್ವೀಕರಿಸಿದರು.

ಶ್ರೀಲ ಪ್ರಭುಪಾದರು ತಮ್ಮ ಗುರು ಶ್ರೀ ಶ್ರೀಮದ್ ಭಕ್ತಿಸಿದ್ಧಾಂತ ಸರಸ್ವತಿ ಠಾಕುರರ ಆದೇಶವನ್ನು ಪಾಲಿಸಲು ತಮ್ಮ 70ರ ಇಳಿ ವಯಸ್ಸಿನಲ್ಲಿ ಅತ್ಯಂತ ಪ್ರಯಾಸಕರವಾದ ಪ್ರಯಾಣವನ್ನು ಕೈಗೊಂಡರು. ನ್ಯೂಯಾರ್ಕ್ ನಗರಕ್ಕೆ ಹೊರಟಿದ್ದ ಸರಕು ಸಾಗಣೆ ಹಡಗಿನಲ್ಲಿ ದೃಢ ಸಂಕಲ್ಪದಿಂದ ಹೊರಟರು. ಆಗ ಅವರ ಬಳಿ ಇದ್ದದ್ದು ಕೇವಲ 40 ರೂಪಾಯಿಗಳು ಮಾತ್ರ. ಅವರಿಗೆ ಯಾವುದೇ ಸಂಸ್ಥೆಯ ಅಥವಾ ಶ್ರೀಮಂತರ ಬೆಂಬಲವಿರಲಿಲ್ಲ. ಅಂತಹ ಪರಿಸ್ಥಿತಿಯಲ್ಲಿಯೂ ಕೂಡ, ಅವರು 1966ರಲ್ಲಿ ಇಸ್ಕಾನ್ ಸ್ಥಾಪಿಸಿದರು. ಅದು ವಿಶ್ವವ್ಯಾಪಿ ಆಂದೋಲನವಾಗಿ ಬೆಳೆಯಿತು. ಮುಂದಿನ 11 ವರ್ಷಗಳಲ್ಲಿ ಶ್ರೀಲ ಪ್ರಭುಪಾದರು ಜಗತ್ತಿನಾದ್ಯಂತ 108 ಕೃಷ್ಣ ಮಂದಿರಗಳನ್ನು ಸ್ಥಾಪಿಸಿದರು, 70ಕ್ಕೂ ಹೆಚ್ಚು ಸಂಪುಟಗಳ ಆಧ್ಯಾತ್ಮಿಕ ಪುಸ್ತಕಗಳ ಕರ್ತೃವಾದರು. ಅವರು 1977ರಲ್ಲಿ ವೃಂದಾವನದಲ್ಲಿ ಮಹಾಸಮಾಧಿಸ್ತರಾದರು.

ಅವರ ಬದುಕು ಶ್ರದ್ಧೆ, ಸಮರ್ಪಣೆ, ಕರುಣೆ ಮತ್ತು ಸನಾತನ ಧರ್ಮಕ್ಕೆ, ವಿಶೇಷವಾಗಿ ಶ್ರೀ ಕೃಷ್ಣ ಭಕ್ತಿಗೆ ಅವರಲ್ಲಿದ್ದ ಬದ್ಧತೆಯು ಸ್ಫೂರ್ತಿದಾಯಕ.

ಸ್ವತಂತ್ರ ಮತ್ತು ಸಂಬಂಧಿತ ಘಟಕಗಳು:

Srila Prabhupada's ISKCON BANGALORE

SRILA PRABHUPADA'S HARE KRISHNA MOVEMENT

Vrindavan Chandrodaya Mandir
THE RISING MOON OF VRINDAVAN

INDIA HERITAGE FOUNDATION
BAY AREA - NEW JERSEY - BOSTON
DALLAS - LONDON

AKSHAYA PĀTRA™
Unlimited food for education

ಟ್ರಸ್ಟ್‌ನ ಭಕ್ತರಿಂದ ಪ್ರಾಯೋಜಿತ ಜಾಹೀರಾತು

## ಸಮಾಚಾರ ಸಣ್ಣದಲ್ಲ

### ಎರಡು ಜೀವ ಬಲಿ ಪಡೆದಿದ್ದ ಸಲಗ ಸೆರೆ

**ಮಡಿಕೇರಿ:** ಎರಡು ಜೀವಗಳನ್ನು ಬಲಿ ಪಡೆದು, ಗ್ರಾಮಸ್ಥರಿಗೆ ಕಿರುಕುಳ ಕೊಡುತ್ತಿದ್ದ ಒಂಟಿ ಸಲಗವನ್ನು ಕೊನೆಗೂ ಅರಣ್ಯ ಇಲಾಖೆ ಅಧಿಕಾರಿಗಳು ಸೆರೆಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಕೊಡಗು ಜಿಲ್ಲೆ ಪೊನ್ನಂಪೇಟೆ ತಾಲೂಕಿನ ಚೆನ್ನಂಗೊಲ್ಲಿ, ಭದ್ರಗೊಳ, ದೇವರಪುರ ವ್ಯಾಪ್ತಿಯಲ್ಲಿ ಕಳೆದ ಕೆಲವು ವರ್ಷಗಳಿಂದ ಅಡ್ಡಾಡುತ್ತಿದ್ದ ಪುಂಡಾನೆ ಸುತ್ತಮುತ್ತಲಿನ ಗ್ರಾಮದ ಜನರನ್ನು ನಿರಂತರವಾಗಿ ಕಾಡಿತ್ತು. 40 ವರ್ಷದ ಒಂಟಿ ಸಲಗ ಕೆಲ ತಿಂಗಳ ಹಿಂದೆ ಭದ್ರಗೊಳ ಗ್ರಾಮದಲ್ಲಿ ಗೌರಿ ಎಂಬ ಮಹಿಳೆಯನ್ನು ಬಲಿ ಪಡೆದಿತ್ತು. ಬಳಿಕ ಎರಡು ದಿನಗಳ ಹಿಂದೆ ಚೆನ್ನಂಗೊಲ್ಲಿಯಲ್ಲಿ ಪಾರ್ವತಿ (52) ಎಂಬ ಮಹಿಳೆಯನ್ನು ತುಳಿದು ಸಾಯಿಸಿತ್ತು.

### ಆರೋಗ್ಯದಲ್ಲಿ ವ್ಯತ್ಯಾಸ: ಬಾಣಂತಿ ಸಾವು

**ಶಿವಮೊಗ್ಗ:** ಕಳೆದ 6 ದಿನಗಳ ಹಿಂದೆ ತೀರ್ಥಹಳ್ಳಿ ಸರಕಾರಿ ಆಸ್ಪತ್ರೆಯಲ್ಲಿ ಗಂಡು ಮಗುವಿಗೆ ಜನ್ಮ ನೀಡಿದ್ದ ಬಾಣಂತಿ, ಶಿವಮೊಗ್ಗದ ಖಾಸಗಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾಳೆ.

ಮೃತ ಮಹಿಳೆಯನ್ನು ಮಾಳೂರು ಗ್ರಾಮದ ಮಂಜುಳಾ (25) ಎಂದು ಗುರುತಿಸಲಾಗಿದೆ. ಫೆ.10 ರಂದು ಅವರಿಗೆ ತೀರ್ಥಹಳ್ಳಿ ಸರಕಾರಿ ಆಸ್ಪತ್ರೆಯಲ್ಲಿ ಹೆರಿಗೆಯಾಗಿತ್ತು. ಬಳಿಕ ಅವರ ಆರೋಗ್ಯದಲ್ಲಿ ಏರುಪೇರಾಗಿತ್ತು. ಈ ಹಿನ್ನೆಲೆ ಅವರನ್ನು ಶಿವಮೊಗ್ಗದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಅವರು ಸಾವಿಗೀಡಾಗಿದ್ದಾರೆ. ಒಂದು ವರ್ಷದ ಹಿಂದೆ ಮಂಜುಳಾ ಅವರಿಗೆ ಮದುವೆಯಾಗಿತ್ತು. ಆಸ್ಪತ್ರೆಯ ಆವರಣದಲ್ಲಿ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ.

### ಕೊಟ್ಟಿಗೆಗೆ ಬೆಂಕಿ: 8 ಜಾನುವಾರುಗಳು ಸಾವು

**ಹಾವೇರಿ:** ಆಕಸ್ಮಿಕವಾಗಿ ದನದ ಕೊಟ್ಟಿಗೆಗೆ ಬೆಂಕಿಬಿದ್ದು 6 ಹಸುಗಳು ಹಾಗೂ 2 ಕರುಗಳು ಸಜೀವ ದಹನವಾಗಿರುವ ಘಟನೆ ಹಾವೇರಿ ಜಿಲ್ಲೆ

ರಟ್ಟಿಹಳ್ಳಿ ತಾಲೂಕಿನ ಕರೂರು ಗ್ರಾಮದಲ್ಲಿ ನಡೆದಿದೆ. ಗ್ರಾಮದ ರೈತ ನಾಗಪ್ಪ ಅಸುಂಡಿ, ಹನುಮಂತಪ್ಪ ಅಸುಂಡಿ ಎಂಬುವರಿಗೆ ಸೇರಿದ ದನದ ಕೊಟ್ಟಿಗೆಯಲ್ಲಿ ಈ ದುರ್ಘಟನೆ ನಡೆದಿದೆ. ಊರಿನ ಹೊರಗಿರುವ ದನದ ಕೊಟ್ಟಿಗೆಯಲ್ಲಿ ಹಸುಗಳನ್ನು ಕಟ್ಟಲಾಗಿತ್ತು. ಕೊಟ್ಟಿಗೆಗೆ ಆಕಸ್ಮಿಕವಾಗಿ ಬೆಂಕಿಬಿದ್ದು 6 ಹಸು, 2 ಕರುಗಳು ಸ್ಥಳದಲ್ಲಿಯೇ ಸಜೀವ ದಹನಗೊಂಡಿವೆ. ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ಸುಮಾರು 6 ಲಕ್ಷ ರು.ಗೂ ಅಧಿಕ ಮೌಲ್ಯದ ದನದ ಕೊಟ್ಟಿಗೆ ಮತ್ತು ಹಸುಗಳು ಸುಟ್ಟು ಕರಗಲಾಗಿದ್ದು, ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಸ್ಥಳಕ್ಕೆ ರಟ್ಟಿಹಳ್ಳಿ ಪೊಲೀಸರು ಭೇಟಿ ಪರಿಶೀಲನೆ ನಡೆಸಿದ್ದಾರೆ. ರಟ್ಟಿಹಳ್ಳಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.

### ನದಿಯಲ್ಲಿ ಮುಳುಗಿ ಅರ್ಚಕ ಸಾವು

**ಕೊಳ್ಳೇಗಾಲ:** ಕಾವೇರಿ ನದಿಯಲ್ಲಿ ತೀರ್ಥಸ್ನಾನ ಮಾಡಲು ಹೋದ ಅರ್ಚಕ ನೀರಲ್ಲಿ ಮುಳುಗಿ ಸಾವನ್ನಪ್ಪಿ ರುವ ಘಟನೆ ತಾಲೂಕಿನ ದಾಸನಪುರ ಗ್ರಾಮದಲ್ಲಿ ಸಂಭವಿಸಿದೆ. ಕುಕ್ಕೆ ಸುಬ್ರಹ್ಮಣ್ಯ ದೇವಾಲಯದಲ್ಲಿ ಅರ್ಚಕರಾಗಿ ಸೇವೆ

ಸಲ್ಲಿಸುತ್ತಿದ್ದು, ಪ್ರಸ್ತುತ ಕೊಳ್ಳೇಗಾಲದ ಹಳೇ ಅಗ್ರಹಾರದ ವಿನಾಯಕ ಗುಡಿ ಬೀದಿಯ ಮನೆಯಲ್ಲಿ ನೆಲೆಸಿರುವ ಎನ್. ನಾಗರಾಜನ್ (78) ಮೃತಪಟ್ಟವರು. ಕಾವೇರಿ ರಸ್ತೆಯಲ್ಲಿರುವ ನಾರಾಯಣಸ್ವಾಮಿ ರಥೋತ್ಸವದ ಅಂಗವಾಗಿ ಶನಿವಾರ ತಾಲೂಕಿನ ದಾಸನಪುರ ಗ್ರಾಮದ ಕಾವೇರಿ ನದಿಯಲ್ಲಿ ತೀರ್ಥ ಸ್ನಾನಕ್ಕೆ ಅವರು ತೆರಳಿದ್ದರು. ನದಿಯಲ್ಲಿ ಈಜುತ್ತಿದ್ದಾಗ ನೀರಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಕುಕ್ಕೆ ಸುಬ್ರಹ್ಮಣ್ಯದಲ್ಲಿ ಅರ್ಚಕರಾಗಿದ್ದ ಅವರು ವಯೋನಿವೃತ್ತಿಯ ಹಿನ್ನೆಲೆಯಲ್ಲಿ ಸ್ವಂತ ಊರಲ್ಲೇ ನೆಲೆಸಲು 2 ತಿಂಗಳ ಹಿಂದೆ ಬಂದಿದ್ದರು.

{ ಎಚ್.ಡಿ.ಕುಮಾರಸ್ವಾಮಿ } ಕೇಂದ್ರ ಸಚಿವ

ಪಕ್ಷ ಸಂಘಟನೆಯ ಅವಶ್ಯಕತೆ ಇದೆ. ಮುಂದಿನ ದಿನಗಳಲ್ಲಿ ನಾನೇ ಖುದ್ದು ಜವಾಬ್ದಾರಿ ತೆಗೆದುಕೊಳ್ಳಬೇಕಾಗಿದೆ. ಸದ್ಯ ಸಂಘಟನೆಯ ಜವಾಬ್ದಾರಿಯನ್ನು ರಾಷ್ಟ್ರೀಯ ಅಧ್ಯಕ್ಷರೇ ವಹಿಸಿಕೊಳ್ಳುತ್ತಿದ್ದಾರೆ. ಕೇಂದ್ರ ಸಚಿವನದ ಬಳಿಕ ನನಗೆ ಬಿಡುವಿಲ್ಲದ ಕಾರ್ಯಕ್ರಮಗಳಿಂದಾಗಿ ದೇವೇಗೌಡರೇ ಪಕ್ಷದ ಶಾಸಕರು, ಮಾಜಿ ಶಾಸಕರು, ಕಾರ್ಯಕರ್ತರು ಜತೆಗೂಡಿ ಸಂಘಟನೆಗೆ ತೀರ್ಮಾನ ಮಾಡಿದ್ದಾರೆ.

# ಕೈ ಸೇರುವ ಪಡೆ ದೊಡ್ಡದಾಗಿದೆ

## ಮಾಜಿ ಸಚಿವ ಶಿವರಾಮೇಗೌಡ, ಬ್ರಿಜೇಶ್ ಕಾಳಪ್ಪ ಸೇರಿ ಹಲವರು ಮಾತೃಪಕ್ಷಕ್ಕೆ
## ಮುಂದಿನ ದಿನದಲ್ಲಿ ಇನ್ನಷ್ಟು ಮಂದಿ ಕಾಂಗ್ರೆಸ್ ಸೇರುವ ಸಾಧ್ಯತೆ: ಡಿಕೆಶಿ ಸುಳಿವು

**ಬೆಂಗಳೂರು:** ಕಾಂಗ್ರೆಸ್ ಸಮುದ್ರವಿದ್ದಂತೆ ಬಿಜೆಪಿ-ಜೆಡಿಎಸ್‌ನ ವಿವಿಧ ಸ್ತರಗಳ ನಾಯಕರು ಹಂತಹಂತವಾಗಿ ಈ ಸಮುದ್ರವನ್ನು ಸೇರಲಿದ್ದಾರೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಶಿವರಾಮೇಗೌಡ, ಆಪ್‌ನಿಂದ ಬಂದ ಬ್ರಿಜೇಶ್ ಪಾಟೀಲ್, ಶಿವರಾಮೇಗೌಡ ಪುತ್ರ ಮಂಜೇಗೌಡ, ಎಲ್.ಎಸ್. ಚೇತನ್ ಗೌಡ ಸೇರಿದಂತೆ ಹಲವರು ಕಾಂಗ್ರೆಸ್ ಸೇರಿದರು.

ಪಕ್ಷ ಸೇರ್ಪಡೆ ಬಳಿಕ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಬಿಜೆಪಿ ಹಾಗೂ ಜೆಡಿಎಸ್‌ನ ಹಲವು ನಾಯಕರು ಹಂತ ಹಂತವಾಗಿ ಕಾಂಗ್ರೆಸ್ ಸೇರುತ್ತಿದ್ದಾರೆ. ಎಲ್.ಆರ್ ಶಿವರಾಮೇಗೌಡ ಕಾಂಗ್ರೆಸ್‌ಗೆ ವಾಪಸಾಗಿದ್ದಾರೆ. ಜೆಡಿಎಸ್‌ನಿಂದ ಸಂಸತ್ ಸದಸ್ಯರಾಗಿದ್ದರು. ಈ ಹಿಂದೆ ನಮ್ಮ ಪಕ್ಷದ ರಾಷ್ಟ್ರೀಯ ವಕ್ತಾರರಾಗಿದ್ದ ಬ್ರಿಜೇಶ್ ಕಾಳಪ್ಪ ಕೂಡ ಆಮ್ ಆದ್ಮಿ ಪಕ್ಷ ತೊರೆದು ಕಾಂಗ್ರೆಸ್ ಸೇರಿದ್ದಾರೆ. ತಾವು ಮತ್ತೆ ಕಾಂಗ್ರೆಸ್ಸಿಗರಾಗಿ ಗುರುತಿಸಿಕೊಳ್ಳಬೇಕು, ಪಕ್ಷದಲ್ಲೇ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಅವರು ನಿರ್ಧರಿಸಿದ್ದಾರೆ ಎಂದರು.

**ಕಾಂಗ್ರೆಸ್‌ನಲ್ಲಿ ಭವಿಷ್ಯ:** ದೇಶದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮಾತ್ರ ಭವಿಷ್ಯವಿದೆ ಎಂದು ಮನದಟ್ಟು ಮಾಡಿಕೊಂಡು ಇಂದು ನಮ್ಮ ಪಕ್ಷ ಸೇರಿದ್ದಾರೆ. ಈ ಇಬ್ಬರು ನಾಯಕರು ಹಾಗೂ ಅವರ ಕಾರ್ಯಕರ್ತರಿಗೆ ಪಕ್ಷದ ಪರವಾಗಿ ಆತ್ಮೀಯವಾಗಿ ಸ್ವಾಗತಿಸುತ್ತೇನೆ. ಕಾಂಗ್ರೆಸ್ ಪಕ್ಷ ಸಮುದ್ರ ಇದ್ದಂತೆ. ಎಲ್ಲಾ ನದಿಗಳು ಸಮುದ್ರ ಸೇರುವಂತೆ ಎಲ್ಲಾ ಪಕ್ಷಗಳ ನಾಯಕರು ನಮ್ಮ ಸಿದ್ಧಾಂತ, ನಾಯಕತ್ವ ಒಪ್ಪಿ ಪಕ್ಷ ಸೇರುತ್ತಿದ್ದಾರೆ.

ಪಕ್ಷ ಸೇರುವವರ ಪಟ್ಟಿ ಇಲ್ಲಿಗೆ ಮುಗಿಯುವುದಿಲ್ಲ. ಬೇರೆ ಪಕ್ಷದಿಂದ ಕಾಂಗ್ರೆಸ್‌ಗೆ ಬರುವವರ ಪಟ್ಟಿ ದೊಡ್ಡದಾಗಿದೆ. ಕೆಲವು ನಾಯಕರ ಬಗ್ಗೆ ಸ್ಥಳೀಯವಾಗಿ ಚರ್ಚಿಸಿ ತೀರ್ಮಾನ ಮಾಡಬೇಕಿದೆ. ಬಳಿಕ ಹಂತಹಂತವಾಗಿ ಪಕ್ಷಕ್ಕೆ ಸೇರಿಸಿಕೊಳ್ಳುತ್ತೇವೆ. ಇನ್ನೂ ಹಲವು ಶಾಸಕರು ಪಕ್ಷಾಂತರ ಮಾಡುವವರಿದ್ದಾರೆ ಎನ್ನುವ ಪ್ರಶ್ನೆಗೆ, ಇದು ಗೌಪ್ಯ ವಿಚಾರ, ಬಹಿರಂಗಪಡಿಸುವುದಿಲ್ಲ ಡಿ.ಕೆ.ಶಿವಕುಮಾರ್ ಸೂಚ್ಯವಾಗಿ ತಿಳಿಸಿದರು.

**ಸ್ಥಳೀಯ ಸಂಸ್ಥೆ ಚುನಾವಣೆಗೆ ಸಜ್ಜಾಗಿ:** ಯಾವುದೇ ಕ್ಷಣದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯಬಹುದು. ಹೀಗಾಗಿ ಕಾಂಗ್ರೆಸ್ ನಾಯಕರು ಹಾಗೂ ಕಾರ್ಯಕರ್ತರು ಸಜ್ಜಾಗಬೇಕು. ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವ ವಿಚಾರವಾಗಿ ನ್ಯಾಯಾಲಯದಿಂದ ಸದ್ಯದಲ್ಲೇ ಸೂಚನೆ ಬರುವ ಸಾಧ್ಯತೆಯಿದೆ. ಇನ್ನು ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಯನ್ನು ನಡೆಸಬೇಕಾಗಿದ್ದು ಗ್ರೇಟರ್ ಬೆಂಗಳೂರು ವಿಚಾರವಾಗಿ ಅಭಿಪ್ರಾಯ ಸಂಗ್ರಹಕ್ಕೆ ಮುಂದಾಗಿದ್ದೇವೆ ಎಂದರು.

ಈ ಚುನಾವಣೆಗಳ ಸಿದ್ಧತೆಗಾಗಿ ಕಾರ್ಯಾಧ್ಯಕ್ಷರ ನೇತೃತ್ವದಲ್ಲಿ ಉಪಾಧ್ಯಕ್ಷರನ್ನು ಸೇರಿಸಿಕೊಂಡು ವಿಭಾಗವಾರು ಸಮಿತಿ ರಚಿಸಲಿದ್ದೇವೆ. ಈ ಸಮಿತಿ ಮಾರ್ಚ್ ಒಳಗಾಗಿ ರಾಜ್ಯ ಪ್ರವಾಸ ಮಾಡಿ ಎಲ್ಲೆಡೆ ಸಮನ್ವಯತೆ ಸಾಧಿಸಿ ತಯಾರಿ ಮಾಡಿಕೊಳ್ಳಬೇಕು. ಎಲ್ಲೆಲ್ಲಿ ನಾಯಕರ ಮಧ್ಯೆ ಹೊಂದಾಣಿಕೆ ಸಾಧಿಸಿ, 50% ಮಹಿಳಾ ಅಭ್ಯರ್ಥಿಗಳನ್ನು ತಯಾರು ಮಾಡುವ ಬಗ್ಗೆ ವರದಿ ಸಲ್ಲಿಸಬೇಕು ಎಂದು ಕೆಪಿಸಿಸಿ ಅಧ್ಯಕ್ಷರು ಸೂಚಿಸಿದರು.

ವಿವಿಧ ಪಕ್ಷಗಳ ಮುಖಂಡರನ್ನು ಕಾಂಗ್ರೆಸ್‌ಗೆ ಬರಮಾಡಿಕೊಂಡ ಕೆಪಿಸಿಸಿ ಅಧ್ಯಕ್ಷ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್..

### ಕಾಂಗ್ರೆಸ್ ಹೆಸರಿನಲ್ಲಿ ಜಾಗ ಇದ್ದರೆ ಕಚೇರಿ ಶಂಕುಸ್ಥಾಪನೆ

**100 ಕಾಂಗ್ರೆಸ್ ಕಚೇರಿ ನಿರ್ಮಿಸುವ ಹಿನ್ನೆಲೆಯಲ್ಲಿ ಇವುಗಳ ಶಂಕುಸ್ಥಾಪನೆ ಕಾರ್ಯಕ್ರಮ ನೆರವೇರಿಸಲು ದಿನಾಂಕ ನಿಗದಿ ಮಾಡುವಂತೆ ನಮ್ಮ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಅವರಿಗೆ ಮನವಿ ಮಾಡಿದ್ದೇನೆ. ಈ ಕಾರ್ಯಕ್ಕೆ ನಾಲ್ಕು ವಿಭಾಗಗಳಲ್ಲಿ ಸಮಿತಿ ರಚಿಸಲಾಗಿದೆ. ಕಚೇರಿ ಕಟ್ಟಡ ನಿರ್ಮಾಣ ಮಾಡುವ ಜಾಗ ಕಾಂಗ್ರೆಸ್ ಪಕ್ಷದ ಹೆಸರಿನಲ್ಲಿ ನೋಂದಣಿಯಾಗದಿದ್ದರೆ ಅಲ್ಲಿ ನಮ್ಮ ನಾಯಕರಿಂದ ಶಂಕುಸ್ಥಾಪನೆ ಮಾಡಿಸುವುದಿಲ್ಲ. ಈ ಕಟ್ಟಡ ನಿರ್ಮಾಣದ ಜಾಗ ವೈಯಕ್ತಿಕ ಹೆಸರು, ಬೇರೆ ಟ್ರಸ್ಟ್ ಹೆಸರಿನಲ್ಲಿ ಇರುವಂತಿಲ್ಲ ಎಂದರು. ಬೆಂಗಳೂರಿನ ಆನಂದರಾವ್ ವೃತ್ತದ ಬಳಿ ಇರುವ ಜಾಗದಲ್ಲಿ ಕಟ್ಟಡ ನಿರ್ಮಾಣಕ್ಕೆ ನಕ್ಷೆ ಸಿದ್ಧಪಡಿಸಲಾಗಿದೆ ಎಂದರು.**

# 3ನೇ ಬಾರಿಗೆ ಕೈ ಹಿಡಿದ ಶಿವರಾಮೇಗೌಡ!

← ಮೊದಲಪುಟದಿಂದ

ಆದರೆ ಲೋಕಸಭಾ ಚುನಾವಣಾ ವೇಳೆಗೆ ಬಿಜೆಪಿಯಲ್ಲಿ ಸಂಪೂರ್ಣ ನಿರ್ಲಕ್ಷ್ಯಕ್ಕೆ ಒಳಗಾಗಿದ್ದರಿಂದ ಇದೀಗ ಮರಳಿ ಗೂಡಿಗೆ ಸೇರಿದ್ದಾರೆ ಎನ್ನಲಾಗುತ್ತಿದೆ.

**ಸಿ.ಪಿ.ಯೋಗೇಶ್ವರ ಪರ ಪ್ರಚಾರ:** ಕಳೆದ ಎರಡು ತಿಂಗಳ ಹಿಂದೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ ಪರ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡೆಸಿದ್ದ ಪ್ರಚಾರ ಸಭೆಯಲ್ಲಿಯೇ ಶಿವರಾಮೇಗೌಡರು ಭಾಗವಹಿಸಿದ್ದರು. ಬಳಿಕ ಸಿಎಂ, ಡಿಸಿಎಂ ಅವರೊಂದಿಗೆ ವೇದಿಕೆ ಕಾರ್ಯಕ್ರಮಗಳಲ್ಲಿಯೂ ಕಾಣಿಸಿಕೊಂಡಿದ್ದರು. ಈ ಎಲ್ಲ ಬೆಳವಣಿಗೆ ಬಳಿಕ ಶಿವರಾಮೇಗೌಡರು ಕಾಂಗ್ರೆಸ್ ಸೇರ್ಪಡೆ ಬಹುತೇಕ ಖಚಿತ ಎನ್ನಲಾಗಿತ್ತು. ಇದೀಗ ಅಧಿಕೃತವಾಗಿ ಪಕ್ಷಾಂತರ ಮಾಡಿದ್ದಾರೆ.

### ಶಿವರಾಮೇಗೌಡರ ಪಕ್ಷಾಂತರ ಟೈಮ್‌ಲೈನ್

**1989:** ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಶಾಸಕರಾಗಿ ಆಯ್ಕೆ
**1996:** ಜನತಾದಳಕ್ಕೆ ಸೇರ್ಪಡೆ
**1999:** ಕಾಂಗ್ರೆಸ್ ಸೇರ್ಪಡೆ
**2009:** ಕಾಂಗ್ರೆಸ್‌ನಿಂದ ಮೊದಲ ಬಾರಿಗೆ ಬಿಜೆಪಿಗೆ
**2010:** ಹೋದದಾರಿಗೆ ಸುಂಕವಿಲ್ಲವೆಂದು ವಾಪಸು ಕಾಂಗ್ರೆಸ್‌ಗೆ
**2018:** ಜೆಡಿಎಸ್‌ಗೆ ಎರಡನೇ ಬಾರಿ ಸೇರ್ಪಡೆ
**2023:** ಜೆಡಿಎಸ್‌ನಿಂದ ಉಚ್ಚಾಟನೆಯಾದ ಬಳಿಕ ಬಿಜೆಪಿಗೆ ಸೇರ್ಪಡೆ
**2025:** ಬಿಜೆಪಿಯಲ್ಲಿ ಬೆಲೆಯಿಲ್ಲವೆಂದು ಮತ್ತೆ ಕಾಂಗ್ರೆಸ್‌ಗೆ

**ಮರಳಿ ಗೂಡು ಸೇರಿದ ಬ್ರಿಜೇಶ್:** ಈ ಹಿಂದೆ ಕಾಂಗ್ರೆಸ್‌ನಲ್ಲಿದ್ದ ಬ್ರಿಜೇಶ್ ಕಾಳಪ್ಪ ಅವರು ಕಳೆದ ವಿಧಾನಸಭಾ ಚುನಾವಣೆ ಸಮಯದಲ್ಲಿ ಆಮ್ ಆದ್ಮಿ ಪಕ್ಷಕ್ಕೆ ಸೇರ್ಪಡೆಯಾಗಿದ್ದರು. ಆದರೆ ಅಲ್ಲಿ ನಿರೀಕ್ಷಿತ ಪ್ರಮಾಣದ ಯಶಸ್ಸು ಸಿಗಲಿಲ್ಲವೆಂದು ಇದೀಗ ವಾಪಸು ಕಾಂಗ್ರೆಸ್ ಸೇರ್ಪಡೆಯಾಗಿದ್ದಾರೆ. ಇಬ್ಬರು ನಾಯಕರಿಗೂ ಯಾವುದೇ ಭರವಸೆ ನೀಡಿಲ್ಲವೆನ್ನುವ ಮಾತುಗಳು ಕಾಂಗ್ರೆಸ್‌ನಲ್ಲಿ ಕೇಳಿಬರುತ್ತಿವೆ.

# ದೇವೇಗೌಡ್ರ ಹೇಳಿಕೆಗೆ ಸಿಎಂ, ಡಿಸಿಎಂ ಬೆಂಬಲ

← ಮೊದಲಪುಟದಿಂದ

ಹಿಂದೆಲ್ಲ ರಾಜ್ಯದ ಹಿತಾಸಕ್ತಿಯ ರಕ್ಷಣೆಯ ಪ್ರಶ್ನೆ ಎದುರಾದಾಗ ಒಬ್ಬ ಮುತ್ಸದ್ದಿಯಾಗಿ ಇದಕ್ಕಿಂತಲೂ ಮುಖ್ಯವಾಗಿ ಒಬ್ಬ ಹೆಮ್ಮೆಯ ಕನ್ನಡಿಗನಾಗಿ ರಾಜ್ಯಕ್ಕೆ ನ್ಯಾಯ ಕೊಡಲು ನೀವು ಹೋರಾಟ ನಡೆಸಿದ್ದನ್ನು ರಾಜ್ಯದ ಜನರು ಗಮನಿಸಿದ್ದಾರೆ. ಆದರೆ ಇತ್ತೀಚೆಗೆ ನೀವು ಮತ್ತು ನಿಮ್ಮ ಪಕ್ಷ ಕೇಂದ್ರ ಸರಕಾರದ ವಕ್ತಾರರಂತೆ ಪಕ್ಷಪಾತಿಯಾಗಿ ವರ್ತಿಸುತ್ತಿರುವುದನ್ನು ಕೂಡ ನನ್ನನ್ನೂ ಸೇರಿದಂತೆ ಏಳು ಕೋಟಿ ಕನ್ನಡಿಗರು ಗಮನಿಸುತ್ತಿದ್ದಾರೆ. ಕೇಂದ್ರ ಸಂಪುಟದಲ್ಲಿ ಮಗನನ್ನು ಸಚಿವನನ್ನಾಗಿ ಮಾಡಲು ಗೌಡರು ಇಷ್ಟೊಂದು ರಾಜಿ ಮಾಡಿಕೊಳ್ಳುವ ಅಗತ್ಯ ಇತ್ತಾ? ಎಂದು ಜನ ಪ್ರಶ್ನಿಸುತ್ತಿದ್ದಾರೆ ಎಂದು ಪರೋಕ್ಷವಾಗಿ ಟಾಂಗ್ ಕೊಟ್ಟಿದ್ದಾರೆ.

ರಾಜ್ಯದ ನೆಲ, ಜಲದ ಹಿತಕ್ಕಾಗಿ ನಾವು ಬದ್ಧವಾಗಿದ್ದೇವೆ. ಅವರು ಮೇಕೆದಾಟಿಗೆ ಒಂದೇ ದಿನದಲ್ಲಿ ಸಹಿ ಹಾಕಿಸುವುದಾಗಿ ಹೇಳಿದ್ದರು. ಮಹದಾಯಿ ವಿಚಾರವಾಗಿ ನಾನೇ ಕೇಂದ್ರ ಸಚಿವರನ್ನು ಭೇಟಿ ಮಾಡಿ ಮನವಿ ಮಾಡಿದ್ದೆ. ಮೊದಲು ಈ ಕೆಲಸ ಮಾಡಲಿ. ಕಾವೇರಿ-ಗೋದಾವರಿ ಜೋಡಣೆ ಮಾಡಿದರೆ ಸಂತೋಷ. ಅವರು ಯೋಜನೆ ತರಲಿ. ನಮ್ಮಿಂದ ಯಾವ ಸಹಕಾರ ಬೇಕು ಹೇಳಲಿ, ನಾವು ನೀಡುತ್ತೇವೆ. ಇಲ್ಲಿಂದಲೇ ಅವರಿಗೆ ಸಾಷ್ಟಾಂಗ ನಮಸ್ಕಾರ ಹಾಕುತ್ತೇವೆ.

– ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

### ನೀರಿನ ಹೊಂಡಕ್ಕೆ ಬಿದ್ದು ಮಗು ಸಾವು

**ಹುಣಸೂರು:** ಜಮೀನಿನಲ್ಲಿ ತಂಬಾಕು ಸಸಿ ಮಡಿಗಾಗಿ ತೆಗೆದಿದ್ದ ನೀರಿನ ಹೊಂಡಕ್ಕೆ ಆಯತಪ್ಪಿ ಮಗು ಬಿದ್ದು ಸಾವನ್ನಪ್ಪಿರುವ ಘಟನೆ ತಾಲೂಕಿನ ಮೂಡಲಕೊಪ್ಪಲಿನಲ್ಲಿ ನಡೆದಿದೆ. ತಾಲೂಕಿನ ಬಿಳಿಕೆರೆ ಹೋಬಳಿಯ ಮೂಡಲಕೊಪ್ಪಲು ಗ್ರಾಮದ ಮಂಜೇಗೌಡ-ಪ್ರೀತಿ ದಂಪತಿಯ ಪುತ್ರಿ ಪ್ರತಿಕ್ಷಾ(6) ಸಾವನ್ನಪ್ಪಿದ ಮಗು. ಹೊಲದಲ್ಲೇ ಮನೆ ನಿರ್ಮಿಸಿಕೊಂಡಿರುವ ಇವರು ಪಕ್ಕದಲ್ಲೇ ತಂಬಾಕು ಸಸಿ ಮಡಿ ಮಾಡಿದ್ದು, ಸಸಿ ಮಡಿಗೆ ನೀರು ಹಾಕಲು ತಾಯಿ ತೆರಳಿದ್ದ ವೇಳೆ ತಾಯಿಯನ್ನು ಹಿಂಬಾಲಿಸಿಕೊಂಡು ಬಂದ ಮಗು ಆಕಸ್ಮಿಕವಾಗಿ ಹೊಂಡಕ್ಕೆ ಬಿದ್ದು ಸಾವನ್ನಪ್ಪಿದೆ ಎಂದು ತಿಳಿದು ಬಂದಿದೆ.

### ನಾಗಮಂಗಲ: ಆಕಸ್ಮಿಕ ಗುಂಡು ಹಾರಿ ಮಗು ಸಾವು

**ನಾಗಮಂಗಲ:** ಬಂದೂಕಿನ ಜತೆ ಆಟವಾಡುವಾಗ ಸಹಪಾಠಿ ಬಾಲಕನಿಂದ ಆಕಸ್ಮಿಕವಾಗಿ ಗುಂಡು ತಗುಲಿ ನಾಲ್ಕು ವರ್ಷದ ಮಗು ಸಾವನ್ನಪ್ಪಿದೆ. ತಾಲೂಕಿನ ದೊಂದೇಮಾದಹಳ್ಳಿಯ ನರಸಿಂಹಮೂರ್ತಿಗೆ ಸೇರಿದ ಕೋಳಿ ಫಾರಂನಲ್ಲಿ ಕೆಲಸಕ್ಕಾಗಿ ಪಶ್ಚಿಮ ಬಂಗಾಳದಿಂದ ವಲಸೆ ಬಂದಿದ್ದ ಶಶಾಂಕ್ ಎಂಬುವರ ಮಗ ಅಭಿಜಿತ್(4) ಮೃತಪಟ್ಟ ನತದೃಷ್ಟ ಮಗು. ಈ ಮಗುವಿನ ತಂದೆ-ತಾಯಿ ಕೋಳಿ ಫಾರಂನ ಕಾರ್ಮಿಕರಿಗಾಗಿ ನಿರ್ಮಿಸಿದ್ದ ಮನೆಯಲ್ಲಿ ವಾಸವಿದ್ದರು. ಭಾನುವಾರ ಸಂಜೆ ಕಾರ್ಮಿಕರ ಮನೆಯಲ್ಲಿದ್ದ ಮಾಲೀಕ ನರಸಿಂಹಮೂರ್ತಿ ಅವರ ಲೈಸೆನ್ಸ್ ಹೊಂದಿದ್ದ ಬಂದೂಕನ್ನು ಯಾರ ಗಮನಕ್ಕೂ ಬರದಂತೆ ತೆಗೆದುಕೊಂಡು ಮಕ್ಕಳೊಂದಿಗೆ ಆವರಣದಲ್ಲಿ ಆಟವಾಡುವಾಗ ಗುಂಡು ತಗುಲಿ ತೀವ್ರವಾಗಿ ಗಾಯಗೊಂಡು ಅಭಿಜಿತ್ ಮೃತಪಟ್ಟಿದ್ದಾನೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಏರ್ ಆಂಬ್ಯುಲೆನ್ಸ್ ಮೂಲಕ ಬೆಂಗಳೂರಿಗೆ ಬಂದ ಕುರುಬೂರು

**ಬೆಂಗಳೂರು:** ಪಂಜಾಬಿನ ಪಟಿಯಾಲ ಬಳಿ ಸಂಭವಿಸಿದ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿರುವ ರೈತ ಮುಖಂಡ ಕುರುಬೂರು ಶಾಂತಕುಮಾರ್ ಅವರನ್ನು ಭಾನುವಾರ ಏರ್ ಆಂಬ್ಯುಲೆನ್ಸ್ ಮೂಲಕ ಬೆಂಗಳೂರಿಗೆ ಕರೆ ತರಲಾಗಿದೆ.

ಅಪಘಾತದಿಂದ ಬೆನ್ನಿಗೆ ಬಲವಾದ ಪೆಟ್ಟಾಗಿರುವುದರಿಂದ ಹೆಚ್ಚಿನ ಚಿಕಿತ್ಸೆಗಾಗಿ ಶಾಂತಕುಮಾರ್ ಅವರನ್ನು ಮಣಿಪಾಲ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಶಾಂತಕುಮಾರ್ ಅವರು ಶೀಘ್ರ ಗುಣಮುಖರಾಗಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾರೈಸಿದ್ದಾರೆ. ಮೂರು ದಿನಗಳ ಹಿಂದೆ ಸಂಭವಿಸಿದ ಅಪಘಾತದಲ್ಲಿ ಶಾಂತಕುಮಾರ್ ಅವರು ಗಾಯಗೊಂಡು ಪಟಿಯಾಲದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ವಿಷಯ ತಿಳಿದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಏರ್ ಆಂಬ್ಯುಲೆನ್ಸ್ ಮೂಲಕ ಶಾಂತಕುಮಾರ್ ಅವರನ್ನು ಬೆಂಗಳೂರಿಗೆ ಕರೆತರುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು. ಈ ಮಧ್ಯೆ ದೆಹಲಿ ನಿವಾಸಿ ಆಯುಕ್ತರಾದ ಇಂಕೊಂಗ್ಲ ಜಮೀರ್ ಅವರು ಪಂಜಾಬ್ ಸರಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಪಟಿಯಾಲದ ಆಸ್ಪತ್ರೆ ವೈದ್ಯರೊಂದಿಗೆ ಸತತ ಸಂಪರ್ಕದಲ್ಲಿದ್ದರು. ಇಬ್ಬರು ಸಹಾಯಕರು ಹಾಗೂ ವೈದ್ಯರ ತಂಡದೊಂದಿಗೆ ಭಾನುವಾರ ಶಾಂತಕುಮಾರ್ ಅವರನ್ನು ಬೆಂಗಳೂರಿಗೆ ಕರೆತರಲಾಗಿದೆ.

ಪಂಜಾಬಿನ ಪಟಿಯಾಲ ಬಳಿ ಸಂಭವಿಸಿದ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿರುವ ರೈತ ಮುಖಂಡ ಕುರುಬೂರು ಶಾಂತಕುಮಾರ್ ಅವರನ್ನು ಭಾನುವಾರ ಏರ್ ಆಂಬ್ಯುಲೆನ್ಸ್ ಮೂಲಕ ಬೆಂಗಳೂರಿಗೆ ಕರೆ ತಂದಿರುವುದು.





ಮೈಸೂರಿನಲ್ಲಿ ಭಾನುವಾರ ನಡೆದ ನಟ ಡಾಲಿ ಧನಂಜಯ್ ಮತ್ತು ಡಾ. ಧನ್ಯತಾ ಅವರ ವಿವಾಹ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಚಿವ ಸತೀಶ್ ಜಾರಕಿಹೊಳಿ, ನಟಿ ರಮ್ಯಾ ಮತ್ತು ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧು ಕೋಕಿಲ ನೂತನ ವಧು-ವರರಿಗೆ ಶುಭ ಹಾರೈಸಿದರು.

## ದರೋಡೆ ಪ್ರಕರಣ: ಕೇರಳದ ಪೊಲೀಸ್ ಸೇರಿ ನಾಲ್ವರ ಸೆರೆ
### ಕೋಡಂಗಲ್ಲೂರು ಎಎಸ್‌ಐ ಶಹೀರ್ ಬಾಬು ಪ್ರಕರಣದ ಪ್ರಮುಖ ರೂವಾರಿ

**ವಿಟ್ಲ:** ಬೋಳಂತೂರು ನಾರ್ಶ ಸುಲೇಮಾನ್ ಹಾಜಿ ಅವರ ಮನೆಗೆ ಇಡಿ ಅಧಿಕಾರಿಗಳಂತೆ ನಟಿಸಿ, ದಾಳಿಮಾಡಿ ಮತ್ತು ದರೋಡೆ ನಡೆಸಿದ ಪ್ರಕರಣ ಸಂಬಂಧ ವಿಟ್ಲ ಪೊಲೀಸರು ಇನ್ನೂ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತರಲ್ಲಿ ಒಬ್ಬರು ಕೇರಳದ ಪೊಲೀಸ್ ಸಿಬ್ಬಂದಿ.

ತ್ರಿಶೂರು ಕೋಡಂಗಲ್ಲೂರು ಪೊಲೀಸ್ ಠಾಣೆಯಲ್ಲಿ ಎಎಸ್‌ಐ ಆಗಿದ್ದ ಶಹೀರ್ ಬಾಬುವನ್ನು ಪೊಲೀಸರು ಬಂಧಿಸಿ, ವಿಟ್ಲಕ್ಕೆ ಕರೆತಂದಿದ್ದಾರೆ. ಇಕ್ಬಾಲ್ ಪರ್ಲಿಯ ಬಂಟ್ವಾಳ, ಸಿರಾಜುದ್ದೀನ್ ನಾರ್ಶ ಮತ್ತು ಅಬ್ಬಾರ್ ಬಜಾಲ್ ಬಂಧಿತರು ಬಂಧಿಸಲ್ಪಟ್ಟ ಇತರ ಮೂವರು ಆರೋಪಿಗಳು.

**ದರೋಡೆಗೆ ಮಾರ್ಗದರ್ಶನ:** ಕೇರಳದ ಕೊಡಂಗಲ್ಲೂರು ಪೊಲೀಸ್ ಠಾಣೆಯ ಎಎಸ್‌ಐ ಶಹೀರ್‌ಬಾಬು ನಕಲಿ ಇ.ಡಿ ತಂಡವನ್ನು ಕಟ್ಟಿ ತನ್ನ ಪಾಲಿನ ಮೊತ್ತವನ್ನು ಪಡೆದಿದ್ದಾನೆ. ಈತ ಮಂಗಳೂರಿಗೆ ಬಂದು ಯೋಜನೆ ರೂಪಿಸುವ ಬಗ್ಗೆ ಮಾರ್ಗದರ್ಶನ ಮಾಡುತ್ತಿದ್ದ. ಇ.ಡಿ ಅಧಿಕಾರಿಗಳಂತೆ ನಟಿಸಿ ದರೋಡೆ ನಡೆಸಲು ಹಾಗೂ ತಪ್ಪಿಸಿಕೊಳ್ಳಲು ಸೂಕ್ತ ಮಾಹಿತಿ ನೀಡಿದ್ದ. ಈತ ತನ್ನ ಮೊತ್ತ ಪಡೆದ ಬಳಿಕ ಎಂದಿನಂತೆ ಪೊಲೀಸ್ ಕೆಲಸಕ್ಕೆ ಹಾಜರಾಗುತ್ತಿದ್ದ. ಕೆಲವೊಮ್ಮೆ ರಜೆ ಪಡೆಯುತ್ತಿದ್ದ. ಆರಂಭದಲ್ಲಿ ವಿಟ್ಲ ಪೊಲೀಸರು ತಂಡ ರಚಿಸಿ, ಕೇರಳಕ್ಕೆ ತೆರಳಿ ದಾಳಿ ಮಾಡುವ ಮಾಹಿತಿ ಎಎಸ್‌ಐಗೆ ತಿಳಿದು, ದರೋಡೆಕೋರರು ಪರಾರಿಯಾಗುವಂತೆ ನೋಡಿಕೊಂಡಿದ್ದ.

ವಿಟ್ಲ ದರೋಡೆ ಪ್ರಕರಣದಲ್ಲಿ ಪೊಲೀಸರಿಗೆ ಸೆರೆಸಿಕ್ಕಿರುವ ಕೇರಳದ ಎಎಸ್‌ಐ ಶಹೀರ್ ಬಾಬು.

### ಪ್ರಮುಖ ಆರೋಪಿಗಾಗಿ ವ್ಯಾಪಕ ಶೋಧ

ಜನವರಿ ಮೂರರಂದು ವಿಟ್ಲ ಪೊಲೀಸ್ ಠಾಣಾ ವ್ಯಾಪ್ತಿಯ ಬೋಳಂತೂರಿನ ನಾರ್ಶ ಎಂಬಲ್ಲಿ ಸಿಂಗಾರಿ ಬೀಡಿ ಉದ್ಯಮದ ಮಾಲೀಕ ಸುಲೇಮಾನ್ ಹಾಜಿ ಮನೆಗೆ ಇ.ಡಿ ಅಧಿಕಾರಿಗಳ ಹೆಸರಲ್ಲಿ ದಾಳಿ ಮಾಡಿ ದರೋಡೆ ಮಾಡಲಾಗಿತ್ತು. ಪ್ರಕರಣ ಹಿನ್ನೆಲೆಯಲ್ಲಿ ಈಗಾಗಲೇ ಕೇರಳದ ಕೊಟ್ಟಯಂನ ಅನಿಲ್ ಫರ್ನಾಂಡಿಸ್, ಸಚಿನ್ ಮತ್ತು ಶಬಿನ್ ಎಂಬುವರನ್ನು ಬಂಧಿಸಲಾಗಿದೆ. ಇದೀಗ ಇನ್ನೂ ನಾಲ್ವರು ಆರೋಪಿಗಳು ಸೆರೆಸಿಕ್ಕಿದ್ದಾರೆ. ಕೆಲ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಇ.ಡಿ ಅಧಿಕಾರಿಯಂತೆ ನಟಿಸಿದ ಪ್ರಮುಖ ಆರೋಪಿಗಾಗಿ ವ್ಯಾಪಕ ಶೋಧ ನಡೆಸಲಾಗುತ್ತಿದೆ ಎಂದು ವಿಟ್ಲ ಪೊಲೀಸರು ತಿಳಿಸಿದ್ದಾರೆ.

## ಅಪಘಾತ: ತಪ್ಪಿದ ಭಾರೀ ದುರಂತ



**ರಾಮನಗರ:** ಬೆಂಗಳೂರು-ಮೈಸೂರು ದಶಪಥ ಹೆದ್ದಾರಿಯಲ್ಲಿ ಭೀಕರ ಅಪಘಾತ ನಡೆದಿದ್ದು, ಭಾರಿ ದುರಂತವೊಂದು ತಪ್ಪಿದೆ.

ಚನ್ನಪಟ್ಟಣ ತಾಲೂಕಿನ ಕಣ್ವ ರಸ್ತೆ ಬಳಿ ಭಾನುವಾರ ಘಟನೆ ನಡೆದಿದೆ.

ಹೆದ್ದಾರಿಯಲ್ಲಿ ಸಿಬ್ಬಂದಿಗಳು ಬ್ಯಾರಿಕೇಡ್ ಹಾಕಿ ರಸ್ತೆ ಕ್ಲೀನ್ ಮಾಡುತ್ತಿದ್ದರು. ಆದರೆ ಬ್ಯಾರಿಕೇಡ್ ಗಮನಿಸದೆ ಬಂದ ಕಾರು ಚಾಲಕ ಸಡನ್ ಆಗಿ ಬ್ರೇಕ್ ಹಾಕಿದ್ದಾರೆ. ಈ ವೇಳೆ ಹಿಂಬದಿಯಿಂದ ಬಂದ ಮತ್ತೊಂದು ಕಾರು ಡಿಕ್ಕಿ ಹೊಡೆದಿದೆ.

ಈ ಘಟನೆ ಸಿನಿಮೀಯವಾಗಿದ್ದು, ಮುಂದೆ ನಿಂತಿದ್ದ ಕಾರಿನ ಕೆಳಗೆ ಹಿಂದಿನಿಂದ ಬಂದ ಕಾರು ತೂರಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಚನ್ನಪಟ್ಟಣ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಟ್ವೀಟೂ-ಖಾರಾ

**ಜಾತ್ಯತೀತ ಜನತಾದಳ,** ಕರ್ನಾಟಕ

ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಶೇ.60 ಕಮಿಷನ್ ಕಾಂಗ್ರೆಸ್ ಸರಕಾರದಲ್ಲಿ ಎಲ್ಲೆಲ್ಲೂ ಅಕ್ರಮಗಳೇ..! ಕರ್ನಾಟಕ ಲೋಕಸೇವಾ ಆಯೋಗವನ್ನು ಹಣ ಮಾಡುವ ದಂಧೆಯನ್ನಾಗಿ ಮಾಡಿಕೊಂಡ ಕಾಂಗ್ರೆಸ್ ಸರಕಾರ. ಪ್ರತಿಯೊಂದು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿಯೂ ದುಡ್ಡು ಕೊಟ್ಟವರಿಗೆ ಸರಕಾರಿ ಹುದ್ದೆಗಳನ್ನು ಮಾರಿಕೊಂಡು ಲೂಟಿ ಹೊಡೆಯಲಾಗುತ್ತಿದೆ. ಕಷ್ಟಪಟ್ಟು ಓದುತ್ತಿರುವ ಲಕ್ಷಾಂತರ ಉದ್ಯೋಗಾಕಾಂಕ್ಷಿಗಳಿಗೆ ದ್ರೋಹ ಬಗೆಯುತ್ತಿದೆ.

**ಲೋಹಿತ್,** ಬೆಂಗಳೂರು

ರೀ ಸ್ವಾಮಿ, ಕೆಪಿಎಸ್‌ಸಿ ಒಂದು ಸಾಂವಿಧಾನಿಕ ಸಂಸ್ಥೆ. ಅಲ್ಲಿನ ಅಧ್ಯಕ್ಷ ಮತ್ತು ಸದಸ್ಯರನ್ನು ಕಿತ್ತುಹಾಕೋ ಅಧಿಕಾರ ಇರುವುದು ನಿಮ್ಮ ಕೇಂದ್ರ ಸರಕಾರದ ಕೈಗೊಂಬೆ ಪ್ರಧಾನಿ ಅವರಿಗೆ ಮಾತ್ರ. ನಿಮಗೆ ತಾಕತ್ ಇದ್ದರೆ ಒಬ್ಬ ಸದಸ್ಯರು ಅಥವಾ ಅಧ್ಯಕ್ಷರನ್ನು ಕಿತ್ತುಹಾಕಿ ನೋಡೋಣ..!

## ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬಳ್ಳಾರಿ**

**ಸಮಸ್ಯೆಯೇನು..?**

- ಟ್ರಾಮಾ ಕೇರ್ ಆಸ್ಪತ್ರೆಯಲ್ಲಿ ವಿದ್ಯುತ್ ಅಡಚಣೆ ಆಗಿರುವ ಬಗ್ಗೆ.
- **ಪರಿಹಾರ:** ಟ್ರಾಮಾ ಕೇರ್ ಆಸ್ಪತ್ರೆಯಲ್ಲಿ ವಿದ್ಯುತ್ ಆಡಚಣೆ ಆದಾಗ ಕೃತಕ ಜನರೇಟರ್ ಚಾಲನೆ ಮಾಡಲು ಎರಡರಿಂದ ಮೂರು ನಿಮಿಷ ಚೇಂಜ್ ಅವರ್ ಮಾಡಲು ಕಾಲಾವಕಾಶ ಬೇಕಾಗಿರುತ್ತದೆ. ಈ ಸಮಯದಲ್ಲಿ ಸಾರ್ವಜನಿಕರು ವಿಡಿಯೊ ಮಾಡಿದ್ದಾರೆ. ಆದರೆ ಆಸ್ಪತ್ರೆಯಲ್ಲಿ ಯಾವುದೇ ಅನಾಹುತ ಸಂಭವಿಸಿಲ್ಲ, ಆಸ್ಪತ್ರೆಯ ರೋಗಿಗಳಿಗೆ ಚಿಕಿತ್ಸೆ ನೀಡುವಲ್ಲಿಯೂ ಸಹಾ ಯಾವುದೇ ತೊಂದರೆ ಆಗಿರುವುದಿಲ್ಲ.

ವಿಶ್ವವಾಣಿ ಕ್ಲಬ್ ಹೌಸ್
17.02.2025
ಸಂಜೆ: 06.55 ರಿಂದ 08.05 ರವರೆಗೆ
ಸೋಮವಾರದ ಅತಿಥಿ
ಶ್ರೀ ರಾಜು ಅಡಕಳ್ಳಿ
ವಿಷಯ
ಹರಟೆ ಕಷಾಯ
vishwavani.news

## ಸಮಾಚಾರ ಸಣ್ಣದಲ್ಲ

### ಸಿದ್ದರಾಮಯ್ಯ ಐದು ವರ್ಷ ಪೂರ್ಣ ಸಿಎಂ



**ಕೋಲಾರ:** ಸಿಎಂ ಸಿದ್ದರಾಮಯ್ಯ 5 ವರ್ಷಗಳ ಕಾಲ ಸಿಎಂ ಆಗಿ ಮುಂದುವರಿಯಲಿದ್ದಾರೆ ಎಂದು ಶಾಸಕ ಕೊತ್ತೂರು ಮಂಜುನಾಥ್ ಸಿದ್ದರಾಮಯ್ಯ ಪರ ಬ್ಯಾಟ್ ಬೀಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2028ರಲ್ಲೂ ಸಿದ್ದರಾಮಯ್ಯ ನಾಯಕತ್ವದಲ್ಲಿ ಚುನಾವಣೆ ನಡೆಯಲಿದೆ. ಇದಕ್ಕೆ ಯಾರಿಂದಲೂ ಅಭ್ಯಂತರವಿಲ್ಲ. ಸಿದ್ದರಾಮಯ್ಯ ರಾಜ್ಯದಲ್ಲಿ ತುಂಬಾ ಸಕ್ರಿಯರಾಗಿ ಕೆಲಸ ಮಾಡುತ್ತಿದ್ದಾರೆ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಸಹ ಆಗುವುದಿಲ್ಲ, ಇದು ಕೇವಲ ಮಾಧ್ಯಮಗಳಲ್ಲಿ ಮಾತ್ರ ಹೇಳಲಾಗುತ್ತಿದೆ. ನಮ್ಮಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಸ್ಪಷ್ಟಪಡಿಸಿದರು.

**ಒಬ್ಬರಿಗೆ ಒಂದೇ ಹುದ್ದೆ:** ಒಬ್ಬರಿಗೆ ಒಂದೇ ಹುದ್ದೆಯೆಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಕೊತ್ತೂರು ಮಂಜುನಾಥ್, ಮಲ್ಲಿಕಾರ್ಜುನ ಖರ್ಗೆ ದೊಡ್ಡವರು. ಅವರು ಏನು ಹೇಳುತ್ತಾರೋ ಅದೇ ಅಂತಿಮ ತೀರ್ಮಾನ. ಸಚಿವ ಸಂಪುಟ ವಿಸ್ತರಣೆ ಕುರಿತು ನನಗೆ ಗೊತ್ತಿಲ್ಲ. ನಾನು ಯಾರ ಮನೆ ಬಾಗಿಲಿಗೆ ಹೋಗುವುದಿಲ್ಲ. ಕೋಲಾರ ಜನತೆ ನನಗೆ ಕೆಲಸ ಮಾಡುವಂತೆ ಮತ ಹಾಕಿದ್ದಾರೆ. ಮಂತ್ರಿಗಿರಿ ಇರಲಿ, ಬಿಡಲಿ, ನಾನು ಅಧಿಕಾರಕ್ಕೆ ಆಸೆ ಪಟ್ಟಿಲ್ಲ. ಕೋಲಾರ ಕ್ಷೇತ್ರದಲ್ಲಿ ನಮ್ಮ ಜಾತಿಯ ಮತಗಳು ಕೇವಲ ಬೆರಳೆಣಿಕೆಯಷ್ಟೇ ಇರುವುದು. ಇವತ್ತು ಜನ ನನ್ನನ್ನು ನಂಬಿ ಮತ ಹಾಕಿದ್ದಾರೆ. ಅವರ ಋಣ ತೀರಿಸುವ ಕೆಲಸ ಮಾಡುವೆ ಎಂದರು.

---

ಕನ್ನಡಿಗರ ಪರ ಧ್ವನಿ ಎತ್ತುವ ಗೌಡರು ಬೇಕು: ಮುಖ್ಯಮಂತ್ರಿ | ದೇವೇಗೌಡರಿಗೆ ಸುದೀರ್ಘ ಪತ್ರ ಬರೆದ ಸಿದ್ದರಾಮಯ್ಯ

# ಮೋದಿ ಚಿಯರ್ ಲೀಡರ್ ಆಗಬೇಡಿ: ಸಿಎಂ ಟಾಂಗ್

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ನೀರಾವರಿ ವಿಚಾರದಲ್ಲಿ ರಾಜ್ಯಕ್ಕಾಗಿರುವ ಅನ್ಯಾಯದ ವಿರುದ್ಧ ಪಕ್ಷಾತೀತವಾಗಿ ಹೋರಾಡಲು ಸಿದ್ಧ ಎಂಬ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಹೇಳಿಕೆಯನ್ನು ಸ್ವಾಗತಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಮಗೆ ಚಿಯರ್ ಲೀಡರ್ ಬೇಡ, ಕನ್ನಡಿಗರ ಪರ ಧ್ವನಿ ಎತ್ತುವ ದೇವೇಗೌಡರು ಬೇಕು ಎಂದು ಟಾಂಗ್ ನೀಡಿದ್ದಾರೆ.

ರಾಜ್ಯಕ್ಕೆ ನೀರಾವರಿ ವಿಚಾರದಲ್ಲಿ ಆಗಿರುವ ಅನ್ಯಾಯ, ನದಿ ಜೋಡಣೆ ಎಲ್ಲದರ ಬಗ್ಗೆಯೂ ಹೋರಾಟ ನಡೆಸಬೇಕು ಎಂಬ ದೇವೇಗೌಡರ ಹೇಳಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸಿ ಸುದೀರ್ಘ ಪತ್ರಿಕಾ ಪ್ರಕಟಣೆಯನ್ನು ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ನೀರಾವರಿ ವಿಚಾರದಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯದ ವಿರುದ್ಧ ಹೋರಾಡುವ ದೇವೇಗೌಡರ ಜತೆ ನಾವೂ ನಿಲ್ಲುತ್ತೇವೆ. ನೀರಾವರಿ ವಿಚಾರದಲ್ಲಿ ದೇವೇಗೌಡರ ಅಭಿಪ್ರಾಯವೂ ವೈಯಕ್ತಿವಾಗಿ ನನ್ನ ಅಭಿಪ್ರಾಯವೂ ಆಗಿದೆ. ನೆಲ-ಜಲ-ಭಾಷೆ ವಿಚಾರದಲ್ಲಿ ನಾನು ಸದಾ ಕನ್ನಡಿಗನಾಗಿ ನಡೆದುಕೊಂಡಿದ್ದೇನೆಯೇ ಹೊರತು ರಾಜಕಾರಣಿಯಾಗಿ ಅಲ್ಲ ಎನ್ನುವುದನ್ನು ಹಿರಿಯ ರಾದ ದೇವೇಗೌಡರ ಗಮನಕ್ಕೆ ತರಬಯಸುತ್ತೇನೆ ಎಂದು ಹೇಳಿದ್ದಾರೆ.

ಕೃಷ್ಣ ಮತ್ತು ಕಾವೇರಿ ನದಿಗಳ ಜೋಡಣೆಯ ನೀರಾವರಿ ಯೋಜನೆ ಬಗ್ಗೆ ನಿಮ್ಮ ಕಳಕಳಿಗೆ ನಮ್ಮ ಸಂಪೂರ್ಣ ಸಹಕಾರವಿದೆ. ಈ ವಿಷಯದಲ್ಲಿ ನೀವು ನಡೆಸುವ ಹೋರಾಟಕ್ಕೆ ನಾನು ಮತ್ತು ಡಿ.ಕೆ. ಶಿವಕುಮಾರ್ ಮಾತ್ರವಲ್ಲ ಇಡೀ ಕರ್ನಾಟಕ ನಿಮ್ಮ ಜತೆ ಇರುತ್ತದೆ. ಕೇಂದ್ರದಲ್ಲಿ ಯಾವ ಪಕ್ಷದ ಸರಕಾರ ವಿದ್ದರೂ ಮುಲಾಜಿಗೆ ಬೀಳದೆ ಕರ್ನಾಟಕದ ಹಿತಾಸಕ್ತಿಯ ರಕ್ಷಣೆಯ ಪ್ರಶ್ನೆ ಎದುರಾದಾಗ ಧ್ವನಿ ಎತ್ತುತ್ತಾ ಬಂದವರು. ಆ ಮುತ್ಸದ್ಧಿ ದೇವೇಗೌಡರನ್ನು ಕಾಣಲು ಕನ್ನಡಿಗರು ಬಯಸುತ್ತಿದ್ದಾರೆ. ಆದರೆ, ಈಗಿನ ದೇವೇಗೌಡರು ಬಿಜೆಪಿ ಮತ್ತು ನರೇಂದ್ರ ಮೋದಿ ಅವರ ಚಿಯರ್ ಲೀಡರ್ ರೀತಿ ವರ್ತಿಸುತ್ತಿದ್ದಾರೆ ಎಂದು ವಿಷಾದದಿಂದ ಹೇಳಬೇಕಾಗಿದೆ ಎಂದು ಅಸಮಾಧಾನ ಹೊರ ಹಾಕಿದ್ದಾರೆ.

ಹತ್ತು ದಿನಗಳ ಅವಧಿಯಲ್ಲಿ 15,000 ಕ್ಯುಸೆಕ್ ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸಬೇಕೆಂದು 2016ರ ಸೆಪ್ಟೆಂಬರ್ ತಿಂಗಳಲ್ಲಿ ಸುಪ್ರೀಂ ಕೋರ್ಟ್ ಆದೇಶ ನೀಡಿದಾಗ ಉದ್ಭವವಾದ ಬಿಕ್ಕಟ್ಟಿನ ಸಂದರ್ಭದಲ್ಲಿ ಮುಖ್ಯಮಂತ್ರಿಯಾಗಿದ್ದ ನಾನು ನಿಮ್ಮ ಮನೆಗೆ ಬಂದು ಕೈಹಿಡಿದು ಕರೆದುಕೊಂಡು ಬಂದು ಸರ್ವಪಕ್ಷಗಳ ಸಭೆ ನಡೆಸಿದ್ದು ನಿಮಗೆ ನೆನಪಿರಬಹುದು.

ಹಿಂದೆಲ್ಲ ರಾಜ್ಯದ ಹಿತಾಸಕ್ತಿಯ ರಕ್ಷಣೆಯ ಪ್ರಶ್ನೆ ಎದುರಾದಾಗ ಒಬ್ಬ ಮುತ್ಸದ್ದಿಯಾಗಿ ಇದ ಕ್ಕಿಂತಲೂ ಮುಖ್ಯವಾಗಿ ಒಬ್ಬ ಹೆಮ್ಮೆಯ ಕನ್ನಡಿಗನಾಗಿ ರಾಜ್ಯಕ್ಕೆ ನ್ಯಾಯ ಕೊಡಲು ನೀವು ಹೋರಾಟ ನಡೆಸಿದ್ದನ್ನು ರಾಜ್ಯದ ಜನರು ಗಮನಿಸಿದ್ದಾರೆ. ಆದರೆ ಇತ್ತೀಚೆಗೆ ನೀವು ಮತ್ತು ನಿಮ್ಮ ಪಕ್ಷ ಕೇಂದ್ರ ಸರಕಾರದ ವಕ್ತಾರರಂತೆ ಪಕ್ಷಪಾತಿಯಾಗಿ ವರ್ತಿಸುತ್ತಿರುವುದನ್ನು ಕೂಡಾ ನನ್ನನ್ನೂ ಸೇರಿದಂತೆ ಏಳುಕೋಟಿ ಕನ್ನಡಿಗರು ಗಮನಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ. ಕೇಂದ್ರ ಸಂಪುಟದಲ್ಲಿ ಮಗನನ್ನು ಸಚಿವನನ್ನಾಗಿ ಮಾಡಲು ಗೌಡರು ಇಷ್ಟೊಂದು ರಾಜಿ ಮಾಡಿಕೊಳ್ಳುವ ಅಗತ್ಯ ಇತ್ತಾ ಎಂದು ಜನ ಪ್ರಶ್ನಿಸುತ್ತಿದ್ದಾರೆ.

ಇದೇ ರೀತಿ ಬಂಡೂರಿ ನಾಲೆ ತಿರುವು ಯೋಜನೆ, ಭದ್ರಾಮೇಲ್ದಂಡೆ ಯೋಜನೆಗೆ ಅನುದಾನ, ಮೇಕೆದಾಟು ಸೇರಿದಂತೆ ಹಲವು ಯೋಜನೆಗಳಿಗೆ ಕೇಂದ್ರ ಅನುಮೋದನೆ ನೀಡಿಲ್ಲ. ಹೊಸ ನೀರಾವರಿ ಯೋಜನೆಗಳನ್ನು ಪ್ರಾರಂಭಿಸುವ ಮೊದಲು ಅಪೂರ್ಣ ಸ್ಥಿತಿಯಲ್ಲಿರುವ ನೀರಾವರಿ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ನಿಮ್ಮ ಸಹಕಾರ ಇರಲಿ ಎಂದು ಮನವಿ ಮಾಡಿಕೊಳ್ಳುತ್ತಿದ್ದೇನೆ ಎಂದು ಪರೋಕ್ಷ ಟಾಂಗ್ ನೀಡಿದ್ದಾರೆ.

### ಬಿಜೆಪಿ ಸರಕಾರದಿಂದ ನಿರಂತರ ಅನ್ಯಾಯ

ನೀರಾವರಿ ವಿಚಾರದಲ್ಲಿ ನ್ಯಾಯಪಕ್ಷಪಾತಿಯಾಗಿ ಕರ್ನಾಟಕದ ಹಿತಾಸಕ್ತಿಯ ರಕ್ಷಣೆ ಮಾಡಬೇಕಾಗಿದ್ದ ಕೇಂದ್ರದ ನರೇಂದ್ರ ಮೋದಿ ಅವರ ನೇತೃತ್ವದ ಬಿಜೆಪಿ ಸರಕಾರ ಸತತವಾಗಿ ಕನ್ನಡಿಗರ ಹಿತವನ್ನು ಬಲಿಗೊಡಲು ಹೊರಟಿರುವುದನ್ನು ದೇವೇಗೌಡರಿಗೆ ನಾನು ಬಿಡಿಸಿ ಹೇಳಬೇಕಾಗಿಲ್ಲ. ಮಹಾದಾಯಿ ಜಲಾನಯನ ಪ್ರದೇಶದ ಕಳಸಾ ನಾಲಾ ಯೋಜನೆಯ 995.30 ಕೋಟಿ ವೆಚ್ಚದ ವಿಸ್ತೃತ ಯೋಜನಾ ವರದಿಗೆ 2023ರ ಮಾರ್ಚ್‌ನಲ್ಲಿಯೇ ಅನುಮೋದನೆ ನೀಡಲಾಗಿದೆ. ಈ ಯೋಜನೆಗೆ ಅಗತ್ಯವಿರುವ ಭೂಮಿಯಲ್ಲಿ 26,925 ಹೆಕ್ಟೇರ್ ಅರಣ್ಯಪ್ರದೇಶದ ಸ್ವಾಧೀನ ಪ್ರಕ್ರಿಯೆ ಗೋವಾ ರಾಜ್ಯದ ಆಕ್ಷೇಪದ ಕಾರಣದಿಂದಾಗಿ ಕುಂಟುತ್ತಾ ಸಾಗಿದೆ. ಈ ಯೋಜನೆಗೆ ಕೇಂದ್ರದಿಂದ ರಾಜ್ಯ ಸರಕಾರ ಅನುಮೋದನೆ ಪಡೆಯಬಹುದು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟೀಕರಣ ನೀಡಿರುವ ಕಾರಣ ಶೀಘ್ರವಾಗಿ ಈ ಯೋಜನೆಗೆ ಕೇಂದ್ರ ಸರಕಾರ ಅನುಮತಿ ನೀಡಬೇಕಾಗಿದೆ ಎಂದು ಸಿಎಂ ಕೋರಿದ್ದಾರೆ.

> **ಕರ್ನಾಟಕ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯಗಳ ಸರಮಾಲೆಯನ್ನು ಸದ್ಯ ನೀರಾವರಿ ಕ್ಷೇತ್ರಕ್ಕಷ್ಟೇ ಸೀಮಿತಗೊಳಿಸುತ್ತಿದ್ದೇನೆ. ಇನ್ನು ತೆರಿಗೆ ಹಂಚಿಕೆ, ಪ್ರಕೃತಿ ವಿಕೋಪ ಪರಿಹಾರ, ಕುಡಿಯುವ ನೀರು ಪೂರೈಕೆ, ರೈಲ್ವೆ ಯೋಜನೆಗಳ ವಿಚಾರದಲ್ಲಿಯೂ ನರೇಂದ್ರ ಮೋದಿ ನೇತೃತ್ವದ ಸರಕಾರ ಕರ್ನಾಟಕವನ್ನು ಶತ್ರು ರಾಜ್ಯದಂತೆ ನಡೆಸಿಕೊಳ್ಳುತ್ತಿದೆ. ಈ ವಿಚಾರಗಳು ಕೂಡಾ ನಿಮಗೆ ಗೊತ್ತಿರುವುದರಿಂದ ಸಂಸತ್ ನಲ್ಲಿ ಈ ಬಗ್ಗೆ ನೀವು ದನಿ ಎತ್ತುತ್ತೀರಿ ಎಂದು ರಾಜ್ಯದ ಜನರು ನಿರೀಕ್ಷಿಸಿದ್ದರು.**
> **-ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ಕಾವೇರಿ-ಗೋದಾವರಿ ಜೋಡಣೆ ಮಾಡಲಿ ಬಹಳ ಸಂತೋಷ. ಆದರೆ ಬೆಂಗಳೂರು ನೀರಿಗೆ ಏನು ಬೇಕೋ ಅದನ್ನು ಮಾಡುತ್ತಿದ್ದರೆ ಇಲ್ಲಿಂದಲೇ ನಾವು ಸಾಷ್ಟಾಂಗ ನಮಸ್ಕಾರ ಹಾಕ್ತೀವಿ. ಅವರ ಪಕ್ಷದ ಕಡೆಯಿಂದ ಗೊಂದಲ ಹೇಳಿಕೆ ಕೊಡಿಸುತ್ತಿದ್ದಾರೆ. ಡಿ.ಸಿ.ತಮ್ಮಣ್ಣ ಅವರಿಗೆ ಅಂಕಿ ಅಂಶ ಗೊತ್ತಿಲ್ಲ. ಎಷ್ಟು ಏನು ನೀರು ನಷ್ಟ ಆಗುತ್ತಿದೆ ಅಂತ ಗೊತ್ತಿಲ್ಲ.**
> **-ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

### ರಾಜ್ಯದ ಜನರ ಹಿತಕ್ಕೆ ಕೆಲಸ ಮಾಡುತ್ತೇವೆ

ದೇವೇಗೌಡರ ಹೇಳಿಕೆಗೆ ಪ್ರತಿಕ್ರಿಯಿಸಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ದೇವೇಗೌಡರು ಒಂದೇ ದಿನದಲ್ಲಿ ಸಹಿ ಮಾಡಿಸುತ್ತೇನೆ ಎಂದು ಹೇಳಿದ್ದಾರೆ ಸಹಿ ಮಾಡಿಸಲಿ. ಒಂದೇ ದಿನದಲ್ಲಿ ಅನುಮತಿ ಕೊಡುತ್ತೇನೆ ಅಂದಿದ್ದರೂ ಕೊಡಿಸಲಿಲ್ಲ. ಇದು ಅವರ ಹೋರಾಟ ಅಲ್ಲ. ಇದು ರಾಜ್ಯದ ಹೋರಾಟ. ಮಹಾದಾಯಿ ವಿಚಾರದ ಬಗ್ಗೆ ನಾನು ಮನವಿ ಮಾಡಿದ್ದೇನೆ. ಅವರು ಅಧಿಕಾರದಲ್ಲಿದ್ದಾರೆ. ನಾವು ಹೋರಾಟ ಮಾಡಬೇಕಾಗಿದೆ. ನಮಗೆ ರಾಜಕೀಯ ಮಾಡೋ ಅವಶ್ಯಕತೆಯಿಲ್ಲ. ಅವರಿಗೆ ರಾಜಕಾರಣ ಮಾಡಿ ರೂಢಿ ಇದೆ. ನಮಗೆ ಸಿಕ್ಕ ಅವಕಾಶದಲ್ಲಿ ಹೋರಾಟ ಮಾಡಿದ್ದೇವೆ. ನಾವು ಹೋರಾಟ ಮಾಡಿದಾಗ ಯಾವ ರೀತಿ ಟೀಕೆ ಮಾಡಿದ್ದರು. ಆದರೂ ಅದನ್ನೆಲ್ಲಾ ಮರೆತು ರಾಜ್ಯದ ಹಿತಕ್ಕೆ ಕೆಲಸ ಮಾಡುತ್ತೇವೆ ಎಂದು ಹೇಳಿದರು. ಮೇಕೆದಾಟು, ಮಹಾದಾಯಿ, ಭದ್ರಾ ಮೇಲ್ದಂಡೆ ಯೋಜನೆ ಯಾವುದೇ ವಿಚಾರ ಇರಲಿ, ಮಾತನಾಡುವವರು ಒಂದು ದಿನವಾದರೂ ಸಂಸತ್‌ನಲ್ಲಿ ಹಣ ಕೇಳಿದ್ದಾರೆಯೇ? ಬಜೆಟ್‌ನಲ್ಲಿ ಈ ಯೋಜನೆಗಳಿಗೆ 5,400 ಕೋಟಿ ಘೋಷಣೆ ಆಗಿದೆ. ಅದನ್ನು ಕೊಡಿ ಅಂತ ಕೇಳಿಲ್ಲಾ? ನಾನು ಕುಮಾರಸ್ವಾಮಿ, ದೇವೇಗೌಡರು ಸೇರಿ ಸಂಸದರ ಬಳಿ ಇದನ್ನೇ ನಿರೀಕ್ಷೆ ಮಾಡಿದ್ದೆ. ಆದರೆ ಒಬ್ಬರೂ ಕೂಡ ಇದನ್ನು ಕೇಳಲಿಲ್ಲ. ಅವರು ಒಕ್ಕೊರಲಿನಿಂದ ರಾಜ್ಯದ ಹಿತ ಕಾಯ್ತಾರೆ ಅಂದುಕೊಂಡಿದ್ದೆ. ಅದರಲ್ಲಿ ವಿಫಲ ಆಗಿದ್ದಾರೆ. ಅದನ್ನು ಮಾಡಲಿ ಮೊದಲು ಎಂದು ತಿರುಗೇಟು ನೀಡಿದರು.

---

ಬೆಳ್ಳಾವಿ ಮಠದಲ್ಲಿ ಕರ್ತೃ ಗದ್ದುಗೆ ಲೋಕಾರ್ಪಣೆ ವೇಳೆ ಗೃಹ ಸಚಿವರ ಕರೆ

# ನಮಗೆ ಗುರು ಪರಂಪರೆ ಅಗತ್ಯ: ಪರಮೇಶ್ವರ್

**ತುಮಕೂರು:** ನಮಗೆ ಬೇಕಿರುವುದು ಪದವಿಗಳಲ್ಲ, ಅದರ ಬದಲಾಗಿ ಸಮಾನತೆಯ ಮನಸ್ಥಿತಿ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಪ್ರತಿಪಾದಿಸಿದ್ದಾರೆ.

ಬೆಳ್ಳಾವಿಯ ಕಾರದ ಮಠದಲ್ಲಿ ಕರ್ತೃ ಗದ್ದುಗೆ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮಗೆ ವಿಶ್ವವಿದ್ಯಾಲಯ ಬೇಕಿಲ್ಲ, ಗುರು ಪರಂಪರೆ ಬೇಕಿದೆ. ವಿಶ್ವವಿದ್ಯಾಲಯ ಮುಚ್ಚುತ್ತಿರುವ ಈ ಸಂದರ್ಭದಲ್ಲಿ ಗುರು ಪರಂಪರೆ ಬೇಕಿದೆ.ಭಗವಾನ್ ಬುದ್ಧ, ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ವಿಶ್ವ ಗುರು ಬಸವಣ್ಣ ನಮಗೆ ಮಾರ್ಗದರ್ಶಕರಾಗಿದ್ದಾರೆ ಎಂದರು. ಬಸವಣ್ಣ ಮೂರ್ತಿಯನ್ನು ಲಂಡನ್‌ನ ಥೇಮ್ಸ್ ನದಿಯ ದಂಡೆಯಲ್ಲಿ ಕಟ್ಟಿದ್ದಾರೆ.ಅದಕ್ಕೆ ನಾನೂ ಮತ್ತು ಯಡಿಯೂರಪ್ಪ ಸಹಾಯ ಮಾಡಿ ದ್ದೇವೆ. ಬಸವಣ್ಣನ ತತ್ವ ಗಳ ಬಗ್ಗೆ ಲಂಡನ್‌ನಲ್ಲಿ ಪ್ರಚಾರ ಮಾಡಲಾ ಗುತ್ತಿದೆ. ಬಸವಣ್ಣ ಮನುಕುಲಕ್ಕೆ ಸಮಾನತೆಯ ತತ್ವ ಸಾರಿದ್ದಾರೆ. ಆದರೆ ನಾವೆಲ್ಲ ನಮ್ಮ ಇತಿಹಾಸವನ್ನು ಮರೆಯುತ್ತಿದ್ದು ಈ ಬಗ್ಗೆ ಗಮನ ಹರಿಸಬೇಕಿದೆ ಎಂದು ಪರಮೇಶ್ವರ್ ನುಡಿದರು.

> **ಒಂಬತ್ತು ವಿಶ್ವವಿದ್ಯಾಲಯಗಳನ್ನು ಮುಚ್ಚುವ ನಿರ್ಧಾರ ದುರದೃಷ್ಟಕರ. ಬಿಜೆಪಿ ಸರಕಾರ ದಲ್ಲಿ ಹೊಸ ವಿವಿಗಳಾಗಿ ದ್ದವು. 300-400 ಕೋಟಿ ಅನುದಾನ ನೀಡಬೇಕಾಗು ತ್ತದೆ ಎಂದು ಸರಕಾರ ಮುಚ್ಚುವ ಕೆಲಸ ಮಾಡುತ್ತಿದೆ. ಅನುದಾನ ನೀಡಿದರೆ ಮಾತ್ರ ವಿವಿಗಳು ಕೆಲಸ ಮಾಡಲು ಸಾಧ್ಯ. ಈ ನಿರ್ಧಾರ ಕಾಂಗ್ರೆಸ್ ಸರಕಾರಕ್ಕೆ ಶೋಭೆ ತರುವು ದಿಲ್ಲ. ಇದರಿಂದ ಮಕ್ಕಳಿಗೆ ಅನಾನುಕೂಲವಾಗಲಿದೆ. ಈಗಲಾದರೂ ರಾಜ್ಯ ಸರಕಾರ ಎಚ್ಚೆತ್ತುಕೊಂಡು, ನಿರ್ಧಾರ ಬದಲಿಸಲಿ.**
> **-ಡಾ. ಜಿ.ಪರಮೇಶ್ವರ್,** ಗೃಹ ಸಚಿವ

ಬೆಳ್ಳಾವಿಯ ಕಾರದ ಮಠದಲ್ಲಿ ಕರ್ತೃ ಗದ್ದುಗೆ ಲೋಕಾರ್ಪಣೆ ಕಾರ್ಯಕ್ರಮವನ್ನು ತುಮಕೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ.ಪರಮೇಶ್ವರ್ , ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಉದ್ಘಾಟಿಸಿದರು.

### ಸಚಿವ ರಾಜಣ್ಣ ನಮ್ಮ ಪಕ್ಷದವರಲ್ಲ: ವಿಜಯೇಂದ್ರ

ಸಚಿವ ರಾಜಣ್ಣ ನಮ್ಮ ಪಕ್ಷದವರಲ್ಲ. ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡುವುದಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸ್ಪಷ್ಟಪಡಿಸಿದ್ದಾರೆ. ಯತ್ನಾಳ್‌ಗೆ ನೋಟಿಸ್ ಕೊಡಲು ವಿಜಯೇಂದ್ರಗೆ ತಾಕತ್ ಇಲ್ಲ ಎಂಬ ಸಚಿವ ರಾಜಣ್ಣ ಹೇಳಿಕೆಗೆ ಬೆಳ್ಳಾವಿ ಕಾರದ ಮಠದಲ್ಲಿ ವಿಜಯೇಂದ್ರ ಪ್ರತಿಕ್ರಿಯಿಸಿ, ರಾಜಣ್ಣ ಬಿಜೆಪಿಯವರಲ್ಲ. ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡುವುದಿಲ್ಲ. ಈಗಾಗಲೇ ಕೇಂದ್ರದ ಶಿಸ್ತು ಸಮಿತಿ ಯತ್ನಾಳ್‌ಗೆ ನೋಟಿಸ್ ಕೊಟ್ಟಿದೆ. ನಮ್ಮ ವರಿಷ್ಠರು ಎಲ್ಲವನ್ನೂ ಗಮನಿಸುತ್ತಿದ್ದಾರೆ. ಫೆ.20ನೇ ತಾರೀಖಿನೊಳಗೆ ಉತ್ತರ ಸಿಗುತ್ತದೆ ಎಂದು ಅಂದೇ ಹೇಳಿದ್ದೇನೆ. ಜಿಲ್ಲಾಧ್ಯಕ್ಷರ ನೇಮಕ ಬಳಿಕ ದೆಹಲಿಯಲ್ಲಿ ಪ್ರಕ್ರಿಯೆ ನಡೆಯುತ್ತಿದೆ. ಯಾವಾಗ ಬೇಕಾದರೂ ಕೇಂದ್ರದ ವರಿಷ್ಠರು ರಾಜ್ಯಕ್ಕೆ ಬರಲಿದ್ದಾರೆ. ಎಲ್ಲ ಶಾಸಕರ ಜೊತೆ ಚರ್ಚಿಸಿ ಅಂತಿಮ ನಿರ್ಧಾರ ಮಾಡುತ್ತಾರೆ ಎಂದರು.

---

# ಮೈಸೂರಿನ ಗಲಾಟೆ ಬಿಜೆಪಿ, ಆರೆಸ್ಸೆಸ್ ಪ್ರಾಯೋಜಿತ ಕೃತ್ಯ

**ಕಲಬುರಗಿ:** ಮೈಸೂರಿನ ಉದಯಗಿರಿ ಗಲಾಟೆ ಬಿಜೆಪಿ, ಆರ್.ಎಸ್.ಎಸ್ ಕೃಪಾಪೋಷಿತ ಕೃತ್ಯವಾಗಿದೆ. ಸರ್ವ ಜನಾಂಗದ ಶಾಂತಿಯ ತೋಟವಾದ ಕರ್ನಾಟಕದಲ್ಲಿ ಶಾಂತಿ ಕದಡಲು ಬಹಳ ಪ್ರಯತ್ನ ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್ ನ ಹಿರಿಯ ಮುಖಂಡ ಬಿ.ಕೆ ಹರಿಪ್ರಸಾದ್ ಆರೋಪಿಸಿದ್ದಾರೆ. ಕಲಬುರಗಿಯಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಬಿಜೆಪಿ ಅಧಿಕಾರದಲ್ಲಿದ್ದಾಗ ಸೃಷ್ಟಿಯಾದ ಅಶಾಂತಿಯ ವಾತಾವರಣದ ಶೇ.90% ರಷ್ಟು, ಕಾಂಗ್ರೆಸ್ ಅಧಿಕಾರಕ್ಕೆ ಬಂದ ಎರಡೇ ತಿಂಗಳಲ್ಲಿ ಕಡಿಮೆಯಾಗಿದೆ. ಹೀಗಾಗಿ, ರಾಜ್ಯದಲ್ಲಿ ಧರ್ಮ, ಜಾತಿ, ಭಾಷೆ, ಹೆಸರಲ್ಲಿ ಯಾರೇ ಶಾಂತಿ ಕದಡಿದರೆ, ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಗೃಹ ಸಚಿವರಿಗೆ ಸಲಹೆ ನೀಡಿದರು.

**ಸಂಘ ಪರಿವಾರದ ಚಿತಾವಣೆ:** ವಿಜಯಪುರದಲ್ಲಿ ಪಾಕಿಸ್ತಾನದ ಬಾವುಟ ಹಾರಿಸಿದವನು ಸಂಘ ಪರಿವಾರದವನು. ಸಂಘದವರು ಕೆಲವೆಡೆ ಗಲಾಟೆ ಮಾಡಲು ಬುರ್ಖಾ ಧರಿಸಿ ಹೋಗುತ್ತಾರೆ. ಇದೇನೂ ಹೊಸದಲ್ಲ. ಬಿಜೆಪಿಯ ಪಿತೃಪಕ್ಷ ಆರ್‌ಎಸ್‌ಎಸ್‌ಗೆ ನೂರು ವರ್ಷ ತುಂಬುತ್ತಿದೆ. ಅವರೇ ಇಂತಹ ಕೆಲಸ ಮಾಡಿದ್ದಾರೆ ಎಂದು ಆರೋಪಿಸಿದರು.

> **ಸಂಘದ ಎಲ್ಲ ಚಿಂತನೆಗಳನ್ನು ಅನುಷ್ಠಾನಕ್ಕೆ ತರಲು ಬಿಜೆಪಿಯವರು ಯತ್ನಿಸುತ್ತಿದ್ದಾರೆ. ಕರ್ನಾಟಕದಲ್ಲಿ ಅದು ಸಾಧ್ಯವಿಲ್ಲ. ಎಲ್ಲೆಡೆ ಶಾಂತಿ ಕದಡುವ ಕೆಲಸಕ್ಕೆ ಬಿಜೆಪಿ-ಆರ್‌ಎಸ್‌ಎಸ್ ಕೈಹಾಕುತ್ತಿದೆ. ಈ ಬಗ್ಗೆ ನನ್ನ ಹತ್ತಿರ ವಿಡಿಯೊ ಸಾಕ್ಷಿ ಇದೆ. ಈ ಕುರಿತು ತನಿಖೆ ನಡೆಯಲಿ.**
> **-ಬಿ.ಕೆ ಹರಿಪ್ರಸಾದ್,** ಕಾಂಗ್ರೆಸ್ ಹಿರಿಯ ಮುಖಂಡ

### ಸ್ವಾಮೀಜಿಗಳಿಂದ ರಾಜಕೀಯ ಸಲ್ಲದು

ಸಿಎಂ, ಕೆಪಿಸಿಸಿ ಅಧ್ಯಕ್ಷರು ಹಾಗೂ ಮಂತ್ರಿಗಳ ಬದಲಾವಣೆ ಸೇರಿದಂತೆ ಎಲ್ಲ ವಿಷಯಗಳನ್ನು ವರಿಷ್ಠರು ತೀರ್ಮಾನಿಸುತ್ತಾರೆ. ಈಗ ಕಾಂಗ್ರೆಸ್ ಹೈಕಮಾಂಡ್ ಕಲಬುರಗಿಯಲ್ಲೇ ಇದೆ. ಎಐಸಿಸಿ ಅಧ್ಯಕ್ಷರು ಬಂದಾಗ ಕೇಳಿ. ಆದರೆ, ಯಾವ ಶ್ರೀಗಳು ಸಿಎಂ, ಕೆಪಿಸಿಸಿ ಅಧ್ಯ ಕ್ಷರು ಹಾಗೂ ಮಂತ್ರಿಗಳ ಬದಲಾವಣೆ ಬಗ್ಗೆ ಮಾತಾಡಬಾರದು. ಅದರಲ್ಲೂ, ಸ್ವಾಮೀಜಿಗಳು ರಾಜಕೀಯವಂತೂ ಮಾತನಾಡಲೇಬಾರದು ಎಂದು ಹರಿಪ್ರಸಾದ್ ತಾಕೀತು ಮಾಡಿದರು.

---

ಸಿಎಂ ಸ್ಥಾನಕ್ಕೆ ಒಳಗಡೆ ಸಮರ ನಡೆಯುತ್ತಿದೆ: ಜಗದೀಶ್ ಶೆಟ್ಟರ್

# ಕುರ್ಚಿ ಕದನದಿಂದ ಸರಕಾರ ಪತನ

**ಹುಬ್ಬಳ್ಳಿ:** ಸಿಎಂ ಕುರ್ಚಿಗಾಗಿ ಕಾಂಗ್ರೆಸ್‌ನಲ್ಲಿ ಹೋರಾಟ ನಡೆದಿದೆ. ಇದೇ ಕಾರಣಕ್ಕೆ ಈ ಸರಕಾರ ಪತನವಾಗಲಿದೆ ಎಂದು ಬಿಜೆಪಿಯ ಸಂಸದ ಜಗದೀಶ್ ಶೆಟ್ಟರ್ ಭವಿಷ್ಯ ನುಡಿದಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ಸರಕಾರ ಅಸ್ತಿತ್ವಕ್ಕೆ ಬಂದಾಗಲೇ ಸಿಎಂ ಆಯ್ಕೆಯ ಗೊಂದಲ ಸೃಷ್ಟಿಯಾಗಿತ್ತು. ಈ ವಿಚಾರದಲ್ಲಿ ಆರಂಭದಲ್ಲೇ ಒಂದು ಒಪ್ಪಂದ ಆಗಿದೆ ಎಂಬ ಮಾತಿದೆ. ಸಹಜವಾಗಿ ಈಗ ಸಿಎಂ ಸ್ಥಾನಕ್ಕೆ ಒಳಗಡೆ ಸಮರ ನಡೆಯುತ್ತಿದ್ದು, ಇದೇ ಕಾರಣದಿಂದಲೇ ಕಾಂಗ್ರೆಸ್ ಸರಕಾರ ಉರುಳಲಿದೆ ಎಂದರು. ಕಾಂಗ್ರೆಸ್‌ನಲ್ಲಿ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ತಂತ್ರ -ಪ್ರತಿತಂತ್ರ ರೂಪಿಸುತ್ತಿದ್ದಾರೆ. ಬಹಳ ದಿನ ಈ ಸರಕಾರ ಮುಂದುವರಿಯುವುದಿಲ್ಲ. ಡಿಕೆಶಿ ಬೇರೆಯವರಿಂದ ಸಿಎಂ ಬದಲಾವಣೆ ಬಗ್ಗೆ ಹೇಳಿಸುತ್ತಿದ್ದಾರೆ. ಇಂತಹ ಬೆಳವಣಿಗೆಯಿಂದ ಆಡಳಿತ ಸಂಪೂರ್ಣ ಕುಸಿತವಾಗಿದೆ ಎಂದು ಅವರು ಟೀಕಿಸಿದರು.

> **ಸಿಎಂ ಸ್ಥಾನದಲ್ಲಿ ಸಿದ್ದರಾಮಯ್ಯ ದಾಖಲೆ ಮಾಡಲು ಹೊರಟಿದ್ದಾರೆ. ಅರಸು ಅವರಿಗಿಂತ ಹೆಚ್ಚು ಅವಧಿಗೆ ಮುಖ್ಯಮಂತ್ರಿ ಆಗಿದ್ದ ಎಂದು ಸಾಬೀತು ಮಾಡಲು ಹೊರಟಿದ್ದಾರೆ. ಆದರೆ ಹಗರಣಗಳು ಎಗ್ಗಿಲ್ಲದೆ ನಡೆಯುತ್ತಿವೆ.**
> **-ಜಗದೀಶ್ ಶೆಟ್ಟರ್,** ಸಂಸದ

**ಯಾರೂ ಅನಿವಾರ್ಯರಲ್ಲ:** ಸಿದ್ದರಾಮಯ್ಯ ಬಿಟ್ಟರೆ ನಾಯಕತ್ವಕ್ಕೆ ಯಾರೂ ಅರ್ಹರಿಲ್ಲ ಎಂಬ ವಿಚಾರವಾಗಿ ಪ್ರತಿಕ್ರಿಯಿಸಿದ ಜಗದೀಶ್ ಶೆಟ್ಟರ್, ಯಾರು ಕೂಡ ಅನಿವಾರ್ಯ ಅಲ್ಲ. ಬದಲಾವಣೆ ಜಗದ ನಿಯಮ. ಅದು ಕಾಂಗ್ರೆಸ್ ಪಕ್ಷಕ್ಕೆ ಬಿಟ್ಟ ವಿಚಾರ. ಸಿಎಂ ರಾಜೀನಾಮೆ ಕೊಡಿಸಬೇಕು ಎಂಬ ವಿಚಾರ ಬಂದಾಗ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ತಿರುಗೇಟು ಕೊಡಲಾಗುತ್ತಿದೆ ಎಂದು ವಿಶ್ಲೇಷಿಸಿದರು.

---

ಅಧಿಕಾರ ಹಂಚಿಕೆ ಬಗ್ಗೆ ಚರ್ಚೆಯಾಗಿಲ್ಲ

# ಗೊಂದಲವಿಲ್ಲ, ಒಟ್ಟಾಗಿದ್ದೇವೆ

**ಕಲಬುರಗಿ:** ಸಿಎಂ ಬದಲಾವಣೆ, ಕೆಪಿಸಿಸಿ ಬದಲಾವಣೆ ಕೇವಲ ಮಾಧ್ಯಮಗಳಲ್ಲಿ ಚರ್ಚೆಯಾಗುತ್ತಿದೆ. ಸರಕಾರದಲ್ಲಿ ಗೊಂದಲ ಇಲ್ಲ, ಅಧಿಕಾರ ಹಂಚಿಕೆ ವಿಚಾರದ ಬಗ್ಗೆ ಚರ್ಚೆಯೇ ಇಲ್ಲ ಎಂದು ಪರೋಕ್ಷವಾಗಿ ಸಿಎಂ ಸಿದ್ದರಾಮಯ್ಯ ಪರ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಬ್ಯಾಟ್ ಬೀಸಿದ್ದಾರೆ. ಕಲಬುರಗಿಯಲ್ಲಿ ಮಾತನಾಡಿದ ಸಚಿವರು, ಯಾರಾದರೂ ಸಚಿವರು, ಶಾಸಕರು ಸಿಎಂ ಹಾಗೂ ಕೆಪಿಸಿಸಿ ಬದಲಾವಣೆ ಬಗ್ಗೆ ಸುದ್ದಿಗೋಷ್ಠಿ ಮಾಡಿದ್ದಾರಾ..? ಯಾರೋ ಬರುತ್ತಾರೆ. ಅವರಿಗೆ ಮಾಧ್ಯಮದವರು ಪ್ರಶ್ನೆ ಕೇಳುತ್ತಾರೆ. ಆಗ ಅವರು ಅದಕ್ಕೆ ಪ್ರತಿಕ್ರಿಯೆ ನೀಡುತ್ತಾರೆ. ನಮ್ಮ ಸರಕಾರ ಸುಲಲಿತವಾಗಿ ನಡೆಯುತ್ತಿದ್ದು, ಸುಭದ್ರವಾಗಿದೆ. ಜನಪರ ಆಡಳಿತ ನೀಡುತ್ತಿದ್ದೇವೆ ಎಂದು ಡಾ.ಶರಣಪ್ರಕಾಶ್ ಪಾಟೀಲ್ ಸ್ಪಷ್ಟವಾಗಿ ಹೇಳಿದರು.

> **ಸಿಎಂ ಮತ್ತು ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಪ್ರತಿಕ್ರಿಯೆ ನೀಡದಂತೆ ಕಾಂಗ್ರೆಸ್ ಹೈಕಮಾಂಡ್ ಸೂಚನೆ ನೀಡಿದೆ. ಪಕ್ಷದಲ್ಲಿ ನಾವೆಲ್ಲ ಒಟ್ಟಾಗಿ ಇದ್ದೇವೆ. ಜನಪರ ಆಡಳಿತ ನೀಡುತ್ತೇವೆ.**
> **-ಡಾ.ಶರಣಪ್ರಕಾಶ್ ಪಾಟೀಲ್,** ವೈದ್ಯಕೀಯ ಶಿಕ್ಷಣ ಸಚಿವ

---

# ಸಿದ್ದರಾಮಯ್ಯನವರೇ 5 ವರ್ಷ ಸಿಎಂ ಆಗಿರಲಿ

**ಗದಗ:** ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭಮೇಳದಲ್ಲಿ ಅಭಿಮಾನಿಯೊಬ್ಬರು ಸಿದ್ದರಾಮಯ್ಯನವರೇ ಐದು ವರ್ಷ ಸಿಎಂ ಆಗಿ ಮುಂದುವರಿಯಲಿ ಎಂದು ಭಾವಚಿತ್ರ ಹಿಡಿದು ಪುಣ್ಯಸ್ನಾನ ಮಾಡುವ ವೇಳೆ ಪ್ರಾರ್ಥನೆ ಸಲ್ಲಿಸಿದ್ದಾರೆ. ಮಹಾಕುಂಭಮೇಳದಲ್ಲಿ ಪಾಲ್ಗೊಳ್ಳಲು ತೆರಳಿದ್ದ ಜಿಲ್ಲೆಯ ತಿಮ್ಮಾಪೂರ ಗ್ರಾಮದ ಶಿವಕುಮಾರ ಯತ್ನಟ್ಟಿ ಅವರು ಸಿದ್ದರಾಮಯ್ಯನವರ ಅಭಿಮಾನಿಯಾಗಿದ್ದು, ಪ್ರಯಾಗರಾಜ್‌ನ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಹಾಗೂ ವಿಶೇಷ ಪೂಜೆ ಸಲ್ಲಿಸುವ ಮೂಲಕ ತನ್ನ ವಿಶಿಷ್ಟ ರೀತಿಯಲ್ಲಿ ಪ್ರಾರ್ಥನೆ ಸಲ್ಲಿಸಿದ್ದಾನೆ. ಸದ್ಯ ರಾಜ್ಯ ರಾಜಕಾರಣದಲ್ಲಿ ಸಿಎಂ ಬದಲಾವಣೆ ಮಾತು ಕೇಳಿ ಬರುತ್ತಿರುವ ವೇಳೆಯಲ್ಲೇ ಅಭಿಮಾನಿ ಗಮನ ಸೆಳೆದಿದ್ದಾರೆ.

---

ರಾಜ್ಯ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರ | ಹಲವು ಭಾಗದ ಊರುಗಳ ಹೆಸರೇ ಬದಲಾಗಿದೆ

# ನಾಮಫಲಕವಷ್ಟೇ ಅಲ್ಲ, ಊರಿನ ಮೂಲ ಹೆಸರಿಡಿ

**ಜಯಂತ್ ಬಸವರಾಜ್** ಬೆಂಗಳೂರು

ಕರ್ನಾಟಕ ಸರ್ಕಾರ
ಕನ್ನಡ ಅಭಿವೃದ್ಧಿ ಪ್ರಾಧಿಕಾರ
ವಿಧಾನಸೌಧ,ಬೆಂಗಳೂರು.

ಯಾವುದೇ ಒಂದು ಊರಿಗೆ ಸುಖಾಸುಮ್ಮನೆ ಹೆಸರು ಬರುವುದಿಲ್ಲ. ಊರಿನ ಹೆಸ ರಿನ ನಾಮಕರಣದ ಹಿಂದೆ ಐತಿಹಾಸಿಕ, ಪ್ರಾದೇಶಿಕ, ಪಾಕೃತಿಕ ಸೇರಿ ಹಲವು ಕಾರಣಗಳಿರುತ್ತವೆ. ಆದರೆ ಆಧುನಿಕ ಸಮಾಜದಲ್ಲಿ ರಾಜ್ಯದ ಅನೇಕ ಊರುಗಳ ಹೆಸರನ್ನೇ ಬದಲಾಯಿಸಿರುವ ನಿರ್ದಶನಗಳಿವೆ. ಆದ್ದರಿಂದ ಇದೀಗ ಕರ್ನಾಟಕದಲ್ಲಿ ಬದಲಾಗಿರುವ ಕನ್ನಡ ಊರುಗಳ ಹೆಸರನ್ನು ಮರುನಾಮಕರಣ ಮಾಡಬೇಕು ಎನ್ನುವ ಪ್ರಸ್ತಾವನೆ ಸಲ್ಲಿಕೆಯಾಗಿದೆ.

ಕಳೆದ ವರ್ಷ ರಾಜಧಾನಿ ಬೆಂಗಳೂರಿನಲ್ಲಿ ಕನ್ನಡ ನಾಮಫಲಕ ಕಣ್ಮರೆ ವಿಷಯಕ್ಕೆ ಸಂಬಂಧಿಸಿದಂತೆ ಬಹುದೊಡ್ಡ ವಿವಾದದ ಬಳಿಕ, ರಾಜ್ಯ ಸರಕಾರ ಕರ್ನಾಟಕದಲ್ಲಿ ವಾಣಿಜ್ಯ ಕಟ್ಟಡಗಳ ಮೇಲೆ ಶೇ.60 ರಷ್ಟು ಕನ್ನಡದ ನಾಮಫಲಕವನ್ನು ಅಳವಡಿಸಬೇಕು ಎನ್ನುವ ಕಾನೂನು ಜಾರಿಗೊಳಿಸಿತ್ತು. ಇದೀಗ ಈ ಕಾನೂನಿಗೆ ಪೂರಕವಾಗಿ, ಕರ್ನಾಟಕದಲ್ಲಿ ಬದಲಾಗಿರುವ ಊರುಗಳ ಹೆಸರನ್ನು ಮರುನಾಮಕರಣ ಮಾಡಿ, ಈ ಹಿಂದಿನ ಹೆಸರನ್ನೇ ಇಡಬೇಕು ಎನ್ನುವ ಆಗ್ರಹಗಳು ಶುರುವಾಗಿದೆ.

ಈ ಸಂಬಂಧ ಈಗಾಗಲೇ ಕನ್ನಡ ಅಭಿವೃದ್ಧಿ ಪ್ರಾಧಿಕಾರ ರಾಜ್ಯ ಸರಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪತ್ರ ಬರೆದು ಮನವಿ ಮಾಡಿದೆ. ಒಂದು ವೇಳೆ ಊರುಗಳ ಮೂಲ ಹೆಸರುಗಳು ಜಾರಿಗೆ ಬಂದರೆ ಆ ಊರಿನ ಇತಿಹಾಸ, ಸಾಂಸ್ಕೃತಿಕ ಹಾಗೂ ಪಾರಂಪರಿಕ ಹಿನ್ನೆಲೆ ತಿಳಿಯುವುದು ಸುಲಭ. ಆದ್ದರಿಂದ ರಾಜ್ಯ ಸರಕಾರ ಕೂಡಲೇ ಈ ಸಂಬಂಧ ಕ್ರಮವಹಿಸಬೇಕು ಎನ್ನುವ ಮನವಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮಾಡಿದೆ.

**ನಾಮಫಲಕದಲ್ಲಿ ಊರಿನ ಹೆಸರು ಸೇರಿಸಿ:** ನಾಮಫಲದಲ್ಲಿ ಶೇ.60ರಷ್ಟು ಕನ್ನಡ ಕಡ್ಡಾಯ ಎನ್ನುವ ಕಾನೂನಿನೊಂದಿಗೆ, ಆ ನಾಮಫಲಕದಲ್ಲಿ ಊರಿನ ಮೂಲ ಹೆಸರನ್ನು, ಕನ್ನಡದಲ್ಲಿಯೇ ಬರೆಯಬೇಕು ಎನ್ನುವ ಪ್ರಸ್ತಾವನೆ ಸಲ್ಲಿಕೆಯಾಗಿದೆ. ಒಂದು ನಿರ್ದಿಷ್ಟ ಪ್ರದೇಶದ ಭಾಷೆ, ಸಂಸ್ಕೃತಿ, ಚರಿತ್ರೆ ಸ್ವರೂಪವನ್ನು ತಿಳಿಯುವಲ್ಲಿ ಊರಿನ ಮೂಲ ಹೆಸರು ಪ್ರಾಮುಖ್ಯತೆ ಪಡೆಯುತ್ತದೆ. ಊರಿನ ಹೆಸರು ಉಳಿದರೆ ಅಲ್ಲಿನ ಸಂಸ್ಕೃತಿ ಉಳಿಯುತ್ತದೆ. ಪ್ರತಿ ನಾಮಫಲಕದಲ್ಲಿ ಆ ಊರಿನ ಹೆಸರು ಸಮರ್ಪಕವಾಗಿ ದಾಖಲಾಗುವಂತೆ ಮಾಡಲು ಈ ಪ್ರಯತ್ನಕ್ಕೆ ಮುಂದಾಗಿದ್ದೇವೆ ಎಂದು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ಜಾಗತಿಕ ಆರ್ಥಿಕತೆಗೆ ತೆರೆದುಕೊಳ್ಳುತ್ತಿರುವ ವಾಣಿಜ್ಯ, ವ್ಯಾಪಾರ ಕ್ಷೇತ್ರಗಳು ಅದಕ್ಕೆ ತಕ್ಕಂತೆ ಒಗ್ಗಿಕೊಳ್ಳುತ್ತಿವೆ. ಈ ಹಿಂದೆ ಅಂಗಡಿಗಳ ನಾಮಫಲಕಗಳಲ್ಲಿ ಕನ್ನಡ ಭಾಷೆಯ ಬಳಕೆಯ ಜತೆಗೆ ಕೆಳಭಾಗದಲ್ಲಿ ಊರಿನ ಮೂಲ ಹೆಸರು ಇರುತ್ತಿದ್ದವು. ಆದರೀಗ ಜಾಗತೀಕರಣದ ಹೆಸರಲ್ಲಿ ನಾಮಫಲಕಗಳ ಚಿತ್ರಣ ಬದಲಾಯಿಸಲಾಗುತ್ತಿದೆ. ಕನ್ನಡದ ಬಳಕೆ ದಿನೇ ದಿನೇ ಕ್ಷೀಣಿಸುತ್ತಿದ್ದರೆ ಊರಿನ ಮೂಲ ಹೆಸರು ಬಳಸುವುದು ಮಾಯವಾಗಿದೆ. ಉದಾಹರಣೆಗೆ ಜಯಪ್ರಕಾಶ ನಗರ ಈಗ ಜೆಪಿ ನಗರವಾಗಿ, ಕೃಷ್ಣರಾಜ ಮಾರುಕಟ್ಟೆ ಕೆಆರ್ ಮಾರ್ಕೆಟ್ ಆಗುವ ಮೂಲಕ ಮೂಲ ಅಸ್ತಿತ್ವ ಕಳೆದುಕೊಳ್ಳುತ್ತಿದೆ. ಆದ್ದರಿಂದ ಇದನ್ನು ಬದಲಾಯಿಸಬೇಕಿದೆ ಎನ್ನಲಾಗುತ್ತಿದೆ.

### ಯೋಜನೆ ಜಾರಿಗೆ ಎನ್‌ಎಸ್‌ಎಸ್ ಮಕ್ಕಳ ಸಹಕಾರ

ನಾಮಫಲಕಗಳಲ್ಲಿ ಊರಿನ ಹೆಸರು ಉಳಿಸುವ ಅಭಿಯಾನ ಜಾರಿಗೆ ತರಲು ಪ್ರಾಧಿಕಾರ ತಜ್ಞರ ತಂಡ ರಚಿಸಿ ಈಗಾಗಲೇ ಚರ್ಚೆ ನಡೆಸಿದೆ. ತಜ್ಞರ ಪ್ರಕಾರ, ಪ್ರತಿ ಗ್ರಾಮದ ಪಂಚಾಯಿತಿ ವ್ಯಾಪ್ತಿಗೆ ಬರುವ ಎಲ್ಲಾ ನಾಮಫಲಕಗಳಲ್ಲಿ ಊರಿನ ಹೆಸರು, ಶೇ.60 ರಷ್ಟು ಕನ್ನಡ ಬಳಕೆ ಮಾಡಲು ಎನ್‌ಎಸ್‌ಎಸ್ ವಿದ್ಯಾರ್ಥಿಗಳ ಸಹಾಯ ಪಡೆಯುವುದಾಗಿ ತಿಳಿಸಿದೆ. ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಅಂಗಡಿ -ಮುಂಗಟ್ಟುಗಳಿಗೆ ತೆರಳಿ ಅಲ್ಲಿ ಶೇ.60 ರಷ್ಟು ಕನ್ನಡ ಬಳಕೆಯಾಗಿದೆಯೇ ಮತ್ತು ಊರಿನ ಮೂಲ ಹೆಸರು ಬಳಸಿದ್ದಾರೆಯೇ ಎಂದು ಪರಿಶೀಲಿಸಿ, ಹಾಗೊಂದು ವೇಳೆ ಬಳಸದಿದ್ದಲ್ಲಿ ಆ ಮಾಲೀಕರ ಗಮನಕ್ಕೆ ತಂದು ಕೂಡಲೇ ಬದಲಾಯಿಸಲು ತಿಳಿಸುವುದು ಎನ್ನಲಾಗಿದೆ.

> **ಕರ್ನಾಟಕದಲ್ಲಿ ಸುಮಾರು 65 ಸಾವಿರ ಊರುಗಳ ಕನ್ನಡ ಹೆಸರುಗಳಿವೆ. ಪ್ರಾಕೃತಿಕ ಗುಣಗಳಿಂದ ಆ ಹೆಸರುಗಳು ಬಂದಿವೆ. ಮೊದಲೆಲ್ಲಾ ಊರು ಸಿಗುವುದು ಊರಿನ ಹೆಸರಿನಿಂದಾಗಿ, ಆದರೆ ಇಂದು ಊರು ಸಿಕ್ಕರೂ ಊರಿನ ಹೆಸರು ಸಿಗುತ್ತಿಲ್ಲ. ಪ್ರಾಕೃತಿಕ, ಸಾಂಸ್ಕೃತಿಕ ಪದ ಬಳಕೆ ನಿಂತು ಹೋಗುತ್ತಿವೆ. ಹೀಗಾಗಿ ಊರುಗಳಿಗೆ ಅವುಗಳ ಮೂಲ ಹೆಸರೇ ಇಡಬೇಕು ಎಂದು ಪ್ರಸ್ತಾಪಿಸಿದ್ದೇವೆ.**
> **- ಪುರುಷೋತ್ತಮ ಬಿಳಿಮಲೆ,** ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ವಿಶ್ವವಾಣಿ

## ಸಂಪಾದಕೀಯ

### ಇದು ಜನಾಕ್ರೋಶದ ಪರಮಾವಧಿ

ಸಂಚಾರ ದಟ್ಟಣೆಯಿಂದ ತಪ್ಪಿಸಿಕೊಳ್ಳಲೆಂದು ಬೆಂಗಳೂರಿನಲ್ಲಿ 'ನಮ್ಮ ಮೆಟ್ರೋ' ಸಾರಿಗೆ ವ್ಯವಸ್ಥೆಯನ್ನು ನೆಚ್ಚಿಕೊಂಡಿದ್ದವರು ಗಣನೀಯ ಸಂಖ್ಯೆಯಲ್ಲಿದ್ದರು ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಆದರೀಗ, ಮೆಟ್ರೋ ಸಂಸ್ಥೆಯವರು ಅವೈಜ್ಞಾನಿಕ ರೀತಿಯಲ್ಲಿ, ಅತಿರೇಕ ಎಂಬುವಷ್ಟರ ಮಟ್ಟಿಗೆ ಪ್ರಯಾಣದರ ಏರಿಕೆಗೆ ಮುಂದಾಗಿದ್ದಕ್ಕೆ ಸಾರ್ವಜನಿಕ ವಲಯದಿಂದ ಸಹಜವಾಗೇ ಆಕ್ರೋಶ ಮತ್ತು ಆಕ್ಷೇಪಗಳು ವ್ಯಕ್ತವಾಗಿವೆ. ಇದರ ಸಾಕ್ಷೀರೂಪ ಎಂಬಂತೆ ಬೆಂಗಳೂರಿನಲ್ಲಿ ಬರೋಬ್ಬರಿ 1 ಲಕ್ಷ ಪ್ರಯಾಣಿಕರು ಮೆಟ್ರೋ ಪ್ರಯಾಣದಿಂದ ವಿಮುಖರಾಗಿದ್ದಾರೆ ಎಂದಿವೆ ಲಭ್ಯ ಅಂಕಿ-ಅಂಶಗಳು. ಮೆಟ್ರೋ ಪ್ರಯಾಣಕ್ಕೆ ಜನರು ತಿಲಾಂಜಲಿ ಇತ್ತರು ಎಂದರೆ, ಸಹಜವಾಗಿ ರಸ್ತೆಮಾರ್ಗದಲ್ಲಿ ಸಂಚಾರಿ ದಟ್ಟಣೆ ಹೆಚ್ಚಾಗಲಿದೆ ಎಂದೇ ಅರ್ಥ. ಇದು ಮತ್ತೊಂದು ಸುತ್ತಿನ ಸಮಸ್ಯೆಗಳಿಗೆ ಆಹ್ವಾನ ನೀಡುವುದಂತೂ ಖರೆ. ಸೇವೆಯೇ ಪ್ರಧಾನವಾಗಿರುವ ಬಸ್ಸು, ರೈಲು ಮತ್ತು ಮೆಟ್ರೋ ಸೇವೆಗಳನ್ನು 'ವಾಣಿಜ್ಯಿಕ ಕನ್ನಡಕ'ದ ಮೂಲಕ ನೋಡಿದರೆ ಒದಗುವ ಪರಿಸ್ಥಿತಿ ಇದೇ ಆಗುತ್ತದೆ ಎಂಬುದಕ್ಕೀಗ ಸಾಕ್ಷಿ ಸಿಕ್ಕಂತಾಗಿದೆ. ಹಾಗೆಂದ ಮಾತ್ರಕ್ಕೆ ಸಂಸ್ಥೆಗೆ ನಷ್ಟ ಮಾಡಿಕೊಂಡು ಜನಸೇವೆ ಮಾಡಬೇಕು ಎಂದೇನಲ್ಲ; ಆದರೆ ಪ್ರಯಾಣದರದ ಏರಿಕೆಗೆ ನಿರ್ಧರಿಸುವುದಕ್ಕೂ ಮೊದಲು, ಚಾಲ್ತಿಯಲ್ಲಿರುವ ಸಾಮಾಜಿಕ ಸನ್ನಿವೇಶ, ಜನರು ಈಗಾಗಲೇ ವಿವಿಧ ತೆರನಾದ ಬೆಲೆಯೇರಿಕೆಗಳಿಗೆ ಒಡ್ಡಿಕೊಂಡಿರುವಿಕೆ, ಅವರ ಆರ್ಥಿಕ ಸ್ಥಿತಿಗತಿಯಲ್ಲಿನ ಕುಸಿತ ಇತ್ಯಾದಿ ಅಂಶಗಳನ್ನೂ ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಇಂಥ ಸೂಕ್ಷ್ಮ ಅಂಶವು ಮೆಟ್ರೋ ಸಂಸ್ಥೆಯ ಕೆಲವೊಂದು ಪ್ರಭೃತಿಗಳಿಗೆ ಅರ್ಥವಾಗದಿರುವುದು ವಿಷಾದನೀಯ. ಅದು ಒಂದು ಸಂಸ್ಥೆಯೇ ಇರಲಿ ಅಥವಾ ಸರಕಾರವೇ ಇರಲಿ, ಜನಾಕ್ರೋಶಕ್ಕೆ ತುತ್ತಾಗುತ್ತಿದ್ದಂತೆ ಒಂದೋ ವಿಶ್ವಾಸವನ್ನು ಕಳೆದುಕೊಳ್ಳಬೇಕಾಗುತ್ತದೆ, ಇಲ್ಲವೇ ಅದರ ಅಸ್ತಿತ್ವಕ್ಕೇ ಸಂಚಕಾರ ಒದಗುವಂಥ ಪರಿಸ್ಥಿತಿ ಎದುರಾಗುತ್ತದೆ ಎಂಬುದು ಹಸಿಮಣ್ಣಿನ ಮೇಲೆ ಗಾಜಿನಿಂದ ಕೊರೆದ ಅಕ್ಷರದಷ್ಟೇ ಸತ್ಯ. ಈ ಸರಳ ಸತ್ಯವನ್ನು ಅರ್ಥಮಾಡಿಕೊಳ್ಳದಿದ್ದಲ್ಲಿ ಒಂದು ಸಂಸ್ಥೆಯಾಗಲೀ ಸರಕಾರವಾಗಲೀ ಪ್ರಗತಿ ಪಥದತ್ತ ಹೆಜ್ಜೆ ಹಾಕಲಾಗದು. ಇದಕ್ಕೆ ಸಾಕಷ್ಟು ನಿದರ್ಶನಗಳಿರುವುದನ್ನು ಇತಿಹಾಸವೇ ಹೇಳುತ್ತದೆ. ಸಂಬಂಧಪಟ್ಟವರು ಇನ್ನಾದರೂ ವಸ್ತುಸ್ಥಿತಿಯನ್ನು ಅರ್ಥಮಾಡಿಕೊಳ್ಳಲಿ.

## ಸೊಂಪಾದಕೀಯ

### ಹೆಣಗಾಡಿದ ಹೆಣ

ನಮ್ಮ ಸಮಾಜದಲ್ಲಿ ಜಾತಿ ಅನ್ನೋದು ಕೆಲವು ಜನರ ಮೇಲೆ ಎಷ್ಟರ ಮಟ್ಟಿಗೆ ಪ್ರಭಾವ ಬೀರುತ್ತದೆ ಎಂಬುದರ ಬಗ್ಗೆ ಹೊಸದಾಗಿ ಏನೂ ಹೇಳಬೇಕಾಗಿಲ್ಲ. ಆದರೆ, 'ಪ್ರಾಣ ಬಿಟ್ಟೇವು, ಜಾತಿ ಬಿಡೆವು' ಅನ್ನೋ ಕೆಲವರು, ಸಾವಿನ ವಿಷಯದಲ್ಲೂ ಸಣ್ಣತನ ತೋರಿರುವ ಇತ್ತೀಚಿನ ಎರಡು ಉದಾಹರಣೆಗಳನ್ನು ನೋಡಿದಾಗ ಮತ್ತೆ ಮತ್ತೆ ಜಾತಿ ಭೂತ, ಮೂಢನಂಬಿಕೆಗಳ ಭೂತ ನೆನಪಾಗೋದು ಸಹಜ. ಊರೊಂದರಲ್ಲಿ ಹೆಂಗಸೊಬ್ಬರು ಸತ್ತಾಗ, ಆಕೆಯ ಹೆಣ್ಣುಮಕ್ಕಳು ಬೇರೆ ಜಾತಿಯವರನ್ನು ಮದುವೆ ಆಗಿದ್ದಾರೆ ಅನ್ನೋ ಕಾರಣಕ್ಕೆ ಸಂಬಂಧಿಕರು ಯಾರೂ ತಿರುಗಿ ನೋಡಲಿಲ್ಲವಂತೆ. ಕೊನೆಗೆ, ಗ್ರಾಮಸ್ಥರೇ ಮುಂದೆ ನಿಂತು ಅಂತಿಮಕಾರ್ಯ ಮಾಡಿದ್ದಾರೆ. ಹಾಗಾಗಿ ನಿಜವಾದ ಸಂಬಂಧಿಕರು ಯಾರು ಅನ್ನೋ ಪ್ರಶ್ನೆ ಇಂಥ ಸಂದರ್ಭದಲ್ಲಿ ಸಹಜ. ಅದಕ್ಕೆ ಉತ್ತರವೂ ಸುಲಭ. ಇನ್ನೊಂದು ಅಮಾನವೀಯ ಘಟನೆಯಲ್ಲಿ ಜನ ತಮ್ಮ ಮೂಢನಂಬಿಕೆಗಳನ್ನು ಯಾವ ಲೆವೆಲ್ಲಿಗೆ ಬೇಕಾದ್ರೂ ತಗೊಂಡ್ ಹೋಗ್ತಾರೆ ಅನ್ನೋದು ಪ್ರೂವ್ ಆಗಿದೆ. ತೊನ್ನು ಸಮಸ್ಯೆ ಇದ್ದ ಹೆಂಗಸೊಬ್ಬರು ಸತ್ತು, ಅವರನ್ನು ಊರಲ್ಲಿ ಹೂಳಲಾಗಿತ್ತು. ಆದರೆ ಆ ಊರಿನ ಸುತ್ತಮುತ್ತ ಮಳೆ ಬಂದರೂ, ಆ ಊರಲ್ಲಿ ಮಾತ್ರ ಮಳೆ ಬಾರದೇ ಇದ್ದಾಗ, ಸೋ-ಕಾಲ್ಡ್ ನಾಗರಿಕ ಸಮಾಜದ ಜನರು, ತೊನ್ನು ಬಂದವರನ್ನು ಸುಟ್ಟು ಹಾಕಬೇಕು, ಅವರನ್ನು ಹೂತಿದ್ದಕ್ಕೇ ಊರಿಗೆ ಬರ ಬಂದಿದೆ ಎಂದು ಹೇಳಿ ಹೂತಿದ್ದ ಶವವನ್ನು ಹೊರತೆಗೆದು ಸುಟ್ಟು ಹಾಕಿದ್ದಾರೆ. ಇಂಥ ಮೂಢನಂಬಿಕೆಗಳನ್ನು ನೋಡಿಯೇ ದೊಡ್ಡವರು 'ಹುಟ್ಟುಗುಣ ಸುಟ್ಟರೂ ಹೋಗಲ್ಲ' ಅತ ಹೇಳಿದ್ದರೋ ಏನೋ. ಆದರೆ ಈ ಕೇಸಿನಲ್ಲಿ ಹುಟ್ಟುವ ಮಗುವಿನ ಕಾಲ್ಗುಣ ನೋಡುವವರು ಒಂದು ಕಡೆಯಾದರೆ ಸತ್ತವರ ಕಾಲ್ಗುಣವನ್ನೂ ಬಿಡದವರು ಇನ್ನೊಂದು ಕಡೆ. ಒಟ್ಟಿನಲ್ಲಿ, ಇವರ ಹುಟ್ಟುಗುಣ, ಸತ್ತರೂ ಹೋಗಲ್ಲ, ಹೂತಿದ್ದ ಹೆಣವನ್ನು ಹೊರತೆಗೆದು ಸುಟ್ಟರೂ ಹೋಗಲ್ಲ ಅಂತ ಜನ ಮಾತಾಡಿಕೊಳ್ಳುವ ಹಾಗಾಗಿರೋದಂತೂ ನಿಜ. ಈ ಮೂಲಕ ಮೂಢನಂಬಿಕೆಯ ಜನ, ಗಾದೆಮಾತನ್ನು ಅಕ್ಷರಶಃ ನಿಜ ಮಾಡಿದ್ದಾರೆ. ಬದುಕಿರುವವರನ್ನು ಬದುಕೋಕೆ ಬಿಡದ ಈ ಮೂಢನಂಬಿಕೆಗಳ ಸರದಾರರು, ಈಗ ಸತ್ತು ಹೆಣವಾದವರನ್ನೂ ಹೆಣಗಾಡಿಸುತ್ತಿರೋದು ಮಾತ್ರ ಸತ್ಯ.

## ಸಂಪಾದಕರ ಸದ್ಯಶೋಧನೆ

### ಲಿವಿಂಗ್ ಟುಗೆದರ್

ಕೆಲ ತಿಂಗಳ ಹಿಂದೆ 'ಕೋರಾ'ದಲ್ಲಿ ಒಬ್ಬರು, ''ನಾನು 45ರ ವಿಚ್ಛೇದಿತ ವ್ಯಕ್ತಿ, ಮೈಸೂರು ನನ್ನ ವಾಸಸ್ಥಳ. ಲಿವಿಂಗ್ ಟುಗೆದರ್ (long life but without marriage) ಇಷ್ಟಪಡುವ ಯಾರಾದರೂ ಮಹಿಳೆಯರು ಸಿಗಬಹುದಾ?'' ಎಂಬ ಪ್ರಶ್ನೆ ಕೇಳಿದ್ದರು. ಅದಕ್ಕೆ ಕೆಲವರು ಉತ್ತರಿಸಿದ್ದು ಸ್ವಾರಸ್ಯಕರವಾಗಿತ್ತು. ಆ ಪ್ರಶ್ನೆಗೆ ಒಬ್ಬರು ಹೀಗೆ ಬರೆದಿದ್ದರು- ''ತಮ್ಮ ಆಹ್ವಾನ ಪರಿಗಣಿಸಬಹುದು. ಆದರೆ ಈ ವಯಸ್ಸಿನವರ ಜತೆ ಇರಲು ಕೆಲವು ಸ್ಪಷ್ಟೀಕರಣ ಬೇಕು. ನಿಮ್ಮ ಬಳಿ ಸ್ವಂತ ಐಷಾರಾಮಿ ಮನೆ/ಬಂಗಲೆ ಇದೆಯಾ? ಜಮೀನು, ಚಿನ್ನ, ವಜ್ರ, ವೈಡೂರ್ಯ ಇವೆಯಾ? ಬ್ಯಾಂಕ್ ಬ್ಯಾಲೆನ್ಸ್ ಎಷ್ಟು ಕೋಟಿ ಇವೆ? ಸ್ವಂತ ಯಾವುದಾದರೂ ಬಿಸಿನೆಸ್? ಇವೆಲ್ಲವನ್ನು ನಿಮ್ಮ long life without marriage partner ಹೆಸರಿಗೆ ವರ್ಗಾಯಿಸುತ್ತೀರಾ? ನೀತಿ ಕೆಟ್ಟರೂ ಪರವಾಗಿಲ್ಲ ಸುಖವಾಗಿರಬೇಕು ಎಂಬುದು ಗಾದೆ. ಅದನ್ನು 'ಪರಮ ಸುಖ' ಪಡಬೇಕು ಎಂಬುದು ಈಗ ಅನುಭವದಿಂದ ಬಂದಿದೆ. ಕಾರಣ ನಿಮಗೆ ಪತ್ನಿಯ ಅಗತ್ಯವಿಲ್ಲ. ಅದರೆ ನಿಮ್ಮ ಜತೆ ಬಾಳಲು ಒಬ್ಬಳು ಬೇಕು. ಅವಳಿಗೆ ತಾವು ಬೇಡ. ತಮ್ಮ ಅವಶ್ಯಕತೆಯೂ ಬೇಡ. ಕೊನೆಯ ಮಾತು. ತಮ್ಮ 'ಲಿವಿಂಗ್ ಟುಗೆದರ್' ಅಂದರೆ ಬರೀ ಲಿವಿಂಗ್ ಟುಗೆದರ್ ನಿಮ್ಮ ಜತೆ ಅಷ್ಟೇ. ನಿಮ್ಮ ಮಾಜಿ ಪತ್ನಿಯ ಮಕ್ಕಳು, ನಿಮ್ಮ ಬಂಧುಗಳು, ತಂದೆ-ತಾಯಿ ಯಾವ ತಾಪತ್ರಯಗಳು, ಗೊಡವೆಗಳು ಇರಬಾರದು. ಅವರು ನಿಮ್ಮ ಮನೆ ಕಡೆ ಸುಳಿಯಬಾರದು. ಆಗಬಹುದಾ?''. ಮತ್ತೊಬ್ಬರು ಹೀಗೆ ಪ್ರತಿಕ್ರಿಯಿಸಿದ್ದರು- ''ಮರುವಿವಾಹವಾದರೆ ಹೀಗೆಲ್ಲ ಯೋಚಿಸುವ ಅಗತ್ಯವೇ ಇರುವುದಿಲ್ಲ. ನಿಮ್ಮ ಈ ಪ್ರಶ್ನೆಯಲ್ಲಿ ಏನೋ ದೋಷವಿದ್ದಂತೆ ಕಾಣಿಸುತ್ತಿದೆ. ನನ್ನ ಪ್ರಕಾರ, ನೀವು ಕಾನೂನಾತ್ಮಕವಾಗಿ ಇನ್ನೂ ವಿಚ್ಛೇದನ ಪಡೆದಿಲ್ಲ ಅಥವಾ ಗಂಡ-ಹೆಂಡಿರಲ್ಲಿನ ಯಾವುದೋ ಮನಸ್ತಾಪದಿಂದ ಬಹುಶಃ ದೂರಾಗಿರುವುದರಿಂದ ನಿಮಗೆ ಈ ರೀತಿಯ ದೂರಾಲೋಚನೆ ಯುಂಟಾಗಿರಬಹುದು. ನಾನೊಂದು ಮಾತು ಹೇಳುತ್ತೇನೆ. ನಿಮ್ಮ ಹೆಂಡತಿಯ ಜತೆ ಸಂಸಾರ ಮಾಡುವ ತೀರ್ಮಾನಕ್ಕೆ ಮತ್ತೊಮ್ಮೆ ಏಕೆ ಬರಬಾರದು? ದುಡುಕದೇ ಸ್ವಲ್ಪ ಆಲೋಚಿಸಿ ನೋಡಿ''. ಇನ್ನೊಬ್ಬರು, ''ಸ್ವಾಮಿ, ಕೋರಾ ಎಂಬುದು ಜ್ಞಾನ ವಿನಿಮಯಕ್ಕಾಗಿ ಏರ್ಪಡಿಸಿರುವ ಒಂದು ವೇದಿಕೆ. ನಿಮ್ಮ ಖಾಸಗಿ ಬೇಕು-ಬೇಡಗಳನ್ನು ಕೋರಿಕೊಳ್ಳುವ ಜಾಗವನ್ನಾಗಿ ಮಾಡಬೇಡಿ. ನಿಮ್ಮ ಅವಶ್ಯಕತೆಯನ್ನು ಯಾವುದಾದರೂ ದಿನಪತ್ರಿಕೆಯ ಕ್ಲಾಸಿಫೈಡ್ ಅಂಕಣದಲ್ಲಿ ಮುಂದಿಡಿ! ಸಹಜೀವನದ ಬಗ್ಗೆ ಆಸಕ್ತಿಯಿರುವ ಮಹಿಳೆಯನ್ನು ಹುಡುಕುವುದು ಕಷ್ಟಕರವಾಗಬಹುದು. ಆದರೂ ನೀವು ಡೇಟಿಂಗ್ ಸೈಟುಗಳಿಗೆ ಭೇಟಿ ಕೊಡಬಹುದು. ಆದರೂ, ಸಂಬಂಧ ಆರಂಭಿಸುವ ಮೊದಲು ಪರಸ್ಪರ ಸಮಜಾಯಿಷಿ ಮತ್ತು ನಿರೀಕ್ಷೆಗಳ ಬಗ್ಗೆ ಸ್ಪಷ್ಟತೆಯನ್ನು ಹೊಂದುವುದು ಅತ್ಯಂತ ಮುಖ್ಯ'' ಎಂದು ಹೇಳಿದ್ದರು. ಮಹಿಳೆಯೊಬ್ಬರು, ''ನಿಮ್ಮ ಕಷ್ಟ ಅರ್ಥವಾಗುತ್ತಿದೆ. ಆದರೆ ನಿಮಗೆ ಇನ್ನೊಂದು ಮದುವೆ ಆಗಲು ಯಾಕೆ ಮನಸ್ಸು ಆಗುತ್ತಿಲ್ಲ? ಗಂಡು ಹೆಣ್ಣಿನ ಸಂಬಂಧ ಮದುವೆ ಮೂಲಕ ಆದರೆ ಸಮಾಜ ಮತ್ತು ಕಾನೂನಿನ ಮಾನ್ಯತೆ ದೊರಕುತ್ತದೆ. ಮನಃಶಾಂತಿ ಕೂಡ. ಯೋಚನೆ ಮಾಡಿ. ಆದರೂ ನಿಮ್ಮ ನಿಲುವು ಹಾಗೇ ಇದ್ದರೆ ಕೆಲವು ಡೇಟಿಂಗ್ ಸೈಟ್‌ಗಳಲ್ಲಿ ನಿಮಗೆ ಸಂಗಾತಿ ಸಿಗಬಹುದು. ಅದಕ್ಕೆ ಅದರದೇ ಆದ ತೊಂದರೆಗಳು ಕೂಡ ಇರಬಹುದು. ದೇವರು ನಿಮಗೆ ಒಳ್ಳೆಯ ಸಂಗಾತಿ ಸಿಗುವ ಹಾಗೆ ಹರಸಲಿ. ಶುಭವಾಗಲಿ'' ಎಂದು ಉತ್ತರಿಸಿದ್ದರು. ಮತ್ತೊಬ್ಬರು, ''ಸ್ವಾಮಿ, ನಿಮಗೆ ಕಟ್ಟಿಕೊಳ್ಳಲು ಇಷ್ಟವಿಲ್ಲ, ಇಟ್ಟುಕೊಳ್ಳಲು ರೆಡಿಯಾಗಿದ್ದೀರಿ. ಇಲ್ಲಿಯವರೆಗಿನ ದಾಂಪತ್ಯ ಜೀವನ ನಿಮಗೆ ಇನ್ನೊಂದು ಮದುವೆಯಾಗುವ ಧೈರ್ಯವನ್ನು ಕೊಡುತ್ತಿಲ್ಲ. ಅಷ್ಟಕ್ಕೂ ನೀವು ಲಿವಿಂಗ್ ಟುಗೆದರ್ ಅಂದ್ರೆ ಜವಾಬ್ದಾರಿ ಇಲ್ಲದ ಸುಖ ಎಂದು ಭಾವಿಸಿದಂತಿದೆ. ಯಾವ ಸಂಬಂಧವೂ ಹಾಗೆ ಇರುವುದಿಲ್ಲ. 'ಮದುವೆಯೇ ವಾಸಿ, ಯಾಕಾದರೂ ಈ ಲಿವಿಂಗ್ ಟುಗೆದರ್‌ಗೆ ಒಪ್ಪಿದೆನೋ?' ಎಂದು ಪರಿತಪಿಸುವವರೂ ಇದ್ದಾರೆ'' ಎಂದು ಪ್ರತಿಕ್ರಿಯಿಸಿದ್ದರು.

# ಕೇಂದ್ರ ಮಂತ್ರಿ ಕುಮಾರಣ್ಣನ ಲೇಟೆಸ್ಟು ಸಂಕಟ

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಕಳೆದ ವಾರ ಪ್ರತ್ಯೇಕವಾಗಿ ದಿಲ್ಲಿಗೆ ಹೋಗಿದ್ದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮತ್ತು ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ಅವರು ಮೂರು ಸಂಗತಿಗಳನ್ನು ಸ್ಪಷ್ಟವಾಗಿ ಹೇಳಿದ್ದಾರೆ. ''ಮುಖ್ಯಮಂತ್ರಿ ಹುದ್ದೆಯಿಂದ ಸಿದ್ದರಾಮಯ್ಯ ಅವರನ್ನು ಯಾವ ಕಾರಣಕ್ಕೂ ಇಳಿಸಬಾರದು. ಹಾಗೊಂದು ವೇಳೆ ಅವರನ್ನು ಇಳಿಸುವುದೇ ಆದಲ್ಲಿ ಅವರ ಜಾಗದಲ್ಲಿ ಡಿ.ಕೆ.ಶಿವಕುಮಾರ್ ಅವರನ್ನು ನೋಡಲು ನಾವು ತಯಾರಿಲ್ಲ'' ಎಂಬುದು ಒಂದಾದರೆ, ''ಪರ್ಯಾಯ ನಾಯಕತ್ವ ಅನಿವಾರ್ಯವಾದರೆ ನೀವು ಕರ್ನಾಟಕದ ಮುಖ್ಯಮಂತ್ರಿಯಾಗಿ. ಇಲ್ಲವೇ ನಾವು ಸೂಚಿಸಿದವರಿಗೆ ಮುಖ್ಯಮಂತ್ರಿ ಹುದ್ದೆ ಸಿಗಲಿ'' ಎಂಬುದು ಎರಡನೇ ಸಂಗತಿ. ''ಒಂದು ವೇಳೆ ಇದಾಗದೆ ಡಿ.ಕೆ.ಶಿವಕುಮಾರ್ ಅವರೇ ಮುಖ್ಯಮಂತ್ರಿಯಾಗಬೇಕು ಎಂದು ಹೈಕಮಾಂಡ್ ತೀರ್ಮಾನಿಸಿದರೆ ನಾವು ಕನಿಷ್ಠ 60 ಮಂದಿ ಮಂತ್ರಿಗಳು, ಶಾಸಕರು ಪಕ್ಷ ತೊರೆಯುತ್ತೇವೆ'' ಎಂಬುದು ಮೂರನೇ ಸಂಗತಿ.

ಹೀಗೆ ತಮ್ಮನ್ನು ಪ್ರತ್ಯೇಕವಾಗಿ ಭೇಟಿ ಮಾಡಿದ ಸತೀಶ್ ಜಾರಕಿಹೊಳಿ, ಕೆ.ಎನ್.ರಾಜಣ್ಣ ಅವರು ಕಡ್ಡಿ ತುಂಡು ಮಾಡಿದಂತೆ ಮಾತನಾಡಿದಾಗ ಖರ್ಗೆಯವರು, ''ಈ ಕುರಿತು ಮಾತನಾಡಲು ಇನ್ನೂ ಸಮಯವಿದೆ'' ಎಂದರಂತೆ. ಆದರೆ ಪಟ್ಟು ಬಿಡದ ಸಚಿವರು, ''ಇಲ್ಲ ಸರ್, ಈ ವಿಷಯದಲ್ಲಿ ನಮಗೆ ಕ್ಲಾರಿಟಿ ಬೇಕು. ಮುಖ್ಯಮಂತ್ರಿ ಹುದ್ದೆಯನ್ನು ಹಂಚಿಕೆ ಮಾಡುವ ಒಪ್ಪಂದವಾಗಿದೆಯೇ ಎಂಬುದು ಸ್ಪಷ್ಟವಾಗಬೇಕು. ಯಾಕೆಂದರೆ ಇವತ್ತು ಸಿದ್ದರಾಮಯ್ಯ ಮತ್ತು ನಿಮ್ಮ ಕಾರಣಕ್ಕಾಗಿ ಅಹಿಂದ ವರ್ಗಗಳ ಸಾಲಿಡ್ಡು ಶಕ್ತಿ ಕಾಂಗ್ರೆಸ್ ಜತೆಗಿದೆ. ಹೀಗಾಗಿ, ಒಂದೋ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಮುಂದುವರಿಯಬೇಕು. ಇಲ್ಲ ಅವರು ಇಳಿಯಲೇಬೇಕು ಎಂದಾದರೆ ನೀವು ಆ ಜಾಗಕ್ಕೆ ಬರಬೇಕು. ಇದು ಸಾಧ್ಯವಾಗದೆ ಹೋದರೆ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಮರಳಿ ಅಧಿಕಾರಕ್ಕೆ ಬರುವುದಿರಲಿ, ಪ್ರಬಲ ಪ್ರತಿಪಕ್ಷವಾಗಿ ನೆಲೆಯೂರಲೂ ಸಾಧ್ಯವಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಒಕ್ಕಲಿಗ ಸಮುದಾಯದ ಸಾಲಿಡ್ಡು ಶಕ್ತಿ ಕಾಂಗ್ರೆಸ್ ಜತೆ ಇರುತ್ತದೆ ಎಂಬ ಭ್ರಮೆ ಬೇಡವೇ ಬೇಡ. ಇದು ಲೋಕಸಭಾ ಚುನಾವಣೆಯಲ್ಲಿ ಸ್ಪಷ್ಟವಾಗಿದೆ. ಹೀಗಿದ್ದ ಮೇಲೆ ಸಿದ್ದರಾಮಯ್ಯ ಅವರ ಜಾಗಕ್ಕೆ ಡಿ.ಕೆ.ಶಿವಕುಮಾರ್ ಬಂದರೆ ಕಾಂಗ್ರೆಸ್ಸಿಗೆ ಭವಿಷ್ಯವಿರಲು ಸಾಧ್ಯವೇ ಇಲ್ಲ'' ಎಂದು ವಿವರಿಸಿದ್ದಾರೆ.

ಸತೀಶ್ ಜಾರಕಿಹೊಳಿ ಮತ್ತು ಕೆ.ಎನ್.ರಾಜಣ್ಣ ತಮ್ಮನ್ನು ಪ್ರತ್ಯೇಕವಾಗಿ ಭೇಟಿ ಮಾಡಿದರೂ ಇಬ್ಬರ ಧ್ವನಿ ಒಂದೇ ಆಗಿರುವುದನ್ನು ಗಮನಿಸಿದ ಖರ್ಗೆಯವರು ಹೆಚ್ಚು ಮಾತನಾಡಲಿಲ್ಲವಂತೆ. ಆದರೆ ಸಿದ್ದರಾಮಯ್ಯ ಅವರು ಕೆಳಗಿಳಿದು ಅವರ ಜಾಗಕ್ಕೆ ಡಿಕೆಶಿ ಬರುವುದೇ ಆದಲ್ಲಿ ರಾಜ್ಯ ಕಾಂಗ್ರೆಸ್ಸಿನ ಆತ್ಮಹತ್ಯಾದಳ ಪಕ್ಷ ತೊರೆಯುವುದು ಗ್ಯಾರಂಟಿ ಎಂಬುದು ಅವರಿಗೆ ಖಚಿತವಾಗಿದೆ. ಇವತ್ತು ದೇಶದ ರಾಜಧಾನಿ ದಿಲ್ಲಿಯ ಮೇಲೆ ಅಧಿಪತ್ಯ ಸಾಧಿಸಿರುವ ಬಿಜೆಪಿ ವರಿಷ್ಠರು ಕರ್ನಾಟಕದಲ್ಲಿರುವ ಕಾಂಗ್ರೆಸ್ ಸರಕಾರವನ್ನೂ ಬಡಿದು ಬಾಯಿಗೆ ಹಾಕಿಕೊಳ್ಳಲು ತಯಾರಾಗಿರುವಾಗ ಅವರಿಗೆ ನಾವೇ ಅವಕಾಶ ಮಾಡಿಕೊಡಬಾರದು ಅಂತ ಅವರು ರಾಹುಲ್ ಗಾಂಧಿ ಅವರಿಗೆ ವಿವರಿಸಿದ್ದಾರೆ ಎಂಬುದು ಲೇಟೆಸ್ಟು ಸುದ್ದಿ.

**ಕುಮಾರಣ್ಣನ ಲೇಟೆಸ್ಟು ಸಂಕಟ**

ಇನ್ನು ಕೇಂದ್ರದ ಉಕ್ಕು ಮತ್ತು ಕೈಗಾರಿಕಾ ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಹೊಸ ಸಂಕಟ ಅನುಭವಿಸುತ್ತಿದ್ದಾರೆ. ಅವರ ಈ ಸಂಕಟಕ್ಕೆ ರಾಜ್ಯ ಸರಕಾರ ಕಾರಣ. ಯಾಕೆಂದರೆ ಕರ್ನಾಟಕದಲ್ಲಿ ಹೊಸ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಕನ್ನಡಿಗರಿಗೆ ಹೆಚ್ಚು ಉದ್ಯೋಗ ಸೃಷ್ಟಿ ಮಾಡುವ, ಆ ಮೂಲಕ ರಾಜ್ಯದ ಅಭಿವೃದ್ಧಿಗೆ ನೆರವಾಗುವ ಲೆಕ್ಕಾಚಾರ ಕುಮಾರಸ್ವಾಮಿ ಅವರಿಗಿದೆ. ಆದರೆ ಈ ವಿಷಯದಲ್ಲಿ ರಾಜ್ಯ ಸರಕಾರದಿಂದ ನಿರೀಕ್ಷಿತ ಸ್ಪಂದನೆ ಸಿಗುತ್ತಿಲ್ಲ ಎಂಬುದು ಅವರ ನೋವು.

ಹಾಗೆ ನೋಡಿದರೆ ಆಂಧ್ರದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ತೆಲಂಗಾಣದ ಮುಖ್ಯಮಂತ್ರಿ ರೇವಂತ ರೆಡ್ಡಿ ಅವರಿಂದ ಹಿಡಿದು ಬಹುತೇಕ ಮುಖ್ಯಮಂತ್ರಿಗಳು ತಮ್ಮ ರಾಜ್ಯಗಳಿಗೆ ಸಂಬಂಧಿಸಿದ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಪ್ರಪೋಸಲ್ಲು ಕೊಡುತ್ತಿದ್ದಾರೆ. ಈ ಪೈಕಿ ಚಂದ್ರಬಾಬು ನಾಯ್ಡು ವೈಜಾಗ್ ಸ್ಟೀಲ್ಸ್‌ನ ಸಮಸ್ಯೆಯನ್ನು ಪರಿಹರಿಸಲು ಬೆನ್ನು ಬಿದ್ದು ಕೆಲಸ ಮಾಡುತ್ತಿದ್ದರೆ, ತೆಲಂಗಾಣದ ರೇವಂತ ರೆಡ್ಡಿ ತಮ್ಮ ರಾಜ್ಯದ ಸಾರಿಗೆ ಸಂಸ್ಥೆಗೆ ಜೀವ ತುಂಬಲು ಹೊಸ ಪ್ರಪೋಸಲ್ಲು ಕೊಟ್ಟು ಅದಕ್ಕೆ ಅಂಟಿಕೊಂಡಿದ್ದಾರೆ. ಆದರೆ ಕರ್ನಾಟಕ ಸರಕಾರ ಮಾತ್ರ ಹೊಸ ಪ್ರಪೋಸಲ್ಲುಗಳನ್ನೂ ಕೊಡದೆ, ಹಳೆಯ ಪ್ರಪೋಸಲ್ಲುಗಳಿಗೆ ಶಕ್ತಿ ತುಂಬಲೂ ಬಿಡದೆ ತಮ್ಮ ವಿರುದ್ಧ ದ್ವೇಷದ ರಾಜಕಾರಣಕ್ಕಿಳಿದಿದೆ. ಆದರೆ ಇದರಿಂದ ರಾಜ್ಯಕ್ಕೆ ಆಗುವುದೇನು? ಎಂಬುದು ಕುಮಾರಸ್ವಾಮಿ ನೋವು.

ಆದರೆ ಹೀಗೆ ನೋವಾಗಿದೆ ಎಂದು ಸುಮ್ಮನೆ ಕೂರಲು ಸಾಧ್ಯವಿಲ್ಲವಲ್ಲ? ಹೀಗಾಗಿ ಸಂಕಷ್ಟದಲ್ಲಿರುವ ಕುದುರೆಮುಖ ಕಾರ್ಖಾನೆಯನ್ನು ಎನ್‌ಎಂಡಿಸಿಯಲ್ಲಿ ವಿಲೀನಗೊಳಿಸಿ ಅದಿರಿನ ಕೊರತೆಯಿಂದ ಅದನ್ನು ಬಚಾವು ಮಾಡಲು ಕುಮಾರಸ್ವಾಮಿ ಹೊರಟಿದ್ದಾರೆ. ಇದೇ ರೀತಿ ಎಚ್‌ಎಂಟಿ ಕಾರ್ಖಾನೆಯನ್ನು ಬಿಎಚ್‌ಇಎಲ್‌ನಲ್ಲಿ ವಿಲೀನಗೊಳಿಸುವ ಪ್ರಪೋಸಲ್ಲನ್ನು ಕೈಗೆತ್ತಿಕೊಂಡಿರುವ ಕುಮಾರಸ್ವಾಮಿ ಅದೇ ಕಾಲಕ್ಕೆ ಭದ್ರಾವತಿಯ ವಿಐಎಸ್‌ಎಲ್ ಫ್ಯಾಕ್ಟರಿಯ ಪುನಶ್ಚೇತನಕ್ಕೆ ದಾರಿ ಮಾಡಿಕೊಡುತ್ತಿದ್ದಾರೆ. ಹೀಗೆ ರಾಜ್ಯ ಸರಕಾರದಿಂದ ನಿರೀಕ್ಷಿತ ಸ್ಪಂದನೆ ಸಿಗದಿದ್ದರೂ, ಕೇಂದ್ರದ ಹಿಡಿತದಲ್ಲಿರುವ ರಾಜ್ಯದ ಕಾರ್ಖಾನೆಗಳಿಗೆ ಜೀವ ತುಂಬುವ ಮೂಲಕ ಸಮಾಧಾನ ಮಾಡಿಕೊಳ್ಳುವುದು ಕುಮಾರಸ್ವಾಮಿ ಅವರ ಯೋಚನೆ.

**'ವಿಜಯ'ಯುಗ ಮುಂದುವರಿಯಲಿದೆ**

ಈ ಮಧ್ಯೆ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದ ಬಗೆಗಿದ್ದ ಗೊಂದಲಗಳಿಗೆ ಬ್ರೇಕ್ ಹಾಕಿರುವ ವರಿಷ್ಠರು ವಿಜಯೇಂದ್ರ ಅವರನ್ನೇ ಮುಂದುವರಿಸಲು ನಿರ್ಧರಿಸಿದ್ದಾರೆ. ಪಕ್ಷದ ಮೂಲಗಳ ಪ್ರಕಾರ, ವಿಜಯೇಂದ್ರ ಅವರನ್ನು ಬದಲಿಸಿ ಬೇರೆ ಯಾರನ್ನು ಅಧ್ಯಕ್ಷ ಸ್ಥಾನಕ್ಕೆ ತರಬಹುದು ಅಂತ ವರಿಷ್ಠರು ಫೀಡ್ ಬ್ಯಾಕ್ ಪಡೆಯತೊಡಗಿದ್ದರು. ಅದರ ಪ್ರಕಾರ ಬಸವರಾಜ ಬೊಮ್ಮಾಯಿ, ಮುರುಗೇಶ್ ನಿರಾಣಿ ಸೇರಿದಂತೆ ಹಲವರ ಹೆಸರುಗಳು ರೇಸಿಗೆ ಬಂದಿದ್ದವು. ಆದರೆ ಇಂಥ ಎಲ್ಲ ಫೀಡ್‌ಬ್ಯಾಕುಗಳ ನಡುವೆಯೂ ಸಂಘಟನೆಯ ವಿಷಯದಲ್ಲಿ ವಿಜಯೇಂದ್ರ ಅವರಿಗೆ ಸಮಾನರಾದವರು ವರಿಷ್ಠರ ಕಣ್ಣಿಗೆ ಬಿದ್ದಿಲ್ಲ.

ಇವತ್ತು ಪಕ್ಷದ ಅಧ್ಯಕ್ಷರಾದವರಿಗೆ ಮಾಸ್ ಲೀಡರ್‌ಶಿಪ್ ಇರಬೇಕು, ಕ್ಲಾಸ್ ಲೀಡರ್‌ಶಿಪ್ ಸಾಲುವುದಿಲ್ಲ, ಆ ದೃಷ್ಟಿಯಿಂದ ವಿಜಯೇಂದ್ರ ಮುಂದುವರಿಯುವುದು ಅನಿವಾರ್ಯ. ಯಾಕೆಂದರೆ ಅಧ್ಯಕ್ಷ ಸ್ಥಾನಕ್ಕೆ ಪರಿಗಣಿಸಿದ ಬಹುತೇಕ ನಾಯಕರಿಗೆ ಸ್ವಯಂ ವರ್ಚಸ್ಸು ಇಲ್ಲ. ಆದರೆ ವಿಜಯೇಂದ್ರ ಅವರ ವಿಷಯ ಹಾಗಲ್ಲ. ಮೊದಲನೆಯದಾಗಿ ಅವರಿಗೆ ಯಡಿಯೂರಪ್ಪ ಎಂಬ ದೈತ್ಯಶಕ್ತಿಯ ನಾಮಬಲವಿದೆ. ಎರಡನೆಯದಾಗಿ ರಾಜ್ಯದ ಯಾವ ಮೂಲೆಗೆ ಹೋದರೂ ಅವರನ್ನು ಬೆಂಬಲಿಸುವ ಪಡೆ ಇದೆ. ಹೀಗಾಗಿ ಇವತ್ತಿನ ಸ್ಥಿತಿಯಲ್ಲಿ ಅವರನ್ನು ಬದಲಿಸುವುದು ಎಂದರೆ ಸುದೀರ್ಘ ಕಾಲದ ಶೀತಲ ಸಮರಕ್ಕೆ ಅವಕಾಶ ಮಾಡಿಕೊಟ್ಟಂತೆ ಎಂಬುದು ಬಿಜೆಪಿ ವರಿಷ್ಠರ ಯೋಚನೆ. ಆದ್ದರಿಂದ, ವಿಜಯೇಂದ್ರ ವಿರೋಧಿ ಪಡೆಯ ನಾಯಕ ಬಸನಗೌಡ ಪಾಟೀಲ್ ಯತ್ನಾಳ್ ಅವರ ಬಾಯಿ ಮುಚ್ಚಿಸಲು ಹೊರಟಿರುವ ಬಿಜೆಪಿ ವರಿಷ್ಠರು ಯತ್ನಾಳ್ ಅವರಿಗೆ ಶೋಕಾಸ್ ನೋಟೀಸ್ ಕೊಟ್ಟಿದ್ದಾರೆ.

ಅದೇ ರೀತಿ, ಕಳೆದ ವಾರ ವಿಜಯೇಂದ್ರ ಅವರನ್ನು ದಿಲ್ಲಿಗೆ ಕರೆಸಿಕೊಂಡ ವರಿಷ್ಠರು, ''ನೀವು ನೆಮ್ಮದಿಯಿಂದ ಕೆಲಸ ಮಾಡಿ. ಯತ್ನಾಳ್ ಅವರನ್ನು ಮುಂದಿನ ವಾರ ಸಸ್ಪೆಂಡ್ ಮಾಡೋಣ'' ಎಂದಿದ್ದಾರೆ. ಇದೇ ರೀತಿ, ''ರಾಜ್ಯ ಬಿಜೆಪಿಯ ಗೊಂದಲವನ್ನು ಬಗೆಹರಿಸಿಕೊಳ್ಳಲು ಪಕ್ಷದ ಕೋರ್ ಕಮಿಟಿ ಮತ್ತು ಪದಾಧಿಕಾರಿಗಳ ಪಟ್ಟಿಗೆ ಸರ್ಜರಿ ಅನಿವಾರ್ಯ. ಇದಕ್ಕೆ ತಯಾರಾಗಿ'' ಅಂತ ಹೇಳಿ ಕಳಿಸಿದ್ದಾರೆ.

**ಫ್ರಂಟ್‌ಲೈನಿಗೆ ಬಂದ್ರು ಗೋಪಾಲಯ್ಯ**

ಇನ್ನು ಅಚ್ಚರಿಯ ಬೆಳವಣಿಗೆಯೊಂದರಲ್ಲಿ ಮಾಜಿ ಸಚಿವ ಗೋಪಾಲಯ್ಯ ಅವರ ಹೆಸರು ಮುನ್ನೆಲೆಗೆ ಬಂದಿದೆ. ಇದಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಾರಣ. ಕಳೆದ ವಾರ ದೆಹಲಿಗೆ ಹೋದ ಸಂದರ್ಭದಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜಗತ್ ಪ್ರಕಾಶ್ ನಡ್ಡಾ ಅವರನ್ನು ಭೇಟಿಯಾದ ವಿಜಯೇಂದ್ರ, ವಿಪಕ್ಷ ನಾಯಕ ಆರ್.ಅಶೋಕ್ ವಿರುದ್ಧ ನೇರವಾಗಿಯೇ ಧ್ವನಿ ಎತ್ತಿದ್ದಾರೆ. ''ಸರ್, ಇವತ್ತು ಅಶೋಕ್ ಅವರು ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಕ್ಲೋಸ್ ಆಗಿದ್ದಾರೆ. ಹೀಗಾಗಿ ಸರಕಾರದ ವಿರುದ್ಧ ಹೋರಾಡಲು ಅವರಿಗೆ ಶಕ್ತಿ ಕಡಿಮೆ. ಸಾಲದು ಎಂಬಂತೆ, ಪಕ್ಷದ ಬಹುತೇಕ ಶಾಸಕರಿಗೆ ಅಶೋಕ್ ಅವರ ಬಗ್ಗೆ ವಿಶ್ವಾಸವಿಲ್ಲ. ಯಶವಂತಪುರದ ಶಾಸಕ ಎಸ್.ಟಿ.ಸೋಮಶೇಖರ್ ಇವತ್ತು ಪಕ್ಷದಿಂದ ಒಂದು ಕಾಲು ಹೊರಗಿಟ್ಟಿದ್ದರೆ ಅದಕ್ಕೆ ಅಶೋಕ್ ಕಾರಣ. ಬೆಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಕೃಷ್ಣಪ್ಪ ಅವರ ಲೇಟೆಸ್ಟು ಕಿರಿಕಿರಿಗಳಿಗೂ ಅಶೋಕ್ ಅವರೇ ಕಾರಣ'' ಅಂತ ವಿಜಯೇಂದ್ರ ವಿವರಿಸಿದಾಗ ''ಅವರಿಗೆ ಪರ್ಯಾಯ ನಾಯಕ ಯಾರು?'' ಅಂತ ನಡ್ಡಾ ಕೇಳಿದರಂತೆ. ಆಗ ಮಾಜಿ ಸಚಿವ, ಮಲ್ಲೇಶ್ವರದ ಶಾಸಕ ಡಾ.ಅಶ್ವತ್ಥನಾರಾಯಣ ಮತ್ತು ಮಾಜಿ ಸಚಿವ, ಮಹಾಲಕ್ಷ್ಮಿ ಲೇ ಔಟ್ ಕ್ಷೇತ್ರದ ಶಾಸಕ ಗೋಪಾಲಯ್ಯ ಅವರ ಹೆಸರುಗಳನ್ನು ವಿಜಯೇಂದ್ರ ಸೂಚಿಸಿದ್ದಾರೆ. ಈ ಪೈಕಿ ಅಶ್ವತ್ಥನಾರಾಯಣ್ ಅವರು ಸಂಘಟನೆ ಮತ್ತು ಆಡಳಿತಾತ್ಮಕ ವಿಷಯಗಳಲ್ಲಿ ಅನುಭವಿ. ಇದೇ ರೀತಿ, ಅಭಿವೃದ್ಧಿಯ ವಿಷಯಕ್ಕೆ ಬಂದರೆ ಗೋಪಾಲಯ್ಯ ರೋಲ್ ಮಾಡೆಲ್ ನಾಯಕ. ಸದಾಕಾಲ ಕೆಲಸದ ಬೆನ್ನು ಬೀಳುವ ಗೋಪಾಲಯ್ಯ ಇದೇ ಕಾರಣಕ್ಕಾಗಿ ಸರಕಾರದ ಲೋಪಗಳನ್ನು ಚೆನ್ನಾಗಿ ಅರಿತಿದ್ದಾರೆ. ಹೀಗಾಗಿ ಅವರನ್ನು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ತಂದರೆ ಒಳ್ಳೆಯದು ಅಂತ ವಿಜಯೇಂದ್ರ ವಿವರಿಸಿದ್ದಾರೆ.

ಅಂದ ಹಾಗೆ, ಅಶೋಕ್ ಅವರ ವಿಷಯದಲ್ಲಿ ವಿಜಯೇಂದ್ರ ಅವರೇಕೆ ಇಷ್ಟು ಕೋಪ ಮಾಡಿಕೊಂಡಿದ್ದಾರೆ ಅಂತ ನೋಡಿದರೆ ಅಶೋಕ್ ವಿಷಯದಲ್ಲಿ ಅವರಿಗೆ ತಲುಪುತ್ತಿರುವ ಫೀಡ್‌ಬ್ಯಾಕುಗಳೇ ಕಾರಣ ಎಂಬುದು ಸ್ಪಷ್ಟವಾಗುತ್ತದೆ. ಅದರ ಪ್ರಕಾರ ಪಕ್ಷದ ರಾಷ್ಟ್ರೀಯ ಉಪಾಧ್ಯಕ್ಷರು ಮತ್ತು ಕರ್ನಾಟಕದಲ್ಲಿ ಪಕ್ಷದ ಆಂತರಿಕ ಚುನಾವಣೆಗಳ ಉಸ್ತುವಾರಿ ಹೊತ್ತಿರುವ ಲಕ್ಷ್ಮಣ್ ಅವರಿಗೆ ನಿರಂತರವಾಗಿ ಕಂಪ್ಲೇಂಟ್ ಲೆಟರುಗಳು ಬರುತ್ತಿವೆ. ಈ ಲೆಟರುಗಳ ಹಿಂದಿರುವ ಸೂತ್ರಧಾರ ಅಶೋಕ್ ಎಂಬುದು ವಿಜಯೇಂದ್ರ ಅವರಿಗಿರುವ ಫೀಡ್‌ಬ್ಯಾಕು. ಪರಿಣಾಮ? ಅಶೋಕ್ ಅವರನ್ನು ಶತಾಯಗತಾಯ ಕೆಳಗಿಳಿಸುವುದು ವಿಜಯೇಂದ್ರ ಅವರ ಠರಾವು.

# ಪೀಳಿಗೆಯ ಪರಿ ಇಂತಿದೆ ನೋಡಾ...



ವಿಶ್ಲೇಷಣೆ

ಕೆ. ಶಶಿಕುಮಾರ್
vveditoped@gmail.com

ನಾವು ಇಷ್ಟು ವರ್ಷಗಳ ಕಾಲ, ಬದಲಾದ ಕಾಲಘಟ್ಟಕ್ಕೆ ತಕ್ಕಂತೆ ಮೊಬೈಲ್ ನೆಟ್‌ವರ್ಕ್ ಗಳಲ್ಲಿ 2ಜಿ, 3ಜಿ, 4ಜಿ ಮತ್ತು 5ಜಿಗಳನ್ನು ನೋಡಿದ್ದೇವೆ, ಅವುಗಳ ಉಪಯೋಗ ಪಡೆದಿದ್ದೇವೆ. ಮನುಷ್ಯರಲ್ಲಿಯೂ ಕಾಲಕ್ಕೆ ತಕ್ಕಂತೆ ಹೊಸ ಪೀಳಿಗೆಗಳು/ಜನರೇಷನ್‌ಗಳು ಇದ್ದದ್ದು/ಇರುವುದು ಬಹಳಷ್ಟು ಮಂದಿಗೆ ಗೊತ್ತಿಲ್ಲದಿರಬಹುದು. 2025ರ ಜನವರಿ 1ರಿಂದ 2039ರವರೆಗೂ ಹುಟ್ಟುವ ಮಕ್ಕಳನ್ನು 'ಜನರೇಷನ್ ಬೀಟಾ' ಎಂದು ಕರೆಯುತ್ತಾರೆ. ಈ ಪ್ರಭೇದದ ಕುರಿತು ತಿಳಿದುಕೊಳ್ಳುವುದಕ್ಕೂ ಮುಂಚೆ ಮಿಕ್ಕ ಪೀಳಿಗೆಗಳ ಕುರಿತು ಅರಿಯಬೇಕಾದ್ದು ಅವಶ್ಯಕ.

1925ರಿಂದ 1945ರ ವರ್ಷದವರೆಗೆ ಜನಿಸಿದ ಮಕ್ಕಳನ್ನು 'ಬಿಲ್ಡರ್ ಜನರೇಷನ್' ಅಥವಾ 'ಸೈಲೆಂಟ್ ಜನರೇಷನ್' ಎನ್ನುತ್ತಾರೆ. ಏಕೆಂದರೆ, ಎರಡನೇ ಜಾಗತಿಕ ಯುದ್ಧದ ನಂತರ ತಂತಮ್ಮ ದೇಶಗಳ ಮರುನಿರ್ಮಾಣದಲ್ಲಿ ಈ ಪೀಳಿಗೆಯವರು ಪ್ರಮುಖ ಪಾತ್ರವನ್ನು ವಹಿಸಿದ್ದರು. ಅತ್ಯಂತ ಸಂಪ್ರದಾಯಬದ್ಧರಾಗಿದ್ದ ಈ ಪೀಳಿಗೆಯವರು, ಕಠಿಣ ಪರಿಶ್ರಮದ ಕೆಲಸಗಳನ್ನು ಮಾಡುವವರಾಗಿದ್ದರು ಮತ್ತು ಇವರಲ್ಲಿನ ಪಾರಸ್ಪರಿಕ ಬಾಂಧವ್ಯದ ಕೌಶಲ ಅತ್ಯುತ್ತಮವಾಗಿತ್ತು. ಮೊದಲನೇ ಮತ್ತು ಎರಡನೇ ಮಹಾಯುದ್ಧಗಳನ್ನು ಕಂಡ ಈ ಪೀಳಿಗೆಯವರು, 1929ರ ಮಹಾ ಆರ್ಥಿಕ ಬಿಕ್ಕಟ್ಟಿನ ಕಷ್ಟಗಳನ್ನು ಅನುಭವಿಸಿದರು ಮತ್ತು ಆಟೋಮೊಬೈಲ್ ತಂತ್ರಜ್ಞಾನವನ್ನು ಜಗತ್ತಿಗೆ ಪರಿಚಯಿಸಿದರು.

1945ರಲ್ಲಿ, ಎರಡನೇ ಜಾಗತಿಕ ಯುದ್ಧದ ನಂತರ, ಭವಿಷ್ಯದ ಭರವಸೆಯಿಂದಾಗಿ ಪ್ರಪಂಚದಾದ್ಯಂತ ಮಕ್ಕಳ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬಂತು. ಈ ಪೀಳಿಗೆಯವರನ್ನು, ಅಂದರೆ 1946ರಿಂದ 1964ರವರೆಗೆ ಜನಿಸಿದ ಮಕ್ಕಳನ್ನು 'ಬೇಬಿ ಬೂಮರ್ಸ್' ಎನ್ನುತ್ತಾರೆ. 20ನೇ ಶತಮಾನದ ಮಧ್ಯಭಾಗದಲ್ಲಿ ಜನಿಸಿದ ಇವರಲ್ಲಿನ ಕಿರಿಯರು ಮತ್ತು ಹಿರಿಯರು 2025ರ ವೇಳೆಗೆ ಕ್ರಮವಾಗಿ 61 ಮತ್ತು 79 ವರ್ಷ ವಯಸ್ಸಿನವರಾಗಿರುತ್ತಾರೆ. ಹೆಚ್ಚಿನ 'ಬೇಬಿ ಬೂಮರ್‌ಗಳು' ಶ್ರೇಷ್ಠ ಪೀಳಿಗೆಯ ಮಕ್ಕಳಾಗಿರುತ್ತಾರೆ. ಇವರ ಅವಧಿಯಲ್ಲಿ, ಅಂದರೆ 1950-60ರ ದಶಕಗಳಲ್ಲಿ, ಜಗತ್ತಿನ ಶೀತಲಸಮರದ ಸೈದ್ಧಾಂತಿಕ ಮುಖಾಮುಖಿಯ ಭಾಗವಾಗಿ ಹಾಗೂ ಅಂತರ್ಯುದ್ಧದ ಅವಧಿಯ ಮುಂದುವರಿಕೆಯಾಗಿ, ಆರ್ಥಿಕ ಸಮೃದ್ಧಿ ಮತ್ತು ತ್ವರಿತ ತಾಂತ್ರಿಕ ಪ್ರಗತಿಯು ಸಾಕ್ಷಿಯಾಗಿತ್ತು. ಈ ಪೀಳಿಗೆಯವರು ಮುಖ್ಯವಾಗಿ ವಾಕ್ಚಾತುರ್ಯದ ಸೃಷ್ಟಿಗೆ ಹೆಸರಾದರು. ಚೀನಾದಲ್ಲಿ ಬೂಮರ್‌ಗಳು ಸಾಂಸ್ಕೃತಿಕ ಕ್ರಾಂತಿಯ ಮೂಲಕ ಬದುಕಿದ್ದರು ಹಾಗೂ ವಯಸ್ಕರಾಗಿದ್ದಾಗ 'ಒಂದು ಕುಟುಂಬಕ್ಕೆ ಒಂದು ಮಗು' ನೀತಿಗೆ ಒಳಪಟ್ಟರು. ಈ ಬೆಳವಣಿಗೆಗಳು ಬೂಮರ್‌ಗಳ ಗ್ರಹಿಕೆಗಳ ಮೇಲೆ ಪ್ರಭಾವ ಬೀರಿದವು. ಯುರೋಪ್ ಮತ್ತು ಉತ್ತರ ಅಮೆರಿಕದಲ್ಲಿ, ಎರಡನೇ ಜಾಗತಿಕ ಯುದ್ಧದ ನಂತರ ವಸತಿ ಮತ್ತು ಶಿಕ್ಷಣ ವಲಯದಲ್ಲಿ ಹೆಚ್ಚಿದ ಶ್ರೀಮಂತಿಕೆ ಹಾಗೂ ವ್ಯಾಪಕ ಸರಕಾರಿ ಸಬ್ಸಿಡಿಗಳ ಪರಿಣಾಮವಾಗಿ ಗಣನೀಯ ಸಂಖ್ಯೆಯ ಬೂಮರ್‌ಗಳು ಪ್ರಬುದ್ಧತೆಯನ್ನು ಮೆರೆದರು ಮತ್ತು ಪ್ರಪಂಚವು ಕಾಲಾನಂತರದಲ್ಲಿ ಸುಧಾರಿಸುತ್ತದೆ ಎಂದು ಪ್ರಾಮಾಣಿಕವಾಗಿ ನಿರೀಕ್ಷಿಸುತ್ತಾ ಬೆಳೆದರು.

1964ರಿಂದ 1979ರವರೆಗೆ ಜನಿಸಿದವರಿಗೆ 'ಜನರೇಷನ್ ಎಕ್ಸ್' (ಜೆನ್-ಎಕ್ಸ್) ಎನ್ನುತ್ತಾರೆ. ಅಲ್ಲಿಯವರೆಗೂ ಇದ್ದಂಥ ಸಂಪ್ರದಾಯಗಳನ್ನು ಮತ್ತು ವ್ಯವಸ್ಥೆಗಳನ್ನು ಎದುರಿಸಿ ಇವರು ಪ್ರಶ್ನಿಸುತ್ತಿದ್ದ ಕಾರಣ ಈ ಪರಿಭಾಷೆ ಚಾಲ್ತಿಗೆ ಬಂತು. 2019ರ ಹೊತ್ತಿಗೆ, ಅಮೆರಿಕದಲ್ಲಿ 65.2 ಮಿಲಿಯನ್ 'ಜನರೇಷನ್ ಎಕ್ಸ್‌ಗಳು' ಇದ್ದಾರೆ ಎಂಬ ಮಾಹಿತಿ ಲಭಿಸಿದೆ; ಇವರಲ್ಲಿ ಹೆಚ್ಚಿನವರು 'ಸೈಲೆಂಟ್ ಜನರೇಷನ್' ಮತ್ತು ಆರಂಭಿಕ 'ಬೇಬಿ ಬೂಮರ್'ಗಳ ಮಕ್ಕಳು. ರಾಜಕೀಯವಾಗಿ ಹೇಳುವುದಾದರೆ, 'ಜನರೇಷನ್ ಎಕ್ಸ್' ಪೀಳಿಗೆಯವರು ಸೋವಿಯತ್ ಒಕ್ಕೂಟ, ಮಧ್ಯ ಹಾಗೂ ಪೂರ್ವ ಯುರೋಪಿನ ದೇಶಗಳಲ್ಲಿ ಕಮ್ಯುನಿಸಂನ ಕೊನೆಯ ದಿನಗಳನ್ನು ಅನುಭವಿಸಿದರು, ಈ ಪ್ರದೇಶಗಳಲ್ಲಿ ಬಂಡವಾಳಶಾಹಿ ಪರಿವರ್ತನೆಗೆ ಸಾಕ್ಷಿಯಾದರು. ಪಾಶ್ಚಿಮಾತ್ಯ ಜಗತ್ತಿನ ಹೆಚ್ಚಿನ ಭಾಗಗಳಲ್ಲಿ ಸದರಿ ಅವಧಿಯನ್ನು, ಸಾಂಪ್ರದಾಯಿಕ ಮತ್ತು ಮುಕ್ತ ಮಾರುಕಟ್ಟೆ ಅರ್ಥಶಾಸ್ತ್ರದ ಪ್ರಾಬಲ್ಯದಿಂದ ವ್ಯಾಖ್ಯಾನಿಸಲಾಗಿದೆ.




1980 ಮತ್ತು 1995ರ ನಡುವೆ ಹುಟ್ಟಿದವರನ್ನು 'ಜನರೇಷನ್ ವೈ' ಅಥವಾ 'ಮಿಲೇನಿಯಲ್ಸ್' ಎನ್ನುತ್ತಾರೆ. 'ಮಿಲೇನಿಯಲ್ಸ್' ಎನ್ನಲು ಕಾರಣ- ಇವರು ತಮ್ಮ ಜೀವನದ ಪ್ರಮುಖ ಘಟ್ಟಗಳನ್ನು 20ನೇ ಶತಮಾನ ಮುಗಿದು 21ನೇ ಶತಮಾನದಲ್ಲಿ ಅನುಭವಿಸುತ್ತಿದ್ದಾರೆ. ಇಂಟರ್‌ನೆಟ್ ಅನ್ನು ಬಳಸಿದ ಮೊದಲ ಪೀಳಿಗೆಯಾಗಿ 'ಮಿಲೇನಿಯಲ್ಸ್' ಅನ್ನು ಜಾಗತಿಕವಾಗಿ ಗುರುತಿಸಲಾಗಿದೆ. ಅಂದರೆ, ಇಂಟರ್‌ನೆಟ್, ಮೊಬೈಲ್ ಸಾಧನಗಳು, ಸಾಮಾಜಿಕ ಮಾಧ್ಯಮ ಮತ್ತು ತಂತ್ರಜ್ಞಾನದ ಹೆಚ್ಚಿನ ಬಳಕೆ ಹಾಗೂ ಪರಿಚಿತತೆಯೊಂದಿಗೆ ಈ ಪೀಳಿಗೆಯವರನ್ನು ಗುರುತಿಸಲಾಗುತ್ತದೆ. ಪ್ರಪಂಚದಾದ್ಯಂತದ ಮಿಲೇನಿಯಲ್‌ಗಳು ತಮ್ಮ ಉದ್ಯೋಗ ಜೀವನವನ್ನು ಪ್ರಾರಂಭಿಸಿದಾಗಿನಿಂದ ಗಮನಾರ್ಹ ಆರ್ಥಿಕ ಅಡಚಣೆಗಳನ್ನು ಅನುಭವಿಸಿದ್ದಾರೆ. ಇವರಲ್ಲನೇಕರು, ಮಹಾನ್ ಆರ್ಥಿಕ ಹಿಂಜರಿತ ಮತ್ತು ಕೋವಿಡ್-19ರ ಹಿಂಜರಿತದ ನಂತರ, ಹೆಚ್ಚಿನ ಮಟ್ಟದ ನಿರುದ್ಯೋಗ ಸಮಸ್ಯೆಯನ್ನು ಅನುಭವಿಸುತ್ತಿದ್ದಾರೆ.

1996ರಿಂದ 2010ರ ನಡುವೆ ಜನಿಸಿದವರನ್ನು 'ಜನರೇಷನ್ ಝಡ್' ಅಥವಾ 'ಜೂಮರ್ಸ್' ಎನ್ನುತ್ತಾರೆ. ಪೂರ್ತಿಯಾಗಿ ಡಿಜಿಟಲ್ ಪ್ರಪಂಚದಲ್ಲಿಯೇ ಬೆಳೆದ ಮೊದಲ ಪೀಳಿಗೆ ಇದಾಗಿದ್ದು, ಹಿಂದಿನ ತಲೆಮಾರುಗಳಿಗಿಂತ ನಿಧಾನಗತಿಯಲ್ಲಿ ಇದು ಬದುಕುತ್ತಿದೆ. ಈ ಪೀಳಿಗೆಯವರು ಶಾಲೆ ಮತ್ತು ಉದ್ಯೋಗದ ನಿರೀಕ್ಷೆಗಳ ಮೇಲೆ ಹೆಚ್ಚು ಗಮನಹರಿಸಿರುವವರಾಗಿದ್ದು, ಈ ಗುಂಪಿನವರಲ್ಲಿ ಅಲರ್ಜಿಯ ಹರಡುವಿಕೆ ಮತ್ತು ನಿದ್ರಾಹೀನತೆಯು ಹೆಚ್ಚಾಗಿ ವರದಿಯಾಗಿದೆ. ಅನೇಕ ದೇಶಗಳಲ್ಲಿ, ಹಳೆಯ ತಲೆಮಾರಿನವರಿಗೆ ಹೋಲಿಸಿದಾಗ ಈ ಪೀಳಿಗೆಯವರು ಮನೋವೈದ್ಯಕೀಯ ಅಸ್ವಸ್ಥತೆಗಳಿಂದ ಬಳಲುತ್ತಿರುವ ಸಾಧ್ಯತೆಗಳು ಹೆಚ್ಚಿವೆ.

2010ರಿಂದ 2024ರ ಡಿಸೆಂಬರ್ 31ರ ನಡುವೆ ಜನಿಸಿದ ಪೀಳಿಗೆಯನ್ನು 'ಜನರೇಷನ್ ಆಲ್ಫಾ' ಎನ್ನುವರು. ವಿಶ್ವಾದ್ಯಂತ ಫಲವತ್ತತೆಯ ದರಗಳು ಕುಸಿಯುತ್ತಿರುವ ಸಮಯದಲ್ಲಿ 'ಆಲ್ಫಾ ಪೀಳಿಗೆಯವರು' ಜನಿಸಿದ್ದು; ಇವರಲ್ಲನೇಕರು ಚಿಕ್ಕ ಮಕ್ಕಳಾಗಿದ್ದಾಗ ಕೋವಿಡ್-19 ಸಾಂಕ್ರಾಮಿಕ ರೋಗದ ಭೀಕರ ಪರಿಣಾಮಗಳನ್ನು ಅನುಭವಿಸಿದ್ದಾರೆ. ಇಲೆಕ್ಟ್ರಾನಿಕ್ ತಂತ್ರಜ್ಞಾನ, ಸಾಮಾಜಿಕ ನೆಟ್‌ವರ್ಕ್‌ಗಳು ಮತ್ತು ಸ್ಟ್ರೀಮಿಂಗ್ ಸೇವೆಗಳಿಂದಾಗಿ ಈ ಪೀಳಿಗೆಯವರು ಪ್ರಾಬಲ್ಯ ಹೊಂದಿದ್ದಾರೆ. ಆದರೆ, ಸಾಂಪ್ರದಾಯಿಕ ದೂರದರ್ಶನ ಮಾಧ್ಯಮದ ವೀಕ್ಷಣೆಯಲ್ಲಿ ಈ ಪೀಳಿಗೆಯವರ ಆಸಕ್ತಿ ಕುಸಿಯುತ್ತಿದೆ! ತರಗತಿಯ ಕೊಠಡಿಗಳು ಮತ್ತು ಜೀವನದ ಇತರ ಮಗ್ಗುಲುಗಳಲ್ಲಿ ತಂತ್ರಜ್ಞಾನದ ಬಳಕೆಯಲ್ಲಿ ಕಂಡುಬಂದಿರುವ ಬದಲಾವಣೆಗಳು, ಹಿಂದಿನ ತಲೆಮಾರುಗಳಿಗೆ ಹೋಲಿಸಿದರೆ ಈ ಪೀಳಿಗೆಯವರಲ್ಲಿ ಹೆಚ್ಚಾಗಿದೆ.

ಇನ್ನು, 'ಜನರೇಷನ್ ಬೀಟಾ' ಇತ್ತೀಚೆಗಷ್ಟೇ ಜನ್ಮತಾಳಿದ ಪೀಳಿಗೆಯಾಗಿದೆ. ಭಾರತದಲ್ಲಿ ಜನಿಸಿದ 'ಬೀಟಾ ಪೀಳಿಗೆ'ಯ ಮೊದಲ ಮಗುವಿನ ಹೆಸರು 'ಫ್ರಾಂಕಿ'. 2025ರ ಜನವರಿ 1ರಂದು ಮಿಜೋರಾಂ ರಾಜಧಾನಿ ಐಜ್ವಾಲ್‌ನಲ್ಲಿ ಈ ಮಗು ಜನಿಸಿತು! 'ಬೀಟಾ' ಪೀಳಿಗೆಯ ಮಕ್ಕಳು 'ಮುಂಬರಿಕೆಯ ಕೃತಕ ಬುದ್ಧಿಮತ್ತೆ' (Advanced Artificial Intelligence) ಅಪ್ಲಿಕೇಷನ್‌ಗಳ ಮಧ್ಯೆ ಬೆಳೆಯಲಿದ್ದಾರೆ. 'ಜನರೇಷನ್ ಆಲ್ಫಾ' ಎಂಬ ಹೆಸರು ನೀಡಿದ ಮಾರ್ಕ್ ಮೆಕ್ ಕ್ರಿಂಡಲ್‌ರವರೇ 'ಜನರೇಷನ್ ಬೀಟಾ' ಹೆಸರನ್ನೂ ನೀಡಿದ್ದಾರೆ. ಇವರ ಪ್ರಕಾರ, 2035ರ ವೇಳೆಗೆ ಈ ಪೀಳಿಗೆಯವರ ಸಂಖ್ಯೆಯು ವಿಶ್ವದ ಜನಸಂಖ್ಯೆಯಲ್ಲಿ ಶೇ.16ರಷ್ಟಿರುತ್ತದೆ. ಈ ಪೀಳಿಗೆಯವರ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ/ಅಧ್ಯಯನ ನಡೆಸುತ್ತಿರುವವರಲ್ಲಿ ಜೇಸನ್ ಡೋರ್ಸೆ ಮುಖ್ಯರು.

ಪ್ರತಿ 15-20 ವರ್ಷಗಳಿಗೊಮ್ಮೆ ಹೀಗೆ ಪೀಳಿಗೆಗಳು ಬದಲಾಗಲಿದ್ದು, ಪ್ರತಿ ಪೀಳಿಗೆಯಲ್ಲೂ ಹೊಸ ಹೊಸ ನೋಟಗಳು/ಪದ್ಧತಿಗಳು ಕಾಣಬರಲಿವೆ ಮತ್ತು ತಂತ್ರಜ್ಞಾನದಲ್ಲಿ ಬದಲಾವಣೆಯಾಗಲಿದೆ. ಸಾಮಾಜಿಕ ಘಟನಾವಳಿಗಳ ಆಧಾರದ ಮೇಲೆ ಹೊಸ ಪೀಳಿಗೆಗಳಿಗೆ ಹೆಸರುಗಳನ್ನು ನೀಡಲಾಗುತ್ತದೆ. ಇತ್ತೀಚೆಗಷ್ಟೇ ಅಸ್ತಿತ್ವಕ್ಕೆ ಬಂದಿರುವ 'ಜನರೇಷನ್ ಬೀಟಾ' ಕುರಿತು ಸಾಕಷ್ಟು ನಿರೀಕ್ಷೆಗಳಿವೆ. ಅತ್ಯಾಧುನಿಕ ತಂತ್ರಜ್ಞಾನಗಳ ನಡುವೆಯೇ ಬೆಳೆಯಲಿರುವ ಈ ಪೀಳಿಗೆಯವರು ಹಿಂದಿನ ಸಂಪ್ರದಾಯಗಳನ್ನು ಪಾಲಿಸುತ್ತಾರೋ ಇಲ್ಲವೋ ಎಂಬುದನ್ನು ಕುತೂಹಲದಿಂದ ಕಾದುನೋಡುವಂತಾಗಿದೆ.

**(ಲೇಖಕರು ಹವ್ಯಾಸಿ ಬರಹಗಾರರು)**

## ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

### ಸೂಕ್ತ ಕ್ರಮ ಕೈಗೊಳ್ಳಲಿ

ದೆಹಲಿ ರೈಲು ನಿಲ್ದಾಣದಲ್ಲಿ ನಡೆದ ಕಾಲ್ತುಳಿತದ ದುರ್ಘಟನೆಯು ಹಲವಾರು ಕುಟುಂಬಗಳಿಗೆ ಆಘಾತ ತಂದಿದೆ. ಇದು ನಿಜಕ್ಕೂ ದುಃಖದ ಸಂಗತಿ. ಕೊನೆಯ ಕ್ಷಣದಲ್ಲಿ ಪ್ಲಾಟ್‌ಫಾರ್ಮ್ ಬದಲಾದ ಪರಿಣಾಮ ಜನರಲ್ಲಿ ನೂಕುನುಗ್ಗಲು ಉಂಟಾಗಿ, ಕಾಲ್ತುಳಿತ ಸಂಭವಿಸಿ, ಕೆಲ ಪ್ರಯಾಣಿಕರು ಅಸುನೀಗಿದರು, ಮತ್ತೆ ಕೆಲವರು ಗಾಯಗೊಂಡರು ಎನ್ನಲಾಗಿದೆ. ವಾಡಿಕೆಯಂತೆ ಕೇಂದ್ರ ಸರಕಾರ ಮತ್ತು ಬಿಜೆಪಿಯ ನಾಯಕರ ವತಿಯಿಂದ ಈ ದುರ್ಘಟನೆಯ ಕುರಿತಾಗಿ ದುಃಖ ವ್ಯಕ್ತವಾಗಿದೆ, ಪರಿಹಾರವೂ ಘೋಷಿಸಲ್ಪಟ್ಟಿದೆ. ತನಿಖೆ ನಡೆಸುವ ಭರವಸೆಯೂ ಹೊಮ್ಮಿದೆ. ಆದರೆ ವಿರೋಧ ಪಕ್ಷದ ಕೆಲವು ನಾಯಕರು ಈ ದುರ್ಘಟನೆಯನ್ನು ರಾಜಕೀಯೀಕರಣಗೊಳಿಸಲು ಯತ್ನಿಸುತ್ತಿರುವುದು ವಿಷಾದನೀಯ. ಈ ದುರಂತದಲ್ಲಿ ಅಸುನೀಗಿದವರಿಗೆ ಅವರು ಸೌಜನ್ಯಕ್ಕಾದರೂ ಸಂತಾಪ ವ್ಯಕ್ತಪಡಿಸದೆ, ರೈಲ್ವೆ ಇಲಾಖೆ ಮತ್ತು ಕೇಂದ್ರ ಸರಕಾರದ ಕಾರ್ಯವೈಖರಿಯನ್ನು ಟೀಕಿಸುವುದರಲ್ಲಿ ತಲ್ಲೀನರಾಗಿರುವುದಕ್ಕೆ ಏನನ್ನುವುದು?! ಇಂಥ ಸಂದರ್ಭಗಳಲ್ಲಿ ರಾಜಕೀಯದ ಆರೋಪ-ಪ್ರತ್ಯಾರೋಪಗಳಿಗಿಂತ, ಘಟನೆಯ ಬಗೆಗೆ ನಿಖರ ತನಿಖೆ ನಡೆಸುವ ಮತ್ತು ಭವಿಷ್ಯದಲ್ಲಿ ಇಂಥ ದುರ್ಘಟನೆಗಳಾಗದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಚರ್ಚಿಸಬೇಕಲ್ಲವೇ? ರೈಲ್ವೆ ಇಲಾಖೆಯೂ ತನ್ನ ನಿರ್ವಹಣಾ ವ್ಯವಸ್ಥೆಯನ್ನು ಪರಿಷ್ಕರಿಸಿ, ಸಾರ್ವಜನಿಕರ ಸುರಕ್ಷತೆಗೆ ಹೆಚ್ಚಿನ ಪ್ರಾಮುಖ್ಯ ನೀಡುವ ಅವಶ್ಯಕತೆಯಿದೆ.

**- ಜಿ.ನಾಗೇಂದ್ರ ಕಾವೂರು, ಸಂಡೂರು**

### ಬಹಿರಂಗ ಏಕೆ?

ಕೆಲ ರಾಜಕಾರಣಿಗಳ ಪ್ರತಿಯೊಂದು ನಡೆ-ನುಡಿಯೂ ವಾಗ್ವಾದಕ್ಕೆ ನಾಂದಿಯಾಗಿ, ರಾಜಕಾರಣವು ತನ್ನ ಗಾಂಭೀರ್ಯವನ್ನು ಕಳೆದುಕೊಳ್ಳುತ್ತಿರುವುದು ವಿಷಾದನೀಯ. ಯುದ್ಧದಲ್ಲಿ ಸತ್ತವರ ಅಂಕಿ-ಸಂಖ್ಯೆಗಳನ್ನು ಎಂದೂ ಯಥಾವತ್ತಾಗಿ ನೀಡಬಾರದು; ಈ ಪರಿಪಾಠವು ಜನರಲ್ಲಿ ಭಯಭೀತಿಯನ್ನು ಸೃಷ್ಟಿಸುತ್ತದೆ ಹಾಗೂ ಸೈನಿಕರಲ್ಲಿ ಧೈರ್ಯ ಉಡುಗಿಸಿ ಕೆಟ್ಟ ಪರಿಣಾಮವನ್ನು ಬೀರುತ್ತದೆ ಎಂಬುದು ಪ್ರಾಜ್ಞರ ವಿಶ್ಲೇಷಣೆ.

ತ್ರೇತಾಯುಗದಲ್ಲಿ ರಾವಣನೂ, ಯುದ್ಧದಲ್ಲಿ ಸತ್ತವರ ದೇಹಗಳನ್ನು ಸಮುದ್ರಕ್ಕೆ ಎಸೆದು, 'ನಾವೇ ಜಯಿಸುತ್ತಿದ್ದೇವೆ' ಎಂದು ಸಾರಿಹೇಳಿ ಸೈನಿಕರಲ್ಲಿ ರಣೋತ್ಸಾಹವನ್ನು ತುಂಬುತ್ತಿದ್ದ ಎಂದು ರಾಮಾಯಣದಲ್ಲಿ ಉಲ್ಲೇಖವಿದೆ. ನಮ್ಮಲ್ಲಿಯೂ ರೈಲು-ಬಸ್ಸು ಅಪಘಾತಗಳಲ್ಲಿ, ಕೋವಿಡ್ ಮಹಾಮಾರಿ ಎರಗಿದ ಸಂದರ್ಭದಲ್ಲಿ ನೂರು ಜನರು ಬಲಿಯಾದರೆ 'ಹತ್ತು ಸಾವು' ಎನ್ನುವ ಪರಿಪಾಠವಿತ್ತು. ಕೋಮುಗಲಭೆಗೆ ಬಲಿಯಾದವರ ಸಂಖ್ಯೆ, ಕುಲಗೋತ್ರ ಇತ್ಯಾದಿಗಳನ್ನು ಸರಕಾರವೂ ಕೊಡುತ್ತಿರಲಿಲ್ಲ, ಪತ್ರಿಕೆಗಳೂ ಬಹಿರಂಗಪಡಿಸುತ್ತಿರಲಿಲ್ಲ, ಆದರೆ ರಾಜಕೀಯದ ಕೆಸರೆರಚಾಟದಲ್ಲಿ ಈ ಗಾಂಭೀರ್ಯವೀಗ ಮರೆಯಾಗಿದೆ. ನಲವತ್ತೈದು ಕೋಟಿ ಯಾತ್ರಾರ್ಥಿಗಳಿದ್ದ ಪ್ರಯಾಗರಾಜ್‌ನ ಮಹಾ ಕುಂಭಮೇಳದಲ್ಲಿ ಕಾಲ್ತುಳಿತಕ್ಕೆ ಸಿಲುಕಿ ತೊಂದರೆಗೊಳಗಾದವರ, ಮಡಿದವರ ಸಂಖ್ಯೆ ಸಾವಿರವಲ್ಲ, ಹತ್ತು ಸಾವಿರವಾದರೂ, ನಲವತ್ತೈದು ಕೋಟಿಗೆ ಹೋಲಿಸಿದರೆ ಅದು ಏನೂ ಅಲ್ಲ. ಕರ್ನಾಟಕದಿಂದಲೇ ಹೋಗಿ ಬಂದ ಲಕ್ಷಾಂತರ ಭಕ್ತರಿದ್ದರೂ, ಅವರು ಅಲ್ಲಿಯ ಭಕ್ತಿಭಾವವನ್ನು ಕಣ್ಣು ತುಂಬಿ ಹೇಳುತ್ತಾರೆಯೇ ವಿನಾ, ತೊಂದರೆಗಳನ್ನು ವಿವರಿಸುವುದಿಲ್ಲ, ಆದರೆ ನಮ್ಮ ರಾಜಕಾರಣಿಗಳಿಗೆ ಮಾತ್ರ ಸತ್ತವರ ನಿಖರ ಸಂಖ್ಯೆಯಲ್ಲಿಯೇ ಆಸಕ್ತಿ!

**- ಸತ್ಯಬೋಧ, ಬೆಂಗಳೂರು**

### ನೋವನ್ನು ಮರೆಯಲುಂಟೇ?

ಬೆಂಗಳೂರಿನಲ್ಲಿ ಇತ್ತೀಚೆಗಷ್ಟೇ ನಡೆದ 'ಇನ್‌ವೆಸ್ಟ್ ಕರ್ನಾಟಕ' ಕಾರ್ಯಕ್ರಮದಲ್ಲಿ ನಾನಾ ದೇಶಗಳವರನ್ನು ಒಳಗೊಂಡಂತೆ ಭಾರತದ ಉದ್ಯಮಿಗಳೂ ಸೇರಿ 4 ಲಕ್ಷ ಕೋಟಿ ರುಪಾಯಿಗಳ ಹೂಡಿಕೆಗೆ ಒಲವು ತೋರಿಸಿರುವುದು ವರದಿಯಾಗಿದೆ. ದೇಶದ ಮತ್ತು ರಾಜ್ಯದ ಅಭಿವೃದ್ಧಿಗೆ ಇದು ಅಗತ್ಯ ಎಂದೆನಿಸುತ್ತದೆ.

ಆದರೆ ಇನ್ನೊಂದು ಆಯಾಮದಲ್ಲಿ ಯೋಚಿಸಿದಾಗ, ಈ ಉದ್ಯಮಗಳಿಗೆ ಬೇಕಾಗುವ ಭೂಮಿ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಹೇಗೆ? ಅನ್ನದಾತರ ಭೂಮಿಯನ್ನು ಎಸ್‌ಇಜಡ್ ಹೆಸರಿನಲ್ಲಿ ಕಿತ್ತುಕೊಂಡು ಕೈಗಾರಿಕೆಗಳನ್ನು ಹುಟ್ಟುಹಾಕುತ್ತಾ ಸಾಗಿದರೆ, ಭವಿಷ್ಯದಲ್ಲಿ ಆಹಾರದ ಅಭಾವ ಒದಗಿದರೆ ಮಾಡೋದೇನು? ಎಂಬ ಪ್ರಶ್ನೆಗಳೂ ಉದ್ಭವಿಸುತ್ತವೆ. ಸಾಕಷ್ಟು ವರ್ಷಗಳ ಹಿಂದೆ, ವ್ಯಾಪಾರ ಮಾಡಲೆಂದು ನಮ್ಮ ದೇಶಕ್ಕೆ ಬಂದ 'ಈಸ್ಟ್ ಇಂಡಿಯಾ ಕಂಪನಿ' ಭಾರತೀಯರನ್ನೇ ಬಡಿದು ಬಾಯಿಗೆ ಹಾಕಿಕೊಂಡು ಮೆರೆದಿದ್ದನ್ನು ಮರೆಯಬಾರದು. ಆದ್ದರಿಂದ, 'ಇನ್‌ವೆಸ್ಟ್ ಕರ್ನಾಟಕ' ಅಥವಾ 'ಇನ್‌ವೆಸ್ಟ್ ಇಂಡಿಯಾ' ಎಂಬ ಹೆಸರಿನಲ್ಲಿ ಪರದೇಶಿಗರಿಗೆ ರತ್ನಗಂಬಳಿ ಹಾಸುವ ಮುನ್ನ ನಮ್ಮವರು ಸಾಕಷ್ಟು ಯೋಚಿಸಬೇಕಿದೆ. ಹಾಗೊಮ್ಮೆ ತೀರಾ ಅಗತ್ಯ ಎನಿಸಿದಲ್ಲಿ, ನಮಗೆ ಆಪತ್ತಾಗದ ರೀತಿಯಲ್ಲಿ ಸೂಕ್ತ ವ್ಯವಸ್ಥೆಯನ್ನು ಮಾಡಲಿ.

**- ಪತ್ತಂಗಿ ಎಸ್.ಮುರಳಿ, ಬೆಂಗಳೂರು**

### ಚಿಂತನೆ ಬದಲಾಗಬೇಕು

ಈಗಾಗಲೇ ಬಸ್ ಪ್ರಯಾಣದ ದರ ಮತ್ತು ಹಾಲಿನ ಬೆಲೆಯನ್ನು ಏರಿಕೆ ಮಾಡಿರುವ ರಾಜ್ಯ ಸರಕಾರದ ಮುಂದಿರುವುದು ವಿದ್ಯುತ್ ದರ ಏರಿಕೆಯ ಗುರಿ. ಹೌದು, ಮುಂದಿನ 3 ವರ್ಷಗಳಿಗೆ ಹೀಗೊಂದು ಏರಿಕೆ ಮಾಡಲು ವಿದ್ಯುತ್ ಪೂರೈಕೆ ಸಂಸ್ಥೆಗಳು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ, ದರ ಪರಿಷ್ಕರಣೆ ಕೋರಿ ಪ್ರಸ್ತಾವನೆ ಸಲ್ಲಿಸಿವೆ. ಪ್ರತಿ ಯುನಿಟ್‌ಗೆ ಒಂದೂವರೆ ರುಪಾಯಿವರೆಗೆ ವಿದ್ಯುತ್ ದರ ಏರಿಕೆಯಾಗುವ ಸಾಧ್ಯತೆಯಿದೆ.

2009ರಿಂದ ನಿರಂತರವಾಗಿ 30 ಪೈಸೆಯಷ್ಟು ವಿದ್ಯುತ್ ದರಯೇರಿಕೆ ಮಾಡುತ್ತಾ ಬಂದಿರುವ ಸರಕಾರವು, ಇನ್ನಾದರೂ ವಿದ್ಯುತ್ ಖರೀದಿ ವಿಷಯದಲ್ಲಿ ಜಾಗ್ರತೆ ವಹಿಸಬೇಕು ಹಾಗೂ ಸೌರವಿದ್ಯುತ್ ಬಳಸುವಂತೆ ಜನರಿಗೆ ಪ್ರೇರೇಪಿಸಿ ಅದಕ್ಕೆ ತಕ್ಕಂತೆ ಸಬ್ಸಿಡಿ ನೀಡಬೇಕು. ಸೋಲಾರ್ ಪಾರ್ಕ್ ನಿರ್ಮಿಸುವ ಮೂಲಕ ರಾಜ್ಯಕ್ಕೆ ಅಗತ್ಯವಾದ ವಿದ್ಯುತ್ತನ್ನು ನಾವೇ ಉತ್ಪಾದಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು.

**- ಸುರೇಂದ್ರ ಪೈ, ಭಟ್ಕಳ**

### ಸಮಗ್ರ ಮಾಹಿತಿಯಿತ್ತು

ರಸದೌತಣ ಅಂಕಣದಲ್ಲಿ ಪ್ರಕಟವಾದ 'ಬಬ್ರೂರ್‌ಕಮ್ಮೆಗೆ ಬದುಕೋದ್ ಗೊತ್ತು ರೀ' ಬರಹವು (ವಿಶ್ವವಾಣಿ ಫೆ.16) ಸಮಗ್ರವಾಗಿತ್ತು. 'ವಿಷ್ಣು ದಾದಾ' ಅವರ ಒಂದಿಡೀ ಜೀವನವನ್ನು ಅಂಕಣಕಾರರು ಸೆರೆಹಿಡಿದಿಟ್ಟಿರುವ ಪರಿ ಚೆನ್ನಾಗಿದೆ. ವಿಷ್ಣು ಅವರು ವೃತ್ತಿಜೀವನದಲ್ಲಿ ಅನುಭವಿಸಿದ ನೋವುಗಳು, ಅವನ್ನು ಮೆಟ್ಟಿ ನಿಲ್ಲುವ ಜೀವನೋತ್ಸಾಹ, ಮದುವೆಯ ಸಮಯದಲ್ಲಿ ಪಟ್ಟ ಕಷ್ಟ, ಉನ್ನತ ಸಾಧನೆಯ ಜತೆಜತೆಗೆ ಹಿಡಿದ ಅಧ್ಯಾತ್ಮದ ಮಾರ್ಗ, ಯೋಗಿಯ ತೇಜಸ್ಸು, ಭಾರತಿ ಅಮ್ಮ ನೀಡಿದ ಸಾಥ್ ಇವೆಲ್ಲ ಮಾಹಿತಿಗಳೂ ಈ ಬರಹದಲ್ಲಿ ಕಾಣಿಸಿಕೊಂಡಿರುವುದು ಗಮನಾರ್ಹ.

ಚಿತ್ರರಂಗದ ಸಂಪತ್ತು 'ಸಂಪತ್‌ಕುಮಾರ್', ಕಲಾಮೂರ್ತಿ-ಜನಾನುರಾಗಿ 'ವಿಷ್ಣುವರ್ಧನ' ಮತ್ತು ಅಭಿಮಾನಿಗಳ 'ದಾದಾ' ಹೀಗೆ ಮೂರೂ ಛಾಯೆಗಳು ಅಂಕಣದಲ್ಲಿದ್ದು ಆಪ್ತವಾಗಿವೆ. ವಿಷ್ಣು ಕೊಡುಗೈ ದೊರೆಯಾಗಿದ್ದು ಇನ್ನೊಬ್ಬರ ಕಷ್ಟಕ್ಕೆ ಕರಗುವ, ಸಹಾಯ ಮಾಡುವುದರ ಕುರಿತಾದ ಉಲ್ಲೇಖವೂ ಚೆನ್ನಾಗಿದೆ.

**- ಜನಮೇಜಯ ಉಮರ್ಜಿ, ಬೆಂಗಳೂರು**

## ಭಟ್ಟರ್ ಸ್ಕಾಚ್

- ಬೆಂ.ಮು.ಮಾರುತಿ, ಬೆಂಗಳೂರು
ಭಟ್ರೇ, ಜಪಾನಿಯರನ್ನು ನೋಡಿ, ನಮ್ಮ ಜನ ಕಲಿಯಬೇಕಾದ ಪಾಠವೇನು?
– **ನಮ್ಮ ಜನ ನೋಡುತ್ತಾರೆ, ಆದರೆ ಪಾಠ ಕಲಿಯುವುದಿಲ್ಲ!**

- ರಾಘಣ್ಣ, ಮೈಸೂರು
ಭಟ್ರೇ, ಆಕಾಶವಾಣಿಯಲ್ಲಿ ಉದ್ಘೋಷಣೆ ಮಾಡುವವರದು ಗಿಳಿಪಾಠ, ಎಫ್.ಎಮ್.ನವರದ್ದು?
– **ಕಂಠಪಾಠ!**

- ಹರಿ ಓಂ ಶಾಸ್ತ್ರೀ, ಶಂಕರಪುರ
ಭಟ್ರೇ, ಪೌರೋಹಿತ್ಯ ಮತ್ತು ಕ್ರಿಕೆಟ್ ಅಭ್ಯಾಸ ಮಾಡುವವರಿಗೆ ತರಬೇತಿ ಕಾರ್ಯಕ್ಷೇತ್ರ ಯಾವುದು?
– **ಮೊದಲದ್ದು ಗಯಾ, ಎರಡನೆಯದ್ದು ಗಯಾನ!**

- ಘಂಟಿ ರಾಮಾಚಾರ್ಯ, ಮೈಸೂರು
ಭಟ್ರೇ, ಮದುವೆಯಾದ ಹೊಸದರಲ್ಲಿ 'ನಿನ್ನ ಜಾತಕ ನನ್ನ ಕೈಲಿದೆ....' ಅಂತ ಹಾಡಿನ ಬಾಣ ಬಿಡುತ್ತಿದ್ದಳಲ್ಲ ನನ್ನ ಮನೆಯಾಕಿ?
– **ಸಮಾಧಾನ ಪಡು.... ಸದ್ಯ 'ನಿನ್ನ ಜುಟ್ಟು ನನ್ನ ಕೈಲಿದೆ..' ಅಂತ ಹಾಡಲಿಲ್ಲವಲ್ಲ!**

- ಪ್ರದೀಪ ನಾಯಕ, ಬೆಂಗಳೂರು
ಭಟ್ರೇ, ಕಟ್ಟಿಕೊಂಡ ಗಂಡ ಬೇರೆ ದೇಶಕ್ಕೆ ಹೋದರೆ ದೇಶಾಂತರ, ವಿಷಯ ಬಿಟ್ಟು ಮಾತಾಡಿದರೆ ವಿಷಯಾಂತರ, ಮನೆಯಲ್ಲಿ ಎಲ್ಲ ದೋಚಿಕೊಂಡು ಹೋದರೆ?
– **ಗುಡಿಸಿ ಗುಂಡಾಂತರ!**

- ಚಿನ್ಮಯಿ, ಮೈಸೂರು
ಭಟ್ರೇ, ಒಂದರ ಮೇಲೊಂದು ಕಷ್ಟಗಳ ಸರಮಾಲೆ, ಬದುಕೇ ಬೇಸರವಾಗಿದೆಯಲ್ಲ?
– **'ಚಿಂತ್ಯಾಕೆ ಮಾಡ್ತೀ ಚಿನ್ಮಯನಿದ್ದಾನೆ'!**

- ಕೆ.ದಿನೇಶ, ಗುಬ್ಬಿ
ಭಟ್ರೇ, ಹೆಂಗಸರಲ್ಲಿ ನೀವು ಯಾವುದನ್ನು ಮುಖ್ಯವಾಗಿ ಗಮನಿಸುತ್ತೀರಿ?
– **ಎಕ್ಸ್ ಎಕ್ಸ್ ಕ್ರೋಮೋಸೋಮ್!**

- ವಿ.ಹೇಮಂತಕುಮಾರ, ಬೆಂಗಳೂರು
ಭಟ್ರೇ, ಲಿಂಗ ಸಮಾನತೆ ಎಲ್ಲ ಕಡೆಗಳಲ್ಲೂ ಜಾರಿಗೆ ಬಂದಿದೆಯಾ?
– **ಇಲ್ಲ, ಇನ್ನೂ ಹೊಲ-ಗದ್ದೆಗಳಲ್ಲಿ ಗಂಡು ಬೆರ್ಚಪ್ಪಗಳನ್ನೇ ನಿಲ್ಲಿಸುತ್ತಿದ್ದಾರೆ!**

- ಸತೀಶ್ ಎಲ್.ವಿ., (ಇಮೇಲ್ ಮೂಲಕ)
ಭಟ್ರೇ, ಹಾಟ್ ಡ್ರಿಂಕ್ಸ್ ಅನ್ನು ಮತ್ತೆ ಬಿಸಿ ಮಾಡಬೇಕಾ?
– **ಹಾಗಂತ ಬಿಯರನ್ನು ಬಿಸಿ ಮಾಡದಿದ್ದರೆ ಸಾಕು!**

- ರಾಘವೇಂದ್ರ ಅಡಿಗ, ಕತ್ತರಿಗುಪ್ಪೆ
ಭಟ್ರೇ, ಹೊಟ್ಟೆಗೆ ಏನು ತಿಂತೀಯಾ ಅನ್ನೋದು ಹೊಸರುಚಿಯಾ?
– **ಇಲ್ಲ, ಸದ್ಯ ನೀನು ಅದನ್ನು ಬೈಗುಳ ಅಂತ ಭಾವಿಸಲಿಲ್ಲವಲ್ಲ?!**

# ನಮ್ಮ ದೇಶ ಎಚ್ಚೆತ್ತುಕೊಳ್ಳೋದು ಯಾವಾಗ?!

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಕಾಕಃ ಕೃಷ್ಣಃ ಪಿಕಃ ಕೃಷ್ಣಃ, ಕೋ ಭೇದಃ ಪಿಕಕಾಕಯೋಃ।
ವಸಂತಸಮಯೇ ಪ್ರಾಪ್ತೇ ಕಾಕಃ ಕಾಕಃ ಪಿಕಃ ಪಿಕಃ॥

ಇದು ನಾವು ಪ್ರಾಥಮಿಕ ಶಾಲೆಯಲ್ಲಿರುವಾಗ ಓದಿದ ಸಂಸ್ಕೃತ ಶುಭಾಷಿತ. ''ಕಾಗೆಯೂ ಕಪ್ಪು, ಕೋಗಿಲೆಯೂ ಕಪ್ಪು, ದೂರದಿಂದ ನೋಡಿದಾಗ ಇವೆರಡರ ನಡುವೆ ಯಾವ ವ್ಯತ್ಯಾಸವೂ ಕಾಣುವುದಿಲ್ಲ, ಆದರೆ ವಸಂತಕಾಲ ಬಂದಾಗ ಕಾಗೆ ಮತ್ತು ಕೋಗಿಲೆ ನಡುವಿನ ವ್ಯತ್ಯಾಸ ಗೊತ್ತಾಗುತ್ತದೆ, ಕಾಗೆ ತನ್ನ ಧ್ವನಿಯಲ್ಲಿ ಕೂಗಿದರೆ, ಕೋಗಿಲೆ ತನ್ನ ದನಿಯಲ್ಲಿ ಹಾಡುತ್ತದೆ'' ಎನ್ನುವುದು ಇದರ ಅರ್ಥ.

ಈ ಸುಭಾಷಿತ, ಕಾಗೆ ಮತ್ತು ಕೋಗಿಲೆ ಯಾಕೆ ನೆನಪಾದವು ಎಂದು ಹೇಳುವುದಕ್ಕೂ ಮೊದಲು, ಮೊನ್ನೆ ನಡೆದ ಒಂದು ಘಟನೆ ತಮಗೆಲ್ಲ ತಿಳಿದಿರಬಹುದು. ನಾನು ಹೇಳುತ್ತಿರುವುದು, 'ಇಂಡಿಯಾ ಗಾಟ್ ಟ್ಯಾಲೆಂಟ್' ಹೆಸರನ್ನು ಸ್ವಲ್ಪ ತಿರುಚಿ, 'ಇಂಡಿಯಾ ಗಾಟ್ ಲೇಟೆಂಟ್' ಹೆಸರಿನಲ್ಲಿ ನಡೆಯುವ ಕಾರ್ಯಕ್ರಮದ ವಿಷಯ. ಆ ಕಾರ್ಯಕ್ರಮದಲ್ಲಿ ಕೆಲವು ಯೂಟ್ಯೂಬರ್‌ಗಳು ಆಡಿದ ಮಾತು, ಹೇಳಿದ ಜೋಕು(?), ಅದರ ಪುನರಾವರ್ತನೆ ಸಭ್ಯರ ವೇದಿಕೆಯಾದ ಇಲ್ಲಿ ಬೇಡ. 'ಮಾಡಿದವರ ಪಾಪ ಆಡಿದವರ ಬಾಯಲ್ಲಿ' ಅನ್ನುವಂತೆ ಅದು ನಮ್ಮ ಬಾಯಲ್ಲೇಕೆ? ಅಷ್ಟೇ ಅಲ್ಲ, ಅಲ್ಲಿ ಉದುರಿದ ಮುತ್ತುಗಳು ಒಂದೇ ಎರಡೇ? ಅಬ್ಬಬ್ಬಾ... ಅವರ ಮಿದುಳನ್ನು ತೊಳೆದುಕೊಳ್ಳಲು ಬೇಕಾಗುವ ಸೋಪು, ಡೆಟಾಲ್ ಕೊಂಡುಕೊಳ್ಳಲು ಅವರ ಬಳಿ ಇರುವ ಹಣ ಸಾಲಲಿಕ್ಕಿಲ್ಲ. ನಮ್ಮ-ನಿಮ್ಮಂಥವರಿಗೆ ನಾಲ್ಕು ಗೋಡೆಯ ನಡುವೆ, ಒಬ್ಬರೇ ಇರುವಾಗಲೂ ಇಂಥ ವಿಷಯಗಳನ್ನು ಯೋಚಿಸಲು ಸಾಧ್ಯವಿಲ್ಲ. ಅಂಥ ವಿಷಯವನ್ನು ಸಾಮೂಹಿಕವಾಗಿ, ಸಾರ್ವಜನಿಕವಾಗಿ, ಅಲ್ಲಿ ಸೇರಿದ್ದ ನೂರಾರು ಜನರ ಎದುರಿನಲ್ಲಿ ಹೇಳುವುದು, ಸಾಲದು ಎಂಬಂತೆ, ಯೂಟ್ಯೂಬ್‌ನಂಥ ಸಾಮಾಜಿಕ ಜಾಲತಾಣದಲ್ಲಿಯೂ ಹಂಚಿಕೊಳ್ಳುತ್ತಾರೆ (ಈಗ ಅದನ್ನು ತೆಗೆದಿದ್ದಾರಂತೆ!) ಎಂದರೆ ಏನು ಹೇಳೋಣ? ಪ್ರಮಾಣ ಮಾಡಿ ಹೇಳುತ್ತೇನೆ, ಮೊನ್ನೆ ಈ ಘಟನೆ ನಡೆಯುವವರೆಗೂ ಅಲ್ಲಿದ್ದ ಐವರಲ್ಲಿ ಒಬ್ಬರ ಹೆಸರೂ ನನಗೆ ಗೊತ್ತಿರಲಿಲ್ಲ. ನಾನು ಯೂಟ್ಯೂಬ್ ಅಥವಾ ಪಾಡ್-ಕಾಸ್ಟ್‌ನ ಅಭಿಮಾನಿಯೂ ಅಲ್ಲ. ನಾನು ಯಾರನ್ನೂ ಹಿಂಬಾಲಿಸುವುದೂ (follow) ಇಲ್ಲ. ಇನ್ನು ಸಬ್‌ಸ್ಕ್ರೈಬ್ ಮಾಡುವುದಾಗಲಿ, ಬೆಲ್ ಐಕಾನ್ ಒತ್ತುವುದಾಗಲೀ ದೂರದ ಮಾತು. ಯಾಕೆಂದರೆ, ಅವರಲ್ಲಿ ಬಹುತೇಕ ಜನರು ಹಣಕ್ಕೋಸ್ಕರ ಮಾಡುವವರು. ಅದರ ಹಿಂದೆ ಓದಿಲ್ಲ-ಅರಿವಿಲ್ಲ, ಶ್ರಮವಿಲ್ಲ-ಕ್ರಮವಿಲ್ಲ. ಬಹುತೇಕರು ಸಸ್ತಾ ಪ್ರಚಾರಕ್ಕಾಗಿ ರಸ್ತೆಗೆ ಇಳಿಯುವ ಖಾಸಬದ್ರ ಜನ. ಇವರಿಗೆ ಎಷ್ಟು ಜನ ನಮ್ಮನ್ನು ಹಿಂಬಾಲಿಸುತ್ತಿದ್ದಾರೆ (ಫಾಲೋವರ್ಸ್), ಎಷ್ಟು ಜನ ಲೈಕ್ ಮಾಡಿದ್ದಾರೆ, ಎಷ್ಟು ಜನರನ್ನು ಇದು ತಲುಪಿದೆ ಎನ್ನುವುದರ ಜತೆಗೆ, ಅದರಿಂದ ನಮಗೆ ಎಷ್ಟು ಧನ ಸಂಪಾದನೆ ಆಗುತ್ತಿದೆ ಎನ್ನುವುದಷ್ಟೇ ಪ್ರಮುಖ ವಿಷಯವೇ ಹೊರತು ತಮ್ಮ ಚಾನಲ್‌ನಿಂದ, ತಮ್ಮ ಮಾತಿನಿಂದ, ತಾವು ನಡೆಸಿಕೊಡುವ ಕಾರ್ಯಕ್ರಮದಿಂದ ಸಮಾಜಕ್ಕೆ ಏನಾದರೂ ಪ್ರಯೋಜನವಿದೆಯೇ? ಊರು ಉದ್ಧಾರವಾಗುತ್ತಿದೆಯೇ? ಎಂಬ ಕಿಂಚಿತ್ ಕಾಳಜಿಯೂ ಇರುವುದಿಲ್ಲ. ಈ ಸಂಭ್ರಮಕ್ಕೆ ಇವರಿಗೆ 'ವಿಷಯ ಸೃಷ್ಟಿಕರ್ತ' (ಕಂಟೆಂಟ್ ಕ್ರಿಯೇಟರ್), 'ಸಾಮಾಜಿಕ ಮಾಧ್ಯಮ ಪ್ರಭಾವಿ (ಸೋಷಿಯಲ್ ಮೀಡಿಯಾ ಇನ್ಫ್ಲುಯೆನ್ಸರ್) ಅಬ್ಬಬ್ಬಾ, ಈ ಪ್ರಪಂಚದಲ್ಲಿ ದೊಡ್ಡ ದೊಡ್ಡ ಬಿರುದಿಗೆ ಯಾವ ಕೊರತೆಯೂ ಇಲ್ಲ, ಅದನ್ನು ಹುಡುಕಿ ಹುಡುಕಿ ಹುಡುಕಿ ಇಟ್ಟುಕೊಳ್ಳುವವರ ಸಂಖ್ಯೆಯೂ ಕಮ್ಮಿಯಿಲ್ಲ! ಮಾಡುವುದು ವೀಡಿಯೋ, ಆಡುವ ಮಾತು ಮಾತ್ರ ಚಿಲ್ಲರೆ. ಅಲ್ಲ, ಯಾರೋ ಮಾಡಿದ್ದನ್ನು ಇವರು ಅನುಸರಿಸಿದರೆ, ಯಾರೋ ಹಾಡಿದ್ದನ್ನು ಇವರು ಪುನಃ ಹಾಡಿದರೆ, ಯಾರೋ ಮಾಡಿದ ನೃತ್ಯ ಸಂಯೋಜನೆಯನ್ನು ಇವರು ಅನುಕರಣೆ ಮಾಡಿದರೆ, ಇವರು ಯಾವ ಸೀಮೆಯ ಪ್ರಭಾವಿಗಳು? ಇವರೆಲ್ಲರೂ ಪ್ರಭಾವಕ್ಕೆ ಒಳಗಾದವರೇ, ಒಳಗಾಗುವವರೇ ವಿನಾ, ಇವರು ಪ್ರಭಾವಿಗಳಾಗಲು ಹೇಗೆ ಸಾಧ್ಯ? ಪ್ರಭಾವಿಗಳಾಗಲು ಅವರ ವಿಚಾರ ಸ್ವಂತದ್ದಾಗಿರಬೇಕು, ಒಂದು ವಿಷಯದ ಮೇಲೆ ಹಿಡಿತ ಇರಬೇಕು ಅಥವಾ ವಿಷಯದ ವಿಶ್ಲೇಷಣೆಯನ್ನಾದರೂ ಮಾಡುವಂತಿರಬೇಕು.

ನಾನು ಈ ರೀತಿಯ ಯೂಟ್ಯೂಬರ್‌ಗಳನ್ನು ನೋಡದೆ ಇರುವುದಕ್ಕೆ ಕಾರಣವಿದೆ. ಕೆಲವು ವರ್ಷದ ಹಿಂದೆ ಡಿಂಚಿಕ್ ಪೂಜಾ ಹೆಸರಿನ 'ಸೋ ಕಾಲ್ಡ್' ಕಲಾವಿದೆ ಯೂಟ್ಯೂಬ್‌ನಲ್ಲಿ ಬಹಳ ಸದ್ದು ಮಾಡಿದ್ದಳು. ಅವಳೇ ಬರೆದುಕೊಂಡು, ಅವಳೇ ರಾಗ ಸಂಯೋಜಿಸಿ, ಅವಳೇ ಹಾಡುತ್ತಿದ್ದಳಾದ್ದರಿಂದ ಒಂದು ಹಂತಕ್ಕೆ ಅವಳನ್ನು ಒಪ್ಪಬಹುದಾಗಿತ್ತು ಅನ್ನಿ. ಆದರೆ ತೀರಾ ಕೆಟ್ಟ ಸ್ವರದಲ್ಲಿ, ಶ್ರುತಿ ಬಿಟ್ಟು ಹಾಡುವ ಹಾಡುಗಾರ್ತಿ ಅವಳಾಗಿದ್ದಳು. ಅವಳನ್ನು ಸಲ್ಮಾನ್ ಖಾನ್‌ನಂಥವರು ತಮ್ಮ ಕಾರ್ಯಕ್ರಮದಲ್ಲಿ ಕರೆಸಿ ತಮಾಷೆ ಮಾಡುತ್ತಿದ್ದರು. ಅದು ಅವಳಿಗೆ ಅರ್ಥವಾಗುತ್ತಿತ್ತೋ, ಇಲ್ಲವೋ, ನನಗಂತೂ ಯೂಟ್ಯೂಬರ್‌ಗಳನ್ನು ಹಿಂಬಾಲಿಸುವ ಹುಚ್ಚು ಬಿಟ್ಟುಹೋಗಿತ್ತು. ಆ ಕಾರಣಕ್ಕಾದರೂ ಅಂಥವರಿಗೆ ಧನ್ಯವಾದಗಳು. ಇಲ್ಲವಾದರೆ ನೀವು ಗಮನಿಸಿ, ಕ್ಯಾನ್ಸರ್‌ಗೆ ಮನೆಮದ್ದಿನಿಂದ ಹಿಡಿದು, ಶೌಚಾಲಯ ಬಳಸುವುದು ಹೇಗೆ ಎನ್ನುವುದರವರೆಗೂ ಇಂದು ಯೂಟ್ಯೂಬ್‌ನಲ್ಲಿ ಮಾಹಿತಿಗಳು, ತಪ್ಪು ಮಾಹಿತಿಗಳು ಲಭ್ಯವಿವೆ. ಅದೊಂದು ಜಗತ್ತಿನ ದೊಡ್ಡ ತೊಟ್ಟಿ, ಅಲ್ಲಿ ಬೇಕಾದದ್ದು-ಬೇಡವಾದದ್ದು ಎಲ್ಲವೂ ಇವೆ. ಮೊಬೈಲ್ ಬಳಸುವವರೆಲ್ಲ ಒಮ್ಮೆಯಾದರೂ ಆ ತೊಟ್ಟಿಯಲ್ಲಿ ಇಣುಕಿ ನೋಡುತ್ತಾರೆ. ಆ ತೊಟ್ಟಿಗೆ ಬಂದು ಬೀಳುವ ಸರಕನ್ನು ನಿಯಂತ್ರಿಸುವವರು ಯಾರು?

ಮೊನ್ನೆ ನಡೆದ ಘಟನೆಯನ್ನೇ ತೆಗೆದುಕೊಳ್ಳಿ, ಆ ಯೂಟ್ಯೂಬರ್ ಹೇಳಿದ ಅಶ್ಲೀಲ ಜೋಕು, ಸ್ವತಃ ಅವನದ್ದಲ್ಲ, ಅದು ಕೂಡ ವಿದೇಶಿ ಯೂಟ್ಯೂಬರ್‌ಗಳಿಂದ ಎರವಲು ಪಡೆದದ್ದು ಎಂದಾದರೆ, ಇವರೆಲ್ಲ ಯಾವ ಸೀಮೆಯ ಪ್ರಭಾವಿಗಳೋ ಆ ದೇವರೇ ಬಲ್ಲ, ಇವರಿಗೆ ವಿದೇಶದಿಂದ ಎರವಲು ಪಡೆಯಬೇಕು ಎಂದಾದರೆ, ಅವರನ್ನು ಅನುಕರಿಸಬೇಕು ಎಂದಾದರೆ, ಸಾಕಷ್ಟು ಒಳ್ಳೆಯ ಸಂಗತಿಗಳಿವೆಯಲ್ಲ, ಅದನ್ನೇಕೆ ಪಡೆದುಕೊಳ್ಳುವುದಿಲ್ಲ?

ಸ್ಟ್ಯಾಂಡ್-ಅಪ್ ಕಾಮೆಡಿ, ರೋಸ್ಟ್ ಇತ್ಯಾದಿ ಹೆಸರಿನಲ್ಲಿ, ಅಸಹ್ಯ, ಅಸಭ್ಯ, ಅಶ್ಲೀಲ, ವ್ಯಕ್ತಿ ನಿಂದನೆ ಎಷ್ಟು ಸರಿ? ಪ್ರಶ್ನೆ ಮಾಡಿದರೆ, ಅದು ವಾಕ್ ಸ್ವಾತಂತ್ರ್ಯವಂತೆ! ಅಸಭ್ಯ ಬಟ್ಟೆ ತೊಡುವುದು, ಅಸಹ್ಯಕರ ವಿಷಯಗಳನ್ನು ಹೊತ್ತು ತರುವುದು ಅಭಿವ್ಯಕ್ತಿ ಸ್ವಾತಂತ್ರ್ಯವಂತೆ. ಇಂದು ಭಾರತೀಯ ಆಯುರ್ವೇದ, ಯೋಗ ವಿದೇಶದಲ್ಲಿ ಜನಪ್ರಿಯವಾಗುತ್ತಿವೆ. ಅವರು ನಮ್ಮದ್ದನ್ನು ಒಪ್ಪಿಕೊಳ್ಳುತ್ತಿರುವಾಗ, ನಾವು ಮಾತ್ರ ಅಲ್ಲಿಯ ಕೊಳಕನ್ನು ಅಪ್ಪಿಕೊಳ್ಳುವ ಹುಚ್ಚು ಯಾಕೆ?

ಇರಲಿ, ರಣವೀರ್ ಅಲ್ಲಹಾಬಾದಿಯ ಹೆಸರನ್ನು ನಾನು ಸರಿಯಾಗಿ ಗಮನಿಸಿದ್ದು ಮೊನ್ನೆಯ ಘಟನೆ ನಡೆದ ನಂತರವೇ. ಅಲ್ಲಿಯವರೆಗೆ ಒಂದೆರಡು ಬಾರಿ ಅವನನ್ನು ಯೂಟ್ಯೂಬ್‌ನಲ್ಲಿ ನೋಡಿದ್ದೆನಾದರೂ, ನನಗೆ ಅಷ್ಟೊಂದು ಆಸಕ್ತಿದಾಯಕವಾಗಿ ಕಾಣಲಿಲ್ಲ. ಅದೊಂದು ಕೋಗಿಲೆಯ ರೂಪದಲ್ಲಿರುವ ಕಾಗೆ ಎಂದು ಎಷ್ಟು ಜನರಿಗೆ ಬಹಳ ತಿಳಿದದ್ದೂ ಮೊನ್ನೆಯೇ. ಹಾಗಂತ ಅವನು ಸಂದರ್ಶನಕ್ಕೆ ಕರೆತರುತ್ತಿದ್ದ ವ್ಯಕ್ತಿಗಳೇನೂ ಸಾಮಾನ್ಯರಾಗಿರಲಿಲ್ಲ. ಭಾರತದ ವಿದೇಶಾಂಗ ಸಚಿವ ಡಾ.ಜಯಶಂಕರ್, ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಆದಿಯಾಗಿ ಹೆಚ್ಚು ಕಮ್ಮಿ ಕೇಂದ್ರ ಸರಕಾರದ ಮಂತ್ರಿಮಂಡಲವೇ ಅವನ 'ಬಿಯರ್ ಬೈಸೆಪ್ಸ್' ಚಾನೆಲ್‌ನ 'ದ ರಣವೀರ್ ಶೋ' ಕಾರ್ಯಕ್ರಮದಲ್ಲಿ ಅತಿಥಿಯಾಗಿ ಬಂದಿದ್ದಾರೆ. ಚಿತ್ರತಾರೆಯರಾದ ಪ್ರಿಯಾಂಕಾ ಚೋಪ್ರಾ, ಕರೀನಾ ಕಪೂರ್, ಅಕ್ಷಯ್ ಕುಮಾರ್, ಕ್ರೀಡಾಪಟುಗಳಾದ ಕೆ.ಎಲ್.ರಾಹುಲ್, ಸೌರವ್ ಗಂಗೂಲಿ, ಪಿ.ವಿ.ಸಿಂಧು, ಇಸ್ರೋದ ಡಾ. ಸೋಮನಾಥ್ ಮೊದಲಾದವರು ಇವನೊಂದಿಗೆ ಸಂದರ್ಶನ ನಡೆಸಿದ್ದಾರೆ. ಅದರೊಂದಿಗೆ ಕೃಷ್ಣ, ರಾಮಾಯಣದಂಥ ವಿಷಯಗಳ ಕುರಿತಾಗಿಯೂ, ಅಧ್ಯಾತ್ಮ, ಆರೋಗ್ಯದ ಕುರಿತಾಗಿಯೂ, ಸ್ಟಾರ್ಟ್-ಅಪ್ ಕಂಪನಿಗಳನ್ನು ಆರಂಭಿಸುವುದು ಹೇಗೆ ಎನ್ನುವುದರಿಂದ ಹಿಡಿದು, ಜ್ಯೋತಿಷ್ಯದವರೆಗೆ, ಇಂಗ್ಲಿಷ್ ಮಾತನಾಡಲು ಸುಲಭವಾದ ವಿಧಾನ, ಉಡುಗೆ-ತೊಡುಗೆ ಧರಿಸುವುದು ಹೇಗೆ ಎನ್ನುವುದರವರೆಗೂ ಈತನ ಚಾನೆಲ್‌ನಲ್ಲಿ ಸಂದರ್ಶನ ನಡೆದಿದೆ ಎನ್ನುವುದು ನನಗೆ ತಿಳಿದದ್ದು ಈ ಘಟನೆ ನಡೆದ ನಂತರವೇ. ಕಳೆದ ಒಂದು ದಶಕದಲ್ಲಿ ಆತ ತನ್ನ ಯೂಟ್ಯೂಬ್ ಮತ್ತು ಪಾಡ್‌ಕಾಸ್ಟ್‌ನಿಂದ ಗಳಿಸಿದ ಮೊತ್ತ ಬರೋಬ್ಬರಿ 60 ಕೋಟಿ ರೂಪಾಯಿ. ಪ್ರತಿ ತಿಂಗಳು 35 ಲಕ್ಷ ರುಪಾಯಿ ಅದರಲ್ಲೂ ಪ್ರತಿ ಕಂತಿನಲ್ಲಿ ಆತ ಐದರಿಂದ ಏಳು ಲಕ್ಷ ರುಪಾಯಿ ದುಡಿಯುತ್ತಿದ್ದ ಎಂದು ಟೈಮ್ಸ್ ವರದಿ ಹೇಳುತ್ತದೆ. ಇರಲೂಬಹುದು, ಏಕೆಂದರೆ ಝೊಮ್ಯಾಟೋದಂಥ ದೊಡ್ಡ ಕಂಪನಿಗಳು ಕೂಡ ಅವನಿಗೆ ಜಾಹೀರಾತು ನೀಡುತ್ತಿದ್ದವಂತೆ.

ಅದೇನೋ ಅವನ ದುಡಿಮೆ ಆಯಿತು. ಆದರೆ ಪ್ರಮುಖ ಅಥವಾ ಹೆಸರಾಂತ ವ್ಯಕ್ತಿಗಳೆಲ್ಲ ಅವನೊಂದಿಗೆ ಯಾಕೆ ಸಂದರ್ಶನಕ್ಕೆ ಬರಬೇಕು? ಅದಕ್ಕೆ ಕಾರಣ ಒಂದೇ, ಅವನಿಗಿರುವ ಫಾಲೋವರ್ಸ್ ಅಥವಾ ಹಿಂಬಾಲಕರು. ಇವನೊಂದಿಗೆ ಸಂದರ್ಶನ ನಡೆಸಿದರೆ, ಅಷ್ಟು ಜನರನ್ನು ತಾವು ತಲುಪಬಹುದು ಎಂಬ ಖಯಾಲಿಯಿಂದಾಗಿ ಇವರೆಲ್ಲ ಬಂದು ಸಂದರ್ಶನವನ್ನು ನೀಡಿದರು. ನಾವು ಹೆಚ್ಚು ಜನರನ್ನು ತಲುಪಬಹುದು ಎಂಬ ಕಾರಣಕ್ಕಾಗಿ ಮಂತ್ರಿಗಳು, ಕಲಾವಿದರು, ಕ್ರೀಡಾಪಟುಗಳು ಬಂದು ಸಂದರ್ಶನ ನೀಡಿದ್ದಾರೆ. ಅವನಂತೆ ಇನ್ನೂ ಒಂದಷ್ಟು ಜನರಿಗೆ ಸಂದರ್ಶನ ನೀಡುತ್ತಾರೆ. ಅಂಥವರಿಗೆ ಪ್ರಶಸ್ತಿಯನ್ನೂ ನೀಡುತ್ತಾರೆ.

ಹೆತ್ತವರ ಬಗ್ಗೆಯೇ ಕೀಳಾಗಿ ಜೋಕ್ ಮಾಡಿದ ನಂತರ ಆತ ಕ್ಷಮೆ ಯಾಚಿಸುವ ನಾಟಕ ಮಾಡಿದ್ದಾನೆ. ಅದಕ್ಕೆ ಕೆಲವರು 'ಅದು ವಾಕ್ ಸ್ವಾತಂತ್ರ್ಯ, ಕ್ಷಮೆ ಯಾಚಿಸಿದ್ದಾಗಿದೆ, ಈ ವಿಷಯವನ್ನು ದೊಡ್ಡದಾಗಿಸಬಾರದು' ಇತ್ಯಾದಿ ಸಲಹೆ ನೀಡುತ್ತಿದ್ದಾರೆ. ನನಗೆ ಅರ್ಥವಾಗದ ವಿಷಯವೆಂದರೆ, ಜೋಕ್ ಮಾಡುವಾಗ ಆತ ಯಾರದ್ದೋ ಒತ್ತಾಯಕ್ಕೆ ಮಾಡಿದ್ದು ಎಂದಾಗಲೀ, ಒಲ್ಲದ ಮನಸ್ಸಿನಿಂದ ಮಾಡಿದ್ದು ಎಂದಾಗಲೀ ಅನಿಸಲಿಲ್ಲ. ಒಂದುವೇಳೆ ನಿಜವಾಗಿಯೂ ಪಶ್ಚಾತ್ತಾಪ ಪಟ್ಟಿದ್ದೇ ಹೌದಾದರೆ, ಮನೆಗೆ ಬೀಗ ಹಾಕಿ ಪರಾರಿಯಾಗಿದ್ದೇಕೆ? ಪೊಲೀಸರು ಎರಡು ಬಾರಿ ಸಮನ್ಸ್ ನೀಡಿದರೂ ಠಾಣೆಗೆ ಬರದೇ ಇರಲು ಕಾರಣವೇನು? ಆ ಕಾರ್ಯಕ್ರಮದಲ್ಲಿ ಆಯೋಜಕರನ್ನೂ ಸೇರಿಸಿ, ಇನ್ನೂ ನಾಲ್ಕು ಜನರಿದ್ದರು. ಅವರ ಅಭಿಪ್ರಾಯವೇನು? ಅವರ ಮೇಲೆ ಯಾವ ಕ್ರಮ? ಅಷ್ಟಕ್ಕೂ ಅಂಥವರ ಮೇಲೆ ಯಾರು ಕ್ರಮ ಕೈಗೊಳ್ಳಬೇಕು?

ಇತ್ತೀಚಿನ ದಿನಗಳಲ್ಲಿ ಒಟಿಟಿಯಲ್ಲಿ ಬರುವ ಸಿನಿಮಾ, ಧಾರಾವಾಹಿಗಳು, ತಕ್ಕಮಟ್ಟಿಗೆ ಬಿಗ್ ಬಾಸ್, ರೋಡೀಸ್, ಕೆಲವು ಸ್ಟ್ಯಾಂಡ್-ಅಪ್ ಕಾಮಿಡಿ ಕಾರ್ಯಕ್ರಮಗಳನ್ನು ನೋಡಿದರೆ, ತಾಯಿ, ಅಕ್ಕ-ತಂಗಿಯರ ಬೈಗುಳಗಳೆಲ್ಲ 'ಬೈಗುಳ'ದ ಹಣೆಪಟ್ಟಿ ಕಳಚಿ, ಸಾಮಾನ್ಯ ಪದಗಳಾಗುತ್ತಿವೆ. ವ್ಯಕ್ತಿ ನಿಂದನೆ ಸ್ವಾಭಾವಿಕವಾಗಿವೆ. ಜನ ಅದನ್ನು ದುಡ್ಡುಕೊಟ್ಟು ನೋಡಲು ಹೋಗುತ್ತಿದ್ದಾರೆ ಎಂದರೆ ಅದನ್ನು ಇಷ್ಟಪಡುತ್ತಿದ್ದಾರೆ ಎಂದು ವಾದಿಸುವವರೂ ಇದ್ದಾರೆ. ಇರಬಹುದು, ಗೊತ್ತಿದ್ದೂ ಗೊತ್ತಿದ್ದೂ ಹೋಗುವವರಿಗೆ ಯಾರೂ ಅಡ್ಡಿಪಡಿಸಲಾಗುವುದಿಲ್ಲ. ಅದು ಒಳ್ಳೆಯದೋ, ಕೆಟ್ಟದ್ದೋ, ಅವರವರ ವಿವೇಚನೆಗೆ ಬಿಟ್ಟದ್ದು. ಅವರು ಹೋಗುವಾಗ ತಮ್ಮ ಮನೆಯವರನ್ನೂ, ಮಕ್ಕಳನ್ನೂ ಕರೆದುಕೊಂಡು ಹೋಗುತ್ತಾರೆಯೇ ಎನ್ನುವುದಕ್ಕೆ ಅವರೇ ಉತ್ತರಿಸಬೇಕು. ಒಳ್ಳೆಯ ಕಾರ್ಯಕ್ರಮವಾದರೆ ಅಪ್ಪ-ಅಮ್ಮ, ಮಡದಿ-ಮಕ್ಕಳ ಜತೆಗೂ ನೋಡಬಹುದಲ್ಲ! ಇನ್ನು ಕೆಲವರ ವಾದ ಏನೆಂದರೆ, ನಾವು ಜಗತ್ತಿನಲ್ಲಿ ನಡೆಯದೇ ಇರುವುದನ್ನು ತೋರಿಸುವುದಿಲ್ಲ, ಹೇಳುವುದಿಲ್ಲ, ಇಂಥವೆಲ್ಲ ಜಗತ್ತಿನಲ್ಲಿ ನಡೆಯುತ್ತವೆ ಎಂದಾದರೆ ಯಾಕೆ ತೋರಿಸಬಾರದು? ಸರಿಯಾಗಿಯೇ ಇದೆ. ಆದರೆ ನೀವು ಯಾವ ರೀತಿಯಲ್ಲಿ ತೋರಿಸುತ್ತೀರಿ? ಯಾವ ಮಾತಿನಲ್ಲಿ ತೋರಿಸುತ್ತೀರಿ ಎನ್ನುವುದು ಪ್ರಮುಖವಾಗಿರುತ್ತದೆ. ನಿಮ್ಮಲ್ಲಿ ಎಷ್ಟು ಜನ 'ದೇವದಾಸಿ' ನಾಟಕ ನೋಡಿದ್ದೀರೋ ಗೊತ್ತಿಲ್ಲ. ವೇಶ್ಯಾವಾಟಿಕೆಯ ಕರಾಳ ಮುಖವನ್ನು ತೋರಿಸುವ ನಾಟಕ ಅದು. ಅದರಲ್ಲಿ ಮಾಸ್ಟರ್ ಹಿರಣ್ಣಯ್ಯ ನಾಜೂಕಯ್ಯನ ಪಾತ್ರ ಮಾಡುತ್ತಿದ್ದರು. ತಮ್ಮ ಖಡಕ್ ಮಾತಿಗೆ ಹೆಸರಾದ ಹಿರಣ್ಣಯ್ಯ ಕೂಡ ಅಲ್ಲಿ ಅಳತೆ ತಪ್ಪಿ ಮಾತಾಡಲಿಲ್ಲ. ಇಂದಿಗೂ ಯೂಟ್ಯೂಬ್‌ನಲ್ಲಿ ಆ ನಾಟಕ ಲಭ್ಯವಿದೆ. ಆ ಪಾತ್ರವನ್ನು ಇಂದಿನ ಒಟಿಟಿ, ಯೂಟ್ಯೂಬ್ ಪ್ರಭಾವಿಗಳಿಗೆ ಕೊಟ್ಟರೆ ಅದೆಷ್ಟು ಅಶ್ಲೀಲ ಮಾತಾಡುತ್ತಿದ್ದರೋ ದೇವರೇ ಬಲ್ಲ.

ಕೊನೆಯದಾಗಿ, ಇದಕ್ಕೆ ಕಡಿವಾಣ ಬೇಡವೇ? ಇಂದು ಮಕ್ಕಳ ಕೈಯಲ್ಲೂ ಮೊಬೈಲ್ ಬಂದು ಕುಳಿತಿದೆ. ಅವರು ಇಂಥದ್ದನ್ನೆಲ್ಲ ನೋಡುವುದಿಲ್ಲವೇ ಎಂದರೆ, ಪಾಲಕರು ಕಾಳಜಿವಹಿಸಬೇಕು ಎನ್ನುತ್ತಾರೆ. ಒಂದು ಹಂತದವರೆಗೆ ಪಾಲಕರು ನೋಡಬಹುದೇ ವಿನಾ ದಿನದ 24 ಗಂಟೆಯೂ ಪಾಲಕರು ಮಕ್ಕಳ ಹಿಂದೆ ಇರಲು ಸಾಧ್ಯವಿಲ್ಲ. ಇಂದಿನ ಮಕ್ಕಳು, ಅದರಲ್ಲೂ ಯುವಕರು ಅದನ್ನು ಇಷ್ಟಪಡುವುದೂ ಇಲ್ಲ. ಚಲನಚಿತ್ರಗಳಿಗೆ ಲಾಗೂ ಆಗುವ ಸೆನ್ಸಾರ್ ನಿಯಮ ಜಾರಿಗೊಳಿಸುವ ಸರಕಾರದ ಇಲಾಖೆಗಳು ಒಟಿಟಿಗಳಿಗೂ, ಯೂಟ್ಯೂಬ್‌ಗಳಿಗೂ ಈ ನಿಯಮವನ್ನು ಯಾಕೆ ಜಾರಿಗೊಳಿಸಬಾರದು? ಯಾಕೆ ಸ್ಥಳೀಯ ಆಡಳಿತ ಸಂಸ್ಥೆಗಳು, ಕಾರ್ಯಕ್ರಮದ ಆಯೋಜಕರಿಂದ ವಿಷಯ, ವಿವರಗಳನ್ನು ಪಡೆದು, ಒಪ್ಪಿತವಾದಲ್ಲಿ ಮಾತ್ರ ಪರವಾನಗಿಯನ್ನು ನೀಡಬಾರದು? ಅದೇನೂ ಕಷ್ಟದ ಕೆಲಸವಲ್ಲ. ಬಹುತೇಕ ಕೊಲ್ಲಿ ರಾಷ್ಟ್ರಗಳಲ್ಲಿ ಈ ನಿಯಮ ಜಾರಿಯಲ್ಲಿದೆ. ಒಂದು ಕಾರ್ಯಕ್ರಮಕ್ಕೆ ಅನುಮತಿ ಪಡೆಯಬೇಕಾದರೆ, ಮೊದಲೇ ಆ ಕಾರ್ಯಕ್ರಮದ ಸಂಪೂರ್ಣ ವಿವರ ನೀಡಿ ಅನುಮತಿ ಪಡೆಯಬೇಕು. ಈ ಕಾನೂನು ಸೌದಿ ಅರೇಬಿಯಾದಲ್ಲೂ ಇದೆ, ದುಬೈನಲ್ಲೂ ಇದೆ. ಭಾರತದಲ್ಲಿ ಕಾನೂನು, ಸ್ವಾತಂತ್ರ್ಯ ಎಂದು ಕಿರುಚುವ, ದುಬೈ ನಗರಿಯನ್ನು ಸ್ವರ್ಗ ಎಂದು ಬಣ್ಣಿಸುವ ಇವರು ಅಲ್ಲಿ ಇಂಥ ಒಂದು ಕಾರ್ಯಕ್ರಮ ಮಾಡಲಿ ನೋಡೋಣ! ಅಂಥ ಸಂದರ್ಭದಲ್ಲಿ ಇವರಿಗೆ ಭಾರತವೇ ಸ್ವರ್ಗ! ನಮ್ಮ ದೇಶ ಯಾವಾಗ ಎಚ್ಚೆತ್ತುಕೊಳ್ಳುತ್ತದೆಯೋ!?

## ನಾರದ ಸಂಚಾರ

ಕಲಹಪ್ರಿಯ
naadigru@gmail.com

### ಬೆಲೆಯೇರಿಕೆಯ ಪರ್ವ!

ಕೆಲವರ ಗ್ರಹಚಾರವೇ ಹಾಗೆ, ಒಂದೋ ಅವರು ಮತ್ತೊಬ್ಬರಿಂದ ಮೋಸ ಹೋಗಲೆಂದೇ ಹುಟ್ಟಿರುತ್ತಾರೆ, ಇಲ್ಲವೇ ತಾವು ಮಾಡದ ತಪ್ಪಿಗೆ ಬೆಲೆಯೇರಿಕೆ ರೂಪದಲ್ಲಿ ಹಿಗ್ಗಾಮುಗ್ಗಾ ಚಾಟಿಯೇಟು ತಿನ್ನಬೇಕಾದ ದುರದೃಷ್ಟವಂತರಾಗಿರುತ್ತಾರೆ. ಕಸ್ತೂರಿ ಕರ್ನಾಟಕದ ಜನರು ಈ ಪೈಕಿ ಯಾವ ವರ್ಗಕ್ಕೆ ಸೇರಿದವರು ಎಂಬುದನ್ನು ನಿರ್ಧರಿಸುವುದನ್ನು ಓದುಗರಿಗೇ ಬಿಟ್ಟಿದ್ದಾರೆ ಕಲಹಪ್ರಿಯ ನಾರದರು!

ಇದು ಸುಮ್ಮನೇ 'ಲೂಸ್ ಟಾಕ್' ರೀತಿಯಲ್ಲಿ ಆಡುತ್ತಿರುವ ಮಾತಲ್ಲ, ನಮ್ಮ ಜನರು ಅನುಭವಿಸುತ್ತಿರುವ ಕಷ್ಟ-ಕೋಟಲೆಗಳ ಪರಂಪರೆಯ ಪ್ರಾಮಾಣಿಕ ಪ್ರಸ್ತುತಿ. ಬಸ್ ಪ್ರಯಾಣ ದರಗಳು ಏರಿಕೆ ಕಂಡಿದ್ದಾಯ್ತು. ನೀರಿನ ದರ, ಮೆಟ್ರೋ ಪ್ರಯಾಣದರಗಳು ಜನರಿಗೆ ಬಿಸಿ ಮುಟ್ಟಿಸಿದ್ದಾಯ್ತು, ದಿನಬಳಕೆಯ ವಸ್ತುಗಳು ಮತ್ತು ಆಹಾರ ಪದಾರ್ಥಗಳ ಬೆಲೆ 'ಗಗನಗಾಮಿ' ಆಗಿದ್ದಾಯ್ತು. ಈಗ ಜನರಿಗೆ 'ಕರೆಂಟ್ ಷಾಕ್' ನೀಡಲು ಸಂಬಂಧಪಟ್ಟವರು ಹತಾರಗಳನ್ನು ರೆಡಿ ಮಾಡಿಕೊಳ್ಳುತ್ತಿದ್ದಾರಂತೆ. ನೀರು, ಹಾಲು-ಹಣ್ಣು-ತರಕಾರಿ, ಆಹಾರ ಪದಾರ್ಥಗಳ ಬೆಲೆಯೇರಿಕೆ ಆದಾಗ, ''ಹಿಂಗೆ ಏರಿಕೆಯಾದ್ರೆ, ನಾವೆಲ್ಲಾ ಹೊಟ್ಟೆಗೆ ಹಿಟ್ಟಿನ ಬದಲು ಮಣ್ಣು ತಿನ್ನಬೇಕಾಗುತ್ತೆ'' ಅಂತ ಜನರು ಆಕ್ರೋಶ ವ್ಯಕ್ತಪಡಿಸಿದ್ದುಂಟು. ಇಷ್ಟು ಸಾಲದೆಂಬಂತೆ ವಿದ್ಯುತ್ ದರವೂ ಏರಿಬಿಟ್ಟರೆ ಅಲ್ಲಿಗೆ ಮುಗೀತ್! ಬಾಯಿ ಬಡ್ಕೊಳ್ಳೋದೊಂದೇ ಬಾಕಿ!

ಮತ್ತೊಂದೆಡೆ, ಪ್ರತಿ ಕೆ.ಜಿ. ಕಾಫಿಪುಡಿಯ ಬೆಲೆಯು 850 ರುಪಾಯಿಗಳಿಂದ 1,100 ರುಪಾಯಿವರೆಗೆ ಏರಿಕೆಯಾಗಿರೋದ್ರಿಂದ, ಒಂದು ಕಪ್ ಕಾಫಿ ಬೆಲೆಯಲ್ಲಿ ಬರೋಬ್ಬರಿ 5 ರುಪಾಯಿ ಹೆಚ್ಚಳ ಆಗೋ ಸಾಧ್ಯತೆಯಿದೆ ಎಂಬ ಸುದ್ದಿಗಳು ಹರಿದಾಡುತ್ತಿವೆ. ಇದನ್ನು ಓದಿದವರು ಬಿಸಿಕಾಫಿಯಿಂದ ಬಾಯಿ ಸುಟ್ಟುಕೊಳ್ಳುವುದಿರಲಿ, ಈ ಸುದ್ದಿಯನ್ನು ಕೇಳಿಯೇ ಕಿವಿಯನ್ನು ಸುಟ್ಟುಕೊಳ್ಳುವಂತಾಗಿದೆ ಕಣ್ರೀ...

### ಅಯ್ಯೋ ದುರ್ವಿಧಿಯೇ...

ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ದಿ.ಜಯಲಲಿತಾ ಅವರಿಗೆ ಸೇರಿದ್ದ ಕೋಟ್ಯಂತರ ರುಪಾಯಿ ಬೆಲೆಬಾಳುವ ಸ್ಥಿರಾಸ್ತಿ ಹಾಗೂ ಚರಾಸ್ತಿಗಳನ್ನು, ವಿಶೇಷ ನ್ಯಾಯಾಲಯದ ಆದೇಶದಂತೆ ತಮಿಳುನಾಡು ಸರಕಾರಕ್ಕೆ ಹಸ್ತಾಂತರಿಸಲಾಗಿದೆಯಂತೆ. ಹೀಗೆ ಸರಕಾರದ ಪಾಲಾದ ಸ್ವತ್ತುಗಳಲ್ಲಿ ಜಮೀನು, ಅಪಾರ ಚಿನ್ನಾಭರಣ ಮತ್ತು ಇತರ ವಸ್ತುಗಳು ಸೇರಿವೆಯಂತೆ. ಅದರಲ್ಲೂ 27 ಕೆ.ಜಿ.ಯಷ್ಟು ಚಿನ್ನವು ಸರಕಾರದ ತೆಕ್ಕೆಯನ್ನು ಸೇರಲಿದೆ ಎಂಬ ಸುದ್ದಿ ಓದಿದ ಕೆಲ ಹೆಂಗಳೆಯರಂತೂ, ''ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ ಅಂತ ಅಷ್ಟಿಲ್ಲದೆ ಹೇಳಿದ್ದಾರಾ ನಮ್ಮ ಪೂರ್ವಜರು?'' ಎಂದು ಹಳಹಳಿಸುತ್ತಾ, ನೆಟಿಗೆ ಮುರಿಯುತ್ತಿದ್ದಾರಂತೆ!

# ಸಂಸ್ಕೃತಿ ಸಮ್ಮಿಲನ ಮತ್ತು ಸಮಯಭೇದದ ಸುತ್ತಮುತ್ತ ಒಂದು ಇಣುಕುನೋಟ

ಬಸವ ಮಂಟಪ
ರವಿ ಹಂಜ್
vveditoped@gmail.com

ಭಾಗ 1

ಎಡಪಂಥವು ಆರ್ಯರನ್ನು 'ಮಧ್ಯ ಏಷ್ಯಾದಿಂದ ಬಂದ ವಲಸಿಗರು' ಎಂದರೆ ಬಲಪಂಥವು 'ಅವರು ಇಲ್ಲಿಂದಲೇ ಅಲ್ಲಿಗೆ ಹೋಗಿ ತಿರುಗಿ ಬಂದವರು' ಎನ್ನುತ್ತದೆ. ಈ ಎಲ್ಲಿಂದಲೋ ಬಂದವರು ಮತ್ತು ತಿರುಗಿ ಬಂದವರು ತಾವು ಬರುವಾಗ ಅಲ್ಲಿನ ಸಂಸ್ಕೃತಿಯನ್ನು ತಂದರು ಮತ್ತದನ್ನು ಸೌಹಾರ್ದಯುತವಾಗಿ ನೆಲಮೂಲಿಗರೊಂದಿಗೆ ಒಡಗೂಡಿ ಸಂಯೋಜಿಸಿದರು. ಹೀಗೆ ಬಂದವರು ಈಜಿಪ್ಟಿನವರು ಎಂದು ಕೆಲವರು ವಾದಿಸಿದರೆ, ಮತ್ತೆ ಕೆಲವರು ಯುರೋಪಿನಿಂದ ಬಂದವರು ಎನ್ನುತ್ತಾರೆ. ಈ ಎರಡೂ ಮಧ್ಯ ಏಷ್ಯಾ ಅಲ್ಲ ಎಂಬುದು ಗಮನಾರ್ಹ. ಹಾಗಾಗಿ ಮಧ್ಯ ಏಷ್ಯಾದಿಂದ ಬಂದವರು ಇಲ್ಲಿನ ಅಗ್ನಿ ಆರಾಧಕರಾಗಿದ್ದ ಪಾರ್ಶ್ವ, ಪಾರ್ಥೀನಿಯನ್ನರಾಗಿ ಬಲಪಂಥದವರು ಹೇಳುವಂತೆ ಹೊರಹೋಗಿ ತಿರುಗಿ ಬಂದವರು ಎಂಬುದು ಗಮನಾರ್ಹ. ಅಂದರೆ ಬೇರೆ ಯಾವ ಪ್ರದೇಶದಿಂದಲೂ ವಲಸಿಗರು ಭಾರತಕ್ಕೆ ಬರಲಿಲ್ಲವೇ? ಬಂದಿದ್ದರೆ ಅವರು ಯಾರು?

ವೋಲ್ಗಾ ತೀರದಿಂದ ಗಂಗಾ ತೀರಕ್ಕೆ ವಲಸೆ ಬಂದ ರಷ್ಯಾ ಮೂಲದ ಬಿಳಿಯರೇ ಆರ್ಯರು ಎಂಬ ಕಮ್ಯುನಿಸ್ಟರ ಥಿಯರಿ ಇದ್ದರೂ ಅದರ ಬಗ್ಗೆ ನಂಬಲರ್ಹ ಮಾಹಿತಿಯ ಕೊರತೆ ಇದೆ. ಅದನ್ನು ಭಾರತೀಯ ಕಮ್ಯುನಿಸ್ಟರೇ ಪರಿಗಣಿಸುತ್ತಿಲ್ಲ. ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಲ್ಲಿ ಯವನರ ಕುರಿತಾದ ಉಲ್ಲೇಖವಿದೆ. ಅಂದು ಗ್ರೀಕರನ್ನು ಯವನರು ಎನ್ನುತ್ತಿದ್ದರು. ಹಾಗಾಗಿ ಗ್ರೀಕರು ಇವೆರಡೂ ಗ್ರಂಥರಚನೆಗೂ ಮುನ್ನವೇ ಭಾರತದಲ್ಲಿ ನೆಲೆ ನಿಂತಿದ್ದ ವಿದೇಶಿ ವಲಸೆಗಾರರು ಎನ್ನಬಹುದು. ಸದ್ಯಕ್ಕೆ ಈ ಗ್ರಂಥಗಳ ಕಾಲವನ್ನು ಚರ್ಚಿಸದೆ ಗ್ರೀಕರ ಬಗ್ಗೆ ಗಮನ ಹರಿಸೋಣ. ಏಕೆಂದರೆ ಗ್ರೀಕರಿಲ್ಲದೆ ಭಾರತವಿಲ್ಲ ಎಂಬುದು ಪ್ರಮಾಣೀಕೃತ ಸಂಗತಿ!

ಅಲೆಗ್ಸಾಂಡರನಿಗಿಂತ ಮುಂಚೆಯೇ ಸಾಕಷ್ಟು ಗ್ರೀಕರು ಭಾರತಕ್ಕೆ ವಲಸೆ ಬಂದಿದ್ದರೆನ್ನಲಾಗಿದೆ. ಆ ರೀತಿ ವಲಸೆ ಬಂದ ಗ್ರೀಕರು ತಮ್ಮೊಂದಿಗೆ ತಮ್ಮ ಸಂಸ್ಕೃತಿಯ ದೇವಾನುದೇವತೆಗಳನ್ನು ತಂದಿದ್ದರು. ಅವರ ಆಲೋಚನೆಯ ದೇವರುಗಳನ್ನು ಹಿಂದೂಗಳು ತಮ್ಮ ಆರಾಧನೆಗಳೊಂದಿಗೆ ಸಂಯೋಜಿಸಿಕೊಳ್ಳುತ್ತಾ ಹಿಂದೂ ದೇವಲೋಕ ಸೃಷ್ಟಿಸಿಕೊಂಡರೆನ್ನಲಾಗುತ್ತದೆ. ಇದಕ್ಕೆ ಪೂರಕವಾಗಿ ಗ್ರೀಕರ ಜಿಯಸ್ ಮತ್ತು ಋಗ್ವೇದದ ಇಂದ್ರರಲ್ಲಿ ಸಾಕಷ್ಟು ಸಾಮ್ಯಗಳಿವೆ. ಜಿಯಸ್ಸನ ಆಯುಧ ಸಿಡಿಲಾಕೃತಿಯಲ್ಲಿದ್ದರೆ, ಅದೇ ಆಕಾರದ ವಜ್ರಾಯುಧ ಇಂದ್ರನ ಆಯುಧವಾಗಿತ್ತು. ಜಿಯಸ್ ಒಲಿಂಪಸ್ ಪರ್ವತದಲ್ಲಿದ್ದರೆ, ಇಂದ್ರ ಮೇರು ಪರ್ವತದಲ್ಲಿದ್ದ. ಜಿಯಸ್ ಮತ್ತು ಇಂದ್ರರಿಬ್ಬರೂ ಹವಾಮಾನಗಳ ದೇವತೆಗಳೆನಿಸಿದ್ದರು ಅಥವಾ ಹವಾಮಾನಗಳ ಮೇಲೆ ಹಿಡಿತ ಹೊಂದಿದ್ದರು. ಅದೇ ರೀತಿ ಗ್ರೀಕ್ ಹೀರಾ ಗೃಹ ಮತ್ತು ಸಂಪತ್ತಿನ ದೇವತೆಯಾಗಿದ್ದರೆ, ಹಿಂದೂಗಳ ಲಕ್ಷ್ಮಿ ಐಶ್ವರ್ಯದ ದೇವತೆಯಾಗಿದ್ದಳು. ಗೃಹ ಖಾತೆ ದೊಡ್ಡದೆನಿಸಿ ಪಾರ್ವತಿಯನ್ನು ಸೃಷ್ಟಿಸಿದರು. ಅಲ್ಲಿ ಅಥಿನಾ ವಿದ್ಯಾಬುದ್ಧಿಯ ದೇವತೆಯಾದರೆ, ನಮ್ಮಲ್ಲಿ ಸರಸ್ವತಿ ಅದೇ ವಿದ್ಯಾಬುದ್ಧಿಯ ದೇವತೆಯಾದಳು. ಹೇಡಸ್ ಯಮನಾಗಿ, ಪೊಸೈಡನ್ ವರುಣನಾಗಿ, ಹೆಫೋಯಿಸ್ಟಸ್ ವಿಶ್ವಕರ್ಮನಾಗಿ, ಅಪೋಲೊ ಆದಿತ್ಯನಾಗಿ, ಪ್ರೇಮಬಾಣ ಬಿಡುವ ಕ್ಯೂಪಿಡ್ ಕಾಮದೇವನಾದನು. ಹೀಗೆ ಗ್ರೀಕ್-ಹಿಂದೂ ದೇವತೆಗಳಲ್ಲಿ ಸಾಮ್ಯತೆಯಿದೆ. ಈ ದೇವತೆಗಳು ಕರ್ತವ್ಯದಲ್ಲಷ್ಟೇ ಅಲ್ಲದೆ ತಮ್ಮ ಆಯುಧ, ವಾಹನಗಳಲ್ಲಿ ಕೂಡಾ ಸಾಕಷ್ಟು ಸಾಮ್ಯತೆಯನ್ನು ಹೊಂದಿವೆ. ಹಿಂದೂ-ಗ್ರೀಕ್ ಸಂಸ್ಕೃತಿಯ ಸಮ್ಮಿಲನಕ್ಕೆ ಭಾರತದಾದ್ಯಂತ ಸಾಕ್ಷಿ ಪುರಾವೆಗಳಿವೆ. ಇತಿಹಾಸಜ್ಞರಾದ ಎಚ್.ಜಿ. ರಾಲಿನ್ಸನ್, ಗ್ರೀಕ್ ಪೈಥಾಗರಸ್ ಅನುಯಾಯಿಗಳ ಗಣಿತಸೂತ್ರ, ತತ್ವಜ್ಞಾನ, ಆಚರಣೆಗಳು ಬಹುಪಾಲು ಕ್ರಿಸ್ತಪೂರ್ವ 6ನೇ ಶತಮಾನದ ಭಾರತದಲ್ಲಿದ್ದವುಗಳೇ ಆಗಿದ್ದವೆಂದು ಅಭಿಪ್ರಾಯ ಪಟ್ಟಿದ್ದಾರೆ. ಅದಲ್ಲದೇ 11ನೇ ಶತಮಾನದ ಪರ್ಷಿಯನ್ ಯಾತ್ರಿಕ 'ಅಲ್ ಬರೂನಿ' ಭಾರತ, ಗ್ರೀಕ್ ಮತ್ತು ರೋಮನ್ನರ ಖಗೋಳ ಶಾಸ್ತ್ರಗಳಲ್ಲಿನ ಸಾಮ್ಯತೆಯ ಕುರಿತು ಭಾರತದ ಬಗೆಗಿನ ತನ್ನ ಪುಸ್ತಕದಲ್ಲಿ ಸವಿವರವಾಗಿ ಬರೆದಿದ್ದಾನೆ. ಗ್ರೀಕ್ ಮತ್ತು ಸಂಸ್ಕೃತಗಳೆರಡರಲ್ಲಿಯೂ ಪ್ರಾವೀಣ್ಯವನ್ನು ಹೊಂದಿದ್ದ ಈತ ಗ್ರೀಕ್ ಮತ್ತು ಭಾರತೀಯ ಸಂಸ್ಕೃತಿಗಳ ಸಾಮ್ಯತೆಗೆ ಆಶ್ಚರ್ಯ ವ್ಯಕ್ತಪಡಿಸಿದ್ದಾನೆ. ತಮಿಳು ಸಂಗಮ ಸಾಹಿತ್ಯದಲ್ಲಿ ಕೂಡಾ ಯವನರ ಮದ್ಯ, ಸಂಗೀತದ ವರ್ಣನೆ ಇದೆ. ಪ್ರಪ್ರಥಮ ಗರುಡಗಂಬ ಎನ್ನಲಾದ ಹೆಲಿಯೋಧರಸ್ ಸ್ಥಂಭದ ಮೇಲೆ ಬ್ರಾಹ್ಮಿ ಲಿಪಿಯ ಪ್ರಾಕೃತ ಭಾಷೆಯಲ್ಲಿ ದೇವರ ದೇವ ವಸುದೇವನ ಈ ಗರುಡಗಂಬವನ್ನು ಯೋನ (ಯವನ) ದೊರೆ ತಕ್ಷಶಿಲೆಯ ಅಮಾತ್ಯಲಿಖಿತನ ರಾಯಭಾರಿಯಾಗಿ ತಕ್ಷಶಿಲೆಯ ದಿಯೋ ನ ಪುತ್ರ ಹೆಲಿಯೋಧರ ಭಾಗವತನು, ಕಾಶೀಪುತ್ರ ಭಾಗಭದ್ರನಿಗೆ ಅರ್ಪಿಸಿರುವುದು. ಆತ್ಮನಿಗ್ರಹ, ದಾನ ಮತ್ತು ಜಾಗೃತಿಯೆಂಬ ಮೂರು ಹೆಜ್ಜೆಗಳೇ ಅಮರತ್ವಕ್ಕೆ ಕೊಂಡೊಯ್ಯುತ್ತವೆ ಎಂದು ಮೇಲೆ ಕೆತ್ತಲಾಗಿದೆ (ಲಿಪಿಯ ಮೂಲ ತರ್ಜುಮೆ: ರಿಚರ್ಡ್ ಸಾಲೋಮನ್, ಪ್ರೊಫೆಸರ್, ಏಷ್ಯನ್ ಭಾಷಾ ಅಧ್ಯಯನ ವಿಭಾಗ, ವಾಷಿಂಗ್ಟನ್ ವಿಶ್ವವಿದ್ಯಾಲಯ). ಹಿಂದೂ ಸಂಸ್ಕೃತಿಯ ವಿಷ್ಣುಭಕ್ತರಾಗಿದ್ದ ಗ್ರೀಕರು ಗರುಡಗಂಬವನ್ನು ಸ್ಥಾಪಿಸುವ ಮೂಲಕ ಪ್ರಪ್ರಥಮವಾಗಿ ಗ್ರೀಕ್ ವಿನ್ಯಾಸವನ್ನು ಭಾರತದ ಹಿಂದೂ ದೇವಸ್ಥಾನಗಳ ವಿನ್ಯಾಸಕ್ಕೆ ಸಂಯೋಜಿಸಿದರೆಂದೂ ಮತ್ತು ಈ ಸ್ತಂಭವು ವಿಷ್ಣುವಿನ ಕುರಿತಾದ ಅತ್ಯಂತ ಹಳೆಯ ಕುರುಹಾಗಿದೆ ಎಂದೂ ಇತಿಹಾಸಜ್ಞರು ಅಭಿಪ್ರಾಯಿಸಿದ್ದರು. ಆದರೆ ಆ ವಾದವನ್ನು ತಳ್ಳಿಹಾಕುತ್ತಾ ಇತಿಹಾಸಜ್ಞ ಅಲನ್ ಡಾಲಕ್ವಿಸ್ಟ್ ''ಇದು ವಿಷ್ಣುವನ್ನು ಕುರಿತಾಗಲೀ ಅಥವಾ ಗ್ರೀಕರು ವೈಷ್ಣವರಾಗಿದ್ದರೆಂಬುದಾಗಲೀ ಸರಿಯಲ್ಲ. ಬುದ್ಧನು ಕೂಡಾ ದೇವರ ದೇವನೆಂದೂ, ಬೌದ್ಧರು ಇಂದ್ರನನ್ನು ವಸುದೇವನೆಂದೂ ಕರೆಯುತ್ತಿದ್ದರು'' ಎನ್ನುತ್ತಾರೆ. ಆದರೆ ಈ ವಾದವನ್ನು ನಂತರ ಕ್ಯೂಪರ್ ಸೇರಿದಂತೆ ಸಾಕಷ್ಟು ಇತಿಹಾಸಜ್ಞರು ತಳ್ಳಿಹಾಕುತ್ತಾ ''ಗ್ರೀಕರು ವೈಷ್ಣವರೇ ಆಗಿದ್ದರು. ವಿಷ್ಣು, ಕೃಷ್ಣ, ಬಲರಾಮರ ಕುರಿತು ಬೌದ್ಧ ನಂಬಿಕೆಯ ಸುತ್ತಪೀಠಕದ ಜಾತಕ ಕಥೆಗಳಲ್ಲಿ ಕೇಳಿಬರುತ್ತದೆ. ನಿದ್ದೇಶ (ಚೂಲ ನಿದ್ದೇಸ್ಸಾ) ಎಂಬ ಬೌದ್ಧ ಗ್ರಂಥವು ಈ ಕುರಿತಾಗಿ ವಿವರಗಳನ್ನು ಹೊಂದಿದೆ. ವೈಷ್ಣವವೆಂಬುದು ಬೌದ್ಧರಲ್ಲೇ ಒಂದು ಪಂಗಡವಾಗಿದ್ದು ಅವರೆಲ್ಲಾ ಬೌದ್ಧಧರ್ಮೀಯರಾಗಿದ್ದರು. ಅಂದರೆ ಗ್ರೀಕರಾಗಲೇ ಬೌದ್ಧ-ವೈಷ್ಣವ ಪಂಥವನ್ನು ಕಟ್ಟಿಕೊಂಡಿದ್ದರು'' ಎನ್ನುತ್ತಾ ಪುರಾವೆಯನ್ನೊದಗಿಸುತ್ತಾರೆ. ಒಟ್ಟಾರೆ ವೈಷ್ಣವದ ಮೂಲ ಬೌದ್ಧಧರ್ಮವೆಂಬುದನ್ನು ಈ ಎರಡೂ ವಾದಗಳು ಸಮ್ಮತಿಸುತ್ತವೆ. ಕ್ರಿಸ್ತಪೂರ್ವ 3ನೇ ಶತಮಾನಕ್ಕೂ ಹಿಂದೆಯೇ ಬೌದ್ಧರಾಗಿ ಬುದ್ಧನ ಸ್ತೂಪಗಳನ್ನು ಕಟ್ಟುತ್ತಾ, ಹಿಂದೂಗಳಾಗಿ ಗರುಡಗಂಬಗಳನ್ನು ಸ್ಥಾಪಿಸಿದ ಗ್ರೀಕರು, ಮುಂದಿನ ಶತಮಾನಗಳಲ್ಲಿ ದಕ್ಷಿಣ ಭಾರತದಲ್ಲಿ ಕ್ಷತ್ರಿಯ, ಶೂದ್ರರಾಗುತ್ತ ಬಹಳಷ್ಟು ಶಿಲ್ಪ ಕಲಾಕೃತಿಗಳ ದೇವಸ್ಥಾನ, ಸ್ಮಾರಕಗಳಿಗೆ ವಾಸ್ತುಶಿಲ್ಪಿಗಳಾಗಿ ಸಾಕಷ್ಟು ಕಾಣಿಕೆ ನೀಡಿದ್ದಾರೆ. ನಂತರದ ಶತಮಾನಗಳಲ್ಲಿ ಹೆಚ್ಚು ಹೆಚ್ಚಾಗಿ ಜನಾಂಗೀಯವಾಗಿ ಬೆರೆತು ಯವನರು ಭಾರತೀಯರೇ ಆಗಿಹೋದುದರಿಂದ ಅವರ ವಾಸ್ತುಶಿಲ್ಪ ವಿನ್ಯಾಸದ ಕೊಡುಗೆ ಗ್ರೀಕರ ಯಾ ಯವನರದೆಂದು ಗುರುತಿಸಿಕೊಂಡಿಲ್ಲವೆಂದು ಸಾಕಷ್ಟು ಇತಿಹಾಸಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಯಾವಾಗ ಆರಾಧನೆಗಳು ಆಕಾರ ಪಡೆದವೋ ಆಗ ಭಾಗವತದ ಭಗ (ಯೋನಿ), ನೆಲಮೂಲಿಗರ ಲಿಂಗ ಸೇರಿ ಶಿವಲಿಂಗಾಕೃತಿಯಾಗಿರಬೇಕು. ಏಕೆಂದರೆ ಅಲ್ಲಿಯವರೆಗಿನ ಲಿಂಗಾಕೃತಿಗಳು ಕೇವಲ ಶಿಶ್ನರೂಪದಲ್ಲಿದ್ದವೇ ಹೊರತು ಯೋನಿಪೀಠದ ಭಾಗವಿರಲಿಲ್ಲ ಎಂದು ಸಂಶೋಧಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದಕ್ಕೆ ಸಾಕ್ಷಿಯಾಗಿ ಆಂಧ್ರಪ್ರದೇಶದಲ್ಲಿರುವ ಯೋನಿಪೀಠವಿರದ ಗುಡಿಮಲ್ಲ ಲಿಂಗವನ್ನು ತೋರುತ್ತಾರೆ. ಈ ಎಲ್ಲಾ ಬೆಳವಣಿಗೆಗಳು ಹರಪ್ಪಾ ಮೊಹೆಂಜೋದಾರೋ ನಾಗರಿಕತೆಯ ಪೂರ್ವದಲ್ಲಿಯೇ ಆಗಿರಬೇಕು. ಏಕೆಂದರೆ ಹರಪ್ಪಾ ಉತ್ಖನನದಲ್ಲಿ ಯೋನಿಪೀಠ ಸಹಿತದ ಶಿವಲಿಂಗಗಳು ಸಿಕ್ಕಿವೆ. ಗ್ರೀಕರಲ್ಲಿ ಇಲ್ಲದ ಶಿವ ಮತ್ತು ಪಾರ್ವತಿಯರ ಕುಟುಂಬವೇ ಇಲ್ಲಿನ ನೆಲಮೂಲದ ದೇವತೆಗಳೆನ್ನಬಹುದು. ಸೃಷ್ಟಿಯ ಕ್ರಿಯೆಗೆ ಪ್ರೇಮ, ನಿಸ್ವಾರ್ಥತೆ, ತ್ಯಾಗ, ನಿಷ್ಠೆ, ಸ್ನೇಹ, ಗರ್ವ, ಮದ, ಮಾತ್ಸರ್ಯ, ಸ್ವಾಭಿಮಾನಗಳಂಥ ಮಾನವ ಸಹಜ ಗುಣಗಳ ರೂಪಕಗಳ, ಪಾತ್ರಗಳು ಸಹ ಸೃಷ್ಟಿಯಾಗಿ ಸಮಗ್ರ ಸಂಸ್ಕೃತಿಸಂಕರದ ಒಗ್ಗೂಡಿಕೆಗೆ ನಾಂದಿಯಾಯಿತು. ಗ್ರೀಕರ ನೀರಿನ ದೇವತೆಯನ್ನು ಬೆಸ್ತ, ಕೃಷಿಕ, ಕರ್ಮಚಾರಿಗಳೆಂಬ ಶೂದ್ರವರ್ಗಕ್ಕೆ, ವಿಶ್ವಕರ್ಮ ಮತ್ತು ಲಕ್ಷ್ಮಿಯು ಕ್ರಮವಾಗಿ ಕುಶಲಕರ್ಮಿ ಮತ್ತು ವರ್ತಕರೆಂಬ ವೈಶ್ಯರಿಗೆ, ಸರಸ್ವತಿಯು ಬ್ರಾಹ್ಮಣರಿಗೆ ಹಾಗೂ ಇಂದ್ರನು ಕ್ಷತ್ರಿಯರಿಗೆ ಮೂಲ ದೇವತೆಗಳಾಗಿ ಮುಂದೆ ವರ್ಣಾಶ್ರಮಕ್ಕೆ ಸಂಯೋಜಿಸಲ್ಪಟ್ಟರು!

ಕಾಲಕ್ರಮೇಣ, ಭಾಗವತರ ವಸುದೇವನಿಗೆ ಶಿವನಂತೆಯೇ ವಿಷ್ಣು ರೂಪ ಕೊಟ್ಟಾಗ ಶಿವಲಿಂಗದ ಕಲ್ಪನೆಯು ಹರಿಹರನ ರೂಪವಾಗಿ ವಿಸ್ತರಿಸಿತು! ವಿಷ್ಣುವಿನ ಮೂಲ ಭಗವಾದುದರಿಂದಲೇ ವಿಷ್ಣುವನ್ನು ಮೋಹಿನಿ ರೂಪದ ಮಹಿಳೆಯಾಗಿ ಸುವಂಥ ಕತೆಗಳಾದವೆನಿಸುತ್ತದೆ. ಅಲ್ಲದೆ ಶಿವನು ಮಹಿಳೆಯ ರೂಪ ತಳೆದ ಯಾವುದೇ ಉದಾಹರಣೆಗಳಿಲ್ಲ ಸಹ. ಆದರೆ ಮುಂದೆ ದೇವಾನುದೇವತೆಗಳಿಗೆ ಸಂಸಾರಗಳು ಜತೆಯಾದಾಗ ಈ ಹರಿಹರರಿಗೂ ಪುತ್ರನನ್ನು ಸೃಷ್ಟಿಸಲಾಯಿತು. ಇಲ್ಲಿ ಪುರುಷ-ಪುರುಷನಿಗೆ ಮಗುವನ್ನು ಸೃಷ್ಟಿಸುವ ಕಾರ್ಯ ಅಸಹಜವೆನ್ನಿಸಿದ್ದರಿಂದ ಈ ಕಾರ್ಯವನ್ನು ಅಂದಿನ ಅಸಹಜವೆನ್ನಿಸುವ ಪಂಥವಾದ ತಾಂತ್ರಿಕ ಪಂಥ ಹರಿಹರಪುತ್ರನನ್ನು ಸೃಷ್ಟಿಸಿ ಪೂಜಿಸುವ ಪರಿಪಾಠ ಬಂದಿರಬಹುದೇನೋ! ಆದರೆ ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಸಲಿಂಗ ಸಂಬಂಧವನ್ನು ಕೂಡಾ ಅಧಿಕೃತವಾಗಿ ಒಪ್ಪಿಕೊಂಡು ಒಳಗೊಳ್ಳುವ ಪ್ರಕ್ರಿಯೆಯಾಗಿ ದೇವಲೋಕಕ್ಕೆ ಮಾಡಿಕೊಂಡ ತಿದ್ದುಪಡಿ ಇದೆನ್ನಿಸುತ್ತದೆ. ಮುಂದೆ ಇಂಥ ಸಾಕಷ್ಟು ತಿದ್ದುಪಡಿಗಳನ್ನು ದೇವಲೋಕಕ್ಕೆ ಪ್ರಯೋಗಿಸಿ ನಂತರ ಸಾಮಾಜಿಕವಾಗಿ ಅಳವಡಿಸಿಕೊಳ್ಳುವ ಪರಿಪಾಠ ಬಂದಿರಬಹುದು.

ಒಟ್ಟಾರೆ ಹೀಗೆ ಮಾನವಲೋಕದೊಂದಿಗೆ ದೇವಲೋಕವನ್ನು ಸಾಮಾಜಿಕವಾಗಿ ಸಂಯೋಗಿಸಿಕೊಳ್ಳುವ ಪರಿಯೇ ಆಧ್ಯಾತ್ಮಿಕವಾಗಿ ಆತ್ಮ ಮತ್ತು ಪರಮಾತ್ಮದ ಸಮೀಕರಣದ ಸೋಹಂ, ಅಹಂ ಬ್ರಹ್ಮಾಸ್ಮಿ, ಲಿಂಗಾಂಗ ಸಾಮರಸ್ಯ, ಶರಣಸತಿ ಲಿಂಗಪತಿಯಾಗಿದೆ! ಈ ಸಾಮಾಜಿಕ ವ್ಯಕ್ತಿ-ಸಮಾಜ ಸಮನ್ವಯದ ಕಾರಣವೇ ವೇದಗಳು ಕೇವಲ ಆಧ್ಯಾತ್ಮಿಕ ತತ್ವಗಳಲ್ಲದೆ ಸಾಮಾಜಿಕ ನೀತಿ ಸಹ ಆಗಿದ್ದವು. ಹೀಗೆ ಪರಸ್ಪರ ಮಾನವಲೋಕ-ದೇವಲೋಕ, ಭೂಗೋಳ-ಖಗೋಳ, ವ್ಯಕ್ತಿ-ಸಮಾಜ, ಆತ್ಮ-ಪರಮಾತ್ಮಗಳ ಸಮೀಕರಣ ಮತ್ತು ನವೀಕರಣ ವ್ಯವಸ್ಥೆ ಇದ್ದುದರಿಂದಲೇ ಹಿಂದೂ ಸಂಸ್ಕೃತಿ ಒಂದು ಜೀವಂತ ಉಸಿರಾಡುವ ಸಂಸ್ಕೃತಿ ಎನಿಸುವುದು. ಹಾಗಾಗಿಯೇ ಇದು ಕಾಲಕಾಲಕ್ಕೆ ನವೀಕರಣಗೊಳ್ಳುವ ಸಂವಿಧಾನ ಎನಿಸಿ ಅಂದಿನ ಸಂವಿಧಾನವಾದ ವೇದಗಳು ಕಾಲಕಾಲಕ್ಕೆ ತಿದ್ದುಪಡಿಗೊಳಗಾಗಿದ್ದುದು. ಆದರೆ ಅದನ್ನು ಸರಿಯಾಗಿ ಅರ್ಥೈಸಿಕೊಳ್ಳದೆ ಕೇವಲ ಪೂರ್ವಗ್ರಹ ಮೂಲೋದ್ದೇಶವಾಗಿ ಯೋಚಿಸಿದಾಗ ಅದು ಅರ್ಥಹೀನ ಎನಿಸಿಬಿಡುತ್ತದೆ.

ಇರಲಿ, ಇಲ್ಲಿ ಶಿವನ ಸೃಷ್ಟಿ ಅತ್ಯಂತ ಕುತೂಹಲಕರ ಆಯಾಮವೊಂದನ್ನು ಹೊಂದಿದೆ. ಒಮ್ಮೊಮ್ಮೆ ಯಾವುದೋ ಅಂದಿನ ಜೀವಶಾಸ್ತ್ರದ ಕಲ್ಪನೆ ಶಿವನ ಕಥಾರೂಪಕ್ಕೆ ಪ್ರೇರಣೆಯಾಗಿರಬಹುದೆನಿಸುತ್ತದೆ. ಏಕೆಂದರೆ ಹೆಣ್ಣಿನ ಅಗತ್ಯವಿಲ್ಲದೆ ಶಿವ ತನ್ನ ವೀರ್ಯದಿಂದ ವೀರಭದ್ರನನ್ನು ಸೃಷ್ಟಿಸಿಕೊಂಡರೆ, ಪಾರ್ವತಿ ಶಿವನಿಲ್ಲದೇ ಗಣಪನನ್ನು ಸೃಷ್ಟಿಸಿಕೊಂಡು, ನಂತರ ಶಿವಪಾರ್ವತಿಯರಿಬ್ಬರೂ ಸೇರಿ ಷಣ್ಮುಖನನ್ನು ಪಡೆದುಕೊಂಡರು. ನಂತರದ ಶಿವ-ವಿಷ್ಣು ರೂಪದ ಹರಿಹರನ ಪುತ್ರ ಅಯ್ಯಪ್ಪನ ಸೃಷ್ಟಿ ಇವೆಲ್ಲಾ ತದ್ರೂಪು ರಚನೆಯ ಯಾ ವಂಶವಾಹಿ ಪರಿವರ್ತನೆಗಳ ಆರಂಭಿಕ ವೈಜ್ಞಾನಿಕ ಪರಿಕಲ್ಪನೆಯಂತಿವೆ. ಈ ವೈಜ್ಞಾನಿಕ ಕಲ್ಪನೆಯ ಜತೆಜತೆಗೆ ಮತ್ತೊಂದು ಸಾಮಾಜಿಕ ಕಲ್ಪನೆ ಕೂಡಾ ಶಿವಪಾರ್ವತಿಯರ ಕಥೆಯಲ್ಲಿದೆ.

''ಕಟ್ಟುಮಸ್ತಾದ ನಾಯಕ ಬಡವ, ಮನೆಮಠವಿಲ್ಲದವ. ಆದರೂ ಅವನಿಗೊಬ್ಬ ಬಲಗೈ ಬಂಟನಿರುತ್ತಾನೆ. ನಾಯಕಿ ಅತ್ಯಂತ ಸುಂದರಿ, ಶ್ರೀಮಂತನ ಮಗಳು. ಇವಳಿಗೆ ನಾಯಕನ ಮೇಲೆ ಪ್ರೇಮ. ಪೋಷಕರ ವಿರೋಧದ ನಡುವೆ ಮನೆ ಬಿಟ್ಟು ನಾಯಕನನ್ನು ಮದುವೆಯಾಗುತ್ತಾಳೆ. ಒಂದೊಮ್ಮೆ ತವರನ್ನು ನೋಡಲೆನಿಸಿ ನಾಯಕನನ್ನು ಕರೆದುಕೊಂಡು ಹೋಗೆನ್ನುತ್ತಾಳೆ. ಆದರೆ ಸ್ವಾಭಿಮಾನಿ ನಾಯಕ ನಾನಲ್ಲಿಗೆ ಕಾಲಿಡಲಾರೆನೆನ್ನುತ್ತಾನೆ. ಕಡೆಗೆ ಆಕೆ ತಡೆಯಲಾರದೇ ತವರುಮನೆಗೆ ಹೋಗಿ ಅವಮಾನಿತಳಾಗಿ ಆತ್ಮಹತ್ಯೆಗೆ ಪ್ರಯತ್ನಿಸುತ್ತಾಳೆ. ಇದರಿಂದ ಕುಪಿತಗೊಂಡ ನಾಯಕ ತನ್ನ ಬಲಗೈ ಬಂಟನೊಂದಿಗೆ ನಾಯಕಿಯ ಪೋಷಕರ ಕಡೆಯವರನ್ನು ಚೆಂಡಾಡುತ್ತಾನೆ''- ಇದು ಭಾರತೀಯ ಮೂಲದ ಯಾವುದೇ ಭಾಷೆಯ ಸಾಕಷ್ಟು ಸಿನಿಮಾಗಳ ಆದಿಯಿಂದ ಇಂದಿನವರೆಗೆ ಮೆರೆಯುತ್ತಿರುವ ಮೂಲ ಪ್ರೇಮಕಥೆಯ ತಿರುಳು. ಈ ಎಲ್ಲಾ ಪ್ರೇಮಕಥೆಗಳ ಒಟ್ಟಾರೆ ಕಥಾಹಂದರ ಶಿವ-ಪಾರ್ವತಿಯರ ಪ್ರೇಮಕಥೆ! ಇಲ್ಲಿ ನಾಯಕ ಶಿವ, ನಾಯಕಿ ಪಾರ್ವತಿ, ನಾಯಕನ ಬಂಟ ವೀರಭದ್ರ, ಪಾರ್ವತಿಯ ದುಷ್ಟ ಪೋಷಕ ದಕ್ಷಬ್ರಹ್ಮ!

ಹೀಗೆ ಶಿವನ ಕಥೆ ಪ್ರಪಂಚದ ಪ್ರಪ್ರಥಮ ಕಾಲ್ಪನಿಕ ವೈಜ್ಞಾನಿಕ ಕಥೆಯಷ್ಟೇ ಅಲ್ಲದೇ ಜಗತ್ತಿನ ಪ್ರಪ್ರಥಮ ಪ್ರೇಮಕಥೆಯೂ ಎನಿಸುತ್ತದೆ. ಒಟ್ಟಾರೆ ಶಿವ ಸಾಮಾಜಿಕವಾಗಿಯೂ ವೈಜ್ಞಾನಿಕವಾಗಿಯೂ, ಆರ್ಯರಿಗೂ ಅನಾರ್ಯರಿಗೂ, ಶ್ರೀಮಂತರಿಗೂ ಬಡವರಿಗೂ, ಗೌರವರ್ಣದವರಿಗೂ ಕೃಷ್ಣವರ್ಣದವರಿಗೂ ಮತ್ತು ವೈದಿಕರಿಗೂ ಅವೈದಿಕರೆಲ್ಲರಿಗೂ ಆದರ್ಶನೆನಿಸುತ್ತಾನೆ. ಏಕೆಂದರೆ ಪ್ರೇಮ, ಕಾಮ, ಮತ್ತು ಸಂತಾನ ಮಾನವ ಜನಾಂಗದ ಅಭ್ಯುದಯಕ್ಕೆ ಅವಶ್ಯವಲ್ಲವೇ!

ಹೀಗೆ ಪ್ರಕೃತಿ ಮೂಲವಾದ ಅಗ್ನಿ, ಇಂದ್ರ, ವಾಯು, ಸೂರ್ಯರಿಂದ ಆರಂಭವಾದ ದೇವರುಗಳ ಸೃಷ್ಟಿ ಕ್ರಮೇಣ ದೇವತೆಗಳನ್ನು, ಮೂಲವಾಸಿಗಳ ಶಿವನನ್ನು ಒಳಗೊಳ್ಳುತ್ತಾ ನಂತರದ ಕೃಷ್ಣ, ವಿಷ್ಣು, ರಾಮರನ್ನು ಒಳಗೊಂಡು ಹಿಗ್ಗುತ್ತಾ ಸಾಗಿತು. ಹಾಗಾಗಿಯೇ ಬೌದ್ಧಧರ್ಮದ ಜಾತಕ ಕತೆಗಳಲ್ಲಿಯೂ ಹಿಂದೂ ದೇವರುಗಳಿದ್ದಾರೆ ಮತ್ತು ಜೈನರು ಕೂಡಾ ಹಿಂದೂ ದೇವತೆಗಳನ್ನು ಆರಾಧಿಸುತ್ತಾರೆ. ಅದೇ ರೀತಿ ನಂತರ ಬಂದ ಮುಸ್ಲಿಮರು, ಕ್ರಿಶ್ಚಿಯನ್ನರು ಕೂಡಾ ತಮ್ಮ ಮತಧರ್ಮ ಸೂತ್ರಗಳನ್ನು ಗ್ರೀಕರಂತೆ ಇದೇ ಸಂಸ್ಕೃತಿಯೊಟ್ಟಿಗೆ ಸಂಯೋಜಿಸಿಕೊಂಡಿದ್ದರೆ ಇಂದು ಹಿಂದೂಧರ್ಮದಲ್ಲಿ ಅಲ್ಲಾಹು, ಯೇಸು ಸಹ ಇನ್ನಿಬ್ಬರು ದೇವರುಗಳಾಗಿರುತ್ತಿದ್ದರು.

ಸೌಹಾರ್ದಮಯವಾಗಿ ಎಲ್ಲರನ್ನೂ ಒಳಗೊಳ್ಳುತ್ತ ಬೆಳೆದ ಇಂಥ ಸಂಸ್ಕೃತಿ ಯಾವಾಗ ಪಂಥಭೇದಗಳಾಗಿ ಸಾಗಿತೋ ಆಗ ಪರಸ್ಪರ ಶ್ರೇಷ್ಠತೆಯ ಪೈಪೋಟಿ ಉದ್ಭವಗೊಂಡಿತು. ವೀರಶೈವದ ಸಮಯಭೇದಗಳು ಸಹ ಹೀಗೆಯೇ ಸ್ವಪ್ರತಿಷ್ಠೆಗಾಗಿ ಆರಂಭವಾದವು ಎಂಬುದನ್ನು ಇಲ್ಲಿ ಸಾಂದರ್ಭಿಕವಾಗಿ ನೆನಪಿಸಿಕೊಳ್ಳಬಹುದು. ಏಕೆಂದರೆ ಹಿಂದೂ ಸಂಸ್ಕೃತಿಯಲ್ಲಿ ಏನಾಯಿತೋ ಅದೆಲ್ಲವೂ ಹಿಂದೂ ಪ್ರಭೇದದ ಮತಪಂಥಗಳಲ್ಲಿಯೂ ಆಗಿದೆ, ಆಗುತ್ತಿದೆ. ಇದಕ್ಕೆ ವೀರಶೈವ ಮತಭೇದ ಸಹ ಹೊರತಾಗಿರಲಿಲ್ಲ.

(ಮುಂದುವರಿಯುವುದು)

(ಲೇಖಕರು ಶಿಕಾಗೊ ನಿವಾಸಿ ಮತ್ತು ಸಾಹಿತಿ)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 284

## ಸಮಾಚಾರ ಸಣ್ಣದಲ್ಲ

### ಎಚ್‌ಐವಿ ಸೋಂಕಿನ ಸೂಜಿ ಚುಚ್ಚಿದ ಅತ್ತೆ-ಮಾವ

**ಸಹರಾನ್‌ಪುರ:** ಉತ್ತರ ಪ್ರದೇಶದ ಸಹರಾನ್‌ಪುರದ ಕುಟುಂಬದ ವರನ ತಂದೆ-ತಾಯಿ ವರದಕ್ಷಿಣೆಯಾಗಿ 10 ಲಕ್ಷ ರು. ತರಲಿಲ್ಲ, ಅಪ್ಪ-ಅಮ್ಮನಿಗೆ ಹೇಳಿ ಎಸ್‌ಯುವಿ ಕಾರು ಕೊಡಿಸಲಿಲ್ಲ ಎಂದು ಹೊಸದಾಗಿ ಮದುವೆಯಾಗಿ ಮನೆಗೆ ಬಂದ ಸೊಸೆ ಮೇಲೆ ಸಿಟ್ಟಾಗಿ ಎಚ್‌ಐವಿ ಸೋಂಕು ಇರುವ ಇಂಜೆಕ್ಷನ್ ಚುಚ್ಚಿದ್ದಾರೆ. 30 ವರ್ಷದ ನವವಧು ಮತ್ತು ಆಕೆಯ ಪೋಷಕರು ಪೊಲೀಸರಿಗೆ ದೂರು ನೀಡಿದರೂ ಪ್ರಕರಣ ದಾಖಲಾಗಿಲ್ಲ. ಬಳಿಕ ಪೋಷಕರು ಕೋರ್ಟ್ ಮೊರೆ ಹೋಗಿದ್ದಾರೆ. ಅತ್ತೆ-ಮಾವನ ಕ್ರೂರ ನಡೆತೆ ವಿರುದ್ಧ ಅಪರಾಧ ಪ್ರಕರಣ ದಾಖಲಿಸುವಂತೆ ಸಹರಾನ್‌ಪುರ ನ್ಯಾಯಾಲಯ ಪೊಲೀಸರಿಗೆ ಆದೇಶಿಸಿದೆ. ಪತಿ, ಅತ್ತೆ-ಮಾವ ಸೇರಿದಂತೆ ಒಟ್ಟು ನಾಲ್ವರ ವಿರುದ್ಧ ಬಿಎನ್‌ಎಸ್‌ನ 307, 498ಎ, 323, 328, 406 ಸೆಕ್ಷನ್‌ಗಳಡಿ ಪ್ರಕರಣ ದಾಖಲಾಗಿದೆ.

### ಹಿಜ್ಬುಲ್ಲಾ ಉಗ್ರ ನಾಯಕರ ಹತ್ಯೆ

**ಟೆಲ್‌ಅವಿವ್:** ಇಸ್ರೇಲ್ ಮತ್ತು ಹಮಾಸ್ ಉಗ್ರ ಸಂಘಟನೆ ಮಧ್ಯೆ ಕದನ ವಿರಾಮ ಜಾರಿಯಲ್ಲಿದ್ದು, ತನ್ನ ಬಳಿ ಇರುವ ಇಸ್ರೇಲ್ ಒತ್ತೆಯಾಳುಗಳನ್ನು ಹಮಾಸ್ ಬಿಡುಗಡೆ ಮಾಡುತ್ತಿದ್ದರೆ, ಇಸ್ರೇಲ್ ಸೆರೆಮನೆಯಿಂದಲೂ ಪ್ಯಾಲೆಸ್ತೀನಿಗಳ ಬಂಧಮುಕ್ತಿಯಾಗುತ್ತಿದೆ. ಈ ಪ್ರಕ್ರಿಯೆ ಮಧ್ಯೆಯೇ ಲೆಬನಾನ್‌ನಲ್ಲಿನ ಹಿಜ್ಬುಲ್ಲಾ ಉಗ್ರ ಸಂಘಟನೆ ಮೇಲೆ ಇಸ್ರೇಲ್ ವಾಯುಪಡೆ ದಾಳಿ ನಡೆಸಿದೆ. ಶನಿವಾರ ನಡೆದ ವಾಯುದಾಳಿಯಲ್ಲಿ ಹಿಜ್ಬುಲ್ಲಾ ಉಗ್ರ ಸಂಘಟನೆಯ ವಾಯುಪಡೆ ಪ್ರಮುಖ ಸದಸ್ಯ ಅಬ್ಬಾಸ್ ಅಹ್ಮದ್ ಹಮೌದ್ ಮತ್ತು ಡ್ರೋನ್ ಉಡಾವಣಾ ಕೇಂದ್ರದ ಮುಖ್ಯಸ್ಥ ಅಬ್ಬಾಸ್ ಅಹ್ಮದ್ ಹಮೌದ್ ಹತರಾಗಿದ್ದಾರೆ ಎಂದು ತಿಳಿದುಬಂದಿದೆ.

### ನಾಗಪುರ ಕಾರ್ಖಾನೆ ಸ್ಫೋಟದಲ್ಲಿ 2 ಸಾವು

**ನಾಗಪುರ:** ಮಹಾರಾಷ್ಟ್ರದ ನಾಗಪುರ ಜಿಲ್ಲೆಯಲ್ಲಿನ ಸ್ಫೋಟಕ ತಯಾರಿಕಾ ಘಟಕದಲ್ಲಿ ಭಾನುವಾರ ಸ್ಫೋಟವಾಗಿದ್ದು, ಇಬ್ಬರು ಕಾರ್ಮಿಕರು ಸಾವಿಗೀಡಾಗಿದ್ದಾರೆ, ಹಲವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಜಿಲ್ಲಾ ಕೇಂದ್ರದಿಂದ 50 ಕಿಮೀ ದೂರದ ಕಟೋಲ್ ತಹಸಿಲ್‌ನ ಕೊತಲ್ವಾಡಿಯಲ್ಲಿರುವ ಎಸ್‌ಬಿಎಲ್ ಎನರ್ಜಿ ಲಿ. ಕಾರ್ಖಾನೆಯಲ್ಲಿ ಮಧ್ಯಾಹ್ನ 1.30ರಲ್ಲಿ ಸ್ಫೋಟವಾಗಿದೆ. ಪರಿಣಾಮ ಸುತ್ತಲಿನ ಕಾಡಿನಲ್ಲಿ ಬೆಂಕಿ ಹರಡಿದ್ದು, ಬಳಿಕ ಬೆಂಕಿ ನಿಯಂತ್ರಿಸಲಾಗಿದೆ ಎಂದು ಅಧಿಕಾರಿ ಮಾಹಿತಿ ನೀಡಿದ್ದಾರೆ.

### ದೇಶದಲ್ಲಿ 29,500 ರಿಜಿಸ್ಟರ್ಡ್ ಡ್ರೋನ್

**ದೆಹಲಿ:** ನಾಗರಿಕ ವಿಮಾನಯಾನ ನಿರ್ದೇಶನಾಲಯದ ಜ.29ರವರೆಗಿನ ಮಾಹಿತಿ ಪ್ರಕಾರ ಭಾರತದಲ್ಲಿ 29,500ರಷ್ಟು ಡ್ರೋನ್‌ಗಳು ನೋಂದಾವಣೆಯಾಗಿವೆ. ದೆಹಲಿಲ್ಲಿ ಅತಿ ಹೆಚ್ಚು(4,882) ಡ್ರೋನ್‌ಗಳಿವೆ. ಕರ್ನಾಟಕದಲ್ಲಿ 2,516 ಡ್ರೋನ್‌ಗಳು ನೋಂದಣಿಯಾಗಿವೆ. ತಮಿಳುನಾಡು 4,588, ಮಹಾರಾಷ್ಟ್ರ 4,132, ಹರಿಯಾಣ 3,689, ತೆಲಂಗಾಣ 1,928, ಗುಜರಾತ್ 1,338 ಮತ್ತು ಕೇರಳದಲ್ಲಿ 1,318 ಡ್ರೋನ್‌ಗಳು ನೋಂದಣಿಯಾಗಿವೆ. ನಾಗರಿಕ ವಿಮಾನಯಾನ ನಿರ್ದೇಶನಾಲಯ ಡ್ರೋನ್‌ಗಳಿಗೆ 96 ಪ್ರಕಾರದ ಪ್ರಮಾಣಪತ್ರ ನೀಡಿದೆ. 65 ಮಾದರಿಗಳು ಕೃಷಿ ಉದ್ದೇಶಕ್ಕಾಗಿವೆ.

### ಕುಂಭಮೇಳದಲ್ಲಿ ಸಿಂಘ್ವಿ ಪುಣ್ಯಸ್ನಾನ

**ಅಯೋಧ್ಯೆ:** ಕಾಂಗ್ರೆಸ್ ಹಿರಿಯ ನಾಯಕ, ರಾಜ್ಯಸಭಾ ಸದಸ್ಯ ಅಭಿಷೇಕ್ ಸಿಂಘ್ವಿ ಅವರು, ಅಯೋಧ್ಯೆಗೆ ಭಾನುವಾರ ತೆರಳಿ ಶ್ರೀರಾಮಲಲ್ಲಾ ದೇವಸ್ಥಾನಕ್ಕೆ ಭೇಟಿ ನೀಡಿದ್ದಾರೆ. ರಾಮಲಲ್ಲಾ ದರ್ಶನವೊಂದು 'ದೈವಿಕ ಭಾಗ್ಯ' ಎಂದು ಬಣ್ಣಿಸಿ ದ್ದಾರೆ. ದೇವಾಲಯದಲ್ಲಿ ಪೂಜೆ-ಪ್ರಾರ್ಥನೆ ಸಲ್ಲಿಸಿದ ನಂತರ ಅಭಿಷೇಕ್ ಮನು ಸಿಂಘ್ವಿ ಅವರು,

ಅಯೋಧ್ಯೆಯಲ್ಲಿ ರಾಮ ಲಲ್ಲಾ ದರ್ಶನ ಮತ್ತು ಪ್ರಯಾಗ್‌ರಾಜ್‌ನಲ್ಲಿ ಮಹಾಕುಂಭದಲ್ಲಿ ಪವಿತ್ರ ಸ್ನಾನ ಮಾಡಿದ ನಂತರ, ನಂಬಿಕೆ ಮತ್ತು ಭಕ್ತಿಯಿಂದ ಹೃದಯ ತುಂಬಿ ಬಂದಿದೆ. ಪುನೀತ ಭಾವದೊಂದಿಗೆ ದೆಹಲಿಗೆ ಹಿಂತಿ ರುಗುತ್ತಿದ್ದೇನೆ. ಈ ಯಾತ್ರೆಗಳು ಭಾರತದ ಆತ್ಮವು ಅದರ ಏಕತೆ, ಆಧ್ಯಾತ್ಮಿಕತೆ ಮತ್ತು ಶ್ರೀಮಂತ ಸಂಪ್ರ ದಾಯಗಳಲ್ಲಿ ಇದೆ ಎಂಬುದನ್ನು ನೆನಪಿಸುತ್ತವೆ ಎಂದು 'ಎಕ್ಸ್' ಖಾತೆಯಲ್ಲಿ ಬರೆದಿದ್ದಾರೆ.

{ಲಾಲೂ ಪ್ರಸಾದ್ ಯಾದವ್} ಆರ್‌ಜೆಡಿ ಮುಖ್ಯಸ್ಥ

**ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿನ ಮಹಾ ಕುಂಭಮೇಳ ಅರ್ಥಹೀನ. ಅಲ್ಲಿ ಹೋಗಿ ನದಿಯಲ್ಲಿ ಮುಳುಗೇಳಲು ಕೋಟ್ಯಂತರ ಮಂದಿ ತೆರಳುತ್ತಿರುವುದರಿಂದಲೇ ಕಾಲ್ತುಳಿತವಾಗುತ್ತಿದೆ. ಶನಿವಾರ ರಾತ್ರಿ ದೆಹಲಿ ರೈಲು ನಿಲ್ದಾಣದ ಘಟನೆಯೂ ಅದಕ್ಕೆ ಸಾಕ್ಷಿ. ಆ ಘಟನೆಗೆ ರೈಲ್ವೆ ಇಲಾಖೆ ನಿರ್ಲಕ್ಷ್ಯವೇ ಕಾರಣ. ಹೊಣೆ ಹೊತ್ತು ರೈಲ್ವೆ ಸಚಿವ ರಾಜೀನಾಮೆ ಕೊಡಬೇಕು.**



ದೆಹಲಿ ರೈಲು ನಿಲ್ದಾಣ ಪ್ಲ್ಯಾಟ್‌ಫಾರಂ 15-16 ರಲ್ಲಿ ಅವಘಡ | ಈ ಬಾರಿಯೂ ಮಹಿಳೆಯರು, ಮಕ್ಕಳೇ ನತದೃಷ್ಟರು

# ಜೀವಕ್ಕೆರವಾಯಿತು ಪ್ರಯಾಗ ರೈಲು ಏರುವ ಧಾವಂತ

**ದೆಹಲಿ:** 4 ಮಕ್ಕಳು ಸೇರಿದಂತೆ 18 ಜೀವಗಳನ್ನು ಬಲಿ ತೆಗೆದುಕೊಂಡ ಕಾಲ್ತುಳಿತ ನಡೆದ ದೆಹಲಿ ರೈಲ್ವೆ ನಿಲ್ದಾಣದ ಪ್ಲಾಟ್‌ಫಾರಂ 15-16ರ ಮೇಲು ಸೇತುವೆಯ ಮೆಟ್ಟಿಲುಗಳ ಮೇಲೆ ಪಾದರಕ್ಷೆಗಳು, ಪ್ರಯಾಣಿಕರ ಸೂಟ್‌ಕೇಸ್, ಕೈಚೀಲ, ಮಕ್ಕಳ ಪುಟ್ಟ ಬ್ಯಾಕ್‌ಪ್ಯಾಕ್ ಬ್ಯಾಗ್‌ಗಳು ಮತ್ತಿತರ ಲಗ್ಗೇಜ್‌ಗಳು, ನೀರಿನ ಬಾಟಲಿಗಳು, ಹರಡಿಬಿದ್ದ ಆಹಾರದ ಡಬ್ಬಿಗಳು ದುರಂತಕ್ಕೆ ಸಾಕ್ಷಿಯಾಗಿವೆ.

ಪುಟ್ಟ ಬಾಲಕಿಯರಾದ 7 ವರ್ಷದ ರಿಯಾಸಿಂಗ್, 8 ವರ್ಷದ ಪೂಜಾ ಕುಮಾರಿ, 11 ವರ್ಷದ ಸುರುಚಿ ಹಾಗೂ ಬಾಲಕರಾದ 12 ವರ್ಷದ ನೀರಜ್, 15 ವರ್ಷದ ವಿಜಯ್ ಸಹಾ ನೂರಾರು ಜನರ ಕಾಲಿನಡಿ ಸಿಲುಕಿ, ತುಳಿತಕ್ಕೊಳಗಾಗಿ ಉಸಿರು ಚೆಲ್ಲಿದ್ದಾರೆ. ಉಳಿದಂತೆ ಆಶಾದೇವಿ(79) ಶೀಲಾದೇವಿ(50) ಪಿಂಕಿ ದೇವಿ(41), ಪೂನಂ ದೇವಿ(40), ಶಾಂತಿ ದೇವಿ(40), ಕೃಷ್ಣಾ ದೇವಿ(40), ಮಮತಾ ಝಾ(40), ಲಲಿತಾ ದೇವಿ(35), ಸಂಗೀತಾ ಮಲಿಕ್(34), ಪೂನಂ(24), ಬೇಬಿ ಕುಮಾರಿ(24) ಹಾಗೂ ಮನೋಜ್(47), ವ್ಯೋಮ್(25) ಜನರ ಆತುರ ನಡೆಗೆ ಸಿಲುಕಿಕೊಂಡು ನೂಕು ನುಗ್ಗಲಿನಲ್ಲಿ ಉಸಿರುಗಟ್ಟಿ ಜೀವ ತೆತ್ತಿದ್ದಾರೆ.

**ನೂಕು ನುಗ್ಗಲು:** ಉತ್ತರ ಪ್ರಯಾಗ್‌ರಾಜ್‌ನಲ್ಲಿ ನಡೆದಿರುವ ಮಹಾಕುಂಭ ಮೇಳದಲ್ಲಿ ಭಾಗಿಯಾಗಿ ತ್ರಿವೇಣಿ ಸಂಗಮದಲ್ಲಿ ಮಿಂದು ಪುಣ್ಯ ಗಳಿಸಿಕೊಳ್ಳಬೇಕೆಂಬ ಹಂಬಲದಿಂದ ಪ್ರಯಾಣಕ್ಕೆ ಸಿದ್ದರಾಗಿ ಬಂದಿದ್ದ ಸಾವಿರಾರು ಮಂದಿ ಒಂದೆಡೆ 'ಪ್ರಯಾಗ್‌ರಾಜ್ ಎಕ್ಸ್‌ಪ್ರೆಸ್'ಗಾಗಿ ಕಾಯುತ್ತಿದ್ದರೆ, ಇನ್ನೊಂದೆಡೆ 'ಪ್ರಯಾಗ್‌ರಾಜ್ ಸ್ಪೆಷಲ್' ಟ್ರೈನ್‌ಗಾಗಿ ನಿರೀಕ್ಷಿಸುತ್ತಿದ್ದರು. ಸಾವಿರಾರು ಮಂದಿ ಒಂದೆಡೆ ಸೇರಿದ್ದರಿಂದ ನೂಕು ನುಗ್ಗಲಾಗಿ ಮೆಟ್ಟಿಲುಗಳ ಮೇಲೆ ಕಾಲುಜಾರಿ ಬಿದ್ದುದೇ ಕಾಲ್ತುಳಿತಕ್ಕೆ ಕಾರಣವಾಗಿದೆ ಎನ್ನಲಾಗಿದೆ. ರೈಲು ನಿಲ್ದಾಣದ ಪ್ಲ್ಯಾಟ್‌ಫಾರಂ 15-16ರಲ್ಲಿ ಅದರ ಅಕ್ಕಪಕ್ಕದ ಪ್ಲಾಟ್‌ಫಾರಂಗಳಲ್ಲಿಯೂ ತಮ್ಮವರಿಗಾಗಿ ಬಂಧು-ಮಿತ್ರರು ಜೋರಾಗಿ ಕೂಗುತ್ತಾ, ಬಿಕ್ಕಳಿಸಿ ಅಳುತ್ತಾ, ಆತಂಕ-ಧಾವಂತದಿಂದ ಹುಡುಕಾಟ ನಡೆಸುತ್ತಿದ್ದ ದೃಶ್ಯ ಎಂಥ ಧೈರ್ಯವಂತರ ಎದೆಯನ್ನೂ ಕ್ಷಣಕಾಲ ನಡುಗಿಸುವಂತೆ ಮಾಡುತ್ತಿತ್ತು.

ಪ್ರಯಾಗ್‌ರಾಜ್‌ಗೆ ಪ್ರಯಾಣಿಸಲೆಂದು ಬಂದಿದ್ದವರಲ್ಲೊಬ್ಬರು ಜನದಟ್ಟಣೆಯಲ್ಲಿ ಕಳೆದುಹೋಗಿರುವ 12 ವರ್ಷದ ತಮ್ಮ ಮಗನಿಗಾಗಿ ಹುಡುಕಾಡುತ್ತಿದ್ದಾಗಲೇ ಮಗನ ಪಾದರಕ್ಷೆ ಕಂಡು ಜೋರಾಗಿ ಅಳಲು ಆರಂಭಿಸಿದರು. ಅವರಿಗೆ ಸಮಾಧಾನ ಹೇಳುವವರೂ ಅಲ್ಲಿ ಇರಲಿಲ್ಲ. ಇಂಥ ಹೃದಯವಿದ್ರಾವಕ ಸಂದರ್ಭದಲ್ಲೇ ಟಿವಿ ಕ್ಯಾಮೆರಾಮನ್‌ಗಳು, ಪತ್ರಿಕೆಗಳ ಫೋಟೋಗ್ರಾಫರ್‌ಗಳು ಸ್ಥಳದ ಚಿತ್ರಗಳನ್ನು ಸೆರೆ ಹಿಡಿಯಲು ಓಡಾಡುತ್ತಿರುವುದರ ಮಧ್ಯೆಯೇ ಜನರು ತಮ್ಮವರಿಗಾಗಿ ಶೋಧ ನಡೆಸುವುದನ್ನು ಮುಂದುವರಿಸಿದ್ದರು. ಹರಡಿ ಬಿದ್ದಿದ್ದ ವಸ್ತುಗಳಲ್ಲಿ ತಮ್ಮವರಿಗೆ ಸೇರಿದ ಸಾಮಗ್ರಿಗಳು ಕಣ್ಣಿಗೆ ಬಿದ್ದಾಗ ಆಘಾತಕ್ಕೆ ಒಳಗಾಗುತ್ತಿದ್ದರು. ಇನ್ನೊಂದೆಡೆ ದೆಹಲಿಯ ಲೋಕನಾಯಕ್ ಜಯಪ್ರಕಾಶ್ ಆಸ್ಪತ್ರೆಯ ಶವಾಗಾರದಲ್ಲಿ ಮೃತದೇಹಗಳನ್ನು ಇರಿಸಲಾಗಿದೆ. ಮರಣೋತ್ತರ ಪರೀಕ್ಷೆ ಬಳಿಕ ಕುಟುಂಬದವರಿಗೆ ಮೃತದೇಹಗಳನ್ನು ಹಸ್ತಾಂತರಿಸಲಾಗುತ್ತದೆ. ಕುಟುಂಬವರ್ಗದವರು ತಮ್ಮ ಪ್ರೀತಿಪಾತ್ರರ ಮೃತದೇಹಗಳನ್ನು ಪಡೆಯಲು ಆಸ್ಪತ್ರೆಯ ಶವಾಗಾರದ ಬಳಿ, ಆವರಣದಲ್ಲಿ ನೋವು-ಶೋಕದ ಮಧ್ಯೆಯೂ ಕಿಕ್ಕಿರಿದು ಕಾಯುತ್ತಿದ್ದಾರೆ.

### ಸಾವಿನ ಸಂಖ್ಯೆ ಮುಚ್ಚಿಡುವ ಯತ್ನ

ರೈಲ್ವೆ ಇಲಾಖೆ ನಿರ್ಲಕ್ಷ್ಯ, ಅವ್ಯವಸ್ಥೆಯೇ ದುರಂತಕ್ಕೆ ಕಾರಣ. ದೆಹಲಿ ರೈಲು ನಿಲ್ದಾಣ ಕಾಲ್ತುಳಿತದಲ್ಲಿ

ಹೆಚ್ಚಿನ ಸಂಖ್ಯೆಯ ಸಾವು ಸಂಭವಿಸಿರಬಹುದು. ಆದರೆ, ಬಿಜೆಪಿ ಸರಕಾರ 18 ಸಾವು ಎಂದಷ್ಟೇ ಪ್ರಕಟಿಸಿದೆ. ಸಾವಿನ ಸಂಖ್ಯೆ ಮುಚ್ಚಿಡುವ ಪ್ರಯತ್ನವನ್ನು ಬಿಜೆಪಿ ಮಾಡುತ್ತಿದೆ. ಎಂದು ಎಎಪಿ ಸಂಸದ ಸಂಜಯ್ ಸಿಂಗ್ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದ್ದಾರೆ.

### ರಾಷ್ಟ್ರಪತಿ ಆಘಾತ

ದೆಹಲಿ ರೈಲು ನಿಲ್ದಾಣದಲ್ಲಿ ಸಂಭವಿಸಿದ ಕಾಲ್ತುಳಿತ ಸುದ್ದಿಕೇಳಿ ರಾಷ್ಟ್ರಪತಿ ದ್ರೌಪದಿ ಮುರ್ಮು ಆಘಾತ ವ್ಯಕ್ತಪಡಿಸಿದ್ದಾರೆ. ಕಾಲ್ತುಳಿತದಲ್ಲಿ 18 ಜೀವಹಾನಿಯಾಗಿ ರುವುದು ತಿಳಿದು ತೀವ್ರ ದುಃಖವಾಯಿತು. ಮೃತರ ಕುಟುಂಬಗಳಿಗೆ ಸಂತಾಪ ವ್ಯಕ್ತಪಡಿಸುವೆ. ಗಾಯಗೊಂಡವರು ಶೀಘ್ರ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಎಕ್ಸ್ ಸಂದೇಶದಲ್ಲಿ ಬರೆದಿದ್ದಾರೆ.

### ದೇಶದಲ್ಲಿ ಇತ್ತೀಚಿನ ಕಾಲ್ತುಳಿತ ದುರಂತ

- **2025 ಜ.29:** ಪ್ರಯಾಗ್‌ರಾಜ್ ಮಹಾಕುಂಭ ಮೇಳದಲ್ಲಿ ಮೌನಿ ಅಮಾವಾಸ್ಯೆಯಂದು ಕೋಟ್ಯಂತರ ಜನರ ಆಗಮನ. ಪುಣ್ಯಸ್ನಾನಕ್ಕೆ ನೂಕುನುಗ್ಗಲು. ಕಾಲ್ತುಳಿತಕ್ಕೆ 30 ಸಾವು.
- **2024 ಜು.2:** ಉತ್ತರ ಪ್ರದೇಶದ ಹಾಥರಸ್ ಜಿಲ್ಲೆ ಫೂಲರಾಯ್ ಗ್ರಾಮದಲ್ಲಿ ಸತ್ಸಂಗದಲ್ಲಿ ಕಾಲ್ತುಳಿತ. ಮಹಿಳೆ-ಮಕ್ಕಳು ಸೇರಿ 121 ಮಂದಿ ದುರ್ಮರಣ.
- **2023 ಮಾ.31:** ಮಧ್ಯಪ್ರದೇಶದ ಇಂಧೋರ್‌ನ ಬಲೇಶ್ವರ ಮಹಾದೇವ್ ಜುಲೇಲಾಲ್ ದೇಗುಲ ಮೆಟ್ಟಿಲಬಾವಿ ಬಳಿ ಕಾಲ್ತುಳಿತ. 36 ಜೀವಬಲಿ.
- **2022 ಜ.1:** ಜಮ್ಮು-ಕಾಶ್ಮೀರ ಮಾತಾ ವೈಷ್ಣೋದೇವಿ ದೇಗುಲ ಬಳಿ ಕಾಲ್ತುಳಿತ. 14 ಸಾವು.

### ಸಂಪೂರ್ಣ ಅವ್ಯವಸ್ಥೆ ಎಂದ ಕಾಂಗ್ರೆಸ್

ದೆಹಲಿ ರೈಲು ನಿಲ್ದಾಣದಲ್ಲಿನ ಕಾಲ್ತುಳಿತಕ್ಕೆ ಆಘಾತ ವ್ಯಕ್ತಪಡಿಸಿರುವ ಕಾಂಗ್ರೆಸ್ ಪಕ್ಷದ ನಾಯಕರು, 'ಸಂಪೂರ್ಣ ಅವ್ಯವಸ್ಥೆ'ಯೇ ದುರಂತಕ್ಕೆ ಕಾರಣ ಎಂದು ಕಿಡಿಕಾರಿದ್ದಾರೆ.

ಕಾಲ್ತುಳಿತ ಪ್ರಕರಣ ಆಘಾತ ತಂದಿದೆ. ಅತ್ಯಂತ ದುಃಖಕರ ಸಂಗತಿ. ರೈಲು ನಿಲ್ದಾಣದಲ್ಲಿ ಅಪಾರ ಸಂಖ್ಯೆಯ ಪ್ರಯಾಣಿಕರು ಸೇರಿದ ಮೇಲಾದರೂ ರೈಲ್ವೆ ಇಲಾಖೆ ಅಧಿಕಾರಿಗಳು, ರೈಲ್ವೆ ಪೊಲೀಸರು ಸೂಕ್ತ ಭದ್ರತಾ ಕ್ರಮಗಳನ್ನು ಕೈಗೊಂಡಿಲ್ಲ. ಇದುವೇ ದುರಂತಕ್ಕೆ ಕಾರಣ ಎಂದು ಕಾಂಗ್ರೆಸ್‌ನ ಹಲವು ನಾಯಕರು ಕಿಡಿಕಾರಿದ್ದಾರೆ.





ದೆಹಲಿ ರೈಲು ನಿಲ್ದಾಣದಲ್ಲಿನ ಘಟನೆ ಅತ್ಯಂತ ದುಃಖಕರ ಮತ್ತು ಹೃದಯ ವಿದ್ರಾವಕ. ಕಾಲ್ತುಳಿತದ ಪ್ರಕರಣದಲ್ಲಿ ಸತ್ಯ ಸಂಗತಿ ಮರೆಮಾಡಲು ನರೇಂದ್ರ ಮೋದಿ ಸರಕಾರ ಮಾಡಿದ ಪ್ರಯತ್ನ ಅತ್ಯಂತ ನಾಚಿಕೆಗೇಡಿನದು. ಸತ್ತವರು ಮತ್ತು ಗಾಯಗೊಂಡವರ ಸಂಖ್ಯೆಯನ್ನು ತಕ್ಷಣ ಘೋಷಿಸಬೇಕು, ಕಾಣೆಯಾದವರ ಗುರುತು ಖಚಿತಪಡಿಸಿಕೊಳ್ಳಬೇಕು ಎಂದು ಒತ್ತಾಯಿಸುತ್ತೇವೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

ದೆಹಲಿ ರೈಲು ನಿಲ್ದಾಣದಲ್ಲಿನ ಕಾಲ್ತುಳಿತದಲ್ಲಿ ಹಲವರು ಸಾವನ್ನಪ್ಪಿದ ಸುದ್ದಿ ಅತ್ಯಂತ ದುಃಖಕರ. ಮೃತರ ಕುಟುಂಬಗಳಿಗೆ ನನ್ನ ಆಳವಾದ ಸಂತಾಪ. ಗಾಯಗೊಂಡವರು ಶೀಘ್ರ ಚೇತರಿಸಿಕೊಳ್ಳಲಿ ಎಂದು ಆಶಿಸುವೆ. ಈ ಘಟನೆ ಮತ್ತೊಮ್ಮೆ ರೈಲ್ವೆಯ ವೈಫಲ್ಯ ಮತ್ತು ಸರಕಾರದ ಅಸಂವೇದ ನಾಶೀಲತೆಯನ್ನು ಎತ್ತಿ ತೋರುತ್ತದೆ. ಪ್ರಯಾಗ್‌ರಾಜ್‌ಗೆ ಹೆಚ್ಚಿನ ಸಂಖ್ಯೆಯ ಭಕ್ತರು ಹೋಗುತ್ತಿರುವುದರಿಂದ, ನಿಲ್ದಾಣದಲ್ಲಿ ಸರಿಯಾದ ವ್ಯವಸ್ಥೆ ಮಾಡಬೇಕಿತ್ತು. ಆದರೆ ಸರಕಾರದ ನಿರ್ಲಕ್ಷ್ಯದಿಂದಲೆ ಜನರು ಪ್ರಾಣ ಕಳೆದುಕೊಳ್ಳುವಂತಾಗಿದೆ ಎಂದು ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ 'ಎಕ್ಸ್' ಸಂದೇಶದಲ್ಲಿ ಕಿಡಿಕಾರಿದ್ದಾರೆ. ದೆಹಲಿ ರೈಲು ನಿಲ್ದಾಣದಲ್ಲಿ ಕಾಲ್ತುಳಿತದಲ್ಲಿ ಮಹಿಳೆಯರು ಮತ್ತು ಮಕ್ಕಳು ಸೇರಿ 18 ಜನರು ಸಾವನ್ನಪ್ಪಿದ ಸುದ್ದಿ ಅತ್ಯಂತ ದುಃಖಕರ. ಅಗಲಿದ ಆತ್ಮಗಳಿಗೆ ದೇವರು ಶಾಂತಿ ನೀಡಲಿ ಎಂದು ಪ್ರಿಯಾಂಕಾ ಗಾಂಧಿ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ. ಕಾಲ್ತುಳಿತದಲ್ಲಿ 18 ಮಂದಿ ಸಾವನ್ನಪ್ಪಿದ ಹಿನ್ನೆಲೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ. ಭಾನುವಾರ ಸುದ್ದಿಗೋಷ್ಠಿ ನಡೆಸಿದ ಕಾಂಗ್ರೆಸ್ ವಕ್ತಾರೆ ಸುಪ್ರಿಯಾ ಶ್ರೀನಾಥೆ, ಸಚಿವ ವೈಷ್ಣವ್ ರಾಜೀನಾಮೆ ನೀಡದೇ ಇದ್ದರೆ, ಅವರನ್ನು ಸಚಿವ ಸ್ಥಾನದಿಂದ ಪ್ರಧಾನಿ ನರೇಂದ್ರ ಮೋದಿ ಅವರೇ ವಜಾಗೊಳಿಸಬೇಕು ಎಂದು ಆಗ್ರಹಿಸಿದರು.

ದೆಹಲಿ ಪೊಲೀಸ್ ತಂಡ ಪ್ರಾಥಮಿಕ ತನಿಖಾ ವರದಿ ಸಲ್ಲಿಕೆ

## ಗೊಂದಲದ ಪ್ರಕಟಣೆ ಕಾಲ್ತುಳಿತಕ್ಕೆ ಕಾರಣ

**ದೆಹಲಿ:** ದೆಹಲಿ ರೈಲು ನಿಲ್ದಾಣದಲ್ಲಿ ಶನಿವಾರ ರಾತ್ರಿ 10ರ ವೇಳೆ ಕಾಲ್ತುಳಿತವಾಗಲು ಜನಸಂದಣಿಯ ಸರಿಯಾದ ನಿರ್ವಹಣೆ ಇಲ್ಲದೇ ಇರುವುದು ಮತ್ತು ರೈಲ್ವೆ ನಿಲ್ದಾಣದಲ್ಲಿನ ಧ್ವನಿವರ್ಧಕದಲ್ಲಿನ ಗೊಂದಲಮಯ ಪ್ರಕಟಣೆಗಳೇ ಕಾರಣ. ದೆಹಲಿ ರೈಲು ನಿಲ್ದಾಣದ ಅಧಿಕಾರಿಗಳಿಂದಲೇ ಗಂಭೀರ ಲೋಪವಾಗಿದೆ ಎಂದು ದೆಹಲಿ ಪೊಲೀಸರು ಭಾನುವಾರ ನಡೆಸಿದ ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

ಕಾಲ್ತುಳಿತ ದುರಂತಕ್ಕೆ ತಪ್ಪು ಸಂವಹನವೇ ಮೂಲ ಹಾಗೂ ಪ್ರಮುಖ ಕಾರಣ ಎಂದು ದೆಹಲಿ ಪೊಲೀಸರು ಹೇಳಿದ್ದಾರೆ.

'ಪ್ರಯಾಗ್‌ರಾಜ್ ಎಕ್ಸ್‌ಪ್ರೆಸ್ ಟ್ರೇನ್' ಮತ್ತು 'ಪ್ರಯಾಗ್‌ರಾಜ್ ಸ್ಪೆಷಲ್ ಟ್ರೇನ್' ಹೆಸರಿನ 2 ರೈಲುಗಳು ದೆಹಲಿ ರೈಲು ನಿಲ್ದಾಣದಿಂದ ಉತ್ತರ ಪ್ರದೇಶದ ಪ್ರಯಾಗ್‌ರಾಜ್ ನಗರಕ್ಕೆ ತೆರಳಲಿದ್ದವು. ಈ ಎರಡೂ ರೈಲುಗಳ ಕುರಿತು ರೈಲು ನಿಲ್ದಾಣ ಸಿಬ್ಬಂದಿ ಗೊಂದಲಮಯ ಪ್ರಕಟಣೆಗಳನ್ನು ನೀಡಿದ್ದೇ ಅವಘಡಕ್ಕೆ ಕಾರಣ. ಸಾವಿರಾರು ಸಂಖ್ಯೆಯಲ್ಲಿದ್ದ ಮಹಾ ಕುಂಭಮೇಳದ ಭಕ್ತರಲ್ಲಿ ಪ್ರಯಾಗ್‌ರಾಜ್‌ಗೆ ತೆರಳಬೇಕಿರುವ 2 ರೈಲುಗಳು ಯಾವ ಪ್ಲ್ಯಾಟ್‌ಫಾರ್ಮ್‌ಗೆ ಬರಲಿವೆ ಎಂಬುದೇ ಸ್ಪಷ್ಟವಾಗಿ ತಿಳಿಯದೇ ಎರಡೂ ರೈಲುಗಳ ಸಾವಿರಾರು ಪ್ರಯಾಣಿಕರು ಒಂದೇ ಪ್ಲಾಟ್‌ಫಾರ್ಮ್‌ಗೆ ಬರುವಂತೆ ಆಗಿದ್ದೇ ನೂಕು ನುಗ್ಗಲಿಗೆ ಕಾರಣವಾಯಿತು ಎಂದು ದೆಹಲಿ ಪೊಲೀಸರ ತನಿಖೆಯಿಂದ ತಿಳಿದುಬಂದಿದೆ.

ಹಿರಿಯ ಪೊಲೀಸ್ ಅಧಿಕಾರಿಗಳ ಪ್ರಕಾರ, ಪ್ಲ್ಯಾಟ್‌ಫಾರ್ಮ್ 16ರಲ್ಲಿ ಪ್ರಯಾಗ್‌ರಾಜ್ ಸ್ಪೆಷಲ್ ಟ್ರೇನ್ ಆಗಮನವಾಗಲಿದೆ ಎಂಬ ಘೋಷಣೆ ಧ್ವನಿವರ್ಧಕದಲ್ಲಿ ಕೇಳಿಬಂದಾಗ ಪ್ಲ್ಯಾಟ್‌ಫಾರ್ಮ್ 14ರಲ್ಲಿ ಪ್ರಯಾಗ್‌ರಾಜ್ ಎಕ್ಸ್‌ಪ್ರೆಸ್ ಟ್ರೇನ್‌ಗಾಗಿ ಕಾಯುತ್ತಿದ್ದ ಪ್ರಯಾಣಿಕರಲ್ಲಿ ಗೊಂದಲ ಉಂಟುಮಾಡಿದೆ. ತಾವು ಹೋಗಬೇಕಾದ ರೈಲು 16ಕ್ಕೆ ಬರಲಿದೆ ಎಂದು ಭಾವಿಸಿದ ಸಾವಿರಾರು ಪ್ರಯಾಣಿಕರು ತರಾತುರಿಯಿಂದ ಪ್ಲ್ಯಾಟ್‌ಫಾರ್ಮ್ 16ರತ್ತ ಒಮ್ಮೆಲೇ ಧಾವಿಸಿದ್ದೇ ಫ್ಲೈಓವರ್ ಬ್ರಿಡ್ಜ್ ಮೇಲೆ ಮತ್ತು ಮೆಟ್ಟಿಲುಗಳ ಮೇಲೆ ನೂಕುನುಗ್ಗಲು ಉಂಟಾಗಲು ಕಾರಣವಾಯಿತು. ಮೆಟ್ಟಿಲು ಹತ್ತಿಳಿಯುವ ಧಾವಂತದಲ್ಲಿ ಲಗ್ಗೇಜ್ ಹೊತ್ತಿದ್ದ ಕೆಲವರು ಎಡವಿ ಬಿದ್ದಿದ್ದಾರೆ. ರೈಲು ಹತ್ತುವ ಆತುರದಲ್ಲಿದ್ದ ಪ್ರಯಾಣಿಕರು ಕೆಳಗೆ ಬಿದ್ದವರ ಮೇಲೆಯೇ ಮುಂದೆ ಸಾಗಿದ್ದಾರೆ. ಹೀಗೆ ಕಾಲ್ತುಳಿತವಾಗಿದೆ ಎಂಬುದು ದೆಹಲಿ ಪೊಲೀಸರ ಪಾಥಮಿಕ ತನಿಖೆಯಿಂದ ತಿಳಿದುಬಂದಿದೆ.

ದೆಹಲಿಯ ಉಪ ಪೊಲೀಸ್ ಆಯುಕ್ತ (ಡಿಸಿಪಿ) ಶ್ರೇಣಿ ಅಧಿಕಾರಿ ನೇತೃತ್ವದ ತಂಡ ತನಿಖೆ ನಡೆಸಿ ಪ್ರಾಥಮಿಕ ವರದಿ ಸಲ್ಲಿಸಿದೆ.

ಮೊದಲ ತಂಡದಲ್ಲಿ 104, 2ನೇ ತಂಡದಲ್ಲಿ 117 ವಲಸಿಗರು ವಾಪಸ್

## 157 ಭಾರತೀಯರ 3ನೇ ತಂಡ ಸಂಜೆ ಆಗಮನ

**ಅಮೃತಸರ:** ಅಮೆರಿಕಕ್ಕೆ ಅಕ್ರಮ ಮಾರ್ಗದಲ್ಲಿ ವಲಸೆ ಹೋಗಿದ್ದವರು, ಸರಿಯಾದ ದಾಖಲೆಗಳಿಲ್ಲದೇ ಅಮೆರಿಕಕ್ಕೆ ನುಸುಳಿಕೊಂಡಿದ್ದವರ ಸಾಮೂಹಿಕ ಗಡಿಪಾರು ಪ್ರಕ್ರಿಯೆ ಮುಂದುವರಿದಿದೆ. 157 ವಲಸಿಗರ 3ನೇ ತಂಡ ಅಮೆರಿಕದ ಸೇನಾ ವಿಮಾನದಲ್ಲಿ ಆಗಮಿಸಿದ್ದು, ಭಾನುವಾರ ಸಂಜೆ ಅಮೃತಸರದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿದಿದೆ.

ಮೊದಲ ತಂಡದಲ್ಲಿ ಕೈ ಕೋಳ ವಲಸಿಗರನ್ನು ಕಳುಹಿಸಿದ ಅಮೆರಿಕಾ ಸರಕಾರದ ಕ್ರಮಕ್ಕೆ ಭಾರತ ವಿದೇಶಾಂಗ ಸಚಿವಾಲಯ ಆಕ್ಷೇಪ ವ್ಯಕ್ತಪಡಿಸಿತ್ತು. ಆದರೆ ಈ ಬಾರಿಯೂ ವಲಸಿಗರಿಗೆ ಕೈ ಕೋಳ ಹಾಕಿ ಕರೆತರಲಾಗಿದೆ ಎಂಬ ದೂರುಗಳು ಕೇಳಿಬಂದಿವೆ. ಈ 3ನೇ ತಂಡದಲ್ಲಿ ಹರಿಯಾಣದವರೇ ಅಧಿಕ ಸಂಖ್ಯೆಯಲ್ಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಮೊದಲು ಫೆ.5ರಂದು ಗಡಿಪಾರಾದ 104 ಮಂದಿಯ ತಂಡ ಅಮೃತಸರಕ್ಕೆ ಬಂದಿದೆ. ಅವರೆಲ್ಲರೂ ತಮ್ಮ ಮನೆಗಳನ್ನು ಸೇರಿಕೊಂಡಿದ್ದಾರೆ.

**ಅಮೃತಸರಕ್ಕೆ 2ನೇ ತಂಡ:** ಅಮೆರಿಕದಿಂದ ಗಡಿಪಾರಾದ 117 ಅಕ್ರಮ ವಲಸಿಗರನ್ನು ಹೊತ್ತ ಅಮೆರಿಕದ ಸೇನಾವಿಮಾನ ಶನಿವಾರ ರಾತ್ರಿ 11.30ರ ವೇಳೆ ಅಮೃತಸರ ವಿಮಾನ ನಿಲ್ದಾಣಕ್ಕೆ ಬಂದಿಳಿದಿದೆ. ಇವರಲ್ಲಿ ಹೆಚ್ಚಿನವರು 18-30 ವಯೋಮಾನದ ಯುವಕ-ಯುವತಿಯರು. ಅವರಲ್ಲಿ ಪಂಜಾಬ್-65, ಹರಿಯಾಣ-33, ಗುಜರಾತ್-8, ಉತ್ತರ ಪ್ರದೇಶ-3, ಗೋವಾ-2, ಮಹಾರಾಷ್ಟ್ರ-2, ರಾಜಸ್ಥಾನ-2, ಹಿಮಾಚಲ ಪ್ರದೇಶ-1 ಮತ್ತು ಜಮ್ಮು-ಕಾಶ್ಮೀರದಿಂದ ತಲಾ ಒಬ್ಬರು ಗಡಿಪಾರಾಗಿ ಬಂದಿದ್ದಾರೆ.

ಗಡೀಪಾರಾಗಿ ಬರುತ್ತಿರುವ ಮೊಮ್ಮಗ ಜ.29-30ರ ಮಧ್ಯರಾತ್ರಿ ಮೆಕ್ಸಿಕೊ ಗಡಿ ದಾಟಿ ಅಮೆರಿಕ ಸೇರಿಕೊಂಡಿದ್ದ. ಅವನು 9 ತಿಂಗಳ ಹಿಂದೆ ಭಾರತದಿಂದ ಹೊರಟಿದ್ದ. ಒಬ್ಬ ಏಜೆಂಟ್ ಕಾನೂನುಬದ್ಧವಾಗಿಯೇ ಅಮೆರಿಕಕ್ಕೆ ತಲುಪಿಸುವುದಾಗಿ ಹೇಳಿ 46 ಲಕ್ಷ ರು. ಪಡೆದುಕೊಂಡ. ಆದರೆ ನಮ್ಮ ಮೊಮ್ಮಗನನ್ನು ಅಕ್ರಮ ಮಾರ್ಗದಲ್ಲಿ ಅಮೆರಿಕಕ್ಕೆ ಕಳುಹಿಸಿದ್ದಾನೆ. ಈಗ ಮೊಮ್ಮಗ ಗಡಿಪಾರಾಗಿ ಬಂದಿದ್ದಾನೆ ಎಂದು ಹಿರಿಯ ಜೀವ ಅಳಲು ತೋಡಿಕೊಂಡಿತು.

ಏಜೆಂಟ್ ನಮ್ಮ ಹಣ ಹಿಂತಿರುಗಿಸದಿದ್ದರೆ ನಾವು ಪೊಲೀಸರಿಗೆ ದೂರು ನೀಡುತ್ತೇವೆ ಎಂದು ಅವರು ಹೇಳುತ್ತಾರೆ.

### ಇಬ್ಬರು ಹತ್ಯೆ ಆರೋಪಿಗಳು!

**ಅಮೆರಿಕದಿಂದ ಗಡಿಪಾರಾಗಿ ಅಮೃತಸರ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭಾನುವಾರ ಬೆಳಗ್ಗೆ ಬಂದಿಳಿದ 119 ಮಂದಿಯಲ್ಲಿ ಇಬ್ಬರು ಕೊಲೆ ಆರೋಪಿಗಳೂ ಇದ್ದು, ಅವರನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ. ಸಂದೀಪ್ ಸಿಂಗ್ ಅಲಿಯಾಸ್ ಸನ್ನಿ ಮತ್ತು ಪ್ರದೀಪ್ ಸಿಂಗ್ ಬಂಧಿತರು. ಇಬ್ಬರೂ 2023ರಲ್ಲಿ ಕೊಲೆ ಪ್ರಕರಣವೊಂದರಲ್ಲಿ ಭಾಗಿಯಾಗಿದ್ದ ಆರೋಪಿಗಳು. ಪಟಿಯಾಲ ಜಿಲ್ಲೆಯ ರಾಜ್‌ಪುರ ಪೊಲೀಸ್ ಠಾಣೆಯಲ್ಲಿ ಈ ಇಬ್ಬರ ವಿರುದ್ಧವೂ ಪ್ರಕರಣ ದಾಖಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ನಾನಕ್ ಸಿಂಗ್ ತಿಳಿಸಿದ್ದಾರೆ.**

## ಪೂಜಾ ಸ್ಥಳಗಳ ಕಾಯಿದೆ: ಇಂದು ಸುಪ್ರೀಂ ವಿಚಾರಣೆ

**ದೆಹಲಿ:** ದೇಶದ ವಿವಿಧೆಡೆ ಪುರಾತನ ಹಿಂದೂ ದೇವಾಲಯಗಳನ್ನು ಕೆಡವಿ ಮಸೀದಿ- ದರ್ಗಾಗಳನ್ನು ನಿರ್ಮಿಸಲಾಗಿ ರುವ ಸ್ಥಳಗಳನ್ನು ಹಿಂದೂಗಳಿಗೆ ಹಿಂದಿರುಗಿಸಬೇಕು. ಸನಾತನ ಧರ್ಮದ ಪವಿತ್ರ ಸ್ಥಳಗಳಿಗೆ ಅಯೋಧ್ಯೆ ಮಾದರಿಯ ಪರಿಹಾರ ಸಿಗಬೇಕು ಎಂಬ ಬೇಡಿಕೆ ಇತ್ತೀಚೆಗೆ ಹೆಚ್ಚುತ್ತಿದೆ.

ಇದರ ಮಧ್ಯೆಯೇ, ಪೂಜಾ ಸ್ಥಳಗಳ ಯಥಾಸ್ಥಿತಿ ಕಾಯಿದೆ-1991 ಪ್ರಶ್ನಿಸಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ನಡೆಸಲಿದೆ. ನ್ಯಾಯಾಲಯಕ್ಕೆ ಸಲ್ಲಿಕೆಯಾಗಿರುವ ಕೆಲವು ಅರ್ಜಿಗಳಲ್ಲಿ 1991ರ ಕಾಯ್ದೆಯ ಮಾನ್ಯತೆ ಪ್ರಶ್ನೆ ಮಾಡಲಾಗಿದೆ. ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ, ನ್ಯಾ.ಸಂಜಯ್ ಕುಮಾರ್ ಮತ್ತು ನ್ಯಾ.ಕೆ.ವಿ.ವಿಶ್ವನಾಥನ್ ಅವರ ತ್ರಿಸದಸ್ಯ ಪೀಠ ಈ ಅರ್ಜಿಗಳ ವಿಚಾರಣೆ ನಡೆಸಲಿದೆ. ಸ್ವಾತಂತ್ರ್ಯನಂತರ ಧಾರ್ಮಿಕ ಸ್ಥಳಗಳು ಅಥವಾ ಪೂಜಾ ಸ್ಥಳಗಳು ಹೇಗಿವೆಯೋ ಅದೇ ರೀತಿ ಯಥಾಸ್ಥಿತಿ ಮುಂದುವರಿಸಿಕೊಂಡು ಹೋಗಬೇಕು, ಯಾವುದೇ ಕಾರಣಕ್ಕೂ ಅಲ್ಲಿರುವ ಧಾರ್ಮಿಕ ಕುರುಹನ್ನು ಬದಲಾವಣೆ ಮಾಡಲು ಹೋಗಬಾರದು ಎಂಬುದೇ 1991ರ ಕಾಯಿದೆಯ ಮುಖ್ಯ ಅಂಶವಾಗಿದೆ. ಆದರೆ, ರಾಮಜನ್ಮಭೂಮಿ ಮತ್ತು ಬಾಬ್ರಿ ಮಸೀದಿ ವಿವಾದವನ್ನು ಈ ಕಾಯ್ದೆಯಿಂದ ಹೊರಗಿಡಲಾಗಿತ್ತು.

ಕೇಂದ್ರದಲ್ಲಿ ಕಾಂಗ್ರೆಸ್ ಆಡಳಿತವಿದ್ದ ಕಾಲದಲ್ಲಿ ಜಾರಿಗೆ ತರಲಾದ ಈ ಕಾಯಿದೆ ಧಾರ್ಮಿಕ ಸ್ಥಳಗಳಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವುದನ್ನು ಬಯಸುತ್ತದೆ. ಆದರೆ, ಇದಕ್ಕೆ ಹಿಂದೂ ಸಮುದಾಯದ ವಿರೋಧ ವ್ಯಕ್ತವಾಗುತ್ತಿದೆ.

### ಯಥಾಸ್ಥಿತಿ ಕೋರಿ ಸಂಸದ ಓವೈಸಿ ಅರ್ಜಿ

**ಜ.2ರಂದು ಎಐಎಂಐಎಂ ಮುಖ್ಯಸ್ಥ ಅಕ್ಬರುದ್ದೀನ್ ಓವೈಸಿ ಅವರು 1991ರ ಧಾರ್ಮಿಕ ಪೂಜಾ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಸಲ್ಲಿಸಿದ್ದ ಅರ್ಜಿಯ ಪರಿಶೀಲನೆಗೆ ಸುಪ್ರೀಂ ಕೋರ್ಟ್ ಈಗಾಗಲೇ ಒಪ್ಪಿದೆ. ಅದಕ್ಕೂ ಮುನ್ನ ಡಿ.12ರಂದು ಮುಖ್ಯ ನ್ಯಾಯಮೂರ್ತಿ ನೇತೃತ್ವದ ಪೀಠ ಮಸೀದಿ ಮತ್ತು ದರ್ಗಾಕ್ಕೆ ಸಂಬಂಧಿಸಿ ಇದೇ ಕಾಯ್ದೆಯಡಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ನಡೆಸದಂತೆ ಮತ್ತು ಯಾವುದೇ ಮಧ್ಯಂತರ ಅಥವಾ ಅಂತಿಮ ತೀರ್ಪು ನೀಡದಂತೆ ಎಲ್ಲಾ ನ್ಯಾಯಾಲಯಗಳಿಗೂ ಸೂಚಿಸಿದೆ. ಡಿ.12ರ ಆದೇಶದಿಂದಾಗಿ ದೇಶದ ವಿವಿಧ ನ್ಯಾಯಾಲಯಗಳಲ್ಲಿ ಗ್ಯಾನವ್ಯಾಪಿ ಸೇರಿದಂತೆ 12 ಮಸೀದಿ, ದರ್ಗಾಗಳ ವಿವಾದ ಸಂಬಂಧ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಗೆ ತಡೆ ಬಿದ್ದಿದೆ.**

## ನೇಪಾಳ ಉ.ಪ್ರಧಾನಿಗೆ ಗಾಯ

**ಕಠ್ಮಂಡು:** ನೇಪಾಳದ ಉಪ ಪ್ರಧಾನಿ ಬಿಷ್ಣು ಪ್ರಸಾದ್ ಪೌಡೆಲ್ ಮತ್ತು ಪೋಖರ ಮೇಯರ್ ಧನರಾಜ್ ಆಚಾರ್ಯ ಅವರು ಭಾನುವಾರ ಸಾರ್ವಜನಿಕ ಕಾರ್ಯಕ್ರಮವೊಂದಕ್ಕೆ ಚಾಲನೆ ನೀಡಲು ಗಾಳಿ ತುಂಬಿದ್ದ ಬಣ್ಣಬಣ್ಣದ ಬಲೂನ್‌ಗಳನ್ನು ಹಾರಿಬಿಡುವಾಗ ಹಠಾತ್ತನೆ ಬಲೂನ್ ಸ್ಫೋಟಗೊಂಡಿದ್ದು, ಇಬ್ಬರೂ ಗಣ್ಯರಿಗೆ ಸುಟ್ಟ ಗಾಯಗಳಾಗಿವೆ.

ಭಾನುವಾರ ಬೆಳಗ್ಗೆ ಪೋಖರ ಪ್ರವಾಸೋದ್ಯಮ ವರ್ಷದ ಉದ್ಘಾಟನಾ ಸಮಾರಂಭದಲ್ಲಿ ಅವಘಡವಾಗಿದೆ. ಇಬ್ಬರಿಗೂ ಮುಖ, ಎದೆಭಾಗ ಸೇರಿದಂತೆ ದೇಹದ ಹಲವೆಡೆ ಸುಟ್ಟಗಾಯಗಳಾಗಿದ್ದು, ತಕ್ಷಣವೇ ಕರೆದೊಯ್ದು ಆಸ್ಪತ್ರೆಗೆ ಸೇರಿಸಲಾಗಿದೆ. ಉಪ ಪ್ರಧಾನಿ ಪೌಡೆಲ್ ಮತ್ತು ಮೇಯರ್ ಆಚಾರ್ಯರನ್ನೂ ಹೆಲಿಕಾಪ್ಟರ್ ಮೂಲಕ ಕಠ್ಮಂಡುವಿಗೆ ಕರೆದೊಯ್ದು ತುರ್ತು ಚಿಕಿತ್ಸೆ ಕೊಡಿಸಲಾಗಿದೆ. ಬಳಿಕ ಸುಟ್ಟ ಗಾಯಗಳಿಗೆ ವಿಶೇಷ ಚಿಕಿತ್ಸೆ ನೀಡುವಲ್ಲಿ ಪರಿಣತಿ ಹೊಂದಿ ರುವ ಕೀರ್ತಿಪುರದ ಬರ್ನ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಉಪ ಪ್ರಧಾನಿ ಪೌಡೆಲ್ ಅವರ ಕೈ ಮತ್ತು ಮುಖಕ್ಕೆ ಸುಟ್ಟಗಾಯಗಳಾಗಿದ್ದರೆ, ಮೇಯರ್ ಆಚಾರ್ಯ ಅವರಿಗೆ ಗಂಭೀರ ಸ್ವರೂಪದ ಗಾಯಗಳಾಗಿವೆ ಎನ್ನಲಾಗಿದೆ. ಆದರೆ, ಇಬ್ಬರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉದ್ಘಾಟನಾ ಸಮಾರಂಭದಲ್ಲಿ ಹೈಡ್ರೋಜನ್ ಅನಿಲ ತುಂಬಿದ ಬಲೂನ್‌ಗಳನ್ನು ಹಾರಿಬಿಡಲು ವ್ಯವಸ್ಥೆ ಮಾಡಲಾಗಿತ್ತು. ಆದರೆ, ಪಟಾಕಿಯ ಕಿಡಿ ತಗುಲಿ ಬಲೂನ್ ದೊಡ್ಡದಾಗಿ ಸ್ಫೋಟಗೊಂಡಿವೆ. ಥಟ್ಟನೆ ಬೆಂಕಿ ಹರಡಿ ಗಣ್ಯರಿಬ್ಬರಿಗೂ ಗಾಯವಾಗಿದೆ ಎಂದು ಅಧಿಕಾರಿಗಳು ವಿವರ ನೀಡಿದ್ದಾರೆ.

## ಆಫ್ರಿಕಾದಲ್ಲಿ ಸಲಿಂಗಿ ಇಮಾಂ ಗುಂಡಿಗೆ ಬಲಿ

**ಕೇಪ್‌ಟೌನ್:** ವಿಶ್ವದ ಮೊದಲ ಸ್ವಯಂಘೋಷಿತ ಸಲಿಂಗಕಾಮಿ ಇಮಾಮ್, ಮುಹ್ಸಿನ್ ಹೆಂಡ್ರಿಕ್ಸ್ ಅವರ ಮೇಲೆ ದಕ್ಷಿಣ ಆಫ್ರಿಕಾದ ಗ್ಕೆಬೆರಾ ಬಳಿ ಶನಿವಾರ ಹಠಾತ್ ದಾಳಿ ಮಾಡಿರುವ ದುಷ್ಕರ್ಮಿಗಳು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ.

ಮುಸ್ಲಿಂ ಸಮುದಾಯದಲ್ಲಿನ ಎಲ್‌ಜಿಬಿಟಿಕ್ಯು+ ವರ್ಗದವರಿಗೆ ಸುರಕ್ಷಿತ ಸ್ಥಳಾವಕಾಶ ಒದಗಿಸುವ ಮಸೀದಿಯ ನೇತೃತ್ವ ವಹಿಸಿದ್ದ ಹೆಂಡ್ರಿಕ್ಸ್ ಶನಿವಾರ ಪರಿಚಿತರೊಂದಿಗೆ ಕಾರಿನಲ್ಲಿ ಸಂಚರಿಸುತ್ತಿದ್ದಾಗ, ಮುಸುಕುಧಾರಿ ಹಂತಕರು ಬೇರೊಂದು ವಾಹನದಲ್ಲಿ ಬಂದು ಇಮಾಮ್ ಕಾರನ್ನು ಅಡ್ಡಗಟ್ಟಿ ಗುಂಡು ಹಾರಿಸಿ ಕೊಂದಿದ್ದಾರೆ. ನಂತರ ಸ್ಥಳದಿಂದ ಪರಾರಿಯಾಗಿದ್ದಾರೆ. ಕಾರಿನ ಹಿಂಬದಿ ಆಸನ ದಲ್ಲಿ ಕುಳಿತಿದ್ದ ಹೆಂಡ್ರಿಕ್ಸ್ ರಕ್ತದ ಮಡುವಿನಲ್ಲೇ ಜೀವ ಬಿಟ್ಟಿದ್ದಾರೆ ಎಂದು ಪೂರ್ವ ಕೇಪ್ ನಗರದ ಪೊಲೀಸರು ಹೇಳಿದ್ದಾರೆ.

ಇಮಾಮ್ ಹತ್ಯೆಯನ್ನು ಅಂತಾರಾಷ್ಟ್ರೀಯ ಲೆಸ್ಬಿಯನ್, ಗೇ, ಬೈಸೆಕ್ಸುವಲ್, ಟ್ರಾನ್ಸ್ ಜಂಡರ್ ಮತ್ತು ಇಂಟರ್‌ಸೆಕ್ಸ್ ಅಸೋಸಿಯೇಷನ್(ಎಲ್‌ಜಿಬಿಟಿಕ್ಯು) ತೀವ್ರವಾಗಿ ಖಂಡಿಸಿದೆ. ಇದು ದ್ವೇಷಪೂರಿತ ಹಂತಕರ ಕೃತ್ಯವಾಗಿದೆ. ಭಯಪಡಿಸಲೆಂದೇ ದಾಳಿ ನಡೆಸಲಾಗಿದೆ. ಘಟನೆಯ ಸಮಗ್ರ ತನಿಖೆಗೆ ಮನವಿ ಮಾಡುತ್ತೇವೆ ಎಂದು ಸಂಘಟನೆಯ ಕಾರ್ಯನಿರ್ವಾಹಕ ನಿರ್ದೇಶಕಿ ಜೂಲಿಯಾ ಎರ್ಟ್ ಆಗ್ರಹಿಸಿದ್ದಾರೆ.

## ಮೊಬೈಲ್ ಫೋನ್‌ಗೆ ತ್ರಿವೇಣಿ ಪುಣ್ಯಸ್ನಾನ

**ಪ್ರಯಾಗ್‌ರಾಜ್:** ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದಲ್ಲಿ ಗಂಗೆ-ಯಮುನೆ-ಸರಸ್ವತಿ ನದಿಗಳ ತ್ರಿವೇಣಿ ಸಂಗಮದಲ್ಲಿ ಈವರೆಗೆ ದೇಶ-ವಿದೇಶದ 50 ಕೋಟಿ ಭಕ್ತರು ಪುಣ್ಯಸ್ನಾನ ಮಾಡಿದ್ದಾರೆ. ಈ ಮಧ್ಯೆ, ಒಬ್ಬ ಯುವಕ ತಾನಷ್ಟೇ ತ್ರಿವೇಣಿ ಸಂಗಮದಲ್ಲಿ ಮುಳುಗೆದ್ದು ಪಾಪ ತೊಳೆದುಕೊಳ್ಳುವುದರ ಜತೆಗೇ ತನ್ನ ಸ್ಮಾರ್ಟ್‌ಫೋನ್ ಅನ್ನೂ ತ್ರಿವೇಣಿಯಲ್ಲಿ ಅದ್ದಿ ತೆಗೆದಿದ್ದಾನೆ. ಪಕ್ಕದವರು ಪ್ರಶ್ನೆ ಮಾಡಿದ್ದಕ್ಕೆ ಈ ಮೊಬೈಲ್ ಫೋನ್ ಕೂಡಾ ಹಲವು ಪಾಪಗಳನ್ನು ಮಾಡಿದೆ. ಅದಕ್ಕೇ ಶುದ್ಧಿ ಮಾಡಿಸುತ್ತಿರುವೆ ಎಂದಿದ್ದಾನೆ. ಈ ಸಂದರ್ಭದ ವಿಡಿಯೊ ಫೆ.13ರಂದು ಆನ್‌ಲೈನ್‌ನಲ್ಲಿ ಅಪ್ಲೋಡ್ ಆಗಿದ್ದು, ವೈರಲ್ ಆಗಿದೆ. ಈವರೆಗೆ 2.8 ಲಕ್ಷ ವೀಕ್ಷಣೆ ಪಡೆದುಕೊಂಡಿದೆ.

## ಡ್ರೋನ್‌ಗಳ ನಾಶಕ್ಕೆ ಹದ್ದುಗಳಿಗೆ ತರಬೇತಿ

**ಹೈದರಾಬಾದ್:** ನಿಯಮ ಮೀರಿ ಹಾರಾಟ ನಡೆಸುವ, ಪರವಾನಗಿ ಇಲ್ಲದ ಡ್ರೋನ್‌ಗಳನ್ನು ಆಕಾಶದಲ್ಲೇ ಹಿಡಿದು ನಾಶಪಡಿಸಲು ಸಾಧ್ಯವಾಗುವಂತೆ ರಣಹದ್ದು ಮತ್ತು ಗಿಡುಗಗಳಿಗೆ ತೆಲಂಗಾಣ ಪೊಲೀಸರು ತರಬೇತಿ ನೀಡುತ್ತಿದ್ದಾರೆ.

ಪೊಲೀಸರ ಗರುಡ ಪಡೆಗೆ ಹದ್ದು, ಗಿಡುಗ ಮೊದಲಾದ ದಾಳಿ ಕೋರ ಜಾತಿ ಪಕ್ಷಿಗಳನ್ನು ಸೇರಿಸಿಕೊಂಡು ತರಬೇತಿ ನೀಡುತ್ತಿರುವುದು ಭಾರತದಲ್ಲಿ ಮೊದಲು ಎನ್ನಲಾಗಿದೆ. ಮುಖ್ಯವಾಗಿ ಗಣ್ಯರು(ವಿಐಪಿ) ಮತ್ತು ಅತಿ ಗಣ್ಯರು(ವಿವಿಐಪಿ) ಭೇಟಿ ಸಂದರ್ಭ ಭದ್ರತಾ ಸಿಬ್ಬಂದಿಯಗಳ ಕ್ಷಮತೆ ಹೆಚ್ಚಿಸಲು ತರಬೇತಾದ ಪಕ್ಷಿಗಳನ್ನು ಬಳಸಿಕೊಳ್ಳಲಾಗುವುದು. ತರಬೇತಿ ನೀಡಿದ ಬಳಿಕ ಪಕ್ಷಿಗಳನ್ನು ಗರುಡ ಪಡೆಗೆ ಸೇರಿಸಲಾಗುವುದು. ಪಕ್ಷಿಗಳಿಗೆ ತರಬೇತಿ ವೇಳೆ ಗಾಯಗಳಾಗದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಲಾಗುತ್ತಿದೆ ಎಂದು ಅಧಿಕಾರಿಗಳು ಮಾಧ್ಯಮಗಳಿಗೆ ತಿಳಿಸಿದ್ದಾರೆ. ಹೈದರಾಬಾದ್ ನಗರದ ಮೊಯಿನಾಬಾದ್‌ನ ಇಂಟಿಗ್ರೇಟೆಡ್ ಇಂಟೆಲಿಜೆನ್ಸ್ ಟ್ರೈನಿಂಗ್ ಅಕಾಡೆಮಿಯಲ್ಲಿ (ಐಐಟಿಎ) ತರಬೇತಿ ನೀಡಲಾಗುತ್ತಿದೆ. ಪಕ್ಷಿಗಳ ಕಾಲಿಗೆ ವಿಶೇಷ ಬಲೆ ಕಟ್ಟುವ ಮೂಲಕ ಡ್ರೋನ್‌ಗಳ ರೆಕ್ಕೆಗಳು ಬಲೆಯಲ್ಲಿ ಸಿಲುಕುವಂತೆ ಮಾಡಲಾಗುವುದು. ನಂತರ, ಈ ಪಕ್ಷಿಗಳು ಡ್ರೋನ್‌ಗಳನ್ನು ಜನಸಂಚಾರವಿಲ್ಲದೆಡೆ ಕೊಂಡೊಯ್ದು ನೆಲಕ್ಕಿಳಿಸುತ್ತವೆ. ಅಲ್ಲಿ ಡ್ರೋನ್‌ಗಳನ್ನು ನಾಶಪಡಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

## ಬೆದರಿಸಿ ಅತ್ಯಾಚಾರ: ಯುಟ್ಯೂಬರ್ ಸೆರೆ

**ಕೊಚ್ಚಿ:** ಸಾಮಾಜಿಕ ಜಾಲತಾಣ ಮೂಲಕ ಸ್ನೇಹ ಬೆಳೆಸಿಕೊಂಡಿದ್ದ ವಿವಾಹಿತ ಮಹಿಳೆ ಮೇಲೆ ಸತತ ಅತ್ಯಾಚಾರವೆಸಗಿದ ಆರೋಪದಡಿ 25 ವರ್ಷದ ಯುಟ್ಯೂಬರ್‌ನನ್ನು ಬಂಧಿಸಲಾಗಿದೆ ಎಂದು ಕಲಮಸ್ಸೇರಿ ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಸಂತ್ರಸ್ತೆಯ ದೂರಿನ ಮೇರೆಗೆ ಕೋಯಿಕ್ಕೋಡ್‌ನಿಂದ ಆರೋಪಿ ಮೊಹಮ್ಮದ್ ನಿಶಲ್ ಎಂಬಾತನನ್ನು ಶನಿವಾರ ಬಂಧಿಸಿ ಕರೆತರಲಾಗಿದೆ. ಮಹಿಳೆಯ ಆಕ್ಷೇಪಾರ್ಹ ವಿಡಿಯೊ ಮತ್ತು ಫೋಟೊಗಳನ್ನು ಸಂಗ್ರಹಿಸಿಟ್ಟುಕೊಂಡಿರುವ ಆರೋಪಿ, ಅವುಗಳನ್ನು ಜಾಲತಾಣದಲ್ಲಿ ಪ್ರಕಟಿಸುವುದಾಗಿ ಹಾಗೂ ಪತಿಗೂ ಕಳುಹಿಸುವುದಾಗಿ ಹೆದರಿಸಿ ಹಲವು ಬಾರಿ ಅತ್ಯಾಚಾರ ನಡೆಸಿದ್ದಾನೆ. ಆರೋಪಿಯ ವಿರುದ್ಧ ವಿವಿಧ ಠಾಣೆಗಳಲ್ಲಿ ಇದೇ ರೀತಿಯಲ್ಲಿ ಹಲವು ಪ್ರಕರಣಗಳು ದಾಖಲಾಗಿವೆ. ಆತನೊಬ್ಬ ಸ್ತ್ರೀ ಪೀಡಕನಾಗಿದ್ದಾನೆ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಯುಟ್ಯೂಬರ್‌ನನ್ನು ಸ್ಥಳೀಯ ನ್ಯಾಯಾಲಯಕ್ಕೆ ಹಾಜರುಪಡಿಸಿ ಬಳಿಕ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಸಮಾಚಾರ ಸಣ್ಣದಲ್ಲ

### ತ್ರಿಫೇಸ್ ಪರಿವರ್ತನೆ ಮಾಡದಿರಲು ಮನವಿ

**ಬಾಗಲಕೋಟೆ:** ತೋಟದ ಮನೆಗಳಿಗೆ ಪೂರೈಸಲಾಗುತ್ತಿರುವ ಸಿಂಗಲ್ ಫೇಸ್ ವಿದ್ಯುತ್‌ನ್ನು ತ್ರಿಫೇಸ್ ಆಗಿ ಪರಿವರ್ತನೆ ಮಾಡಿಕೊಂಡು ಪಂಪ್‌ಸೆಟ್ ಚಾಲನೆಗೆ ಬಳಸಬಾರದು ಎಂದು ಗ್ರಾಹಕರಿಗೆ ಹೆಸ್ಕಾಂ ಮನವಿ ಮಾಡಿದೆ. ತೋಟದ ಮನೆಗಳಿಗೆ ಸಂಜೆ 6 ರಿಂದ ಬೆಳಗ್ಗೆ 6ರ ವರೆಗೆ ವಿದ್ಯಾರ್ಥಿಗಳ ಅಭ್ಯಾಸಕ್ಕಾಗಿ, ವೃದ್ಧರ ಅನುಕೂಲಕ್ಕಾಗಿ ಹಾಗೂ ರಾತ್ರಿ ಹೊತ್ತಿನಲ್ಲಿ ವಿಷ ಜಂತುಗಳಿಂದ ಜನ ಜಾನುವಾರುಗಳ ಸುರಕ್ಷತಾ ದೃಷ್ಟಿಯಿಂದ ಸಿಂಗಲ್ ಫೇಸ್ ವಿದ್ಯುತ್‌ನ್ನು ಪೂರೈಸಲಾಗುತ್ತಿದೆ. ಸಿಂಗಲ್ ಫೇಸ್ ವಿದ್ಯುತ್‌ನ್ನು ತ್ರಿಫೇಸ್ ಆಗಿ ಪರಿವರ್ತನೆ ಮಾಡಿಕೊಂಡು ಪಂಪ್‌ಸೆಟ್ ಚಾಲನೆಗೆ ಬಳಸುವದರಿಂದ ಫೀಡರಗಳ ಮೇಲೆ ನಿಗದಿತ ವಿದ್ಯುತ್ ಭಾರ ಹೆಚ್ಚಾಗಿ ಲೈನಗಳು ಟ್ರಿಪ್ ಆಗುತ್ತವೆ ಹಾಗೂ ವಿದ್ಯುತ್ ಪರಿವರ್ತಕಗಳ ಮೇಲೆಯೂ ಸಹ ಒತ್ತಡ ಹೋಗುವ ಸಾಧ್ಯ ಸುಟ್ಟು ಹೋಗುವ ಸಾಧ್ಯತೆ ಹೆಚ್ಚಿರುತ್ತದೆ. ಆದ್ದರಿಂದ ತೋಟದ ಮನೆಗಳಿಗೆ ಪೂರೈಸಲಾಗುತ್ತಿರುವ ಸಿಂಗಲ್ ಫೇಸ್ ವಿದ್ಯುತ್‌ನ್ನು ತ್ರಿ ಫೇಸ್ ಆಗಿ ಪರಿವರ್ತನೆ ಮಾಡಿಕೊಂಡು ಪಂಪ್ ಸೆಟ್ಗಳನ್ನು ಚಾಲನೆ ಮಾಡಬಾರದು ಎಂದು ಬಾಗಲಕೋಟೆ ಹೆಸ್ಕಾಂ ಅಧೀಕ್ಷಕ ಅಭಿಯಂತರರು ಪ್ರಕಟಣೆಯಲ್ಲಿ ಮನವಿ ಮಾಡಿಕೊಂಡಿದ್ದಾರೆ.

### ಆದರ್ಶ ವಿದ್ಯಾಲಯ: ಪ್ರವೇಶಕ್ಕೆ ಅರ್ಜಿ

**ಬಾಗಲಕೋಟೆ:** ಬಾಗಲಕೋಟ ತಾಲೂಕಿನಲ್ಲಿರುವ ಆದರ್ಶ ವಿದ್ಯಾಲಯ (ಆರ್.ಎಂ.ಎಸ್.ಎ.) ನವನಗರ (ವಸತಿರ ಹಿತ, ಜಚಿಥಿ ಛಿಱಂಟ, ಆಂಗ್ಲ ಮಾಧ್ಯಮ) ಶಾಲೆಯಲ್ಲಿ 2025-26 ನೇ ಸಾಲಿನ 6ನೇ ತರಗತಿಯ ವಿದ್ಯಾರ್ಥಿಗಳ ದಾಖಲಾತಿಗಾಗಿ ಪ್ರವೇಶ ಪರೀಕ್ಷೆ ನಡೆಸುವ ಸಂಬಂಧ ಈ ವರ್ಷ ಅಂದರೆ 2024-25 ಸಾಲಿನಲ್ಲಿ 5 ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಂದ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವೆಬ್ ಪುಟಗಳ ಮೂಲಕ ಪೋಷಕರು ಫೆ.14 ರಿಂದ 28 ವರೆಗೆ ಆನ್ ಲೈನ್ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನ ಫೆಬ್ರವರಿ 28 ಆಗಿದೆ. ಹೆಚ್ಚಿನ ವೆಬ್ ಸೈಟ್ ನೋಡಬಹುದಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಯುವನಿಧಿ ದಾಖಲಾತಿ ಪರಿಶೀಲನೆ

**ಬಾಗಲಕೋಟೆ:** ರಾಜ್ಯ ಸರಕಾರದ 5ನೇ ಗ್ಯಾರಂಟಿ ಯೋಜನೆಯಾದ ಯುವನಿಧಿ ಯೋಜನೆಯು 2023 ಮತ್ತು 2024 ನೇ ಸಾಲಿನಲ್ಲಿ ಪಾಸಾದ ಪದವಿ, ಸ್ನಾತ್ತಕೋ ತ್ತರ ಪದವಿ ಮತ್ತು ಡಿಪ್ಲೋಮಾ ಅಭ್ಯರ್ಥಿಗಳಿಗೆ ಜಾರಿಯ ಲ್ಲಿದೆ. ಸದರಿ 2024 ನೇ ಸಾಲಿನಲ್ಲಿ ಪಾಸಾದ ಅಭ್ಯರ್ಥಿಗಳ ನೋಂದಣಿ ಪ್ರಕ್ರಿಯೆಯು ಪ್ರಾರಂಭವಾ ಗಿದ್ದು, ನೋಂದಾಯಿಸಿಕೊಂಡ ಅಭ್ಯರ್ಥಿಗಳು ತಾವು ಪಾಸಾದ ದಿನಾಂಕದಿಂದ 180 ದಿನಗಳ ಕಾಲ ನಿರುದ್ಯೋಗಿಯಾಗಿದ್ದರೆ ಮಾತ್ರ ಈ ಯೋಜನೆ ಅನ್ವಯಿಸುತ್ತದೆ. ಅಭ್ಯರ್ಥಿಗಳು ತಮ್ಮ ಸೇವಾ ಸಿಂಧು ಪೋರ್ಟಲ್‌ಲ್ಲಿ ಅಥವಾ ಕರ್ನಾಟಕ ಓನ್, ಗ್ರಾಮ ಓನ್, ಬಾಪೂಜಿ ಸೇವಾ ಕೇಂದ್ರಗಳಿಗೆ ಭೇಟಿ ನೀಡಿ ತಮ್ಮ ಅರ್ಜಿಯ ಸ್ಥಿತಿಯನ್ನು ಪರಿಶೀಲಿಸಿ, ಯಾವ ಕಚೇರಿಯಲ್ಲಿ ಭೌತಿಕ ಪರಿಶೀಲನೆಗೆ ಬಾಕಿ ಇದೆ ಎಂಬುದನ್ನು ಖಾತ್ರಿ ಪಡಿಸಿಕೊಂಡು ಆಯಾ ಕಚೇರಿಗಳಿಗೆ ತಮ್ಮ ದಾಖಲಾತಿಗಳ ಪ್ರತಿಯನ್ನು ತೆಗೆದುಕೊಂಡು ಹೋಗಿ ಪರಿಶೀಲನೆ ಮಾಡಿಕೊಳ್ಳಬೇಕೆಂದು ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂಸಂ. 08354-235337 ಸಂಪರ್ಕಿಸಬಹುದಾಗಿದೆ.

### ಫೆ.18 ರಂದು ನೇರ ಸಂದರ್ಶನ

**ಬಾಗಲಕೋಟೆ:** ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಫೆ.18 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 3ರ ವರೆಗೆ ಬಾಗಲಕೋಟೆಯ ಜಿಲ್ಲಾಡಳಿತ ಭವನದಲ್ಲಿರುವ ಕೊಠಡಿ ನಂ.135ನ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ವಿಶೇಷಚೇತನರಿಗಾಗಿ ನೇರ ಸಂದರ್ಶನ ಆಯೋಜಿಸಲಾಗಿದೆ. ಈ ನೇರ ಸಂದರ್ಶನದಲ್ಲಿ ಬೆಂಗಳೂರಿನ ಯುಥ್ ಫಾರ್ ಜಾಬ್ ಫೌಂಡೇಷನ್‌ನವರು ಪಾಲ್ಗೊಳ್ಳಲಿದ್ದಾರೆ. 19 ರಿಂದ 30 ವಯೋಮಿತಿಯಲ್ಲಿರುವ ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಯಾವುದೇ ಪದವೀಧರರು ಭಾಗವಹಿಸಬಹುದಾಗಿದೆ. ಈ ನೇರ ಸಂದರ್ಶನದಲ್ಲಿ ಭಾಗವಹಿಸಲು ಇಚ್ಛಿಸುವ ಅಭ್ಯರ್ಥಿಗಳು ತಮ್ಮ ಬಯೋಡೆಟಾ ಮತ್ತು ಮೂಲ ಅಂಕ ಪಟ್ಟಿಗಳ ಝುರಾಕ್ಸ್ ಪ್ರತಿಗಳೊಂದಿಗೆ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡಿಸಿಕೊಳ್ಳಲು ಜಿಲ್ಲಾ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾಹಿತಿಗಾಗಿ ದೂ ಸಂ. 08354-235337 ಕ್ಕೆ ಸಂಪರ್ಕಿಸಬಹುದಾಗಿದೆ.

ವಿರಾಮ
ಪ್ರತಿ ಭಾನುವಾರ

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ ಒತ್ತಾಯ | ಈ ಕುರಿತು ಸಿಎಂ ಜತೆ ಚರ್ಚೆ

# ಬಜೆಟ್ ಘೋಷಣೆ ಜಾರಿ ಆಗಲಿ

**ಬಾಗಲಕೋಟೆ:** ಬಜೆಟ್‌ನಲ್ಲಿ ಘೋಷಿಸಿದ ಅಂಶಗಳು ಮುಂದಿನ ಬಜೆಟ್ ಒಳಗಾಗಿ ಜಾರಿಯಾಗಬೇಕು. ಆ ನಿಟ್ಟಿನಲ್ಲಿ ಸಿಎಂ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಲಾಗುವುದು ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರಕಾರ ಬಜೆಟ್‌ನಲ್ಲಿ ಘೋಷಣೆ ಮಾಡಿದ ಯೋಜನೆ ಹಾಗೂ ಅನುದಾನ ಮುಂದಿನ ಬಜೆಟ್‌ನ ಒಳಗಾಗಿ ಜಾರಿಯಾಗುವಂತೆ ಚುನಾಯಿತ ಪ್ರತಿನಿಧಿಗಳು ನೋಡಿಕೊಳ್ಳಬೇಕು ಎಂದರು.

ಜಿಲ್ಲೆಯ ಮಟ್ಟಿಗೆ ಕೃಷ್ಣಾ ಮೇಲ್ದಂಡೆ ಯೋಜನೆ ಜ್ವಲಂತ ಸಮಸ್ಯೆಯಾಗಿದ್ದು ಸರಕಾರ ಬಜೆಟ್‌ನಲ್ಲಿ ಸೂಕ್ತ ಅನುದಾನ ಒದಗಿಸುವ ಮೂಲಕ ಸಮಸ್ಯೆ ನಿವಾರಣೆಗೆ ಮುಂದಾಗಬೇಕು. ಘೋಷಿತ ಮೆಡಿಕಲ್ ಕಾಲೇಜ್‌ಗೆ ಅನುದಾನ ಒದಗಿಸಿ ಕಾಲೇಜ್ ಆರಂಭಕ್ಕೆ ದಿಟ್ಟ ಹೆಜ್ಜೆ, ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕ ಯೋಜನೆ ಹೀಗೆ ಹತ್ತು ಹಲವು ಅಭಿವೃದ್ಧಿ ಕಾರ್ಯಗಳನ್ನು ಬಜೆಟ್‌ನಲ್ಲಿ ಘೋಷಿಸುವುದಲ್ಲದೆ ಅವುಗಳನ್ನು ಮುಂದಿನ ಬಜೆಟ್‌ನೊಳಗೆ ಕಾರ್ಯರೂಪಕ್ಕೆ ಬರುವಂತೆ ಸರಕಾರ ನೋಡಿಕೊಳ್ಳುಬೇಕು. ಈ ನಿಟ್ಟಿನಲ್ಲಿ ಸಿಎಂ ಹಾಗೂ ಸಂಬಂಧಿಸಿದ ಸಚಿವರನ್ನು ಭೇಟಿ ಮಾಡಿ ಒತ್ತಾಯಿಸಲಾಗುವುದು. ಘೋಷಿಸಿದ ಹತ್ತಾರು ಯೋಜನೆಗಳಲ್ಲಿ ಎರಡ್ಮೂರು ಯೋಜನೆಗಳಾದರೂ ಪೂರ್ಣಗೊಂಡರೆ ಜನರ ಮತಕ್ಕೆ ಬೆಲೆ ಬರುತ್ತದೆ ಎಂದು ಹೇಳಿದರು.

ಬಾಗಲಕೋಟೆ ನಗರ ಮುಳುಗಡೆ ಪ್ರದೇಶ ಎಂಬ ಹಣೆಪಟ್ಟಿ ಕಟ್ಟಿಕೊಂಡಿದೆ. ಅದನ್ನು ಕಳಚುವ ನಿಟ್ಟಿನಲ್ಲಿ ನಮ್ಮ ಭಾಗದಲ್ಲಿ ಸಾಕಷ್ಟು ಕೈಗಾರಿಕೆ, ಉದ್ಯಮಗಳ ಸ್ಥಾಪನೆ ಆಗಬೇಕು. ಕೋಲ್ಡ್ ಸ್ಟೋರೇಜ್ ಘಟಕ ಸೇರಿದಂತೆ ಸಣ್ಣ ಉದ್ದಿಮೆಗಳಿಂದ ಹಿಡಿದು ದೊಡ್ಡ ದೊಡ್ಡ ಉದ್ಯಮಗಳು ಇಲ್ಲಿ ಸ್ಥಾಪನೆ ಆಗಬೇಕು ಎಂದು ಒತ್ತಾಯಿಸಿದರು.

ಈ ಭಾಗದಲ್ಲಿ ಉದ್ಯಮ ಸ್ಥಾಪನೆಗೆ ಉದ್ದಿಮೆದಾರರು ಹಿಂದೇಟು ಹಾಕುತ್ತಿರುವುದು ಕಂಡು ಬಂದಿದ್ದು ಅವರಿಗೆ ಸರಕಾರ ಕೆಲ ರಿಯಾಯಿತಿ ಘೋಷಣೆ ಮೂಲಕ ಉದ್ಯಮ ಸ್ಥಾಪನೆಗೆ ಆಕರ್ಷಕ ಕೊಡುಗೆ ನೀಡಬೇಕು. ಆ ಮೂಲಕ ಉತ್ತರ ಕರ್ನಾಟಕ ಭಾಗದಲ್ಲಿ ನಿರುದ್ಯೋಗ ನಿವಾರಣೆಯಾಗುತ್ತದೆ. ಔದ್ಯೋಗೀಕರಣ ಬೆಳೆದಾಗ ಸಹಜವಾಗಿ ಆರ್ಥಿಕ ಸ್ಥಿತಿಗತಿ ಸುಧಾರಿಸುತ್ತದೆ ಎಂದರು.

ಕಾಂಗ್ರೆಸ್ ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ನಾಗರಾಜ ಹದ್ಲಿ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾಯದರ್ಶಿ ಶ್ರೀನಿವಾಸ ಬಳ್ಳಾರಿ, ಮುಖಂಡ ರಾಜು ಮನ್ನಿಕೇರಿ ಇದ್ದರು.

ಬಾಗಲಕೋಟೆಯಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಸ್.ಜಿ.ನಂಜಯ್ಯನಮಠ ಮಾತನಾಡಿದರು.

### ಅವಳಿ ಜಿಲ್ಲೆಗಳಲ್ಲಿ ಕೈಗಾರಿಕೆ ಸ್ಥಾಪನೆಯಾಗಲಿ

**ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ 11 ಲಕ್ಷ ಕೋಟಿ ರು. ಬಂಡವಾಳ ಹೂಡಿಕೆ ಆಗಿದೆ. ಇದನ್ನು ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ಸಮರ್ಥವಾಗಿ ಕಾರ್ಯರೂಪಕ್ಕೆ ತರುವ ನಿಟ್ಟನಲ್ಲಿ ತಮ್ಮದೆ ಆದ ಯೋಜನೆ ರೂಪಿಸಬೇಕು. ವಿಜಯಪುರ ಹಾಗೂ ಬಾಗಲಕೋಟೆ ಅವಳಿ ಜಿಲ್ಲೆಗಳ ಮಧ್ಯೆ ಸಾಕಷ್ಟು ಬರಡು ಭೂಮಿ ಇದ್ದು ಅಂತಹ ಪ್ರದೇಶದಲ್ಲಿ ಕೈಗಾರಿಕೆ ಸ್ಥಾಪನೆ ಆಗಬೇಕು. ಆ ಮೂಲಕ ನಿರುದ್ಯೋಗ ನಿವಾರಣೆಯತ್ತ ದಿಟ್ಟ ಹೆಜ್ಜೆ ಇಟ್ಟಂತಾಗುತ್ತದೆ ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ ಹೇಳಿದರು.**

## ಸೇವಾಲಾಲರ ತತ್ವಾದರ್ಶ ಪಾಲಿಸಿ

**ಇಳಕಲ್ಲ:** ಸಂತ ಶ್ರೀ ಸೇವಾಲಾಲ ಮಹಾರಾಜರ ತತ್ವಾದರ್ಶಗಳು ಬಂಜಾರ ಸಮಾಜಕ್ಕೆ ಮಾತ್ರವಲ್ಲ ಇಡೀ ಮಾನವ ಕುಲಕ್ಕೆ ದಾರಿ ದೀಪವಾಗಿದೆ ಎಂದು ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ಹುನಗುಂದ ಮತಕ್ಷೇತ್ರದ ಶಾಸಕ ವಿಜಯಾನಂದ ಕಾಶಪ್ಪನವರ ಹೇಳಿದರು.

ನಗರದ ಎಸ್.ಆರ್ ಕಂಠಿ ವೃತ್ತದಲ್ಲಿ ತಾಲೂಕು ಆಡಳಿತ, ತಾಲೂಕು ಪಂಚಾಯಿತಿ ಹಾಗೂ ನಗರಸಭೆ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾದ ಸಂತ ಶ್ರೀ ಸೇವಾಲಾಲ ಮಹಾರಾಜರ 286ನೇ ಜಯಂತುತ್ಸವ ಸಮಾರಂಭವನ್ನು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು. ಸಂತ ಶ್ರೀ ಸೇವಾಲಾಲ ಮಹಾರಾಜರು ಸಸ್ಯಾಹಾರಿಗಳಾಗಿದ್ದರು. ಮೂಡನಂಬಿಕೆ ಕಂದಾಚಾರಗಳ ವಿರುದ್ಧ ಹಗಲಿರುಳು ಶ್ರಮಿಸಿದರು. ಆದರೇ ಅವರ ಸಂತತಿಗಳಾದ ನೀವು ದೇವರ ಹೆಸರಲ್ಲಿ ಬಲಿಕೊಡುವ ಮೂಢನಂಬಿಕೆ ಕಂದಾಚಾರಗಳಿಂದ ಹೊರಬರದೇ ಇರುವುದು ಅತ್ಯಂತ ವಿಷಾದಕರ ಸಂಗತಿಯಾಗಿದೆ ಎಂದರು. ಸೇವಾಲಾಲ ಮಹಾರಾಜರ ಅತ್ಯಂತ ಹಿಂದುಳಿದ ಬಂಜಾರ ಸಮಾಜದ ಏಳಿಗೆಗಾಗಿ ಹಗಲಿರುಳು ಶ್ರಮಿಸಿದರಲ್ಲದೇ ಒಗ್ಗಟ್ಟು, ಉತ್ತಮ ಸಂಸ್ಕಾರ ಹಾಗೂ ಶಿಕ್ಷಣದಿಂದ ಮಾತ್ರ ಬಂಜಾರ ಸಮುದಾಯದ ಅಭಿವೃದ್ಧಿ ಸಾಧ್ಯ ಎಂದರು.

ಸುಧಾರಾಣಿ ಸಂಗಮ, ಉಪಾಧ್ಯಕ್ಷೆ ಕಾಳಮ್ಮ ಜಕ್ಕಾ, ರಾವೇಂದ್ರ ಚಿಂಚಮಿ, ಪರಶುರಾಮ ಪಮ್ಮಾರ, ಕೃಷ್ಣಾ ಪಿ. ರಾಠೋಡ, ಗೌರವಾಧ್ಯಕ್ಷ ನಾಗರಾಜ ಎಸ್. ಪವಾರ, ಮಾಜಿ ಜಿ.ಪಂ. ಅಧ್ಯಕ್ಷ ಕಮಲಪ್ಪ ರಾಠೋಡ, ಸಮಾಜದ ಯುವ ಮುಖಂಡ ದೀಪಕ ರಾಠೋಡ, ಹೊಸೂರ ತಾಂಡಾ, ಹಿರೆಕೊಡಗಲಿ ತಾಂಡಾ, ಗೊರಬಾಳ ತಾಂಡಾ, ಇಳಕಲ್ಲ ಜೊಶಿಗಲ್ಲಿ ತಾಂಡಾದ ನಾಯಕ, ಕಾರಭಾರಿ, ಡಾವೊಗಳು ಉಪಸ್ಥಿತರಿದ್ದರು.

ಸಂತ ಶ್ರೀ ಸೇವಾಲಾಲ ಮಹಾರಾಜರ 286ನೇ ಜಯಂತ್ಯೋತ್ಸವ ಸಮಾರಂಭವನ್ನು ಸಸಿಗೆ ನೀರು ಹಾಕುವ ಮೂಲಕ ಶಾಸಕ ವಿಜಯನಂದ ಕಾಶಪ್ಪನವರು ಉದ್ಘಾಟಿಸಿದರು.

## ವಿವಿ ಮುಚ್ಚುವುದು ಖಂಡನೀಯ

**ಬೀಳಗಿ:** ಕೇಂದ್ರದ ರಾಷ್ಟ್ರೀಯ ಶಿಕ್ಷಣ ನೀತಿ ಪ್ರಕಾರ ಪ್ರತಿ ಜಿಲ್ಲೆಗೊಂದು ವಿವಿಗಳು ರಚನೆ ಆಗಬೇಕು, ಎಲ್ಲ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ದೊರೆಯಬೇಕು ಎಂಬ ಕಲ್ಪನೆಯೊಂದಿಗೆ ರಾಜ್ಯದ ಬೀದರ್, ಹಾಸನ, ಚಾಮರಾಜನಗರ, ಹಾವೇರಿ, ಕೊಡಗು, ಕೊಪ್ಪಳ, ಬಾಗಲಕೋಟೆ, ಮಹಾರಾಣಿ ಕ್ಲಸ್ಟರ್, ಮಂಡ್ಯ ಮತ್ತು ನೃಪತುಂಗ ವಿಶ್ವವಿದ್ಯಾಲಯಗಳು ಈ ಹಿಂದೆ ನಮ್ಮ ಬಿಜೆಪಿ ಸರ್ಕಾರವಿದ್ದಾಗ ರಚನೆ ಮಾಡಿತ್ತು, ಹಾಗೂ ಕಾರ್ಯರಂಭ ಕೂಡ ಮಾಡಿದ್ದವು.

ವಿ.ವಿಗಳ ಆರ್ಥಿಕ ಹೊರೆ, ಮೂಲಭೂತ ಸೌಕರ್ಯ, ಭೋಧಕ-ಭೋದಕೇತರ ಸಿಬ್ಬಂದಿ ಕೊರತೆ, ವಿದ್ಯಾರ್ಥಿಗಳ ದಾಖಲಾತಿ ಸೇರಿದಂತೆ ಅನೇಕ ಕಾರಣಗಳನ್ನು ನೀಡಿ ರಾಜ್ಯದಲ್ಲಿ ಹೊಸದಾಗಿ ಸ್ಥಾಪಿಸಿದ ವಿಶ್ವವಿದ್ಯಾಲಯಗಳನ್ನು ರಾಜ್ಯ ಕಾಂಗ್ರೆಸ್ ಸರಕಾರವು ಮುಚ್ಚುವ ನಿರ್ಧಾರ ಮಾಡುತ್ತಿರುವುದು ಖಂಡನೀಯ, ಸರಕಾರದ ಬೊಕ್ಕಸಕ್ಕೆ ಹೊರೆಯಾದ ಈ ಗ್ಯಾರಂಟಿ ಯೋಜನೆಗಳನ್ನು ನಿಭಾಯಿಸುವ ಸಲುವಾಗಿ ಈಗಿನ ಸರಕಾರವು ಈ 9 ವಿಶ್ವವಿದ್ಯಾಲಯಗಳನ್ನು ಏಕಾಏಕಿ ಮುಚ್ಚಲು ಹೊರಟಿರುವುದು ಖಂಡನೀಯವಾಗಿದೆ.

ಯಾವುದೇ ಸರಕಾರವಿದ್ದರು ಸರಕಾರಗಳು ಶಿಕ್ಷಣ ಕ್ಷೇತ್ರಕ್ಕೆ, ಉನ್ನತ ಶಿಕ್ಷಣಕ್ಕೆ ಹೆಚ್ಚಿಗೆ ಅನುದಾನ, ಸಹಕಾರ ನೀಡಬೇಕು ಹಾಗೂ ರಾಜ್ಯದ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕು ಅದನ್ನು ಬಿಟ್ಟು ವಿವಿಗಳನ್ನು ಮುಚ್ಚುವ ನಿರ್ಧಾರವನ್ನು ಕೂಡಲೇ ಕೈ ಬಿಡಬೇಕು.

ವಿವಿಗಳು ಆರ್ಥಿಕವಾಗಿ ಸಬಲೀಕರಣಕ್ಕೆ ಹಾಗೂ ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಳಗೊಳಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು. ಶಿಕ್ಷಣ ಕ್ಷೇತ್ರದಲ್ಲಿ ರಾಜಕಾರಣ ಮಾಡುವುದು ಸರಿಯಲ್ಲ, ರಾಜ್ಯದ ವಿದ್ಯಾರ್ಥಿ ಸಮುದಾಯಕ್ಕೆ, ಪೋಷಕರಿಗೆ ನ್ಯಾಯ ಒದಗಿಸಬೇಕೆಂದು ವಿಧಾನ ಪರಿಷತ್ ಶಾಸಕರಾದ ಹಣಮಂತ ಆರ್ ನಿರಾಣಿಯವರು ಸರಕಾರಕ್ಕೆ ಆಗ್ರಹಿಸಿದರು.

## ವಿವಿಧ ಕಾಮಗಾರಿಗಳಿಗೆ ಶಾಸಕರಿಂದ ಚಾಲನೆ

**ಕೆರೂರ:** ಈಗಿನ ಪಟ್ಟಣ ಪಂಚಾಯಿತಿಯನ್ನು ಶೀಘ್ರದಲ್ಲೇ ಪುರಸಭೆಯನ್ನಾಗಿ ಬಡ್ತಿ ಹೊಂದಲಿದೆ ಈ ಬಗ್ಗೆ ನಗರಾಭಿವೃದ್ಧಿ,ಪೌರಾಡಳಿತ ಸಚಿವರು ತಾತ್ವಿಕ ಒಪ್ಪಿಗೆ ನೀಡಿದ್ದಾರೆ ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು.

ಅವರು ಪಟ್ಟಣ ಪಂಚಾಯಿತಿ ಆವರಣದಲ್ಲಿ ಶನಿವಾರ 15 ನೇ ಹಣಕಾಸು ಯೋಜನೆ ಅಡಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದರು ಪಟ್ಟಣ ದಿನದಿಂದ ದಿನಕ್ಕೆ ಬೆಳೆಯುತ್ತಿದ್ದು ಅಭಿವೃದ್ಧಿಗೆ ಸಾಕಷ್ಟು ಅನುದಾನದ ಕೊರತೆ ಕಾಣುತ್ತಿದೆ ಪ್ರಸಕ್ತ ಜನಸಂಖ್ಯೆ ಅನುಸಾರ ಪುರಸಭೆಯಾಗಿ ಬಡ್ತಿ ಹೊಂದಲು ಎಲ್ಲ ಅರ್ಹತೆ ಇದೆ. ಪಟ್ಟಣಕ್ಕೆ ಮಂಜೂರಾದ ನೂತನ ಕೆಪಿಎಸ್ ಶಾಲೆಗೆ ಹೊರವಲಯದ ಕೆಐಡಿಬಿ ಜಮೀನಿನಲ್ಲಿ ಸಚಿವರನ್ನು ಕರೆತಂದು ಶೀಘ್ರದಲ್ಲೆ ಅಡಿಗಲ್ಲು ಹಾಕಲಾಗುವದು ಆರೋಗ್ಯ, ಶಿಕ್ಷಣಕ್ಕೆ ಸ್ವಚ್ಛತೆಗೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದರು.

ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಮೌಲಾನ ಆಜಾದ ಸರಕಾರಿ ಆಂಗ್ಲ ಮಾಧ್ಯಮ ಶಾಲೆ, ಹುಲ್ಮನಿ ಕೈಗಾರಿಕಾ ಪ್ರದೇಶ ಬಳಿ ನೂತನ ನಾಡ ಕಚೇರಿ ಕಾರ್ಯಾಲಯದ ಕಟ್ಟಡ, ಸರಕಾರಿ ಪ್ರೌಢ ಶಾಲೆಯ ಕೊಠಡಿಗಳು ಹಾಗೂ ಚಿನಗುಂಡಿ ಪ್ಲಾಟನ ಎಲ್ ಪಿ ಎಸ್ ಪ್ರಾಥಮಿಕ ಶಾಲೆಯ ನೂತನ ಕೊಠಡಿಗಳ ಶಾಸಕ ಭೀಮಸೇನ ಚಿಮ್ಮನಕಟ್ಟಿ ಉದ್ಘಾಟಿಸಿದರು.

ಮುಖ್ಯಾಧಿಕಾರಿ ರಮೇಶ ಮಾಡಬಾಳ ಪ್ರಾಸ್ತಾವಿಕ ಮಾತನಾಡಿದರು. ಮುದ್ದುಸಂಗ ದೇವಾಂಗಮಠ ಸಾನಿಧ್ಯ ವಹಿಸಿದರು.ತಹಸೀಲ್ದಾರ್ ಮಧುರಾಜ, ಸಿಡಿಪಿಓ ಮುಲ್ಲಾ,ಪಪಂ ಅಧ್ಯಕ್ಷೆ ನಿರ್ಮಲಾ ಮದಿ,ಹಿರಿಯ ಕಾಂಗ್ರೆಸ್ ಮುಖಂಡರಾದ ಬಿ ಬಿ ಸೂಳಿಕೇರಿ,ಉಸ್ಮಾನಸಾಬ ಅತ್ತಾರ, ಸದಾನಂದ ಮದಿ. ಮೋದಿನಸಾಬ ಚಿಕ್ಕೂರ,ಪಪಂ ಸದಸ್ಯರಾದ ವಿಠಲಗೌಡ ಗೌಡರ,ಪರಶುರಾಮ ಮಲ್ಲಾಡದ, ಮಲ್ಲಪ್ಪ ಹಡಪದ,ಯಾಸಿನ ಖಾಜಿ,ಶಂಕರ ಕೆಂದೂಳಿ,ಅಶೋಕ ಹರಣಶಿಕಾರಿ,ಗೋಪಾಲ ಪೂಜಾರ, ಸುರೇಶ ಪೂಜೇರಿ,ಸತೀಶ ಕ್ಷತ್ರಿ, ಶ್ರೀಧರ ಕಾಂಬಳೆ, ಎಂ ಜಿ ಕಿತ್ತಲಿ,ದಿನೇಶ ಸೋಪದಾರ ಇದ್ದರು.



ಪಟ್ಟಣ ಪಂಚಾಯಿತಿ ಆವರಣದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಶಾಸಕ ಬಿ ಬಿ ಚಿಮ್ಮನಕಟ್ಟಿ ಮಾತನಾಡಿದರು.

> ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಕೆಲಸಗಳು ನಿಂತಿಲ್ಲ ನಮ್ಮ ಬಾದಾಮಿ ಕ್ಷೇತ್ರ ಅಭಿವೃದ್ಧಿ ಕೆಲಸಗಳು ಟೀಕಾರರಿಗೆ ದಿಟ್ಟ ಉತ್ತರ ನೀಡಲಿದ್ದು ಮುಂದಿನ ದಿನಗಳಲ್ಲೂ ಗ್ಯಾರಂಟಿ ನಿಲ್ಲಲ್ಲ ಮಹಿಳೆಯರು ಆತಂಕಪಡಬೇಡಿ.
> – ಭೀಮಸೇನ ಚಿಮ್ಮನಕಟ್ಟಿ , ಶಾಸಕ

## ಸ್ವಾವಲಂಬಿ ಗ್ರಾಮ ಚಿಂತನೆ 18ರಂದು

**ಗುಳೇದಗುಡ್ಡ:** ವಿಜಯಪುರದ ಶ್ರೀ ಸಿದ್ದೇಶ್ವರ ಶ್ರೀಗಳ ಮಾರ್ಗದರ್ಶನದಲ್ಲಿ ಕನ್ನೇರಿ ಮಠದ ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮಿಗಳು ನಾಡಿನಲ್ಲಿ ಮೂಲ ಕೃಷಿ ಹಾಗೂ ಸಾವಯವ ಕೃಷಿ ಉಳಿಸಿಬೆಳೆಸಬೇಕು, ನಮ್ಮ ಸಂಸ್ಕೃತಿ, ನಮ್ಮ ಪರಂಪರೆ ಉಳಿಸಬೇಕು ಎಂದು ನಾಡಿನಾದ್ಯಂತ ಚಳುವಳಿ ರೂಪದಲ್ಲಿ ಧಾರ್ಮಿಕ ಸಭೆ, ಚಿಂತನ ಸಭೆ ಹಮ್ಮಿಕೊಂಡು ರೈತರು, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುತ್ತಿರುವ ಕೊಲ್ಹಾಪುರದ ಕನ್ನೇರಿ ಮಠದ ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಶ್ರೀಗಳ ಗುರುವಂದನಾ ಹಾಗೂ ಸ್ವಾವಲಂಬಿ ಗ್ರಾಮಚಿಂತನ, ಧರ್ಮಸಭೆಯನ್ನು ಸಮೀಪದ ಹಂಸನೂರು ಗ್ರಾಮದಲ್ಲಿ ಶಿವಾನಂದ ಮಠದ ಆಶ್ರಯದಲ್ಲಿ ಫೆ.18ರಂದು ಬೆಳಗ್ಗೆ 10.30ಕ್ಕೆ ಹಂಸನೂರಿನ ಶಿವಾನಂದ ಮಠದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ ಹೇಳಿದರು.

ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶಿವಾನಂದ ಮಠದ ಶ್ರೀ ಅಭಿನವ ಬಸವರಾಜೇಂದ್ರ ಸ್ವಾಮಿಗಳ ನೇತೃದಲ್ಲಿ, ಹಂಸನೂರು ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಗ್ರಾಮಸ್ಥರು, ಜನಪ್ರತಿನಿಧಿಗಳ ಸಹಕಾರದಿಂದ ಗುರುವಂದನೆ, ಸ್ವಾವಲಂಬಿ ಗ್ರಾಮ ಚಿಂತನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಕಾರ್ಯಕ್ರಮಕ್ಕೆ ಸುಮಾರು ಹತ್ತು ಸಾವಿರ ಜನರು ಭಾಗವಹಿಸುವ ನಿರೀಕ್ಷೆ ಇದೆ ಎಂದರು.

ಶಿವಾನಂದ ಮಠದ ಶ್ರೀ ಅಭಿನವ ಬಸವರಾಜೇಂದ್ರ ಸ್ವಾಮಿಗಳು ಮಾತನಾಡಿ, ರೈತರು, ಯುವಕರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮಿಗಳಿಂದ ಸ್ವಾವಲಂಬಿ ಗ್ರಾಮ ಚಿಂತನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು ಬಾದಾಮಿ ಹಾಗೂ ಗುಳೇದಗುಡ್ಡ ತಾಲೂಕಿನ ರೈತರು, ಯುವಕರು ಕಾರ್ಯಕ್ರಮದ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ಬಸವರಾಜ ಕುಂಬಾರ, ವಿಠ್ಠಲ ಪತ್ತಾರ, ಕೆಡಿಎಪ್‌ಸಿ ಸದಸ್ಯ ಎಸ್.ಎಸ್. ಮಿಟ್ಟಲಕೋಡ ಇದ್ದರು.

ಹಂಸನೂರು ಗ್ರಾಮದಲ್ಲಿ ನಡೆಯಲಿರುವ ಗುರುವಂದನಾ ಹಾಗೂ ಸ್ವಾವಲಂಬಿ ಗ್ರಾಮ ಚಿಂತನ ಕಾರ್ಯಕ್ರಮದ ಭಿತ್ತಿಪತ್ರ ಬಿಡುಗಡೆಗೊಳಿಸಲಾಯಿತು.

> ಕೊಲ್ಹಾಪೂರದ ಕನ್ನೇರಿ ಮಠ ಕೃಷಿಗೆ ಅತ್ಯಂತ ಮಹತ್ವ ನೀಡಿದ ಮಠ, ಇದ್ದ ಸ್ವಲ್ಪ ಜಮೀನನಿಲ್ಲಿ ಸಾವಯವ ಕೃಷಿ, ಗುಡಿಕೈಗಾರಿಕೆಯ ಮೂಲಕ ಹೆಚ್ಚು ಆದಾಯ ಪಡೆಯುವ ಮೂಲಕ ರೈತರು ಹಾಗೂ ಗ್ರಾಮಗಳು ಸ್ವಾವಲಂಬಿಗಳಾಗಬೇಕು ಎಂಬ ಉದ್ದೇಶ ಇಟ್ಟುಕೊಂಡು ಸಮಾಜದಲ್ಲಿ ಬದಲಾವಣೆ ಮೂಡಿಸುತ್ತಿರುವ ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮಿಗಳು ತಾಲೂಕಿಗೆ ಆಗಮಿಸುತ್ತಿದ್ದು, ರೈತರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮಕ್ಕೆ ಆಗಮಿಸುವ ಮೂಲಕ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಿ.
> – ರಾಜಶೇಖರ ಶೀಲವಂತ, ಮಾಜಿ ಶಾಸಕ

## ಸೇವಾಲಾಲರು ಸಮುದಾಯದ ಬೆಳಕು

**ಬಾಗಲಕೋಟೆ:** ಚಾರಿತ್ರಿಕ ಯುಗಪುರಷ ಸಂತ ಸೇವಾಲಾಲರು ಶ್ರಮ ಸಮುದಾಯದ ಬೆಳಕಾಗಿದ್ದಾರೆ ಎಂದು ನವನಗರ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ.ಅರುಣಕುಮಾರ ಗಾಳಿ ಹೇಳಿದರು.

ಇಲ್ಲಿನ ನವನಗರ ಸ.ಪ್ರ.ದ ಕಾಲೇಜಿನ ಆವರಣದಲ್ಲಿ ನಡೆದ ಸಂತ ಸೇವಾಲಾಲರ 286ನೇ ಜಯಂತಿ ಕಾರ್ಯಕ್ರಮವನ್ನು ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಶ್ರಮ ಸಮುದಾಯದ ಶ್ರಮಿಕ ಕುಟುಂಬದಲ್ಲಿ ಹುಟ್ಟಿದ ಸಂತ ಸೇವಾಲಾಲ ಅವರು ಸಮಾಜಕ್ಕೆ ಅಪಾರ ಕೊಡುಗೆ ನೀಡಿ, ಬಂಜಾರ ಸಮುದಾಯದಲ್ಲಿ ಹುಟ್ಟಿ ಬಂದ ಚಾರಿತ್ರಿಕ ಯುಗಪುರುಷ, ಸೇನಾನಿ, ಸಂತ, ಚಾರಣ ಕವಿ, ಕಾಲಜ್ಞಾನಿ ಮಹಾತ್ಮರಾಗಿದ್ದಾರೆ. ಅವರು ಸಾಂಸ್ಕೃತಿಕ, ಚಾರಿತ್ರಿಕ ಪುರುಷರೆನಿಸಿಕೊಂಡು ಐತಿಹಾಸಿಕ, ಸಾಂಸ್ಕೃತಿಕ ನಾಯಕ ವೀರಸೇನಾನಿ, ಬ್ರಹ್ಮಚಾರಿ, ಸಮುದಾಯದ ಆರಾಧ್ಯ ದೈವ, ಆದರ್ಶ ಪುರುಷ, ಗುರು, ಚಾರಣಿಗ, ನಾಟಿ ವೈದ್ಯರಾಗಿ ಬಂಜಾರ ಸಮುದಾಯದ ದಾರಿದೀಪವಾಗಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಬೋಧಕ, ಬೋಧಕೇತರ ವರ್ಗದವರು ಹಾಗೂ ವಿದ್ಯಾರ್ಥಿಗಳಿದ್ದರು.



ಬಾಗಲಕೋಟೆಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಂತ ಸೇವಾಲಾಲ್ ಜಯಂತಿ ಆಚರಿಸಲಾಯಿತು.

ಬಾದಾಮಿ ಚೆನ್ನದಾಸರ ಸಮಾಜದ ವತಿಯಿಂದ ನೂತನವಾಗಿ ಅಸ್ತತ್ವಕ್ಕೆ ಬಂದಿರುವ ಕರ್ನಾಟಕ ರಾಜ್ಯ ಹಸಿರು ಕ್ರಾಂತಿ ರೈತ ಸಂಘ(ರಿ)ದ ರಾಜ್ಯಾಧ್ಯಕ್ಷ ಹಾಗೂ ಪದಾಧಿಕಾರಿಗಳಿಗೆ ಮಂಗಳವಾರ ನಗರದ ತಾ.ಪಂ.ಸಭಾಭವನದಲ್ಲಿ ಸನ್ಮಾನಿಸಲಾಯಿತು. ಸಂಘದ ರಾಜ್ಯಾಧ್ಯಕ್ಷ ಪುಂಡಲೀಕ ಕವಡಿಮಟ್ಟಿ ಮತ್ತು ಎಲ್ಲ ಪದಾಧಿಕಾರಿಗಳಿಗೆ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಚೆನ್ನದಾಸರ ಸಮಾಜದ ಮುಖಂಡರುಗಳಾದ ತಿಪ್ಪಣ್ಣ ಹಾಲಿಗೇರಿ, ಅಶೋಕ ದಾಸರ, ಬಸವರಾಜ ತೀರ್ಥಪ್ಪನವರ, ರಾಜೇಂದ್ರ ಅಡಗಲ, ಕನಕಪ್ಪ ದಾಸರ, ರಂಗಪ್ಪ ದಾಸರ, ಜಗದೀಶ್ ದಾಸರ, ಸುರೇಶ ಹಲಕುರ್ಕಿ, ಬಾಯವ್ವ ಮೇಲಿನಮನಿ, ಚಂದ್ರಶೇಖರ ಕವಡಿಮಟ್ಟಿ, ರೇಣವ್ವ ದಾಸರ, ಸಂದೀಪ್ ದಾಸರ, ಮಹೇಶ ಅಡಗಲ್ಲ, ಸಂತೋಷ ದಾಸರ ಸೇರಿದಂತೆ ಸಮಾಜ ಬಾಂಧವರು ಸೇರಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಯಿತು.

> {ಎಚ್.ಡಿ.ಕುಮಾರಸ್ವಾಮಿ} ಕೇಂದ್ರ ಸಚಿವ
>
> ಪಕ್ಷ ಸಂಘಟನೆಯ ಅವಶ್ಯಕತೆ ಇದೆ. ಮುಂದಿನ ದಿನಗಳಲ್ಲಿ ನಾನೇ ಖುದ್ದು ಜವಾಬ್ದಾರಿ ತೆಗೆದುಕೊಳ್ಳಬೇಕಾಗಿದೆ. ಸದ್ಯ ಸಂಘಟನೆಯ ಜವಾಬ್ದಾರಿಯನ್ನು ರಾಷ್ಟ್ರೀಯ ಅಧ್ಯಕ್ಷರೇ ವಹಿಸಿಕೊಳ್ಳುತ್ತಿದ್ದಾರೆ. ಕೇಂದ್ರ ಸಚಿವನದ ಬಳಿಕ ನನಗೆ ಬಿಡುವಿಲ್ಲದ ಕಾರ್ಯಕ್ರಮಗಳಿಂದಾಗಿ ದೇವೇಗೌಡರೇ ಪಕ್ಷದ ಶಾಸಕರು, ಮಾಜಿ ಶಾಸಕರು, ಕಾರ್ಯಕರ್ತರು ಜತೆಗೂಡಿ ಸಂಘಟನೆಗೆ ತೀರ್ಮಾನ ಮಾಡಿದ್ದಾರೆ.

## ವಕ್ಫ್ ತಿದ್ದುಪಡಿ ಮಸೂದೆಗೆ ವಿರೋಧ

**ಮುಧೋಳ:** ವಕ್ಫ್ ತಿದ್ದುಪಡಿ ಮಸೂದೆ ವಿರುದ್ಧ ಎಸ್‌ಡಿಪಿಐ. ರಾಜ್ಯಾದ್ಯಾಂತ ಕರೆ ನೀಡಿದ್ದ ಪ್ರತಿಭಟನೆಗೆ ಬಾಗಲಕೋಟೆ ಜಿಲ್ಲಾ ಹಾಗು ತಾಲೂಕು ಎಸ್‌ಡಿಪಿಐ. ಘಟಕ ಸಹಯೋಗದಲ್ಲಿ ನಗರದ ಬಸವೇಶ್ವರ ವೃತ್ತದಲ್ಲಿ ಫೆ.13.ರಂದು ರಾತ್ರಿ ಪಂಜಿನ ಮೆರವಣಿಗೆ ಹ್ಮಕೊಂಡು ವಕ್ಫ್ ತಿದ್ದುಪಡಿ ಮಸೂದೆಯನ್ನು ಖಂಡಿಸಿ ಪ್ರತಿಭಟನೆ ನಡೆಸಲಾಯಿತು. ಪಕ್ಷಪಾತದ ಅಸಂಧಾನಿಕವಾದ ವಕ್ಫ್ ತಿದ್ದುಪಡಿ ಮಸೂದೆ ತಿರಸ್ಕರಿಸುತ್ತೆವೆ, ಖಂಡಿತವಾಗಿಯೂ ಒಪ್ಪಲಾಗದು ಬದಲಾಗಿ ಇದನ್ನು ತಡೆಯಲು ಮುಂದಿನ ದಿನಗಳಲ್ಲಿ ಕಾನೂನು ಹೋರಾಟ ನಡೆಸಲಾಗುವದು. ಎಂದು ಸೋಶಿಯಲ್ ಡೆಮಾಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾ ಜಿಲ್ಲಾ ಅಧ್ಯಕ್ಷ ರಾಜು ಜಮಾದಾರ ಕೇಂದ್ರ ಸರಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ. ಪ್ರತಿಭಟನೆಯಲ್ಲಿ ಬಾಗಲಕೋಟೆ ಜಿಲ್ಲಾ ಸದಸ್ಯರಾದ ಉಮರಫಾರೂಕ ಕಾಲೇಖಾನ, ರಿಯಾಜ ಕಾಲೇಖಾನ, ಗೌಸ ನದಾಫ್, ಮಬೂಬ ಸಾರವಾನ, ಮೌಲಾ ಸಾರವಾನ, ಹಾಫೀಜ್ ಹೈದರಅಲಿ ನದಾಫ್, ಅತೀಕ ಅತ್ತಾರ, ಮುಜ್ಜುಲ್ ಮುಧೋಳ, ಅಂಉಜುನ್ ಕುಟಿ ಉಪಾಧ್ಯಕ್ಷ ರಫೀಕ ಪಠಾಣ, ಸದಸ್ಯ ಸುಲೇಮಾನ ಅಂಬಿ, ಡಾ.ಕರಜಗಿ, ಖಾದರ ತಹಸೀಲ್ದಾರ, ಇಬ್ರಾಂ ಗೋರಿ ಇತರರು ಇದ್ದರು. ನಗರದ ಬಸವೇಶ್ವರ ವೃತ್ತದಲ್ಲಿ ಫೆ.13.ರಂದು ರಾತ್ರಿ ಪಂಜಿನ ಮೆರವಣಿಗೆ ಹ್ಮಕೊಂಡು ತಿದ್ದುಪಡಿ ಮಸೂದೆಯನ್ನು ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

## ಸ್ನಾತಕೋತ್ತರ ಕೇಂದ್ರದ ಕಟ್ಟಡ ಆರಂಭ

**ಜಮಖಂಡಿ:** ನಗರದ ಮುಧೋಳ ರಸ್ತೆಯ ಕಳೆದ 2017 ರಲ್ಲಿ ಅಂದಿನ ಶಾಸಕ ದಿ ಸಿದ್ದು ನ್ಯಾಮಗೌಡ ಮತ್ತು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಅಂದಿನ ಸಿಂಡಿಕೇಟ್ ಸದಸ್ಯ ಸಂದೀಪ ಬೆಳಗಲಿಯವರ ಅವಿತರ ಶ್ರಮದಿಂದ ರಾಣಿ ಚೆನ್ನಮ್ಮ ವಿವಿಯ ಸ್ನಾತಕೋತ್ತರ ಕೇಂದ್ರ ಸ್ವಂತ ಕಟ್ಟಡದಲ್ಲಿ ಪ್ರಾರಂಭಗೊಂಡು 4 ಅಧ್ಯಯನ ಕೇಂದ್ರದೊಂದಿಗೆ 2023 ರವರೆಗೆ ಮುನ್ನಡೆಯಿತು.

ರಾಣಿ ಚೆನ್ನಮ್ಮ ವಿವಿಯ ಸ್ನಾತಕೋತ್ತರ ಕೇಂದ್ರವಾಗಿ ನಾಲ್ಕು ಅಧ್ಯಯನ ಕೇಂದ್ರ ಪ್ರಾರಂಭದೊಂದಿಗೆ ಸುಮಾರು 250 ವಿದ್ಯಾರ್ಥಿಗಳು ಅಧ್ಯಯನ ನಡೆಸಿದ್ದರು. ಮುಂದೆ 2023 ರಲ್ಲಿ ಭಾಜಪ ಸರಕಾರವು ಹೊಸ 10 ಹೊಸ ವಿವಿಗಳಿಗೆ ಅನುಮೋದನೆಯನ್ನು ನೀಡಿದ್ದರ ಫಲವಾಗಿ ಜಮಖಂಡಿಯಲ್ಲಿ ಸ್ನಾತಕೋತ್ತರ ಕೇಂದ್ರವಿದ್ದುದರಿಂದ ಇಲ್ಲಿಯೇ ವಿವಿಯು ಸ್ಥಳೀಯವಾಗಿ ಉಳಿಯಿತು. ಬಾಗಲಕೋಟೆ ವಿವಿ ಘೋಷಣೆಯ ಪ್ರಾರಂಭದಲ್ಲಿಯೇ ಅನೇಕ ತೊಡಕು ಎದುರಿಸಿ ಸಾರ್ವಜನಿಕರ ಹೋರಾಟದ ಫಲವಾಗಿ ನಗರದಲ್ಲಿಯೇ ನೆಲೆಯೂರಿತು ಈಗ ಮತ್ತೇ ಗ್ರಹಣ ಆವರಿಸುವ ಭೀತಿ ಬಂದಿದೆ.

ಈ ವಿವಿಯಲ್ಲಿ ನೂರಾರು ಬಡ ವಿದ್ಯಾರ್ಥಿಗಳು ತಮ್ಮ ಅಧ್ಯಯನ ನಡೆಸಿ ಜೀವನ ರೂಪಿಸಿಕೊಳ್ಳುವ ತವಕದಲ್ಲಿದ್ದರೆ ಮತ್ತೇ ರಾಜಕೀಯ ಪ್ರಾರಂಬವಾಗಿದೆ ಸ್ಥಳೀಯವಾಗಿ ಸಮಾಜಶಾಸ್ತ್ರ, ಎಂಬಿಎ, ರಾಜ್ಯಶಾಸ್ತ್ರ ಗಣಿತಶಾಸ್ತ್ರ ಹೀಗೆ ಮುಂತಾದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆಯಲು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಒಂದು ವೇಳೆ ಈ ವಿಶ್ವವಿದ್ಯಾಲಯವು ಮುಚ್ಚಿದರೆ ನೂರಾರು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಎಂದು ಪೋಷಕರು ಆರೋಪಿಸುತ್ತಿದ್ದಾರೆ.



### ರಾಜಕೀಯ ಪ್ರಾರಂಭ

**ಪ್ರಸಕ್ತವಾಗಿ 2023 ರ ಮಾರ್ಚ್‌ದಲ್ಲಿ ಪ್ರಾರಂಭಗೊಂಡ ಬಾಗಲಕೋಟೆ ವಿಶ್ವ ವಿದ್ಯಾಲಯವು ಸುಮಾರು 73 ಮಹಾವಿದ್ಯಾಲಯಗಳ ಜತೆಗೆ 13 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳನ್ನು ಹೊಂದಿದ್ದು ಅದರ ಜತೆಗೆ ವಿಶ್ವ ವಿದ್ಯಾಲಯದ ಆವರಣದಲ್ಲಿ ಸುಮಾರು 350 ಕ್ಕೂ ಅಧಿಕ ವಿದ್ಯಾರ್ಥಿಗಳು 7 ಅಧ್ಯಯನ ವಿಭಾಗದಲ್ಲಿ ಅಧ್ಯಯನ ನಡೆಸಿದ್ದಾರೆ. ಇದರಿಂದ ಗ್ರಾಮೀಣ ಪ್ರದೇಶದ ಬಡ ಮಕ್ಕಳಿಗೆ ಅತೀವ ಅನುಕೂಲವಾಗಿದೆ ಆದರೆ ಮತ್ತೇ ರಾಜಕೀಯ ಪ್ರಾರಂಭವಾಗಿದೆ.**

ಬೆಳಗಾವಿ ಧಾರವಾಡ, ಕಲಬುರಗಿ ಹೀಗೆ ಅನೇಕ ದೂರದ ವಿವಿಗಳಿಗೆ ನಮ್ಮ ಮಕ್ಕಳು ಹೋಗಿ ಅಧ್ಯಯನ ಮಾಡಲು ನಮ್ಮ ಆರ್ಥಿಕ ವ್ಯವಸ್ಥೆಯ ಸಹಕಾರ ಮಾಡುವದಿಲ್ಲ ಅದಕ್ಕಾಗಿ ಈ ವಿವಿಯು ಮುಚ್ಚಿಸಲು ನಾವುಗಳು ಬಿಡುವದಿಲ್ಲ ಎಂದು ಪೋಷಕರು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

## ರನ್ನ ವೈಭವಕ್ಕೆ ವಿವಿಧ ಕ್ರೀಡಾಕೂಟ 22ರಂದು

**ಬಾಗಲಕೋಟೆ:** ಜಿಲ್ಲೆಯ ಮುಧೋಳದಲ್ಲಿ ಫೆ.22 ರಿಂದ 24ರ ವರೆಗೆ ನಡೆಯಲಿರುವ ರನ್ನವೈಭವದ ಹಿನ್ನಲೆಯಲ್ಲಿ ರನ್ನಬೆಳಗಲಿ ಹಾಗೂ ಮುಧೋಳ ನಗರದ ಕವಿ ಚಕ್ರವರ್ತಿ ರನ್ನ ತಾಲೂಕು ಕ್ರೀಡಾಂಗಣದಲ್ಲಿ ವಿವಿಧ ಕ್ರೀಡಾಕೂಟಗಳನ್ನು ಹಮ್ಮಿಕೊಳ್ಳಲಾಗಿದೆ. ಫೆ.22 ರಂದು ಸಂಜೆ 4ಕ್ಕೆ ಕವಿ ಚಕ್ರವರ್ತಿ ರನ್ನ ಕ್ರೀಡಾಂಗಣದಲ್ಲಿ ಕ್ರೀಡಾಕೂಟಗಳಿಗೆ ಚಾಲನೆ ಹಾಗೂ ಆಯ್ದ ಅಂತರರಾಜ್ಯ ಪುರುಷ ಹಾಗೂ ಮಹಿಳಾ ಕಬಡ್ಡಿ ಪಂದ್ಯಾವಳಿ ಹಾಗೂ ಸಂಜೆ 6.30ಕ್ಕೆ ಮಲ್ಲಕಂಬ ಪ್ರದರ್ಶನ ಜರುಗಲಿದೆ. 23 ರಂದು ಬೆಳಗ್ಗೆ 6.30ಕ್ಕೆ ಮುಧೋಳನ ಸಂಗೊಳ್ಳಿ ರಾಯಣ್ಣ ಸರ್ಕಲ್‌ದಿಂದ ಕ್ರೀಡಾಂಗಣದವರೆಗೆ ಮ್ಯಾರಾಥಾನ್ ಹಮ್ಮಿಕೊಳ್ಳಲಾಗಿದೆ. ಮಧ್ಯಾಹ್ನ 12ಕ್ಕೆ ತಾಲೂಕಾ ಕ್ರೀಡಾಂಗಣದಲ್ಲಿ ಸಂಗ್ರಾಣಿ ಕಲ್ಲು, ಗುಂಡು, ಚೀಲ ಎತ್ತುವುದು ಹಾಗೂ ಗುಂಡು ಕಲ್ಲು ಒತ್ತುವ ಕ್ರೀಡೆಗಳು ನಡೆಯಲಿದ್ದು, ಮುಕ್ತ ಪ್ರವೇಶ ಇರುತ್ತದೆ. ಫೆ.23 ಮತ್ತು 24 ರಂದು ರನ್ನ ಕ್ರೀಡಾಂಗಣದಲ್ಲಿ ಆಯ್ದ ಅಂತರರಾಜ್ಯ ಪುರುಷ ಹಾಗೂ ಮಹಿಳಾ ಕಬಡ್ಡಿ ಪಂದ್ಯಾವಳಿಗಳು ಮುಂದುವರೆಯಲಿವೆ. ರನ್ನವೈಭವ ಪ್ರಯುಕ್ತ ಜರುಗಲಿರುವ ಎಲ್ಲ ಕ್ರೀಡೆಗಳಲ್ಲಿ ಆಕರ್ಷಕ ನಗದು ಬಹುಮಾನ ಹಾಗೂ ಟ್ರೋಫಿಗಳನ್ನು ನೀಡಲಾಗುತ್ತದೆ. ಮ್ಯಾರಾಥಾನದಲ್ಲಿ ಪಾಲ್ಗೊಳ್ಳುವವರಿಗೆ ಟೀಶರ್ಟ ನೀಡಲಾಗುತ್ತದೆ. ಜಿಲ್ಲೆಯ ಎಲ್ಲ ಯುವಕರು, ಕ್ರೀಡಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ಸುಗೊಳಿಸುವಂತೆ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ದಿನ ದರ್ಶಿಕೆ

ಕ್ರೋಧಿ ಸಂವತ್ಸರ, ಮಾಘ ಮಾಸ, ಪಂಚಮಿ ತಿಥಿ, ಕೃಷ್ಣ ಪಕ್ಷ, ಚಿತ್ತಾ ನಕ್ಷತ್ರ, ಅಡಾಲ್ ಯೋಗ, ರಾಹುಕಾಲ ಬೆಳಗ್ಗೆ 8.09ರಿಂದ 9.37ರವರೆಗೆ, ಅಭಿಜಿತ್ ಲಗ್ನ ಅಪರಾಹ್ನ 12.10ರಿಂದ 12.57ರವರೆಗೆ

## ಮನೆಮದ್ದು

ಕಟುಕರೋಹಿಣಿ, ಜ್ಯೇಷ್ಠಮಧುವನ್ನು ಕೂಡಿಸಿ, ನೀರು ಸೇರಿಸಿ ಕಲ್ಕ ಮಾಡಿ, ಅದಕ್ಕೆ ಕಲ್ಲುಸಕ್ಕರೆ ಸೇರಿಸಿ ಕುಡಿಯುವುದರಿಂದ ಹೃದಯವ್ಯಾಧಿ ಶಾಂತವಾಗುವುದು. ಎದೆಹಾಲಿನ ವೃದ್ಧಿಗಾಗಿ ಇದರ ಕಷಾಯವನ್ನು ಸಕ್ಕರೆ/ಜೇನುತುಪ್ಪದೊಂದಿಗೆ ಸೇವಿಸಿ.

## ಸೌಂದರ್ಯ ಸೂತ್ರ

ತುಟಿಗಳಿಗೆ ಲಿಪ್‌ಸ್ಟಿಕ್ ಲೇಪಿಸುವಾಗ, ಮೇಲ್ಮೈಗೆ ಮಾತ್ರ ಪ್ರಯೋಗಿಸುವುದು ಸರಿಯಲ್ಲ. ತುಟಿಗಳ ಸೀಳು-ಸಂದುಗಳ ಒಳಗೆ ರಂಗು ಪ್ರವೇಶಿಸುವಂತೆ ಲೇಪಿಸಬೇಕು. ಇದರಿಂದಾಗಿ ಬಣ್ಣವು ಬಹಳ ಹೊತ್ತಿನವರೆಗೆ ಬಾಳಿಕೆ ಬರುವುದಲ್ಲದೆ, ಅಚ್ಚಬಣ್ಣವಾಗಿ ಉಳಿಯುವುದು.

## ದಿನ ಭವಿಷ್ಯ

**ಮೇಷ**
'ಹಲವು ದೇವರನ್ನು ನಂಬಿ ಕುರುಡುದಾಸ ಕೆಟ್ಟ' ಎಂಬುದೊಂದು ಮಾತಿದೆ. ಯಾವುದಾದರೂ ಒಂದು ದೈವವನ್ನು ಗಟ್ಟಿಯಾಗಿ ನಂಬಿ, ವಿಶ್ವಾಸವಿಡಿ. ನಂತರ ನಿಮ್ಮ ನಿಯೋಜಿತ ಕೆಲಸದಲ್ಲಿ ಬೆವರು ಸುರಿಸಿ ದುಡಿಯಿರಿ.

**ವೃಷಭ**
ಸರಕಾರಿ ಉದ್ಯೋಗ ಸಿಕ್ಕರೆ ಮಾತ್ರವೇ ಬದುಕು ಭದ್ರ ಎಂಬ ಭ್ರಮೆಯಿಂದ ಮೊದಲು ಹೊರಗೆ ಬನ್ನಿ. ವ್ಯಾಪಾರ-ವ್ಯವಹಾರ, ಸ್ವಂತ ಉದ್ದಿಮೆ, ಖಾಸಗಿ ನೌಕರಿ ಹೀಗೆ ಹೊಟ್ಟೆಪಾಡಿಗೆ ಸಾಕಷ್ಟು ಮಾರ್ಗೋಪಾಯಗಳಿವೆ. ಮಾರ್ಗ ಯಾವುದಾದರೂ ಶ್ರದ್ಧೆ ಮುಖ್ಯ.

**ಮಿಥುನ**
ಬಾಳಸಂಗಾತಿಯ ಮಾತುಗಳನ್ನು ಉಪೇಕ್ಷಿಸದೆ ಗಮನವಿಟ್ಟು ಕೇಳಿ. ಕುಟುಂಬದ ಒಳಿತಿಗಾಗಿಯೇ ಅನುಗಾಲವೂ ಆಲೋಚಿಸುವ ಅವರಲ್ಲಿ ಉತ್ತಮ ಉಪಾಯಗಳು ಇರುವಂತಿದೆ.

**ಕಟಕ**
ಗುರು-ಹಿರಿಯರನ್ನು, ಬಂಧು-ಬಳಗದವರನ್ನು ಉಪಚರಿಸುವ ನಿಮ್ಮ ವೈಖರಿ ಮೆಚ್ಚುಗೆಗೆ ಪಾತ್ರವಾಗಲಿದೆ. ಯಾವುದೂ ಅತಿಯಾಗದಿರಲಿ. ನಿಮಗಾಗಿ ಒಂದಿಷ್ಟು ಸಮಯ ಮೀಸಲಿಟ್ಟುಕೊಳ್ಳಿ.

**ಸಿಂಹ**
ಅಧೀನ ಸಿಬ್ಬಂದಿಯನ್ನು ತುಚ್ಛವಾಗಿ ಕಾಣದೆ, ನಿಮ್ಮ ಔನ್ನತ್ಯಕ್ಕಾಗಿ ಶ್ರಮಿಸುತ್ತಿರುವ ಶ್ರಮಜೀವಿಗಳು ಎಂದು ಪರಿಭಾವಿಸಿ. ಅವರು ಖುಷಿಯಾಗಿದ್ದರೆ, ನಿರಾಳರಾಗಿದ್ದರೆ, ನಿಮ್ಮ ಕಾರ್ಯಭಾರವೂ ಸರಾಗವಾಗುತ್ತದೆ.

**ಕನ್ಯಾ**
ಉದ್ಯೋಗಕ್ಕೆ ಹೋಗಬೇಕೋ ಅಥವಾ ಸ್ವಂತ ಉದ್ದಿಮೆಯನ್ನು ಸ್ಥಾಪಿಸಬೇಕೋ ಎಂಬ ದ್ವಂದ್ವದಿಂದ ಆದಷ್ಟು ಬೇಗ ಹೊರಬನ್ನಿ. ಕಾರ್ಯಸಾಧನೆ ಆಗುವವರೆಗೂ, ನಿಮ್ಮ ಯೋಜನೆಗಳನ್ನು ಯಾರೊಂದಿಗೂ ಹೇಳಿಕೊಳ್ಳದಿರಿ. ಹಿತಶತ್ರುಗಳಿದ್ದಾರೆ, ಜಾಗ್ರತೆ!

**ತುಲಾ**
ಹೆತ್ತವರಿಂದ ನಿಷ್ಕರ್ಷಿಸಲ್ಪಟ್ಟವರನ್ನು ಬಾಳ ಸಂಗಾತಿಯಾಗಿ ಸ್ವೀಕರಿಸುವುದರಲ್ಲೇ ನಿಮ್ಮ ಹಿತ ಅಡಗಿದೆ. ಬದುಕೆಂಬುದು ಸಿನಿಮಾ ಅಲ್ಲ, ರಮ್ಯ ಕಲ್ಪನೆಗಳ ಭ್ರಾಮಕ ಲೋಕದಿಂದ ಹೊರಬಂದು, ವಾಸ್ತವತೆಯನ್ನು ಅಪ್ಪಿಕೊಳ್ಳಿ. ಕನಸೆಂಬುದು ಹಗಲುಗನಸು ಆಗದಿರಲಿ.

**ವೃಶ್ಚಿಕ**
ಎಲ್ಲ ತಿನಿಸನ್ನೂ ನಾನೊಬ್ಬನೇ ತಿನ್ನಬೇಕು, ಎಲ್ಲ ಸ್ವತ್ತುಗಳೂ ನನ್ನವಾಗಬೇಕು ಎಂಬ ಹಪಹಪಿ ಸಲ್ಲದು. ಇರುವುದನ್ನು ಇನ್ನೊಬ್ಬರೊಂದಿಗೆ ಹಂಚಿಕೊಂಡು ತಿನ್ನುವುದರಿಂದ ನಿಮ್ಮ ಸಂಪತ್ತು ಕರಗಿಬಿಡುವುದಿಲ್ಲ. ಮಾನವೀಯ ಹೃದಯ ನಿಮ್ಮದಾಗಲಿ.

**ಧನು**
ವೃತ್ತಿ ಸಂಬಂಧವಾಗಿ ವರ್ಗಾವಣೆಯಾಗಬಹುದು ಮತ್ತು ಕೆಲ ಕಾಲದ ನಂತರವಷ್ಟೇ ಕುಟುಂಬದವರನ್ನು ನೀವಿದ್ದಲ್ಲಿಗೆ ಕರೆಸಿಕೊಳ್ಳುವುದು ಸೂಕ್ತ. ಖರ್ಚು-ವೆಚ್ಚಗಳ ಮೇಲೆ ಹಿಡಿತವಿರಲಿ.

**ಮಕರ**
ಬದುಕಿನ ಏಕತಾನತೆಯಿಂದ ತಪ್ಪಿಸಿಕೊಳ್ಳಲು ಚಿತ್ರಕಲೆ, ಸಂಗೀತ ಇತ್ಯಾದಿಗಳಲ್ಲಿ ತೊಡಗಿಸಿಕೊಳ್ಳಿ. ಮನೆಯಲ್ಲಿ ಪುಟ್ಟದೊಂದು ನಾಯಿಮರಿಯನ್ನು ಸಾಕಿ. ಇದರಿಂದಾಗಿ ಬದುಕಿನಲ್ಲಿ ಆಹ್ಲಾದತೆ ಹೆಚ್ಚುತ್ತದೆ, ಮನಸ್ಸು ನಿರಾಳವಾಗುತ್ತದೆ.

**ಕುಂಭ**
ಇರುವ ಸೌಲಭ್ಯದಲ್ಲೇ ಬದುಕನ್ನು ಮುನ್ನಡೆಸುವ ಕಲೆಯನ್ನು ರೂಢಿಸಿಕೊಳ್ಳಿ. ಸಾಲ ಮಾಡಿಯಾದರೂ ತುಪ್ಪ ತಿನ್ನಬೇಕು ಎಂಬ ಚಾರ್ವಾಕ ಸಿದ್ಧಾಂತ ನಿಮಗೆ ಒಗ್ಗದು, ಒಪ್ಪದು. ಪರಿಶ್ರಮದ ದುಡಿಮೆಯೇ ನಿಮ್ಮ ಯಶಸ್ಸಿಗೆ ಮೂಲಾಧಾರ.

**ಮೀನ**
ಬಹಳ ದಿನಗಳಿಂದ ನಿಮಗೆ ಬರಬೇಕಿದ್ದ ಹಣ ಅಥವಾ ಸ್ವತ್ತು ನಿಮ್ಮ ಕೈಸೇರಿ ಸಂತಸವನ್ನು ಅನುಭವಿಸುವಿರಿ. ಮನೆಗೆ ಬಂದ ಅತಿಥಿಗಳೊಂದಿಗೆ ಒಂದೆರಡು ಸೌಜನ್ಯದ ಮಾತಾಡುವುದನ್ನು ಅಭ್ಯಾಸ ಮಾಡಿಕೊಳ್ಳಿ. ಮಾತಿನಲ್ಲಿ ಸ್ಪಷ್ಟತೆ ಇರಲಿ, ದ್ವಂದ್ವಕ್ಕೆ ಆಸ್ಪದ ನೀಡಬೇಡಿ.

• ಕೆ.ಬಿ.ಸಂತೋಷ್ ಗುರೂಜಿ

## ಮಧುರ ಸ್ಮೃತಿ

ಸಾಹಸಸಿಂಹ ವಿಷ್ಣುವರ್ಧನ್ ಓದಿದ್ದು, ಒಡನಾಡಿದ್ದು ಬೆಂಗಳೂರಿನ ಬಸವನಗುಡಿಯ ನ್ಯಾಷನಲ್ ಕಾಲೇಜಿನಲ್ಲಿ. ಇಲ್ಲಿರುವಷ್ಟು ದಿನವೂ ತಮ್ಮ 'ಸೃಜನಶೀಲ ಪಟಾಲಂ'ನೊಂದಿಗೆ ಸುತ್ತಲಿದ್ದವರನ್ನು ರಂಜಿಸುತ್ತಿದ್ದುದು ವಿಷ್ಣುರವರ ವೈಶಿಷ್ಟ್ಯವಾಗಿತ್ತು. ಇದಕ್ಕೆ ಮನಸೋತಿದ್ದವರಲ್ಲಿ, ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ನರಸಿಂಹಯ್ಯ (ಎಚ್ಚೆನ್) ಕೂಡ ಒಬ್ಬರು! ಅವರು ವಿಷ್ಣುವಿಗೆ ಇಟ್ಟಿದ್ದ ಹೆಸರು 'ಟಿ'. ಅದು 'ತರಲೆ' ಎಂಬುದರ ಸಂಕ್ಷಿಪ್ತರೂಪ. ಕ್ಯಾಂಪಸ್‌ನಲ್ಲಿ ವಿಷ್ಣು ಒಂದೊಮ್ಮೆ ಕಾಣಿಸಿಕೊಳ್ಳದಿದ್ದರೆ ಎಚ್ಚೆನ್, ''ಲೋ, ಆ 'ಟಿ'ನ ಕರೀರೋ...'' ಅಂತ ಮಿಕ್ಕ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದರಂತೆ. ವಿಷ್ಣು ತಮ್ಮ ಮಾತುಗಾರಿಕೆ, ತರಲೆಯಿಂದ ಮನರಂಜಿಸಲಿ ಎಂಬುದು ಇದಕ್ಕಿದ್ದ ಒಂದು ಕಾರಣವಾದರೆ, ಎಚ್ಚೆನ್ ಅವರು ವಿಷ್ಣುರವರ ತಾಯಿ ಕಾಮಾಕ್ಷಮ್ಮನವರು ಮಾಡಿಕೊಡುತ್ತಿದ್ದ ಚಕ್ಕುಲಿ-ಕೋಡುಬಳೆಯ 'ಫ್ಯಾನ್' ಕೂಡ ಆಗಿದ್ದುದು ಮತ್ತೊಂದು ಕಾರಣವಾಗಿತ್ತು. ವಿಷ್ಣುರ ತೆಕ್ಕೆಯಲ್ಲಿ ಚಕ್ಕಲಿ-ಕೋಡುಬಳೆ ಇದ್ದೇ ಇರುತ್ತೆ ಅನ್ನೋದು ಎಚ್ಚೆನ್‌ರ ನಂಬಿಕೆಯಾಗಿರುತ್ತಿತ್ತು. ಇಂಥ ಗುರು-ಶಿಷ್ಯರು ದಶಕಗಳ ನಂತರ ಭೇಟಿಯಾದಾಗಿನ ದಿವ್ಯಕ್ಷಣವಿದು...

# ಜ್ಞಾನದ ಅಪಾತ್ರದಾನ ಆಗಬಾರದು

## ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com


'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಅಪಾತ್ರರಿಗೆ ಜ್ಞಾನವನ್ನಾಗಲೀ ಕೊಡುಗೆಯನ್ನಾಗಲೀ ನೀಡುವುದು, ಮಂಗನ ಕೈಗೆ ಮಾಣಿಕ್ಯವನ್ನು ಕೊಟ್ಟಂತೆ. ಎಲ್ಲರಿಗೂ ಎಲ್ಲವನ್ನೂ ಕೊಡದೆ, ಅವರ ಮಿತಿಗಳನ್ನು ನೋಡಿ ಕೊಡಬೇಕು. ಇಂಥ ಸೂಕ್ಷ್ಮ ವಿಷಯಗಳನ್ನು ಶ್ರೀಕೃಷ್ಣನು ವಿಚಾರಮಾಡಿ ತಿಳಿಸಿದ್ದಾನೆ. ಎಲ್ಲಾ ನಿಟ್ಟಿನಲ್ಲೂ ಸಾಮರ್ಥ್ಯವಿರುವುದನ್ನು ಖಚಿತಪಡಿಸಿಕೊಂಡೇ ಅವನು ಅರ್ಜುನನಿಗೆ ಭಗವದ್ಗೀತೆಯನ್ನು ಉಪದೇಶಿಸಿದ್ದು.

ಗುರು ದ್ರೋಣಾಚಾರ್ಯರು ಏಕಲವ್ಯನಿಗೆ ವಿದ್ಯೆ ಕೊಡಲಿಲ್ಲ. ದ್ರೋಣರು ಕೇಳಿದ ಗುರುದಕ್ಷಿಣೆಯನ್ನು ಕೊಟ್ಟು ಲೋಕದ ದೃಷ್ಟಿಯಲ್ಲಿ 'ಅಪ್ರತಿಮ ಶಿಷ್ಯ' ಎನಿಸಿಕೊಂಡವನು ಏಕಲವ್ಯ. 'ಶಿಷ್ಯನ ಅಮಾಯಕತೆಯನ್ನು ಬಳಸಿಕೊಂಡ ಸ್ವಾರ್ಥಿ-ಗುರು ದ್ರೋಣಾಚಾರ್ಯರು' ಎನ್ನುತ್ತಾರೆ ಕೆಲವರು. ಆದರೆ ದ್ರೋಣರು ದೂರದೃಷ್ಟಿ ಉಳ್ಳವರಾಗಿದ್ದರು. ''ಅಜ್ಞಾನಿಗಳ ಕೈಯಲ್ಲಿ ಶಕ್ತಿಶಾಲಿ ಅಸ್ತ್ರಗಳ ಜ್ಞಾನವನ್ನು ಕೊಡಬಾರದು, ಕೊಟ್ಟರೆ ಹುಚ್ಚರ ಕೈಗೆ ಕಲ್ಲು ಕೊಟ್ಟ ಹಾಗೆ, ಅವರು ಅದನ್ನು ಎಲ್ಲಿಗೆ ಬೇಕಾದರೂ ಎಸೆಯಬಹುದು; ಅಜ್ಞಾನಿಗಳಿಗೆ ದೊಡ್ಡ ದೊಡ್ಡ ಶಸ್ತ್ರಾಸ್ತ್ರಗಳ ಜ್ಞಾನವನ್ನು ಕೊಟ್ಟರೆ, ಅವರು ಕೋಪದ ಭರದಲ್ಲಿ ಸರ್ವನಾಶವನ್ನೇ ಮಾಡಬಹುದು'' ಎಂಬುದು ಹಿಂದಿನ ಜ್ಞಾನಿಗಳ ಅಭಿಪ್ರಾಯವಾಗಿತ್ತು.

''ಶಸ್ತ್ರಾಸ್ತ್ರಗಳ ಜ್ಞಾನವನ್ನು ದಕ್ಕಿಸಿಕೊಂಡ ಏಕಲವ್ಯನು ಸರಿಯಾದ ಮಾರ್ಗದಲ್ಲಿ ಹೋದರೆ ಸರಿ; ಆದರೆ ದ್ವೇಷಕ್ಕಾಗಿ ಅಡ್ಡದಾರಿ ಹಿಡಿದರೆ ಅದರ ಪರಿಣಾಮ ಎದುರಿಸುವುದು ಕಷ್ಟ'' ಎಂದು ಯೋಚಿಸಿದ ದ್ರೋಣರು ಏಕಲವ್ಯನ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಪಡೆದರು. ಇದರ ಪರಿಣಾಮವು ಮುಂದೆ ಅರ್ಥವಾಗುತ್ತದೆ. ಮಗಧದ ದೊರೆ ಜರಾಸಂಧನು ದುಷ್ಟರಾದ ಶಿಶುಪಾಲ, ಕಾಲಯವನ ಇವರುಗಳ ಜತೆಗೂಡಿ ಮಥುರೆಯ ಮೇಲೆ ಪದೇಪದೆ ದಾಳಿಮಾಡಿ ನಾಶಕ್ಕೆ ಯತ್ನಿಸುತ್ತಾನೆ. ತಕ್ಕ ಸಮಯಕ್ಕಾಗಿ ಕಾದಿದ್ದ ಕೃಷ್ಣನು, ಅರ್ಜುನ ಮತ್ತು ಭೀಮನೊಂದಿಗೆ ಬ್ರಾಹ್ಮಣರ ವೇಷದಲ್ಲಿ ಹೋಗಿ, ಜರಾಸಂಧನು ಭೀಮನೊಂದಿಗೆ ಮಲ್ಲಯುದ್ಧ ಮಾಡುವಂತೆ ಉಪಾಯ ಮಾಡಿ, ಸಾಕಷ್ಟು ಸೆಣಸಾಡಿದ ಮೇಲೆ ಜರಾಸಂಧನ ದೇಹವನ್ನು ಸೀಳಿ ಭಾಗಮಾಡಿ, ಬೇರೆ ಬೇರೆ ದಿಕ್ಕಿಗೆ ಎಸೆಯುವಂತೆ ಮಾಡಿ ಅವನ ಸಂಹಾರ ಮಾಡಿಸುತ್ತಾನೆ. ಆನಂತರ ಯುಧಿಷ್ಠಿರ ರಾಜಸೂಯಯಾಗ ಮಾಡುತ್ತಾನೆ. ಜರಾಸಂಧನ ಸಾವಿನ ಪ್ರತೀಕಾರಕ್ಕಾಗಿ ಏಕಲವ್ಯನು ಯಾದವರ ಮೇಲೆ ಕೆಂಡಾಮಂಡಲ ದ್ವೇಷ ಕಟ್ಟಿಕೊಳ್ಳುತ್ತಾನೆ. ಕಾರಣ, ಜರಾಸಂಧನ ಸೇನೆಯಲ್ಲಿ ಏಕಲವ್ಯನ ತಂದೆ, ಬೇಡರ ನಾಯಕ 'ನಿಷಾದ' ಇದ್ದನು.

ಮುಂದೆ ಏಕಲವ್ಯನು ಆ ಸೇನೆಯನ್ನೇ ಸೇರಿದ್ದ. ಸೇಡು ತೀರಿಸಿಕೊಳ್ಳಲು ಆತ ದ್ವಾರಕೆಯ ಮೇಲೆ ದಾಳಿ ಮಾಡುತ್ತಾನೆ. ಅದಾಗಲೇ ಕೃಷ್ಣನ ಮುಂದಾಲೋಚನೆಯಿಂದಾಗಿ ಏಕಲವ್ಯನ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ದ್ರೋಣರು ತೆಗೆದುಕೊಂಡಿದ್ದರಿಂದ, ಅವನ ಅಸಾಮಾನ್ಯ ಬಿಲ್ವಿದ್ಯೆಗೆ ತಡೆಯುಂಟಾಗಿ, ಯಾದವರ ಮೇಲೆ ದಾಳಿಮಾಡಿದಾಗ ಕೃಷ್ಣನಿಂದ ಹತನಾದನೆಂದು ಕೆಲವರು ಹೇಳಿದರೆ, ಮತ್ತೆ ಕೆಲವರು ಕುರುಕ್ಷೇತ್ರ ಯುದ್ಧದಲ್ಲಿ ದುರ್ಯೋಧನನ ಜತೆಗೂಡಿ ಪಾಂಡವರ ವಿರುದ್ಧ ಯುದ್ಧಮಾಡಿ ಹತನಾದನೆಂದು ಹೇಳುತ್ತಾರೆ.

ಒಟ್ಟಾರೆ ಹೇಳುವುದಾದರೆ, ಧರ್ಮದ ಅರಿವಿಲ್ಲದವರಿಗೆ, ಯುಕ್ತಾಯುಕ್ತ ಜ್ಞಾನವಿಲ್ಲದವರಿಗೆ ದೊಡ್ಡ ದೊಡ್ಡ ಶಸ್ತ್ರಾಸ್ತ್ರಗಳ ಜ್ಞಾನವನ್ನು ನೀಡಿದರೆ, ಅದರ ಪರಿಣಾಮವನ್ನು ಎದುರಿಸುವುದು ಅಸಾಧ್ಯ ಎಂಬುದು ಅಂದಿನ ಜ್ಞಾನಿಗಳಿಗೆ ತಿಳಿದಿತ್ತು. ಹೀಗಾಗಿ ಸಂದರ್ಭಾನುಸಾರ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುತ್ತಿದ್ದರು. ಜ್ಞಾನವನ್ನು ಕೊಡುವುದಕ್ಕೂ ಪಡೆಯುವುದಕ್ಕೂ ಅದರದೇ ಆದ ನಿಯಮಗಳಿದ್ದು ಅವನ್ನು ಅನುಸರಿಸಿದರೆ ಧರ್ಮಸಂಸ್ಥಾಪನೆ, ಲೋಕೋದ್ಧಾರ ಸಾಧ್ಯ ಎಂಬ ಅಭಿಪ್ರಾಯ ಅವರಿಗಿತ್ತು.

ಇಂದಿನ ದಿನಗಳಲ್ಲಿ ಯುವಜನರಿಗೆ ಅಪಾರ ಜ್ಞಾನವಿದೆ, ಆದರೆ ಅವರಲ್ಲಿ ಕೆಲವರಿಗೆ ಅದನ್ನು ಸರಿಯಾದ ದಿಕ್ಕಿನಲ್ಲಿ ತೊಡಗಿಸುವ/ಬಳಸಿಕೊಳ್ಳುವ ಸಂಸ್ಕಾರವಿಲ್ಲ. ಆದ್ದರಿಂದಲೇ, ಹಾಸ್ಯದ ಹೆಸರಿನಲ್ಲಿ ತಂದೆ-ತಾಯಿಗಳ ಗೌರವಕ್ಕೆ ಚ್ಯುತಿ ಬರುವಂತೆ ಮಾತನಾಡುವ, ವಾಕ್ ಸ್ವಾತಂತ್ರ್ಯದ ಹೆಸರಿನಲ್ಲಿ ಅನಗತ್ಯವಾಗಿ ಉದ್ಧಟತನ ಮೆರೆಯುವ ಅನೇಕ ವಿದ್ಯಾವಂತರನ್ನಿಂದು ನಾವು ನೋಡುತ್ತಿದ್ದೇವೆ. ಉದ್ಧಟತನಕ್ಕೆ ಸರಿಯಾದ ಶಾಸ್ತಿ ಆಗಲೇ ಬೇಕು. ಏಕೆಂದರೆ, ತಪ್ಪು ಒಂದಾದರೂ ನೂರಾದರೂ ತಪ್ಪೇ! ಅದರಲ್ಲೂ ವಿದ್ಯಾವಂತರು ಮಾಡಿದ ತಪ್ಪಿಗೆ ದಾಕ್ಷಿಣ್ಯ ತೋರಬಾರದು, ಅವರಿಗೆ ತಕ್ಕ ಶಿಕ್ಷೆ ವಿಧಿಸಿ ಬುದ್ಧಿ ಕಲಿಸಬೇಕು.

## ಕಿವಿಮಾತೊಂದ, ಹೇಳುವೆ ನಾನಿಂದು...

# ಜೀವನಕ್ಕೆ ಅನ್ನವೊಂದೇ ಸಾಕೇ?


ಲಕ್ಷ್ಮಣ್ ಗೋರ್ಲಕಟ್ಟೆ, ಮೈಸೂರು


'ಹಸಿವು' ಎಂದಾಕ್ಷಣ ಅನ್ನದ ನೆನಪಾಗುವುದು ಸಹಜ. ಮನುಷ್ಯ ಸೇರಿದಂತೆ ಎಲ್ಲಾ ಜೀವಿಗಳಿಗೂ ಆಹಾರ-ನಿದ್ರೆ-ಮೈಥುನ ಮೂಲಭೂತ ಅವಶ್ಯಕತೆಗಳು. ಇವುಗಳಿಲ್ಲದೆ ಜೀವನವೇ ಇಲ್ಲ. ಹಾಗಂತ, ಇವುಗಳಿಂದ ಮಾತ್ರವೇ ಜೀವನ ಸಾಗದು.

There is more hunger for love and appreciation in this world, than for bread ಎಂದಿದ್ದಾರೆ ಮದರ್ ತೆರೆಸಾ. ನಿಜ, ಮಾನವನಿಗೆ ಅನ್ನದ ಹಸಿವಿಗಿಂತ ತೀವ್ರತರ ಪ್ರೀತಿ ಮತ್ತು ಮೆಚ್ಚುಗೆಯ ಹಸಿವಿದೆ. ಅಬ್ರಹಾಂ ಮಾಸ್ಲೋ (1908-1970) ಎಂಬ ಅಮೆರಿಕನ್ ಮನಶ್ಶಾಸ್ತ್ರಜ್ಞರು, ''ಆಹಾರ-ನಿದ್ರೆ-ಮೈಥುನದಂಥ ಮೂಲಭೂತ ಅವಶ್ಯಕತೆಗಳನ್ನು ದಕ್ಕಿಸಿಕೊಂಡ ನಂತರ, ಮನುಷ್ಯನಿಗೆ ಸುರಕ್ಷತೆ, ಭದ್ರತೆ, ಪ್ರೀತ್ಯಾದರ, ಮೆಚ್ಚುಗೆ, ಸನ್ಮಾನಗಳು ದೊರಕಿದಾಗ ಮಾತ್ರ ಅವನ ಜೀವನ ಪರಿಪೂರ್ಣವಾದೀತು'' ಎಂದು ಪ್ರತಿಪಾದಿಸಿದ್ದಾರೆ. ಈ ಅವಶ್ಯಕತೆಗಳನ್ನು ಒಂದು ಪಿರಮಿಡ್ ರೀತಿಯಲ್ಲಿ ಗುರುತಿಸಲಾಗಿದ್ದು ಅದನ್ನು 'ಮಾಸ್ಲೋ ಕೋಷ್ಟಕ' ಎಂದು ಕರೆಯಲಾಗುತ್ತದೆ. ಈ ಪಿರಮಿಡ್‌ನ ತಳಹದಿಯಲ್ಲಿ ಮೂಲಭೂತ ಅವಶ್ಯಕತೆಗಳು, ಅವುಗಳ ಮೇಲೆ ಸುರಕ್ಷತೆ, ಭದ್ರತೆ, ಪ್ರೀತ್ಯಾದರ, ಸನ್ಮಾನ, ಪ್ರಶಂಸೆಗಳ ಅವಶ್ಯಕತೆಗಳನ್ನು ಗುರುತಿಸಿ, ಮಾನವನು ಜೀವನ ಸಾಫಲ್ಯದ ಈ ಮೆಟ್ಟಿಲುಗಳನ್ನು ಏರುವುದರ ಅಗತ್ಯವನ್ನು ಬಿಂಬಿಸಲಾಗಿದೆ.

ಮೆಚ್ಚುಗೆ-ಪ್ರಶಂಸೆಗಳು ಮನುಷ್ಯರಿಗಷ್ಟೇ ಅಲ್ಲದೆ ದೇವಾನುದೇವತೆಗಳಿಗೂ ಇಷ್ಟ (ಅಥವಾ ಹಾಗಂತ ನಮ್ಮ ನಂಬಿಕೆ!). ಅದಕ್ಕೆಂದೇ ಹಿಂದೂಗಳು ಗಣಪತಿ, ವಿಷ್ಣು, ಶಿವ, ಲಕ್ಷ್ಮಿ ಮುಂತಾದ ಇಷ್ಟದೈವಗಳನ್ನು ಅಷ್ಟೋತ್ತರ ನಾಮಾವಳಿ, ಸಹಸ್ರನಾಮಗಳಿಂದ ಸ್ತುತಿಮಾಡಿದರೆ, ಕ್ರೈಸ್ತರು Praise the Lord ಅಂತಲೂ, ಮುಸಲ್ಮಾನರು 'ಅಲ್ಲಾಹು ಅಕ್ಬರ್' ಅಂತಲೂ ಪ್ರಾರ್ಥನೆ ಮಾಡುತ್ತಾರೆ. ದೇವತೆಗಳೇ ಸ್ತುತಿಪ್ರಿಯರೆಂದ ಮೇಲೆ, ನಮ್ಮಂಥ ಹುಲುಮಾನವರು 'ಇತರರು ನಮ್ಮನ್ನು ಗುರುತಿಸಲಿ, ಪ್ರೀತಿಸಲಿ, ಪ್ರಶಂಸಿಸಲಿ' ಎಂದು ಬಯಸುವುದು ಸಹಜವಲ್ಲವೇ?

ಮನೆಯಲ್ಲಾಗಲೀ, ಕಚೇರಿಯಲ್ಲಾಗಲೀ ಯಾರಾದರೂ ಒಳ್ಳೆಯ ಕೆಲಸವನ್ನು ಮಾಡಿದಾಗ, ಅನೇಕರು ಅದನ್ನು ಗುರುತಿಸುವ ಗೋಜಿಗೇ ಹೋಗುವುದಿಲ್ಲ. ಗುರುತಿಸಿದರೂ, ಸಂಬಂಧಿಸಿದವರಿಗೊಂದು ಮೆಚ್ಚುಗೆಯ ಮಾತನ್ನು ರವಾನಿಸುವುದಕ್ಕೆ ಜಿಪುಣತನ ತೋರುತ್ತಾರೆ. ಮತ್ತೊಂದೆಡೆ, ಮನಸ್ಸಿನಲ್ಲೇ ಮೆಚ್ಚಿಕೊಂಡು ಬಾಯಿಬಿಟ್ಟು ಹೇಳುವುದಕ್ಕೆ ಹಿಂದು-ಮುಂದು ನೋಡುವವರೂ ಸಾಕಷ್ಟಿದ್ದಾರೆ! ಮಡದಿ ಮಾಡಿ ಬಡಿಸಿದ ಅಡುಗೆಯನ್ನು, ಪತಿಯು ಕುಟುಂಬ ನಿರ್ವಹಣೆಗೆ ಪಡುವ ಶ್ರಮವನ್ನು, ಮಕ್ಕಳ ಸನ್ನಡತೆಯನ್ನು ಗುರುತಿಸಿ ಕಾಲಾನುಕಾಲಕ್ಕೆ ಒಂದೊಳ್ಳೆಯ ಮಾತನ್ನು ಆಡಬೇಕಲ್ಲವೇ? ನೌಕರರು ಮಾಡಿದ ಕೆಲಸ ತೃಪ್ತಿದಾಯಕ ವಾಗಿದ್ದಲ್ಲಿ ಅದನ್ನು ತತ್‌ಕ್ಷಣ ಗುರುತಿಸಿ ಎಲ್ಲರೆದುರು ಪ್ರಶಂಸಿಸುವುದು ಯಾವುದೇ ಕಚೇರಿ ಅಥವಾ ಕಾರ್ಯಕ್ಷೇತ್ರದಲ್ಲಿ ಮೇಲಧಿಕಾರಿಗಳು/ಧಣಿಗಳು ಎನಿಸಿಕೊಂಡವರು ಅನುಸರಿಸಬೇಕಾದ ಒಂದು ಉತ್ತಮವಾದ ಮೇಲ್ಪಂಕ್ತಿ. ಉದ್ಯೋಗಿಗಳು ಬರೀ ಸಂಬಳಕ್ಕಷ್ಟೇ ಕೆಲಸ ಮಾಡುವುದಿಲ್ಲ. Job Satisfaction ಅಥವಾ ಉದ್ಯೋಗ ತೃಪ್ತಿಯೂ ಅವರಿಗೆ ಬಹುಮುಖ್ಯ. ತಾವು ಮಾಡಿದ ಉತ್ತಮ ಕೆಲಸಕ್ಕೆ ಮೇಲಿನವರಿಂದ ದಕ್ಕಿದ ಮೆಚ್ಚುಗೆಯ ಮಾತುಗಳು ಉದ್ಯೋಗಿಗಳಲ್ಲಿ ಹೊಸಶಕ್ತಿಯನ್ನು ತುಂಬುತ್ತವೆ. ಇದರಿಂದಾಗಿ ಅವರು ಮತ್ತಷ್ಟು ಉತ್ಸಾಹದಿಂದ ಕೆಲಸ ಮಾಡುತ್ತಾರೆ. ಇಂಥ ಅನುಭೂತಿಯನ್ನು ಹಣದಿಂದ ಅಳೆಯಲು ಸಾಧ್ಯವಿಲ್ಲ...

ಮೆಚ್ಚುಗೆ ವ್ಯಕ್ತಪಡಿಸೋದು ಎಂದಾಕ್ಷಣ, ''ನೀನೇ ಇಂದ್ರ, ನೀನೇ ಚಂದ್ರ'' ಅಂತ ಬಹುಪರಾಕ್ ಹೇಳುವುದಲ್ಲ. ವ್ಯಕ್ತಿಯನ್ನು ವಿಶೇಷಣಗಳಿಂದ ಹೊಗಳುವುದಕ್ಕಿಂತ, ಆತ ಮಾಡಿದ ಕೆಲಸ ಯಾವ ರೀತಿಯಲ್ಲಿ ಉತ್ತಮವಾಗಿದೆ ಎಂಬುದನ್ನು ವಿವರಿಸಬೇಕು. ಮೆಚ್ಚುಗೆ ಪ್ರಾಮಾಣಿಕವಾಗಿರಬೇಕು, ಅತಿಶಯೋಕ್ತಿ ಸಲ್ಲದು. ಹಾಗೆ ಮೆಚ್ಚುಗೆಗೆ ಒಳಗಾದ ವ್ಯಕ್ತಿಯು ನಮಗೆ ಆಪ್ತರಾಗಿದ್ದರೆ, ಪ್ರಶಂಸೆಯ ಜತೆಜತೆಗೆ ನ್ಯೂನತೆ ಏನಾದರೂ ಇದ್ದರೆ ಅದನ್ನೂ ನಯವಾಗಿ ತಿಳಿಹೇಳುವುದು ಅವಶ್ಯಕ. ಉದಾಹರಣೆಗೆ, ಯಾರದ್ದಾದರೂ ಬರವಣಿಗೆ ಅಂದವಾಗಿದ್ದರೆ, ''ನೀವು ತುಂಬಾ ದುಂಡಗೆ ಬರಿತೀರಿ ಕಣ್ರೀ, ನೋಡೋಕ್ಕೇ ಒಂಥರಾ ಖುಷಿಯಾಗುತ್ತೆ'' ಅಂತ ಸಹಜ ದನಿಯಲ್ಲೇ ಶ್ಲಾಘಿಸಬೇಕು; ಜತೆಗೆ ನ್ಯೂನತೆಯೇನಾದರೂ ಇದ್ದಲ್ಲಿ, ''ಆದರೆ, ಕಾಗುಣಿತದ ಬಗ್ಗೆ ಹೆಚ್ಚಿನ ಗಮನ ಕೊಡಬೇಕು ರೀ..'' ಎಂದು ನಯವಾಗಿ ಹೇಳುವ ಮೂಲಕ ಅದನ್ನು ಅವರ ಗಮನಕ್ಕೆ ತರಬೇಕು.

ಮೆಚ್ಚುಗೆ ವ್ಯಕ್ತಪಡಿಸುವುದಕ್ಕಿರುವ ಒಂದಷ್ಟು ಮಾರ್ಗೋಪಾಯಗಳ ಕಡೆಗೆ ಈಗ ಕಣ್ಣು ಹಾಯಿಸೋಣ:

- ಹಸನ್ಮುಖಿಯಾಗಿದ್ದುಕೊಂಡು ವ್ಯಕ್ತಿಯನ್ನು ಅವರ ಹೆಸರು ಹಿಡಿದು ಕರೆಯಬೇಕಾದ್ದು ಮುಖ್ಯ; ಏಕೆಂದರೆ, ವ್ಯಕ್ತಿಯೊಬ್ಬರಿಗೆ ಅತ್ಯಂತ ಪ್ರಿಯವಾಗುವ ಮಾತೆಂದರೆ ಮತ್ತೊಬ್ಬರ ಬಾಯಲ್ಲಿ ತಮ್ಮ ಹೆಸರನ್ನು ಕೇಳಿಸಿ ಕೊಳ್ಳುವುದು!
- ವ್ಯಕ್ತಿಯ ಜತೆ ಮಾತನಾಡುವಾಗ ಮುಖ ಕೊಟ್ಟು (Eye contact) ಸಂವಹಿಸಬೇಕು.

- ಥ್ಯಾಂಕ್ಸ್/ಧನ್ಯವಾದ ಹೇಳುವಾಗ ನಮ್ಮ ಮಾತುಗಳು ಯಾಂತ್ರಿಕವಾಗಿರದೆ, ಅವಕ್ಕೆ ಜೀವತುಂಬಿಸಿ ಹೊಮ್ಮಿಸಬೇಕು. ಆ ಮಾತು ಕೇವಲ ತುಟಿಯಿಂದಷ್ಟೇ ಅಲ್ಲದೆ, ಹೃದಯಾಂತರಾಳದಿಂದ ಚಿಮ್ಮಬೇಕು.
- ಮಾತುಗಳಿಗೆ ತಕ್ಕಂಥ ಹಾವಭಾವಗಳೂ (body language) ಅತ್ಯಗತ್ಯ. ಜತೆಗೆ, ಮಾತಿನಲ್ಲಿ ಅಗತ್ಯದ ಏರಿಳಿತಗಳೂ (Voice modulation) ಇದ್ದಲ್ಲಿ ಮಾತು ಭಾವಪೂರ್ಣವಾಗುತ್ತದೆ.
- ಕೈಜೋಡಿಸಿ ನಮಸ್ಕರಿಸುವುದು ಅಥವಾ ಹಸ್ತಲಾಘವ ನೀಡುವುದು ಮೆಚ್ಚುಗೆಯನ್ನು ಸೂಚಿಸುವ ಸರಳ ವಿಧಾನಗಳಲ್ಲಿ ಸೇರಿವೆ; ಈ ಪೈಕಿ ಯಾವುದನ್ನು ಅನುಸರಿಸಬೇಕು ಎಂಬುದು, ನಾವು ಭೇಟಿಯಾಗುವ ವ್ಯಕ್ತಿ ಯಾರು ಎಂಬುದನ್ನು ಅವಲಂಬಿಸಿರುತ್ತದೆ.
- ಕಿರಿಯರಿಗೆ 'ಭೇಷ್' ಎಂದು ಬೆನ್ನು ತಟ್ಟುವುದು ಪ್ರಶಂಸೆಯ ಇನ್ನೊಂದು ರೀತಿ; ಮಕ್ಕಳು ತೀರಾ ಹೆಚ್ಚಿನ ಅವಧಿಯವರೆಗೆ ಟಿವಿ ವೀಕ್ಷಣೆಯಲ್ಲಿ ತೊಡಗಿದ್ದಾಗ, ''ಟಿವಿ ಆಫ್ ಮಾಡು, ಓದಿಕೋ ಹೋಗು'' ಎಂದು ದೊಡ್ಡವರು ಗದರುವುದು ಸಾಮಾನ್ಯ. ಈ ಮಾತನ್ನು ಮಕ್ಕಳು ಅನುಸರಿಸುತ್ತಿದ್ದಂತೆ ಅದನ್ನೂ ಗುರುತಿಸಿ ಶ್ಲಾಘಿಸಬೇಕು. ಹೀಗೆ ಮಾಡಿದಲ್ಲಿ, ಮಕ್ಕಳು ಸನ್ನಡತೆಯನ್ನು ಮುಂದುವರಿಸುತ್ತಾರೆ, ತನ್ಮೂಲಕ ಮತ್ತಷ್ಟು ಮೆಚ್ಚುಗೆ ಗಳಿಸಲು ತವಕಿಸುತ್ತಾರೆ.
- ಮೆಚ್ಚುಗೆಯ ಮಾತುಗಳನ್ನು ಎಲ್ಲರೆದುರೇ ಆಡಿಬಿಡಿ, ಆದರೆ ಟೀಕೆ-ಟಿಪ್ಪಣಿ ಮಾತ್ರ ಗೋಪ್ಯವಾಗಿರಲಿ, ಖಾಸಗಿ ನೆಲೆಗಟ್ಟಿನಲ್ಲಿರಲಿ.
- ನೆನಪಿಡಿ, ದೊಡ್ಡ ವ್ಯಕ್ತಿಗಳಿಗೂ, ಯಶಸ್ಸು ಗಳಿಸಿದವರಿಗೂ ಮೆಚ್ಚುಗೆಯ ಮಾತುಗಳು ಅವಶ್ಯಕ. ಅವರೇನೂ ದೇವರಿಗಿಂತ ದೊಡ್ಡವರಲ್ಲ, ಅಲ್ಲವೇ?!
- ನಿತ್ಯವೂ ನಮ್ಮೊಂದಿಗೆ ಕೆಲಸ ಮಾಡುವ ಅಥವಾ ವ್ಯವಹರಿಸುವ ವ್ಯಕ್ತಿಗಳಲ್ಲಿನ ಏನಾದರೊಂದು ಒಳ್ಳೆಯ ಅಂಶವನ್ನು ಹೆಕ್ಕಿ ತೆಗೆದು, ಅದನ್ನು ಮೆಚ್ಚಿಕೊಂಡು, ಅವರಿಗೆ ಅಚ್ಚರಿ-ಸಂತಸ ಆಗುವ ರೀತಿಯಲ್ಲಿ ಅದನ್ನು ವ್ಯಕ್ತಪಡಿಸುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು.
- ಯಾವುದೇ ಕಚೇರಿ, ವ್ಯಾಪಾರ-ವ್ಯವಹಾರದ ತಾಣವನ್ನು ಪ್ರವೇಶಿಸುವ ಮುನ್ನ, ದ್ವಾರದಲ್ಲಿ ನಿಂತಿರಬಹುದಾದ ದ್ವಾರಪಾಲಕ/ಸಿಬ್ಬಂದಿಯೆಡೆಗೂ ಒಂದು ಹೂನಗೆ ಚೆಲ್ಲಿ, ಇಗೋ ಅಥವಾ ಬಿಗುಮಾನವನ್ನು ಬಿಟ್ಟು 'ನಮಸ್ತೆ' ಎನ್ನಿ. ವಯಸ್ಸಿನಲ್ಲಿ ತುಂಬಾ ಚಿಕ್ಕವರಾದರೆ ಒಮ್ಮೆ ಮುಗುಳ್ನಕ್ಕು 'ಹಾಯ್, ಹಲೋ' ಎನ್ನಲಡ್ಡಿಯಿಲ್ಲ.

ಈ ಸೂತ್ರಗಳು ಸೇರಿದಂತೆ, ನಿಮ್ಮ ಗ್ರಹಿಕೆಗೆ ಬರುವ ಇನ್ನಾವುದೇ ಸಕಾರಾತ್ಮಕ ವರ್ತನೆಯನ್ನು ರೂಢಿಸಿಕೊಂಡು ಪಾಲಿಸಿದರೆ ಬದುಕು ಸೊಗಸು, ಎದುರಿರುವವರಿಗೂ ಪುಳಕ. ಏಕೆಂದರೆ, ಜೀವಿಸಲು ಅನ್ನವೊಂದೇ ಸಾಲದು, ಅಲ್ಲವೇ?!

(ಲೇಖಕರು ಹವ್ಯಾಸಿ ಬರಹಗಾರರು)

## ಪದಬಂಧ



**ಎಡದಿಂದ ಬಲಕ್ಕೆ**
1. ಗೋಧಿಯ ಹಿಟ್ಟಿನಿಂದ ಮಾಡುವ ಒಂದು ರೊಟ್ಟಿ (3)
3. ಮೇಜಿನ ಮೇಲೆ ನಡೆಸಿದ ಸತ್ಕಾರ (4)
5. ಬೆಂಕಿಯ ಜತೆಗೆ ಬಂದಿರುವ ಹೊಗೆ (2)
6. ಸಣ್ಣ ಬಳ್ಳಿ (3)
8. ನಾಕ ತೋರಿಸುತ್ತೇನೆಂದ ಮುಖಂಡ (3)
10. ಗರ ಬಡಿದಂತಿರುವ ಹಾವು (3)
12. ಕಬ್ಬು ತಿನ್ನುವಾಗ ಕಂಡ ಕವಿ (3)
13. ಗೌರವ ಸೂಚಕವಾಗಿ ಕೊಡುವ ಹೆಸರು (3)
15. ಕೈಗೆ ಅಥವಾ ಕಾಲಿಗೆ ಹಾಕುವ ಬಳೆ (3)
17. ಅಸಲಿಯಲ್ಲದ್ದು (3)
19. ಮೂರಕ್ಷರದ ದೀನ (3)
21. ದಾಖಲೆಯಲ್ಲಿ ಹಾಕಿದ ಸಹಿ (2)
22. ಒತ್ತೆ ಅಥವಾ ಅಡ (4)
23. ಗದ್ದಲ ಅಥವಾ ಗೊಂದಲ ಅಸ್ತವ್ಯಸ್ತವಾಗಿ ಬಂದಿದೆ (3)

**ಮೇಲಿನಿಂದ ಕೆಳಕ್ಕೆ**
1. ವಿಸ್ಮಯ ಅಥವಾ ಸೋಜಿಗ (4)
2. ಎರಡಕ್ಷರದಲ್ಲಿ ಬಂದಿರುವ ಎಳ್ಳು (2)
3. ಮುಗ್ಧವಾದ ಆಡು (2)
4. ಅಸ್ತವ್ಯಸ್ತವಾಗಿ ಬಂದಿರುವ ಕಾಗೆ (3)
7. ಹಣೆಗಿಟ್ಟುಕೊಳ್ಳುವ ಬೊಟ್ಟು (3)
8. ನಾಕದ ಮಧ್ಯೆ ಸಿಲುಕಿದ ಪ್ರಜೆ (4)
9. ನಮ್ಮ ರಾಜ್ಯದವನು (4)
10. ಉಪಕಾರ ಮಾಡಲು ಹೋಗಿ ಆಳಾದರೆ? (4)
11. ಗಲಾಟೆ ಅಥವಾ ಗೊಂದಲ (4)
14. ಮನಸ್ಸಿನ ಚಿಂತೆ ಅಥವಾ ವ್ಯಸನ (3)
16. ಮರುಗದಂತೆ ಮಾಡಿದ ಚರ್ಮದ ವಾದ್ಯ (4)
18. ಮನೆ ಮುಂತಾದ ಇಮಾರತು (3)
19. ಕಾಡು, ಅರಣ್ಯ (2)
20. ಮದುವೆಯ ಗಂಡು (2)

**ಸರಿಯುತ್ತರಗಳು**

ಎಡದಿಂದ ಬಲಕ್ಕೆ: 1.ಚಪಾತಿ 3.ಮೇಜವಾನಿ 5.ಧೂಮ 6.ಲತಿಕೆ 8.ನಾಯಕ 10.ಉರಗ 12.ಕಬ್ಬಿಗ 13.ಬಿರುದು 15.ಕಡಗ 17.ನಕಲಿ 19.ಬಡವ 21.ರುಜು 22.ಅಡಮಾನ 23.ರಳೆಗ

ಮೇಲಿನಿಂದ ಕೆಳಕ್ಕೆ: 1.ಚಮತ್ಕಾರ 2.ತಿಲ 3.ಮೇಕೆ 4.ವಾಸಯ 7.ತಿಲಕ 8.ನಾಗರಿಕ 9.ಕನ್ನಡಿಗ 10.ಉಪಾಧೀನ 11.ಗಲಿಬಿಲಿ 14.ದುಗುಡ 16.ಡಮರುಗ 18.ಕಟ್ಟಡ 19.ಬನ 20.ವರ

• ಸಿ. ರವಿಶಂಕರ ಶಾಸ್ತ್ರಿ, ದಂಬೆ

## ಕಾರ್ಟೂನ್ ಕಚಗುಳಿ

ಕೃಪೆ: ವ್ಯಂಗ್ಯಚಿತ್ರಕಾರ ಮಂಜುಲ್




ನಮ್ಮಲ್ಲಿರುವ ಬೋಧಕವರ್ಗ ಮತ್ತು ಸೌಲಭ್ಯಗಳು ನೀವಂದಂತೆ ಕೆಟ್ಟದಾಗಿ ಇರಬಹುದು; ಆದರೆ ಆತ್ಮರಕ್ಷಣೆಯ ವಿಷಯದಲ್ಲಿ ನಾವು ಅತ್ಯುತ್ತಮ ತರಬೇತಿಯನ್ನೇ ನೀಡುತ್ತೇವೆ.

## ಅತ್ಯಾಧುನಿಕ ಅಪಾರ್ಥಕೋಶ...


'ಅಪಾರ್ಥ'ಸಾರಥಿ
naadigru@gmail.com


- **ತೊಟ್ಟಿಲು ತೂಗುವುದು:** ಮತ್ತೊಬ್ಬರಿಗೆ 'ಗೊತ್ತಾಗದಂತೆ' ಚಿವುಟಿದ ನಂತರ, ಎಲ್ಲರಿಗೂ 'ಗೊತ್ತಾಗುವಂತೆ' ಮಾಡಬೇಕಾದ ಕಾರ್ಯ!
- **ರಿಯಾಯಿತಿ ಮಾರಾಟ:** ಬೆಲೆಯಷ್ಟೇ ಅಲ್ಲದೇ ಉತ್ಪನ್ನದ ಬಣ್ಣ, ಗಾತ್ರ, ಗುಣಮಟ್ಟ, ಅಳತೆ ಎಲ್ಲವೂ ಕಡಿಮೆಯಿರುವ ಒಂದು ಮಾರಾಟ ವ್ಯವಸ್ಥೆ.
- **ಲೇವಾದೇವಿ:** ಬಡ್ಡಿ ವ್ಯವಹಾರದ ಮಾರ್ವಾಡಿಯೊಬ್ಬನ ಪುತ್ರಿಯ ಹೆಸರು.
- **ಬೆಣ್ಣೆ ಬಿಸ್ಕತ್ತು:** 'ಬೆಣ್ಣೆ'ಯನ್ನು ಹೊರತುಪಡಿಸಿದ ಹಲವಾರು ಖಾದ್ಯ ಪದಾರ್ಥಗಳಿಂದ ತಯಾರಿಸಿದ ಒಂದು ತಿನಿಸು.
- **ನಾಮಾವಶೇಷ:** ಚೆನ್ನಾಗಿ ಉಜ್ಜಿ ಮುಖವನ್ನು ತೊಳೆದುಕೊಂಡ ಮೇಲೂ ಹಣೆಯ ಮೇಲೆ ಉಳಿದ ನಾಮ.

- **ವಾಸ್ತು ಶಾಸ್ತ್ರಜ್ಞ:** ಮನೆ ಮಾಲೀಕರ ಇಷ್ಟಕ್ಕಿಂತಲೂ ತನಗಿಷ್ಟವಾಗುವ ರೀತಿಯಲ್ಲಿ ಯಾರದೇ ಮನೆಯನ್ನು ಕಟ್ಟಿಸಬಲ್ಲ, ಕೆಡವಿಸಬಲ್ಲ ನಿಷ್ಣಾತ.
- **ಸತಿ ಸಹಗಮನ:** ಹೆಂಡತಿಯೊಂದಿಗೆ ನಡೆದುಕೊಂಡು ಹೋಗುವುದು (ತಮ್ಮದೇ ಹೆಂಡತಿಯಾದರೆ ಕ್ಷೇಮ..!)
- **ಮರ್ಕಟ ಮನ:** ಪದೇ ಪದೆ ಪಕ್ಷಾಂತರವನ್ನು ಮಾಡುವ ಒಂದು ಮನಃಸ್ಥಿತಿ.
- **ಕೈವಾಡ:** ಆಡಳಿತ ಪಕ್ಷದವರ ಎಲ್ಲ ವೈಫಲ್ಯಗಳಲ್ಲೂ ಕಾಣಬರುವ ವಿರೋಧ ಪಕ್ಷದವರ ಸಂಚು.
- **ಕವಿರಾಜಮಾರ್ಗ:** ಪರರ ಕುರಿತಾದ ಎಂಥದೇ ರುಚಿಕಟ್ಟಾದ ವಿಷಯವೂ ಯಾವುದೇ ಅಡೆತಡೆಯಿಲ್ಲದೆಯೇ ಸೇರುವ ಕಿವಿಯೆಂಬ ಹೆದ್ದಾರಿ.
- **ಹಲ್ಲು ತೋರಿಸುವುದು:** ಹಾಸ್ಯ ಪ್ರವೃತ್ತಿಯಿಲ್ಲದವರು ಕೇವಲ ಟೂತ್ ಬ್ರಷ್‌ಗೆ ಮಾತ್ರ ಒದಗಿಸಿಕೊಡುವ ಒಂದು ಸೌಲಭ್ಯ.
- **ಹೊಲ:** ಬೇಲಿಯಿಂದ ಮೇಯಲ್ಪಡುವ ಭಯದಿಂದಲೇ ಜೀವನ ಸಾಗಿಸುವ ಒಂದು ವಿಶಾಲ ಪ್ರದೇಶ.
- **ಗೋಸುಂಬೆ:** ಬಣ್ಣ ಬದಲಿಸುವ ಪ್ರತಿಭೆಯಲ್ಲಿ ಪುಢಾರಿಗಳಿಂದ ಸೋಲಿಸಲ್ಪಟ್ಟ ಒಂದು ನಿರುಪದ್ರವಿ ಜೀವಿ.

## ಇಲ್ಲೊಂಚೂರು ಕೇಳ್ರೀ...

- ಬಟ್ಟೆಯ ಮೇಲೆ ರಕ್ತದ ಕಲೆಯಾದರೆ, ತಣ್ಣೀರಿನಲ್ಲಿ ಉಪ್ಪನ್ನು ಕದಡಿ ಅದರೊಳಗೆ ಬಟ್ಟೆಯನ್ನು 1 ಗಂಟೆಯವರೆಗೆ ನೆನೆಸಿಡಿ. ಬಳಿಕ ಸಾಬೂನು ನೀರಿನಿಂದ ಅದನ್ನು ತೊಳೆಯಿರಿ. ಒಂದೊಮ್ಮೆ ಅದು ದೀರ್ಘಕಾಲದ ಕಲೆಯಾಗಿದ್ದರೆ, ಬಟ್ಟೆಯನ್ನು ಹಿಂದಿನ ದಿನವೇ ನೀರಿನಲ್ಲಿ ನೆನೆಸಿಡಬೇಕು. ರಕ್ತದ ಕಲೆಗಳಿರುವ ಬಟ್ಟೆಗಳನ್ನು ಎಂದಿಗೂ ಬಿಸಿನೀರಿನಲ್ಲಿ ಹಾಕಬಾರದು. ಬಿಸಿನೀರು ತಾಗುವುದರಿಂದ ರಕ್ತದ ಕಲೆಗಳು ಮತ್ತಷ್ಟು ಗಟ್ಟಿಯಾಗಿ ಬಟ್ಟೆಗೆ ಕಚ್ಚಿಕೊಳ್ಳುತ್ತವೆ.
- ಬಟ್ಟೆಯಲ್ಲಿ ಕಾಫಿ ಅಥವಾ ಚಹಾದ ಹಳೆಯ ಕಲೆಗಳಿದ್ದರೆ, ಬಿಳಿಗಾರವನ್ನು (ಬೊರಾಕ್ಸ್) ಬಿಸಿನೀರಿನಲ್ಲಿ ಕದಡಿ ಚೆನ್ನಾಗಿ ಕರಗಿಸಿ. ಆ ದ್ರಾವಣದೊಳಗೆ ಬಟ್ಟೆಯನ್ನು ಮುಳುಗಿಸಿ, ಬಿಸಿಯಾಗಿರುವ ತನಕ ಇಟ್ಟುಕೊಂಡು ನಂತರ ನೀರಿನಿಂದ ಒಗೆದು ಒಣಗಿಸಿಟ್ಟುಕೊಳ್ಳಿ.
- ಉಣ್ಣೆಯ ಬಟ್ಟೆಗಳನ್ನು ಒಗೆಯುವಾಗ, ನೀರಿನಲ್ಲಿ ಮುಳುಗಿಸಿಟ್ಟುಕೊಂಡೇ ಒಗೆಯಬೇಕು. ಅವುಗಳನ್ನು ನೀರಿನಿಂದ ಹೊರತೆಗೆದು ಮೇಲೆ ಕೆಳಗೆ ಎತ್ತಿಟ್ಟು ಒಗೆದರೆ, ಅವುಗಳ ಸ್ಥಿತಿಸ್ಥಾಪಕತ್ವಕ್ಕೆ ಹಾನಿಯಾಗುತ್ತದೆ.

## ಸಮಾಚಾರ ಸಣ್ಣದಲ್ಲ

### ಭೀಮಾನದಿ ಜನರು ಹೃದಯವಂತರು

**ಇಂಡಿ:** ಭೀಮಾಪಾತ್ರದಲ್ಲಿ ಹಲವು ಸಂತ ಶರಣರು ದಾರ್ಶನಿಕ ಯುಗಪುರುಷರು ಜನಿಸಿ ಈ ಭಾಗದಲ್ಲಿನ ಜನರಿಗೆ ಹೃದಯ ಶ್ರೀಮಂತರಾಗಿಸಿದ್ದಾರೆ ಅದರೆ

ಭೀಮಾತೀರದ ಹಂತಕರು ಎಂಬ ಹೆಸರು ಕೊಡುವುದು ತರವಲ್ಲ ಭೀಮಾ ನದಿ ಈ ಭಾಗದ ಜೀವ ನದಿಯಾಗಿದೆ ಎಂದು ಕರವೇ ಅಧ್ಯಕ್ಷ ಬಾಳು ಮುಳಜೀ ಅರೋಪಿಸಿದ್ದಾರೆ. ಸುದ್ದಿಗೋಷ್ಠಿ ನಡಸಿ ಮಾತನಾಡಿದ ಅವರು ಭೀಮಾತೀರದ ಪಾತ್ರದಲ್ಲಿ ಹಲಸಂಗಿ ಗೆಳೆಯರಾದ ಮಧುರ ಚೆನ್ನರು, ಸಿಂಪಿಲಿಂಗಣ್ಣಾ,ಧೋಲಾಸಾಹೇಬ ಜಾನಪದ ಸಾಹಿತ್ಯ ಶ್ರೀಮಂತಗೊಳಿಸಿದ್ದಾರೆ ಅಗರಖೇಡದ ನಾಟಕ ಬ್ರಹ್ಮ ಶ್ರೀರಂಗರು ಸಾಮಾಜಿಕ ಅಂಕುಡೊಂಕು ತಿದ್ದಿದ್ದಾರೆ ಎಂದರು. ಮಹೇಶ ಹೂಗಾರ, ಪ್ರಶಾಂತ ಲಾಳಸಂಗಿ, ಪ್ರದೀಪ ಕರ್ಜಗಿ, ಯಮನಪ್ಪ ಕುಡಿಗನೂರ, ಮಹಾವೀರಕಾಮನಕಟ್ಟಿ, ಶಿವಾನಂದಯ್ಯಾ ಲಕ್ಕುಂಡಿಮಠ, ಮಲ್ಲು ಚಾಕುಂಡಿ, ಶ್ರೀಶೈಲ ಮದರಿ,ಅಪ್ಪು ಪ್ಯಾಟಿ, ಆನಂದ ಕ್ಷತ್ರಿ, ಭೀಮಾಶಂಕರ ಅಳೂರ, ರವಿ ಹೂಗಾರ, ರೇವಣಸಿದ್ದ ಅವರಾಧಿ, ಸಂತೋಷಪಾಟೀಲ, ರಾಹುಲ ಮರಗೂರ, ಶಿವರಾಜ ಪಾಟೀಲ, ಮಹಾದೇವ ಬಗಲಿ ಸೇರಿದಂತೆ ಕರವೇ ಕಾರ್ಯಕರ್ತರು ಭೀಮಾನದಿಯ ಪಾತ್ರದ ಅಭಿಮಾನಿಗಳು ಇದ್ದರು.

### ಭಾರತದ ಆಧ್ಯಾತ್ಮಿಕ ಸಂತ ಸೇವಾಲಾಲ

**ದೇವರಹಿಪ್ಪರಗಿ:** ಬಂಜಾರಾ ಸಮುದಾಯದ ಕುಲ ಗುರು ಸಂತ ಸೇವಾಲಾಲ ಭಾರತದ ಆಧ್ಯಾತ್ಮಿಕ ಗುರುವಾಗಿದ್ದು, ಉತ್ಕೃಷ್ಠ ಸಂಸ್ಕೃತಿ ಪರಿಚಯಿಸಿ ಸುಸಂಸ್ಕೃತರಾಗಿ ಬಾಳಬೇಕೆಂದು ಕಲಿಸಿದವರಾಗಿದ್ದಾರೆ ಎಂದು ನಿವೃತ್ತ ಮುಖ್ಯೋಪಾಧ್ಯಯ ಎಸ್ ಎನ್ ಬಸವರೆಡ್ಡಿ ಹೇಳಿದರು. ಶನಿವಾರ ಪಟ್ಟಣದ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುವ ಸಂತ ಸೇವಾಲಾಲರ ವೃತ್ತದಲ್ಲಿ ಬಂಜಾರಾ ಸಮುದಾಯದ ಗುರು ಶ್ರೀಸಂತ ಸೇವಾಲಾಲರ 286ನೇ ಜಯಂತ್ಯೋತ್ಸವದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸಂತ ಸೇವಾಲಾಲರು ಬಂಜಾರಾ ಸಮುದಾಯದ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತ ಅಜರಾಮರರಾಗಿದ್ದಾರೆ ಎಂದರು. ಬಂಜಾರಾ ಸಮುದಾಯದ ಯುವ ಮುಖಂಡ ಬಾಳು ರಾಠೋಡ ಮಾತನಾಡಿದರು. ಇದಕ್ಕೂ ಮುಂಚೆ ಮೆರವಣಿಗೆ ಮೂಲಕ ಆಗಮಿಸಿ ವೃತ್ತದಲ್ಲಿರುವ ಶ್ರೀಸಂತ ಸೇವಾಲಾಲರ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ ಗೌರವಿಸಲಾಯಿತು. ನಾಮದೇವ ಜಾದವ್, ಪ್ರೊ. ಲಕ್ಷ್ಮಣ್ ರಾಠೋಡ, ಅಶೋಕ್ ಪವಾರ, ಬಂಜಾರಾ ಕ್ರಾಂತಿದಳದ ಅಧ್ಯಕ್ಷ ಸುಭಾಷ್ ಜಾದವ್, ಶ್ರೀಕಾಂರ ರಾಠೋಡ, ಪ್ರಭು ಚವ್ಹಾಣ, ಆರ್ ಎಂ ರಾಠೋಡ, ಧರ್ಮು ರಾಥೋಡ್, ಭೀಮು ಚವ್ಹಾಣ, ಜಗದೀಶ್ ಚೌಹಾನ್, ವಿನೋದ್ ಚೌಹಾಣ್, ಅಶೋಕ ಚವ್ಹಾಣ, ಸಂಜೀವ ಚವ್ಹಾಣ, ವಸಂತ ರಾಠೋಡ, ನಾನು ಚವ್ಹಾಣ, ಭೀಮು ಚವ್ಹಾಣ, ಕಾಶಿನಾಥ ಚವ್ಹಾಣ ಸೇರಿದಂತೆ ಪಟ್ಟಣ ಪಂಚಾಯತಿ ಸದಸ್ಯರು ಹಾಗೂ ಬಂಜಾರ ಸಮಾಜದ ಬಂಧು ಬಾಂಧವರು ಪಾಲ್ಗೊಂಡಿದ್ದರು.

### ಬೇಡಿಕೆಗೆ ಗ್ರಾಮ ಆಡಳಿತ ಅಧಿಕಾರಿಗಳ ಆಗ್ರಹ

**ಇಂಡಿ:** ಕರ್ನಾಟಕ ಗ್ರಾಮ ಆಡಳಿತ ಅಧಿಕಾರಿಗಳ ಬೇಡಿಕೆ ಈಡೇರಿಕೆಗಾಗಿ ಹಲವು ಬಾರಿ ಸರಕಾರಕ್ಕೆ ಮನವಿ ಸಲ್ಲಿಸಿದರೂ ಇತ್ಯರ್ಥವಾಗದೆ ಇರುವ ಹಿನ್ನಲೆಯಲ್ಲಿ ರಾಜ್ಯ ವ್ಯಾಪಿ ಪ್ರತಿಭಟನೆ ನಡೆಸಿದರು. ಕರ್ನಾಟಕ ರಾಜ್ಯ ಗ್ರಾಮ ಆಢಳಿತ ಅಧಿಕಾರಿಗಳ ವೃಂದದ ವತಿಯಿಂದ ಕೈಗೊಂಡ ಮುಷ್ಕರ ಯಾವುದೇ ಬೇಡಿಕೆ ಇಡೇರಿಸದೆ ಇರುವ ಕಾರಣ ರಾಜ್ಯ ವ್ಯಾಪಿ ಮುಷ್ಕರಕ್ಕೆ ಕರೆ ನೀಡಲಾಗಿದೆ. ಗ್ರಾಮ ಆಡಳಿತ ಅಧಿಕಾರಿಗಳ ಮೂಲಭೂತ ಸೌಲಭ್ಯಗಳು ಒದಗಿಸಬೇಕು ಎಂದು ಸಾಕಷ್ಟು ಬಾರಿ ಸರಕಾರಕ್ಕೆ ಮನವಿ ಸಲ್ಲಿಸಿದರೂ ಕೂಡಾ ಪ್ರಯೋಜ ಆಗಿಲ್ಲ ಗ್ರಾಮ ಆಡಳಿತ ಅಧಿಕಾರಿಗಳು ಕಾರ್ಯಾಲಯಗಳು ಕೂಡಾ ಗುಣಮಟ್ಟದಾಗಿಲ್ಲ ಕನಿಷ್ಠ ಮಟ್ಟದ ಸೌಲಭ್ಯ ಒದಗಿಸುತ್ತದೆ ಎಂಬ ಭರವಸೆ ಇದ್ದರೂ ಕೂಡಾ ಸರಕಾರ ಕ್ಯಾರೆ ಎನ್ನುತ್ತಿಲ್ಲ ತಾಲೂಕಾ ಅಧ್ಯಕ್ಷ ವಾಯ್.ಎಲ್ ಪೂಜಾರಿ ಹೇಳಿದರು. ಗ್ರಾಮ ಆಡಳಿತ ಅಧಿಕಾರಿಗಳ ಸಂಘದ ಅಧ್ಯಕ್ಷ ವಾಯ.ಎಲ್ ಪೂಜಾರಿ, ಎಸ್.ಎಸ್ ಪೂಜಾರಿ, ಸಿದ್ದು ಮೋದಿ, ಪ್ರಕಶ ಚೌಡಿಹಾಳ, ಎಂ.ಆರ್ ರಾಠೋಡ, ವಿಧ್ಯಾ ಸರಸಂಬಿ, ಜಿ.ಎಂ ಬಿರಾದಾರ, ಸುರೇಶ ಬಿರಾದಾರ, ಕವಿತಾ ಜೀರಂಕಲಗಿ, ಈರಮ್ಮಾ ಜೋಗುರ, ಚೌದರಿ ನಧಾಫ, ಬಸವರಾಜ ಅವುಜಿ, ಸಿದ್ದು ಲಾಳಸಂಗಿ, ಕವಿತಾ ಹಚಡದ ಸೇರಿದಂತೆ ಅನೇಕರು ಇದ್ದರು.

### ಕುಂದು ಕೊರತೆ ಅಹವಾಲು ಸ್ವೀಕಾರ

**ವಿಜಯಪುರ:** ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಪಲ್ಲವಿ. ಜಿ ಅವರು ಫೆಬ್ರವರಿ 18ರ ಬೆಳಗ್ಗೆ 9.30ಕ್ಕೆ ನಗರದ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಕುಂದುಕೊರತೆ ಅಹವಾಲು ಸ್ವೀಕರಿಸಲಿದ್ದಾರೆ. ಸಮುದಾಯದ ಸಂಘ-ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸುವಂತೆ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರ ಪ್ರಕಟಣೆ ತಿಳಿಸಿದೆ.

**{ಬಿ.ವೈ.ವಿಜಯೇಂದ್ರ}** ಬಿಜೆಪಿ ರಾಜ್ಯಾಧ್ಯಕ್ಷ

**ಕಾಂಗ್ರೆಸ್ ಸರಕಾರ ಜ್ಞಾನ ಗಂಗೆಯ ಆಲಯಗಳನ್ನು ಬರಿದು ಮಾಡಿ ಅಕ್ಷರ ದೀವಿಗೆಯನ್ನು ನಂದಿಸಲು ಹೊರಟಿದೆ. 9 ವಿಶ್ವವಿದ್ಯಾಲಯಗಳಿಗೆ ಬೀಗ ಜಡಿಯಲು ಹೊರಟು ಗ್ರಾಮೀಣ ವಿದ್ಯಾರ್ಥಿಗಳ ಪಾಲಿನ ಶಿಕ್ಷಣ ಭಾಗ್ಯ ಕಸಿಯಲು ಹೊರಟಿರುವ ಕಾಂಗ್ರೆಸ್ ಸರಕಾರದ ನಿರ್ಧಾರ ಅವಿವೇಕತನದ ಪರಮಾವಧಿಯಾಗಿದೆ.**

---

ಕಾರ್ಯಾಗಾರ ಉದ್ಘಾಟನೆ | ಮಹಿಳಾ ವಿವಿಯ ಹಂಗಾಮಿ ಕುಲಪತಿ ಪ್ರೊ.ಶಾಂತಾದೇವಿ

# ಜಾಗೃತಿ ಬಿತ್ತುವ ಎನ್‌ಎಸ್‌ಎಸ್

**ವಿಜಯಪುರ:** ಎನ್.ಎಸ್.ಎಸ್ ಗ್ರಾಮೀಣ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಗೆ ಮಹತ್ವದ ಪಾತ್ರ ವಹಿಸುತ್ತದೆ ಎಂದು ಮಹಿಳಾ ವಿವಿಯ ಹಂಗಾಮಿ ಕುಲಪತಿ ಪ್ರೊ.ಟಿ.ಶಾಂತಾದೇವಿ ಹೇಳಿದರು.

ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್ ಕೋಶ ಮತು ಗಾಂಧಿ ಅಧ್ಯಯನ ಕೇಂದ್ರ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು, ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡೆ ಸಹಯೋಗದಲ್ಲಿ ಗುರುವಾರ ಆಯೋಜಿಸಿದ್ದ 'ಗಾಂಧಿ ಚಿಂತನೆಗಳ ಮೂಲಕ ಮಾನವೀಯ ಮೌಲ್ಯಗಳು ಮತ್ತು ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮ ಅಧಿಕಾರಿಯ ಜವಾಬ್ದಾರಿ'' ಈ ವಿಷಯದ ಕುರಿತು ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗಾಂಧೀಜಿಯ ಸತ್ಯ ಮತ್ತು ಅಹಿಂಸಾ ತತ್ವಗಳನ್ನು ಅಳವಡಿಸಿಕೊಳ್ಳುವ ಮೂಲಕ, ಸ್ವಚ್ಛತಾ ಕಾರ್ಯಗಳು, ಶಿಕ್ಷಣ ಮತ್ತು ಆರೋಗ್ಯ ಜಾಗೃತಿಯ ಕಾರ್ಯಕ್ರಮಗಳು, ಪರಿಸರ ಸಂರಕ್ಷಣೆ ಮತ್ತು ಸಾಮಾಜಿಕ ಜಾಗೃತಿ ಅಭಿಯಾನಗಳ ಮೂಲಕ ಹಳ್ಳಿಗಳ ಅಭಿವೃದ್ಧಿಗೆ ಇದು ಪೂರಕವಾಗುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡಿ ಪಿ. ಕೃಷ್ಣ ಮಾತನಾಡಿ, ಗಾಂಧೀಜಿಯವರು ರಾಜಕೀಯ ಕಾರ್ಯವನ್ನು ಎರಡು ವಿಭಾಗಗಳಾಗಿ ವಿಂಗಡಿಸಿದ್ದರು. ಸಂಸದೀಯ ಕೆಲಸ ಮತ್ತು ರಚನಾತ್ಮಕ ಕೆಲಸ. ಸಾಮಾಜಿಕ ಜಾಲತಾಣಗಳ ದುರ್ಬಳಕೆಯಿಂದ ಯುವಪೀಳಿಗೆ ದಾರಿ ತಪ್ಪುತ್ತಿರುವುದು ಸತ್ಯ. ಇದರಿಂದ ತಪ್ಪಿಸಿಕೊಳ್ಳಲು ಗಾಂಧೀಜಿಯವರ ವಿಚಾರಗಳ ಬಗ್ಗೆ ಚಿಂತನೆ ಮಾಡುವುದು, ಅವರನ್ನು ಓದಿ, ಅರ್ಥೈಸಿಕೊಳ್ಳುವುದು ಮತ್ತು ಪ್ರಶ್ನೆ ಮಾಡಿಕೊಳ್ಳುವುದು ಅಗತ್ಯವಾಗಿದೆ. ''ಗಾಂಧೀಜಿಯವರ ಮೌಲ್ಯಗಳು ಉಳಿಯದೆ ಹೋದರೆ, ದೇಶ ಉಳಿಯುವುದಿಲ್ಲ'' ಎಂಬ

ಕಾರ್ಯಾಗಾರವನ್ನು ಮಹಿಳಾ ವಿವಿಯ ಹಂಗಾಮಿ ಕುಲಪತಿ ಪ್ರೊ. ಶಾಂತಾದೇವಿ ಉದ್ಘಾಟಿಸಿದರು.

ಅವರ ಮಾತು ಇಂದು ಸಹ ಪ್ರಸ್ತುತವಾಗಿದೆ ಎಂದರು.

ಈ ಕಾರ್ಯಾಗಾರದಲ್ಲಿ ಮೂರು ಗೋಷ್ಠಿಗಳನ್ನು ನಡೆಸಲಾಯಿತು. ಮೊದಲನೆ ಗೋಷ್ಠಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಕಾಯಕ ನಿಷ್ಠೆ ಎಂಬ ವಿಷಯದ ಕುರಿತು ವಿಷಯವನ್ನು ಮಂಡಿಸಿದರು. ಪ್ರೊ.ಪಿ.ಜಿ.ತಡಸದ ಅಧ್ಯಕ್ಷತೆ ವಹಿಸಿದ್ದರು. ಎರಡನೆಯ ಗೋಷ್ಠಿಯನ್ನು ಡಾ.ಅಬೀದಾ ಬೇಗಂ ಗಾಂಧೀಜಿಯವರ ಪ್ರಸ್ತುತ ಸಮಸ್ಯೆಗಳು ಮತ್ತು ಎನ್.ಎಸ್.ಎಸ್ ಅಧಿಕಾರಿಯ ಜವಾಬ್ದಾರಿ ಎಂಬ ವಿಷಯದ ಕುರಿತು ಮಾತನಾಡಿದರು. ಪ್ರೊ.ಓಂಕಾರ ಕಾಕಡೆ ಅಧ್ಯಕ್ಷತೆ ವಹಿಸಿದ್ದರು. ಮೂರನೇ ಗೋಷ್ಠಿಯಲ್ಲಿ ಲಕ್ಷ್ಮೀದೇವಿ ವೈ ಮಹಿಳೆಯರ ವ್ಯಕ್ತಿತ್ವ ವಿಕಸನದಲ್ಲಿ ಎನ್.ಎಸ್.ಎಸ್‌ನ ಪಾತ್ರ ಎಂಬ ವಿಷಯದ ಕುರಿತು ಮಾತನಾಡಿದರು. ಪ್ರೊ. ಸಕ್ವಾಲ್ ಹೂವಣ್ಣ ಅಧ್ಯಕ್ಷತೆ ವಹಿಸಿದ್ದರು.

ಈ ಕಾರ್ಯಾಗಾರದ ಅಧ್ಯಕ್ಷತೆಯನ್ನು ಮಹಿಳಾ ವಿವಿಯ ಮೌಲ್ಯಮಾಪನ ಕುಲಸಚಿವ ಪ್ರೊ.ಎಚ್.ಎಂ. ಚಂದ್ರಶೇಖರ ವಹಿಸಿ ಮಾತನಾಡಿದರು. ಬೆಂಗಳೂರಿನ ಕರ್ನಾಟಕ ಸ್ಮಾರಕ ನಿಧಿ ಉಪಾಧ್ಯಕ್ಷ ಪ್ರೊ. ಎಸ್.ಜಿ.ಸಿದ್ದರಾಮಯ್ಯ, ಡಾ. ಅಬಿದಾ ಬೇಗಂ, ಎನ್ ಎಸ್.ಎಸ್ ಕೋಶದ ಸಂಯೋಜಕ ಪ್ರೊ. ಅಶೋಕಕುಮಾರ ಸುರಪುರ, ವಿವಿಧ ಜಿಲ್ಲೆಯ ಎನ್.ಎಸ್.ಎಸ್ ಕಾರ್ಯಕ್ರಮ ಅಧಿಕಾರಿಗಳು ಹಾಗೂ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ಹಾಗೂ ಮತ್ತಿತರು ಉಪಸ್ಥಿತರಿದ್ದರು. ಸಮಾರಂಭದಲ್ಲಿ ಅಮರನಾಥ ಪ್ರಜಾಪತಿ ಪ್ರಾಸ್ತಾವಿಕ ನುಡಿಗಳನ್ನಾಡಿದರು.

> **ಸ್ವಯಂಸೇವಕರು ಸಣ್ಣ-ಸಣ್ಣ ಸೇವಾ ಕಾರ್ಯಗಳನ್ನು ಮಾಡಿ ಮಹತ್ತರ ಸಾಧನೆಗಳನ್ನು ಸಾಧಿಸಬಹುದು. ಇದರಿಂದ ಸಮಾಜದಲ್ಲಿ ಹೊಣೆಗಾರಿಕೆಯನ್ನು ಬೆಳೆಸುವುದು ಮಾತ್ರವಲ್ಲದೆ, ಯುವಕರಲ್ಲಿ ಸಮಾಜಮುಖಿ ಚಿಂತನೆ ಮತ್ತು ಸೇವಾ ಮನೋಭಾವವನ್ನು ಉತ್ತೇಜಿಸುವುದಕ್ಕೂ ಸಹಾಯಕವಾಗುತ್ತದೆ.**
> **ಪ್ರೊ.ಟಿ.ಶಾಂತಾದೇವಿ,**
> ಮಹಿಳಾ ವಿವಿಯ ಹಂಗಾಮಿ ಕುಲಪತಿ

# ಯಲಗೂರೇಶ್ವರ ಕಾರ್ತಿಕೋತ್ಸವ

**ಆಲಮಟ್ಟಿ:** ಯಲಗೂರು ಯಲಗೂರೇಶ್ವರ ಕಾರ್ತಿಕೋತ್ಸವದ ಎರಡನೇ ದಿನ ವಿವಿಧ ಧಾರ್ಮಿಕ, ಸಂಗೀತ ಕಾರ್ಯಕ್ರಮಗಳು ಅದ್ಧೂರಿಯಾಗಿ ನಡೆದವು.

ಯಲಗೂರೇಶನ ಉತ್ಸವ ಮೂರ್ತಿ ಪಲ್ಲಕ್ಕಿಯೊಂದಿಗೆ ಕೃಷ್ಣಾ ನದಿಗೆ ತೆರಳಿ ನದಿ ಸ್ನಾನಗೈದು ಮರಳಿ ದೇವಸ್ಥಾನಕ್ಕೆ ನೂರಾರು ಭಕ್ತರ ಸಮ್ಮುಖದಲ್ಲಿ ನಸುಕಿನ ಜಾವ 5 ಕ್ಕೆ ದೇವಸ್ಥಾನದ ಮೂಲ ಪೀಠಕ್ಕೆ ತರಲಾಯಿತು. ನಂತರ ದೇವರಿಗೆ ಅಭಿಷೇಕ, ಅಲಂಕಾರಗಳು ನಡೆದವು. ಎರಡನೇ ದಿನವೂ ವಿವಿಧ ಕಲಾವಿದರಿಂದ ಸಂಗೀತ ಕಾರ್ಯಕ್ರಮ ನಡೆದವು.

**ಸಂಗೀತ ಕಾರ್ಯಕ್ರಮ:** ವಿದೂಷಿ ಸಂಗೀತಾ ಕಟ್ಟಿ ಕುಲಕರ್ಣಿ, ಕುಮಾರ ಮರಡೂರ, ಜಯತೀರ್ಥ ಮೇವುಂಡಿ, ಅವರ ಗಾಯನ, ರಾಜೇಂದ್ರ ನಾಕೋಡ ಅವರ ತಬಲಾ ಸೋಲೋ, ಚಿದಾನಂದ ಕುಲಕರ್ಣಿ ಅವರ ನೃತ್ಯರೂಪಕ ಗಮನಸೆಳೆಯಿತು. ಪಂಡಿತ ಕಿರಣ ಯಾವಗಲ್, ಗುರುನಾಯಕ, ಪ್ರಶಾಂತ, ಗಣಾಚಾರಿ, ಶೇಷಗಿರಿ, ಕೇಶವ ಜೋಷಿ, ಪ್ರಮೋದ ಹರಿಮಂದಿರ, ಭರತ ಹೆಗಡೆ, ಮಧು ಕೊಪ್ಪ, ಅಕ್ಷಯ ಜೋಷಿ, ಶ್ರೀಹರಿ ದಿಗ್ಗಾವಿ, ಬಿಂಧು ಕಡಿವಾಲ ತಬಲಾ ಸಾಥ್ ನೀಡಿದರು.

**ಅನುಗ್ರಹ ಪ್ರಶಸ್ತಿ ಪ್ರದಾನ:** ಪ್ರತಿ ವರ್ಷ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರಿಗೆ ನೀಡುವ 'ಯಲಗೂರೇಶ್ವರ ಅನುಗ್ರಹ ಪ್ರಶಸ್ತಿ'ಯನ್ನು ಶನಿವಾರ ರಾತ್ರಿ ಬಾಲಚಂದ್ರ ನಾಕೋಡ, ಶುಭದಾ ದೇಶಪಾಂಡೆ ಅವರಿಗೆ ಪ್ರದಾನ ಮಾಡಲಾಯಿತು. ಭಾನುವಾರ, ತಬಲಾ ವಾದಕ ರಾಜೇಂದ್ರ ನಾಕೋಡ ಅವರಿಗೆ ಪ್ರದಾನ ಮಾಡಲಾಯಿತು.

ಮಧ್ಯಾಹ್ನ ಸರ್ವಧರ್ಮ ಜನಾಂಗದವರು ಸ್ವೀಕರಿಸುವ ಹರಶಾವಿಗೆ ನೈವೇದ್ಯ ಸ್ವೀಕರಿಸುವ ಸಂಪ್ರದಾಯವೂ ಸಹಸ್ರಾರು ಜನರ ಮಧ್ಯೆ ಜರುಗಿತು. ಭಾನುವಾರ ಸಂಜೆ ಸಹಸ್ರಾರು ಭಕ್ತಾಧಿಗಳ ಮಧ್ಯೆ ರಥೋತ್ಸವ ಜರುಗಿತು. ಕೀಲುಗೊಂಬೆಗಳು, ಬಾಜಾ ಭಜಂತ್ರಿ, ಕರಡಿ ಮಜಲಿನ ನಿನಾದ ಗಮನಸೆಳೆಯಿತು. ರಾತ್ರಿ ಹೊಂಡ ಪೂಜೆ ಜರುಗಿತು. ಏಳೂರು ಒಡೆಯ ಶ್ರೀಯಲಗೂರೇಶ್ವರ ಸೇವಾ ಸಮಿತಿಯವರು ಬಂದ ಭಕ್ತಾದಿಗಳಿಗೆ, ಪಾದಯಾತ್ರಿಗಳಿಗೆ ಬೆಳಿಗ್ಗೆ ಉಪಹಾರದ ವ್ಯವಸ್ಥೆ ಮಾಡಿದ್ದರು. ಯಲಗೂರೇಶ್ವರ ಅನ್ನದಾಸೋಹ ಸಮಿತಿಯವರು ನಿರಂತರ ಅನ್ನದಾಸೋಹ ಏರ್ಪಡಿಸಿದ್ದರು. ರಾತ್ರಿ ಅಕ್ಕ ಅಪರಂಜಿ ತಂಗಿ ಗುಲಗಂಜಿ ನಾಟಕ ಪ್ರದರ್ಶನಗೊಂಡಿತು.

ಯಲಗೂರೇಶ್ವರ ಕಾರ್ತಿಕೋತ್ಸವದ ಎರಡನೇ ದಿನ ವಿವಿಧ ಧಾರ್ಮಿಕ, ಸಂಗೀತ ಕಾರ್ಯಕ್ರಮಗಳು ಅದ್ದೂರಿಯಾಗಿ ನಡೆದವು.

# ವಿಕಲಚೇತನರ ಸಮಸ್ಯೆ ಪರಿಹರಿಸಿ: ಡಿಸಿ

**ವಿಜಯಪುರ:** ಜಿಲ್ಲೆಯ ಎಲ್ಲಾ ತಾಲೂಕಾ ಮಟ್ಟದಲ್ಲಿ ವಿಕಲಚೇತನರ ಕುಂದುಕೊರತೆ ಸಭೆ ನಡೆಸಿ ಅವರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಕ್ರಮವಹಿಸುವಂತೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅಧಿಕಾರಿಗಳಿಗೆ ಸೂಚಿಸಿದರು.

ಅವರು ಶನಿವಾರ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ನಡೆದ 2016ರ ಕಾಯ್ದೆ ಅನ್ವಯ ಪುನಶ್ವೇತನ ಹಕ್ಕುಗಳ ರಕ್ಷಣೆ ಮತ್ತು ಅಭಿವೃದ್ಧಿ, ವಿಕಲಚೇತನರ ವಿವಿಧ ವಿಷಯಗಳು ಹಾಗೂ ವಿಕಲಚೇತನರ ಕುಂದು-ಕೊರತೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸರಕಾರವು ವಿಕಲಚೇತನರ ಉನ್ನತಿಗಾಗಿ ಹಲವು ಯೋಜನೆಗಳನ್ನು ಜಾರಿಗೊಳಿಸಿದೆ. ಈ ಯೋಜನೆಯ ಲಾಭ ಅರ್ಹ ವಿಕಲಚೇತನರಿಗೆ ದೊರಕಿಸಲು ಅಧಿಕಾರಿಗಳು ಕ್ರಮ ವಹಿಸಬೇಕು. ಅರ್ಹರು ಸಹ ಈ ಯೋಜನೆಗಳ ಮಾಹಿತಿ ಪಡೆದು ಸದುಪಯೋಗ ಪಡೆದುಕೊಳ್ಳಬೇಕೆಂದು ಅವರು ತಿಳಿಸಿದರು.

ವಿಕಲಚೇತನರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಸರಕಾರ ಅವರಿಗೆ ಮೀಸಲಿರಿಟ್ಟಿರುವ ಶೇ.5ರಷ್ಟು ಹಣವನ್ನು ಸರಕಾರದ ಮಾರ್ಗ ಸೂಚಿಯಂತೆ ಕ್ರಮವಹಿಸಿ, ವಿಕಲಚೇತನರ ಸ್ವಾವಲಂಬಿ ಬದುಕಿಗೆ ಪ್ರೋತ್ಸಾಹ ನೀಡಬೇಕು. 2016ರ ಕಾಯ್ದೆಯಡಿ ಬರುವ ವಿಕಲಚೇತನರ ಕಾಯ್ದೆ ಕಾನೂನು ಕುರಿತಾಗಿ ಇರುವ ಜಾಗೃತಿಗಾಗಿ ನಾಮಫಲಕ ಗಳನ್ನು ಅಳವಡಿಸಬೇಕು. ವಿಕಲಚೇತನರು ಆರ್ಥಿಕವಾಗಿ ಸಬಲರಾಗಲು ಸರಕಾರದ ಸವಲತ್ತುಗಳ ಮಾಹಿತಿ ಒದಗಿಸಿ, ಸ್ವಾವಲಂಬಿ ಜೀವನ ನಡೆಸಲು ಸಹಾಯ ಸಹಕಾರ ಒದಗಿಸಬೇಕು. ವಿಕಲಚೇತನರಿಗೆ ಸರ್ಕಾರಿ ಕಛೇರಿ ಆಸ್ಪತ್ರೆ, ಶಾಲಾ-ಕಾಲೇಜು, ಬ್ಯಾಂಕ್‌ಗಳಲ್ಲಿ ಯಾರ್ಂಪ್ ಮತ್ತು ರೀಲಿಂಗ್ ಅಳವಡಿಸುವ ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಜಿ.ಪಂ ಮುಖ್ಯ ಯೋಜನಾಧಿಕಾರಿ

ವಿಕಲಚೇತನರ ಕುಂದು-ಕೊರತೆ ಸಭೆಯ ಅಧ್ಯಕ್ಷತೆ ವಹಿಸಿ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಮಾತನಾಡಿದರು.

> **ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ ವಿಕಲಚೇತನರು ನಿರ್ವಹಿಸುವ ಉದ್ಯೋಗ ನೀಡಲಾಗುತ್ತಿದೆ. ಗ್ರಾಮೀಣ ಭಾಗದಲ್ಲಿ ವಿಕಲಚೇತನರು ಜಾಬ್ ಕಾರ್ಡ್ ಮಾಡಿಸಿಕೊಂಡು ಸದುಪಯೋಗ ಪಡೆದುಕೊಳ್ಳಬೇಕು. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ವಿಕಲಚೇತನರಿಗಾಗಿ ಇರುವ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕಾಗಿ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.**
> ರಿಷಿ ಆನಂದ್, ಜಿಪಂ ಸಿಇಒ

ನಿಂಗಪ್ಪ ಗೋಠೆ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬದ್ರುದ್ದೀನ ಸೌದಾಗರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಕೆ.ಕೆ.ಚವ್ಹಾಣ, ಆರ್ .ಟಿ.ಓ ವಸೀಮ್ ಬಾಬಾ ಮುದ್ದೇಬಿಹಾಳ, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಧಿಕಾರಿ ಸವಿತಾ ಕಾಳೆ, ಡಿಎಚ್‌ಒ ಸಂಪತ್ ಕುಮಾರ ಗುಣಾರಿ, ಜಂಟಿ ಕೃಷಿ ನಿರ್ದೇಶಕರಾದ ಎಲ್. ರೂಪಾ ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳು ಹಾಗೂ ವಿಕಲಚೇತನರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸೇವಾ ಸಂಸ್ಥೆಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

# ಸಮ್ಮೇಳನ ಅರ್ಥಪೂರ್ಣವಾಗಿ ಆಚರಿಸೋಣ




ಸಮ್ಮೇಳನದ ಲಾಂಛನ ಅನಾವರಣಗೊಳಿಸಿ ಜಿಲ್ಲಾಧಿಕಾರಿ ಟಿ ಭೂಬಾಲನ್ ಅವರು ಮಾತನಾಡಿದರು

**ವಿಜಯಪುರ:** ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಗಟ್ಟಿಯಾದ ಇತಿಹಾಸವಿದ್ದು, ಶಾಸ್ತ್ರೀಯ ಸ್ಥಾನಮಾನ ಪಡೆದುಕೊಂಡ ಶ್ರೀಮಂತ ಭಾಷೆಯಾಗಿದೆ. ಇಪ್ಪತ್ತನೇಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅರ್ಥಪೂರ್ಣವಾಗಿ ಆಚರಿಸೋಣ ಎಂದು ವಿಜಯಪುರ ಜಿಲ್ಲಾಧಿಕಾರಿ ಟಿ ಭೂಬಾಲನ್ ಕರೆ ನೀಡಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಇಪ್ಪತ್ತನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನ ಅನಾವರಣಗೊಳಿಸಿ ಅವರು ಮಾತನಾಡಿದರು. ಆಡಳಿತದಲ್ಲಿ ಕನ್ನಡ ಬಳಸುವ ಮೂಲಕ ನಾನು ಕಡತಗಳನ್ನು ಕನ್ನಡದಲ್ಲಿಯೆ ಅನುಮೋದಿಸುತ್ತೇನೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಸಾಹಿತ್ಯದ ಸಾರಾ ಅರಿತುಕೊಂಡಿದ್ದೇನೆ ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಹಿರಿಯ ಪತ್ರಕರ್ತ ಗೋಪಾಲ ನಾಯಕ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು ಕ್ರೀಯಾಶೀಲವಾಗಿ ಸಾಹಿತ್ಯ ಚಟುವಟಿಕೆಗಳನ್ನು ನಡೆಸುತ್ತಿದೆ. ಕನ್ನಡ ಭವನ ಕಟ್ಟಲು ಜಿಲ್ಲಾಧಿಕಾರಿಗಳು ಮುತುವರ್ಜಿ ವಹಿಸಿದ್ದು ಅತ್ಯಂತ ಸಂತೋಷದ ವಿಚಾರ. ಸಂಸದರು, ಜಿಲ್ಲೆಯ ಎಲ್ಲ ಶಾಸಕರು ಹಾಗು ವಿಧಾನ ಪರಿಷತ್ತಿನ ಸದಸ್ಯರು ಜಿಲ್ಲಾ ಸಾಹಿತ್ಯ ಭವನಕ್ಕೆ ಅನುದಾನ ನೀಡುವ ಮೂಲಕ ಸಹಕರಿಸಬೇಕು ಎಂದರು.

ಈ ವೇಳೆ ಕಸಾಪ ಅಧ್ಯಕ್ಷ ಹಾಸಿಂಪೀರ ವಾಲಿಕಾರ. ಪ್ರೊ. ದೊಡ್ಡಣ್ಣ ಭಜಂತ್ರಿ, ಡಾ ಭಾರತಿ ಖಾಸನೀಸ್, ಶ್ರೀದೇವಿ ಉತ್ಲಾಸ್ಕರ್, ಸರೋಜಿನಿ ನಿಕ್ಕಂ, ವಿಜಯಕುಮಾರ ಘಾಟಗೆ, ಶಾರದಾ ಐಹೊಳ್ಳಿ, ಸಿದ್ರಾಮಯ್ಯ ಲಕ್ಕುಂಡಿಮಠ ಹಾಗೂ ಹಲವರಿದ್ದರು. ಹಿರಿಯ ಸಾಹಿತಿ ಡಾ. ವಿ. ಡಿ. ಐಹೊಳ್ಳಿ, ರಾಜೇಸಾಬ ಶಿವನಗುತ್ತಿ, ಜಿ. ಎಸ್. ಬಳ್ಳೂರ, ಕಮಲಾ ಮುರಾಳ, ಸುಖದೇವಿ ಅಲಬಾಳಮಠ, ಜಯಶ್ರೀ ಹಿರೇಮಠ, ಪರವೀನ ಶೇಖ, ಲತಾ ಗುಂಡಿ, ಬಸಲಿಂಗಪ್ಪ ಸಾರವಾಡ, ಶರಣಗೌಡ ಪಾಟೀಲ, ಎಂ ಬಿ ಕಟ್ಟಿಮನಿ. ಸಾತಪ್ಪ ಗೊಂಗಡಿ, ವಿಜಯಲಕ್ಷ್ಮಿ ಹಳಕಟ್ಟಿ, ಮಹಾದೇವಿ ತೆಲಗಿ, ಬಸವರಾಜ ಕೋನರಡ್ಡಿ, ಶೋಭಾ ಮೇಡೆಗಾರ, ಕವಿತಾ ಕಲ್ಯಾಣಪ್ಪಗೋಳ, ಜ್ಯೋತಿ ಹಿಪ್ಪರಗಿ, ಕೆ ಎಸ್ ಹಣಮಾನಿ, ಟಿ ಆರ್ ಹಾವಿನಾಳ, ಅಮೋಘಸಿದ್ಧ ಪೂಜಾರಿ, ಶಿವಾಜಿ ಮೋರೆ, ಮಹಮ್ಮದ ವಾಲೀಕಾರ, ಶ್ರೀಕಾಂತ ನಾಡಗೌಡ, ಪರಶರಾಮ ಚಲವಾದಿ ಮಂತಾದವರು ಉಪಸ್ಥಿತರಿದ್ದರು.

# ಬೇಡಿಕೆಗಳಿಗೆ ಸರಕಾರ ಸ್ಪಂದಿಸಲಿ

**ದೇವರಹಿಪ್ಪರಗಿ:** ಗ್ರಾಮಾಡಳಿತ ಅಧಿಕಾರಿಗಳು, ಸಿಬ್ಬಂದಿಗಳ ನ್ಯಾಯಯುತ ಬೇಡಿಕೆಗಳಿಗೆ ಸರಕಾರ ತಕ್ಷಣವೇ ಸ್ಪಂದಿಸಬೇಕು. ಸಾರ್ವಜನಿಕ ಸೇವೆಗೆ ಅನುಕೂಲವಾಗುವಂತೆ ಕ್ರಮ ಕೈಕೊಳ್ಳಬೇಕೆಂದು ದೇವರಹಿಪ್ಪರಗಿ ಅವುಗೇಶ್ವರ ತಪೋವನ ಪರದೇಶಿಮಠದ ಶಿವಯೋಗೇಶ್ವರ ಸ್ವಾಮೀಜಿ ಸರಕಾರವನ್ನು ಆಗ್ರಹಿಸಿದರು.

ಶನಿವಾರ ಸಿಂದಗಿ ನಗರದ ತಹಸೀಲ್ದಾರ್ ಕಚೇರಿ ಆವರಣದಲ್ಲಿ ದೇವರಹಿಪ್ಪರಗಿ, ಆಲಮೇಲ ಹಾಗೂ ಸಿಂದಗಿ ತಾಲೂಕಿನ ಗ್ರಾಮಾಡಳಿತ ಸಿಬ್ಬಂದಿ ಹಮ್ಮಿಕೊಂಡ ಅನಿರ್ದಿಷ್ಠ ಮುಷ್ಕರಕ್ಕೆ ಬೆಂಬಲ ಸೂಚಿಸಿ ಧರಣಿಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಗ್ರಾಮಾಡಳಿತ ಸಿಬ್ಬಂದಿ ಹಗಲು ರಾತ್ರಿ ಎನ್ನದೆ ತಳಮಟ್ಟದಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಸರಕಾರದ ಕೆಲಸಕಾರ್ಯಗಳು ಸುಲಭವಾಗಿ ನಡೆಯುತ್ತಿವೆ. ಸಾರ್ವಜನಿಕರಿಗೆ ಸೌಲಭ್ಯ ಒದಗಿಸುವಲ್ಲಿ ಸದಾ ಶ್ರಮಿಸುತ್ತಿರುವ ಸಿಬ್ಬಂಧಿ ಸೇವೆ ಶ್ಲಾಘನೀಯವಾಗಿದೆ. ಇವರ ನ್ಯಾಯಯೂತ ಬೇಡಿಕೆಗಳಿಗೆ ಸರಕಾರ ಸಕಾರಾತ್ಮಕವಾಗಿ ಸ್ಪಂದಿಸಬೇಕು. ಪ್ರತಿಯೊಂದು ಕೆಲಸ ಕಾರ್ಯಗಳು

ಇವರ ಮೇಲೆ ನಿಂತಿದ್ದು, ಹಲವಾರು ದಿನಗಳಿಂದ ಆಡಳಿತ ಯಂತ್ರ ಸ್ಥಗಿತಗೊಂಡಂತಾಗಿದೆ. ಸಾರ್ವಜನಿಕರು, ವಿದ್ಯಾರ್ಥಿಗಳು ದಾಖಲೆಗಳಿಗಾಗಿ ಪರದಾಡುವಂತಾಗಿದೆ ಎಂದರು. ಮುಷ್ಕರದಲ್ಲಿ ಸಿಂದಗಿ ಗ್ರಾಮಾಡಳಿತ ಸಂಘದ ಅಧ್ಯಕ್ಷ ಅಬ್ಬಾಸಲಿ ಅಂಗಡಿ, ಆಲಮೇಲ ಅಧ್ಯಕ್ಷ ಯಲ್ಲಾಲಿಂಗ ವಾಘೆ, ಬಿ ಎಚ್ ಭಾಟಿ, ಅನೀಲ ರಾಠೋಡ, ಮಾರುತಿ ಸಾಳುಂಕೆ, ಬಸಯ್ಯ ಮಠ, ಮಹಾದೇವಿ ಅಳ್ಳೊಳ್ಳಿ, ಸರಸ್ವತಿ ಮೋರೆ, ವಿಜಯಲಕ್ಷ್ಮೀ ಶಹಾಪೂರ, ನಿಂಗಮ್ಮ, ಸದ್ದಾಮ ಮುಲ್ಲಾ, ಲಕ್ಷ್ಮಣ ಗೌಡೆ, ಪಿ ಕೆ ಹುಡೇದ, ಪ್ರಕಾಶ ಬನ್ನೆಟ್ಟಿ ಸೇರಿದಂತೆ ದೇವರಹಿಪ್ಪರಗಿ, ಆಲಮೇಲ ಹಾಗೂ ಸಿಂದಗಿ ಗ್ರಾಮಾಡಳಿತ ಸಿಬ್ಬಂದಿ, ಗ್ರಾಮಾಡಳಿರ ಸಹಾಯಕರು ಪಾಲ್ಗೊಂಡಿದ್ದರು.

# ಮಾನವೀಯ ಮೌಲ್ಯಗಳ ಬೆಳೆಸುವ ಶಿಕ್ಷಣ

**ಕೊಲ್ಹಾರ:** ಕಲಿಕೆಯ ಜೊತೆ ಜೊತೆಗೆ ಪ್ರೀತಿ, ಮಮತೆ, ಮಾನವೀಯ ಮೌಲ್ಯಗಳನ್ನು ಬಿತ್ತುವುದೇ ಶಿಕ್ಷಣದ ನೈಜ ತತ್ವವಾಗಿದೆ ಎಂದು ಬೇಲೂರು, ಕೊಲ್ಹಾರ ಹಿರೇಮಠದ ಪ್ರಭುಕುಮಾರ ಶಿವಾಚಾರ್ಯರು ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಸನ್ ಶೈನ್ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು. ಶಿಕ್ಷಣದ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಮಕ್ಕಳ ಕಲಿಕೆಯ ಒಲವನ್ನು ಹೆಚ್ಚಿಸುತ್ತವೆ, ನಿರಂತರವಾಗಿ ಒಂದು ವರ್ಷಗಳಕಾಲ ಶಿಕ್ಷಣ ಪಡೆದ ಮಗುವಿಗೆ ವಾರ್ಷಿಕ ಸ್ನೇಹ ಸಮ್ಮೇಳನಗಳು ತಮ್ಮ ಕಲೆಯನ್ನು ಪ್ರಚೂರಪಡಿಸುವ ವೇದಿಕೆಗಳಾಗಿ ಏರ್ಪಡುತ್ತವೆ ಎಂದರು.

ವಿಜಯಪುರ ಹಾಶಿಂಪೀರ್ ದರ್ಗಾದ ಡಾ. ಸೈಯ್ಯದ ಮುರ್ತುಜಾ ಹುಸ್ಸೈನಿ ಹಾಶ್ಮಿ ಮಾತನಾಡಿ ಶಿಕ್ಷಣ ಮಕ್ಕಳಲ್ಲಿ ಉತ್ತಮ ಸಂಸ್ಕಾರ ಬಿತ್ತುವ ಮೂಲಕ ಮಕ್ಕಳನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುತ್ತವೆ ಎಂದರು. ಕೊಲ್ಹಾರ ಪಟ್ಟಣದ ಸನ್ ಶೈನ್ ಶಾಲೆಯು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಉತ್ತರೋತ್ತರವಾಗಿ ಬೆಳೆಯಲಿ ಎಂದು ಹಾರೈಸಿದರು.

ಸನ್ ಶೈನ್ ಶಾಲೆಯಲ್ಲಿ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮ ಜರುಗಿತು.

ಈ ಸಂದರ್ಭದಲ್ಲಿ ವಿಜಯಪುರ ಆರ್ಕಾಟ್ ದರ್ಗಾದ ಡಾ.ಸೈಯ್ಯದ ರುಹುಲ್ಲಾ ಹುಸೇನಿ, ಖಾನಕಾಯೆ ಗಫಾರಿಯಾದ ಅಲ್ ಹಾಜ್ ಡಾ.ಭಕ್ತಿಯಾರಖಾನ್ ಪಠಾಣ ಸಾನಿಧ್ಯ ವಹಿಸಿದ್ದರು.

ವೇದಿಕೆಯ ಮೇಲೆ ಶರೀಫಖಾನ ಪಠಾಣ, ಅಕ್ತರ್‌ಬಾಷಾ ಅಲ್ಲಿಖಾನ, ಎಸ್.ಎಸ್ ಹಕೀಮ್, ವಿದ್ಯುತ್ ವಿಭಾಗಿಯ ಅಧಿಕಾರಿ ಎಸ್.ಎಸ್ ಪಡಸಲಗಿ, ಆರ್.ಬಿ ಪಕಾಲಿ, ಬಡೇಭಾಯಿ ಗಿರಗಾಂವಿ, ನಬಿಸಾಬ ಹೊನ್ಯಾಳ, ಮೈನುದ್ದಿನ್ ಮನ್ನಾಬಾಯಿ, ಈರಣ್ಣ ಔರಸಂಗ, ಇಕ್ಬಾಲ್ ನದಾಫ, ನಾಸೀರ ದಿಂದಾರ, ಶಫೀಕ ಜಮನಾ, ಎಂ.ಆರ್ ಕಲಾದಗಿ, ದಶರಥ ಈಟಿ ಸಹಿತ ಅನೇಕ ಗಣ್ಯರು ಉಪಸ್ಥಿತರಿದ್ದರು. ಖುದಾದಖಾನ್ ಪಠಾಣ ಕಾರ್ಯಕ್ರಮ ನಿರೂಪಿಸಿದರು. ಅಯ್ಯೂಬಖಾನ್ ಪಠಾಣ ವಂದಿಸಿದರು.

# ಕೃಷ್ಣಾ ನದಿ ನೀರಿನಲ್ಲಿ ಔಷಧೀಯ ಗುಣ

**ಆಲಮಟ್ಟಿ:** ದಕ್ಷಿಣ ಕರ್ನಾಟಕದವರೆಗೆ ಕಾವೇರಿ ಜೀವನದಿಯಾದರೆ, ಉತ್ತರ ಕರ್ನಾಟಕಕ್ಕೆ ಕೃಷ್ಣೆ ಜೀವನದಿಯಾಗಿದೆ ಮಹಾರಾಷ್ಟ್ರದ ಪಶ್ಚಿಮ ಘಟ್ಟದ ಮಹಾಬಲೇಶ್ವರ ದಲ್ಲಿ ಗೋಮಾತೆಯ ಮುಖದಿಂದ ಉದಯವಾಗುವ ಕೃಷ್ಣೆ, ಪಶ್ಚಿಮ ಘಟ್ಟದಲ್ಲಿರುವ ಅಮೂಲ್ಯ ವನಸ್ಪತಿ ಸಸ್ಯಗಳು ಮರಗಳ ಮೇಲೆ ಬೀಳುವ ಮಳೆ ನೀರು ಕೃಷ್ಣೆಯ ಒಡಲು ಸೇರಿಕೊಂಡು ಔಷದೀಯ ಗುಣಗಳನ್ನು ಪಡೆದುಕೊಂಡು ಹರಿಯುತ್ತಿದೆ ಇಂತಹ ಪವಿತ್ರ ಕೃಷ್ಣೆಯ ನೀರು ,ನದಿಯ ದಡದ ಫಲವತ್ತಾದ ಮಣ್ಣು, ನದಿಯಲ್ಲಿರುವ ಮೀನುಗಳು ಔಷಧಿಯ ಗುಣಗಳನ್ನು ಹೊಂದಿವೆ ಎಂದು ಮಾಜಿ ಸಚಿವ ಬೆಳ್ಳುಬ್ಬಿ ಹೇಳಿದರು. ಇತ್ತೀಚೆಗೆ ಬೇನಾಳ ಎನ್.ಹೆಚ್.ಗ್ರಾಮದಲ್ಲಿ ಜರುಗಿದ ಬನಶಂಕರಿ ದೇವಿಯ ಜಾತ್ರೆಯಲ್ಲಿ ಸುಮಾರು 14 ಲಕ್ಷಗಳ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ನೂತನ ರಥದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು, ನಿಡಗುಂದಿ ಹಾಗೂ ಕೊಲ್ಹಾರ ನೂತನ ತಾಲೂಕುಗಳ ಘೋಷಣೆ ಮಾಡಿದ್ದು ಜಗದೀಶ ಶೆಟ್ಟರ ನೇತೃತ್ವದ ಬಿಜೆಪಿ ಸರಕಾರ ಎಂದು ಹೇಳಿದರು. ಶಿಕ್ಷಕ ಸಾಹಿತಿ ಅಶೋಕ ಹಂಚಲಿ ಮಾತನಾಡಿದರು. ಬನಶಂಕರಿ ದೇವಿಯ ಜಾತ್ರೆಯ ಅಂಗವಾಗಿ, ರಥೋತ್ಸವ,ಜಾನಪದ ರಸಮಂಜರಿ ಪ್ರತಿಭಾ ಪುರಸ್ಕಾರ, ಬೇನಾಳ ಆರ್.ಎಸ್.ದ ರಾಷ್ಟ್ರೀಯ ಖೋ ಖೋ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನ ಪಡೆದ ಖೋ ಖೋ ತಂಡದ ಆಟಗಾರ್ತಿಯರ ಸನ್ಮಾನ,ಕಾರ್ಯಕ್ರಮ ಜಂಗೀ ಕುಸ್ತಿಗಳನ್ನು ಹಮ್ಮಿಕೊಳ್ಳಲಾಗಿತು.

# ಎಲ್ಲ ಇಲಾಖೆಗಳಲ್ಲಿ ಕನ್ನಡ ಬಳಕೆ ಕಡ್ಡಾಯವಾಗಲಿ: ಸಮ್ಮೇಳನಾಧ್ಯಕ್ಷ

**ಮುದ್ದೇಬಿಹಾಳ:** ಇತ್ತೀಚಿನ ದಿನಗಳಲ್ಲಿ ನ್ಯಾಯಾಲಯಗಳ ತೀರ್ಪು ಕನ್ನಡ ಭಾಷೆಯಲ್ಲೇ ಹೊರಬರುತ್ತಿರುವುದು ಕನ್ನಡಿಗರು ಹೆಮ್ಮೆ ಪಡುವಂಥ ಸಂಗತಿ. ಸರಕಾರವು ಕನ್ನಡ ಭಾಷೆ ಉಳಿಸಲು ತನ್ನ ಅಧಿನದಲ್ಲಿ ಬರುವ ಎಲ್ಲ ಇಲಾಖೆಗಳಲ್ಲಿ ಕನ್ನಡ ಬಳಕೆ ಕಡ್ಡಾಯಗೊಳಿಸಿ ಆದೇಶಿಸಬೇಕು ಎಂದು ಮುದ್ದೇಬಿಹಾಳ ತಾಲೂಕು 5ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ ಅಶೋಕ ಪಾರ್ಶ್ವನಾಥ ಮಣಿ ಹಕ್ಕೊತ್ತಾಯ ಮಂಡಿಸಿದರು.

ಇಲ್ಲಿನ ವಿಬಿಸಿ ಪ್ರೌಢಶಾಲೆ ಮೈದಾನದಲ್ಲಿ ಮಲಿಕಸಾಬ ನದಾಫ ಅಮರಗೋಳ ಮಂಟಪದ ಮಾತೋಶ್ರೀ ಗಂಗಮ್ಮ ವೀರಪ್ಪ ಚಿನಿವಾರ ಪ್ರಧಾನ ವೇದಿಕೆಯಲ್ಲಿ ಶನಿವಾರ ನಡೆದ ಮುದ್ದೇಬಿಹಾಳ ತಾಲೂಕು 5ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯದ ಎಲ್ಲ ಪ್ರಾಥಮಿಕ, ಪ್ರೌಢಶಾಲೆಗಳಲ್ಲಿ ವಾಚನಾಲಯ ಸ್ಥಾಪಿಸಿ ವಿದ್ಯಾರ್ಥಿ, ಶಿಕ್ಷಕರಲ್ಲಿ ಕನ್ನಡ ಸಾಹಿತಿಗಳ ಪುಸ್ತಕಗಳನ್ನು ಓದುವ, ಜ್ಞಾನ ಬೆಳೆಸಿಕೊಳ್ಳುವ ಅಭಿರುಚಿ ಮೂಡಿಸಬೇಕು. ಸಾಹಿತಿಗಳು, ಲೇಖಕರು ಪ್ರಕಟಿಸಿದ ಪುಸ್ತಕಗಳನ್ನು ಶೇ.50 ಪ್ರಮಾಣದಲ್ಲಿ ಕೊಂಡುಕೊಳ್ಳುವಂತೆ ಪುಸ್ತಕ ಪ್ರಾಧಿಕಾರ, ಗ್ರಂಥಾಲಯ ಇಲಾಖೆ, ಶಾಲೆ, ಕಾಲೇಜುಗಳಿಗೆ ಸೂಚಿಸಬೇಕು ಎಂದರು.

ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಶಾಸಕ ಸಿ.ಎಸ್.ನಾಡಗೌಡರು ಮಾತನಾಡಿದರು. ಪ್ರಥಮ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ ಪ್ರೊ.ಬಿ.ಎಂ.ಹಿರೇಮಠ, ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎಸ್.ಸಾವಳಗಿ, ನಾಲತವಾಡ ಕಸಾಪ ವಲಯ ಘಟಕದ ಅಧ್ಯಕ್ಷ ಡಾ.ದತ್ತಾತ್ರೇಯ ಮಳಖೇಡ, ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ



ಮುದ್ದೇಬಿಹಾಳ ತಾಲೂಕು 5ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಶಾಸಕ ಸಿ.ಎಸ್.ನಾಡಗೌಡ ಉದ್ಘಾಟಿಸಿದರು.

ವಾಲಿಕಾರ, ಕಸಾಪ ತಾಲೂಕಾಧ್ಯಕ್ಷ ಕಾಮರಾಜ ಬಿರಾದಾರ, ಜಿಪಂ ಮಾಜಿ ಉಪಾಧ್ಯಕ್ಷ ಪ್ರಭುಗೌಡ ದೇಸಾಯಿ ಇನ್ನಿತರರು ಕನ್ನಡ, ಸಾಹಿತ್ಯ, ಸಂಘಟನೆ ಕುರಿತು ಮಾತನಾಡಿದರು. ಸಾನಿಧ್ಯ ವಹಿಸಿದ್ದ ಕುಂಟೋಜಿ ಸಂಸ್ಥಾನ ಹಿರೇಮಠದ ಡಾ.ಶ್ರೀಗುರು ಚನ್ನವೀರ ಶಿವಾಚಾರ್ಯರು ಆಶೀರ್ವಚನ ನೀಡಿದರು.

ಖಾರಿಇಸಾಕ್‌ಅಹ್ಮದ್ ಮಾಗಿ, ಪುರಸಭೆ ಅಧ್ಯಕ್ಷ ಮಹಿಬೂಬ ಗೊಳಸಂಗಿ, ಕಾಂಗ್ರೆಸ್ ಮುಖಂಡ ಸಿ.ಬಿ.ಅಸ್ಕಿ, ಸರಕಾರಿ ನೌಕರರ ಸಂಘದ ಅಧ್ಯಕ್ಷ ಅರವಿಂದ ಹೂಗಾರ, ಕಸಾಪ ಗೌರವಾಧ್ಯಕ್ಷ ಎಂ.ಬಿ.ನಾವದಗಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರು ತಾರನಾಳ, ತಾಪಂ ಇಒ ಎನ್.ಎಸ್.ಮಸಳಿ, ಪುರಸಭೆ ಮುಖ್ಯಾಧಿಕಾರಿ ಮಲ್ಲನಗೌಡ ಬಿರಾದಾರ, ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ ಮುದ್ನೂರ, ಗಣ್ಯರಾದ ಬಿ.ಸಿ.ಮೋಟಗಿ, ಆರ್.ಎಸ್ .ಪಾಟೀಲ, ಜಯಶ್ರೀ ಹಿರೇಮಠ, ಮದನಪಟೇಲ ಸಾಲವಾಡಗಿ ಬಾಂಬೆ ಇನ್ನಿತರರು ವೇದಿಕೆಯಲಿದ್ದರು. ಇದೇ ವೇಳೆ ಸಮ್ಮೇಳನದ ಸ್ಮರಣ ಸಂಚಿಕೆಯನ್ನು ಶಾಸಕರಾದಿಯಾಗಿ ವೇದಿಕೆಯಲ್ಲಿದ್ದ ಸ್ವಾಮೀಜಿಗಳು, ಗಣ್ಯರು ಬಿಡುಗಡೆಗೊಳಿಸಲಾಯಿತು.

### ಪುಸ್ತಕಗಳ ಬಿಡುಗಡೆ

**ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಡಾ.ಎಂ.ಎಂ.ಬೆಳಗಲ್ಲ ಅವರ ಕವನ ಸಂಕಲನ ಜೀವನದಿ, ಡಾ.ಪ್ರಕಾಶ ನರಗುಂದ ಅವರ ಅಭಿನಂದನ ಗ್ರಂಥ ಸಾರ್ಥಕ ಬದುಕು, ಶಿಕ್ಷಕಿ ಸುಮಲತಾ ಗಡಿಯಪ್ಪನವರ್ ಅವರ ನಾನಾಗಲಾರೆ ಬುದ್ಧ ಕವನ ಸಂಕಲನ, ದಿ.ಹುಸೇನಸಾಬ ಬಳಬಟ್ಟಿ ಸಂಪಾದಿತ ಕಂಕಣಭಾಗ್ಯ, ಕೊನೆಯ ಉಸಿರು ಗ್ರಂಥ, ಶಿವಪುತ್ರ ಅಜಮನಿ ಅವರ ಮನೆಗೂ ಮೈಲಿಗೆ ಕೃತಿ, ವೆಂಕಟೇಶ ಮಾಚಕನೂರ ಅವರ ಶಿಕ್ಷಣದಲ್ಲಿ ಮೌಲ್ಯಗಳು, ಸಮ್ಮೇಳನಾಧ್ಯಕ್ಷ ಅಶೋಕ ಮಣಿ ಅವರ ಅಮೃತ ಬಿಂದು ಕವನ ಸಂಕಲನ ಪುಸ್ತಕಗಳನ್ನು ಬಿಡುಗಡೆಗೊಳಿಸಲಾಯಿತು.**

### ಬಹುನಿರೀಕ್ಷಿತ ಐಪಿಎಲ್ ವೇಳಾಪಟ್ಟಿ ಬಿಡುಗಡೆ | ಉದ್ಘಾಟನಾ ಪಂದ್ಯದಲ್ಲೇ ಆರ್‌ಸಿಬಿಗೆ ಅಗ್ನಿ ಪರೀಕ್ಷೆ

# ಮಾರ್ಚ್ 22ರಿಂದ ಐಪಿಎಲ್ ಹಬ್ಬ

**ಭಾಗವಹಿಸುವ ತಂಡಗಳು**

- ರಾಯಲ್ ಚಾಲೆಂಜರ್ಸ್ ಬೆಂಗಳೂರು
- ಚೆನ್ನೈ ಸೂಪರ್ ಕಿಂಗ್ಸ್
- ಮುಂಬೈ ಇಂಡಿಯನ್ಸ್
- ಕೋಲ್ಕತ್ತ ನೈಟ್ ರೈಡರ್ಸ್
- ಸನ್‌ರೈಸರ್ಸ್ ಹೈದರಾಬಾದ್
- ರಾಜಸ್ಥಾನ ರಾಯಲ್ಸ್
- ಡೆಲ್ಲಿ ಕ್ಯಾಪಿಟಲ್ಸ್
- ಲಖನೌ ಸೂಪರ್ ಜೈಂಟ್ಸ್
- ಗುಜರಾತ್ ಟೈಟನ್ಸ್
- ಪಂಜಾಬ್ ಕಿಂಗ್ಸ್

**ಮುಂಬೈ:** ಬಹುನಿರೀಕ್ಷಿತ ಇಂಡಿಯನ್ ಪ್ರೀಮಿಯರ್ ಲೀಗ್ 2025ನೇ ಸಾಲಿನ ಟ್ವೆಂಟಿ-20 ಕ್ರಿಕೆಟ್ ಟೂರ್ನಿಯ ವೇಳಾಪಟ್ಟಿಯನ್ನು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಭಾನುವಾರ ಬಿಡುಗಡೆಗೊಳಿಸಿದೆ. 18ನೇ ಆವೃತ್ತಿಯ ಟೂರ್ನಿಯು ಮಾರ್ಚ್ 22ರಂದು ಆರಂಭವಾಗಲಿದ್ದು, ಮೇ 25ರಂದು ಫೈನಲ್ ಪಂದ್ಯ ನಡೆಯಲಿದೆ. ಒಟ್ಟು 13 ತಾಣಗಳಲ್ಲಿ 74 ಪಂದ್ಯಗಳು ನಿಗದಿಯಾಗಿವೆ. 12 ಡಬಲ್ ಹೆಡರ್ (ದಿನಕ್ಕೆ 2 ಪಂದ್ಯ) ಪಂದ್ಯಗಳು ಇರಲಿದೆ. ಸಂಜೆಯ ಪಂದ್ಯ 3.30ಕ್ಕೆ ಮತ್ತು ರಾತ್ರಿಯ ಪಂದ್ಯಗಳು 7.30ಕ್ಕೆ ಆರಂಭವಾಗಲಿವೆ. ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸವಾಲನ್ನು ಎದುರಿಸಲಿದೆ. ಮಾರ್ಚ್ 22ರಂದು ಕೋಲ್ಕತ್ತದ ಈಡನ್ ಗಾರ್ಡನ್ಸ್‌ನಲ್ಲಿ ಈ ಪಂದ್ಯ ನಡೆಯಲಿದೆ. ಪ್ಲೇ-ಆಫ್ ಪಂದ್ಯಗಳಿಗೆ ಹೈದರಾಬಾದ್ ಮತ್ತು ಕೋಲ್ಕತ್ತ ತಾಣಗಳು ಆತಿಥ್ಯ ವಹಿಸಲಿವೆ. ಹೈದರಾಬಾದ್‌ನಲ್ಲಿ ಮೇ 20ರಂದು ಮೊದಲ ಕ್ವಾಲಿಫೈಯರ್ ಮತ್ತು ಮೇ 21ರಂದು ಎಲಿಮಿನೇಟರ್ ಪಂದ್ಯಗಳು ನಿಗದಿಯಾಗಿವೆ. ಮೇ 23ರಂದು ಕೋಲ್ಕತ್ತದಲ್ಲಿ ಎರಡನೇ ಕ್ವಾಲಿಫೈಯರ್ ನಡೆಯಲಿದೆ.

**ಎಷ್ಟನೇ ಆವೃತ್ತಿ? 18**

**ಆರಂಭ, ಫೈನಲ್ ಯಾವಾಗ?**
18ನೇ ಆವೃತ್ತಿಯ ಟೂರ್ನಿಯು ಮಾರ್ಚ್ 22 ರಂದು ಆರಂಭವಾಗಲಿದ್ದು, ಮೇ 25ರಂದು ಫೈನಲ್ ಪಂದ್ಯ ನಡೆಯಲಿದೆ.

**74** ಪಂದ್ಯಗಳು ಟೂರ್ನಿಯಲ್ಲಿ ನಿಗದಿಯಾಗಿವೆ.

**ಸಮಯ?**
ಸಂಜೆಯ ಪಂದ್ಯ 3.30ಕ್ಕೆ ಮತ್ತು ರಾತ್ರಿಯ ಪಂದ್ಯಗಳು 7.30ಕ್ಕೆ ಆರಂಭವಾಗಲಿವೆ.

**ಉದ್ಘಾಟನಾ ಪಂದ್ಯ: ಆರ್‌ಸಿಬಿ VS ಕೋಲ್ಕತ್ತ**
ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸವಾಲನ್ನು ಎದುರಿಸಲಿದೆ. ಮಾರ್ಚ್ 22ರಂದು ಕೋಲ್ಕತ್ತದ ಈಡನ್ ಗಾರ್ಡನ್ಸ್‌ನಲ್ಲಿ ಈ ಪಂದ್ಯ ನಡೆಯಲಿದೆ.

## ಚೊಚ್ಚಲ ಕಿರೀಟದ ಹುಡುಕಾಟದಲ್ಲಿ ಆರ್‌ಸಿಬಿ

ಚೊಚ್ಚಲ ಕಿರೀಟದ ಹುಡುಕಾಟದಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ ಟ್ವೆಂಟಿ-20 ಕ್ರಿಕೆಟ್ ಟೂರ್ನಿಯ ಉದ್ಘಾಟನಾ ಪಂದ್ಯದಲ್ಲೇ ಅಗ್ನಿ ಪರೀಕ್ಷೆಗೆ ಇಳಿಯಲಿದೆ. ಮಾರ್ಚ್ 22ರಂದು ನಡೆಯಲಿರುವ ಉದ್ಘಾಟನಾ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಸವಾಲನ್ನು ಎದುರಿಸಲಿದೆ. ಕೋಲ್ಕತ್ತದ ಪ್ರಸಿದ್ಧ ಈಡನ್ ಗಾರ್ಡನ್ಸ್ ಮೈದಾನದಲ್ಲಿ ಈ ಪಂದ್ಯ ನಡೆಯಲಿದೆ. ಆರ್‌ಸಿಬಿ ತನ್ನ ತವರು ಮೈದಾನವಾದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮೊದಲ ಪಂದ್ಯವನ್ನು ಏಪ್ರಿಲ್ 2ರಂದು ಆಡಲಿದೆ. ಅಂದು ರಾತ್ರಿ 7.30ಕ್ಕೆ ಗುಜರಾತ್ ಟೈಟನ್ಸ್ ತಂಡದ ಸವಾಲನ್ನು ಎದುರಿಸಲಿದೆ. ಈ ಬಾರಿಯ ಐಪಿಎಲ್‌ನಲ್ಲಿ ಆರ್‌ಸಿಬಿ ತಂಡವನ್ನು ರಜತ್ ಪಾಟೀದಾರ್ ಮುನ್ನಡೆಸಲಿದ್ದಾರೆ.

**ಫೈನಲ್ ಎಲ್ಲಿ?**
ಮೇ 25, ಭಾನುವಾರದಂದು ಕೋಲ್ಕತ್ತದ ಈಡನ್ ಗಾರ್ಡನ್ಸ್ ಮೈದಾನದಲ್ಲಿ ಫೈನಲ್ ಪಂದ್ಯ ನಡೆಯಲಿದೆ.

**ಪ್ಲೇ-ಆಫ್ ಪಂದ್ಯಗಳು**
ಪ್ಲೇ-ಆಫ್ ಪಂದ್ಯಗಳಿಗೆ ಹೈದರಾಬಾದ್ ಮತ್ತು ಕೋಲ್ಕತ್ತ ತಾಣಗಳು ಆತಿಥ್ಯ ವಹಿಸಲಿವೆ. ಹೈದರಾಬಾದ್‌ನಲ್ಲಿ ಮೇ 20ರಂದು ಮೊದಲ ಕ್ವಾಲಿಫೈಯರ್ ಮತ್ತು ಮೇ 21ರಂದು ಎಲಿಮಿನೇಟರ್ ಪಂದ್ಯಗಳು. ಮೇ 23ರಂದು ಕೋಲ್ಕತ್ತದಲ್ಲಿ 2ನೇ ಕ್ವಾಲಿಫೈಯರ್.

## ಐಪಿಎಲ್ 2025ರ ಪೂರ್ಣ ವೇಳಾಪಟ್ಟಿ

ವಿಶ್ವವಾಣಿ

| ದಿನಾಂಕ | ದಿನ | ಸಮಯ | ತವರು ತಂಡ | ಹೊರಗಿನ ತಂಡ | ಸ್ಥಳ |
|---|---|---|---|---|---|
| ಮಾರ್ಚ್ 22 | ಶನಿವಾರ | ಸಂಜೆ 7.30 | ಕೋಲ್ಕತ್ತಾ ನೈಟ್ ರೈಡರ್ಸ್ | ರಾಯಲ್ ಚಾಲೆಂಜರ್ಸ್ ಬೆಂಗಳೂರು | ಕೋಲ್ಕತ್ತಾ |
| ಮಾರ್ಚ್ 23 | ಭಾನುವಾರ | ಸಂಜೆ 7.30 | ಸನ್ ರೈಸರ್ಸ್ ಹೈದರಾಬಾದ್ | ರಾಜಸ್ಥಾನ್ ರಾಯಲ್ಸ್ | ಹೈದರಾಬಾದ್ |
| ಮಾರ್ಚ್ 23 | ಭಾನುವಾರ | ಸಂಜೆ 7.30 | ಚೆನ್ನೈ ಸೂಪರ್ ಕಿಂಗ್ಸ್ | ಮುಂಬೈ ಇಂಡಿಯನ್ಸ್ | ಚೆನ್ನೈ |
| ಮಾರ್ಚ್ 24 | ಸೋಮವಾರ | ಸಂಜೆ 7.30 | ಡೆಲ್ಲಿ ಕ್ಯಾಪಿಟಲ್ಸ್ | ಲಕ್ನೋ ಸೂಪರ್ ಜಯಂಟ್ಸ್ | ವಿಶಾಖಪಟ್ಟಣ |
| ಮಾರ್ಚ್ 25 | ಮಂಗಳವಾರ | ಸಂಜೆ 7.30 | ಗುಜರಾತ್ ಟೈಟಾನ್ಸ್ | ಪಂಜಾಬ್ ಕಿಂಗ್ಸ್ | ಅಹಮದಾಬಾದ್ |
| ಮಾರ್ಚ್ 26 | ಬುಧವಾರ | ಸಂಜೆ 7.30 | ರಾಜಸ್ಥಾನ್ ರಾಯಲ್ಸ್ | ಕೋಲ್ಕತ್ತಾ ನೈಟ್ ರೈಡರ್ಸ್ | ಗುವಾಹಟಿ |
| ಮಾರ್ಚ್ 27 | ಗುರುವಾರ | ಸಂಜೆ 7.30 | ಸನ್ ರೈಸರ್ಸ್ ಹೈದರಾಬಾದ್ | ಲಕ್ನೋ ಸೂಪರ್ ಜಯಂಟ್ಸ್ | ಹೈದರಾಬಾದ್ |
| ಮಾರ್ಚ್ 28 | ಶುಕ್ರವಾರ | ಸಂಜೆ 7.30 | ಚೆನ್ನೈ ಸೂಪರ್ ಕಿಂಗ್ಸ್ | ರಾಯಲ್ ಚಾಲೆಂಜರ್ಸ್ ಬೆಂಗಳೂರು | ಚೆನ್ನೈ |
| ಮಾರ್ಚ್ 29 | ಶನಿವಾರ | ಸಂಜೆ 7.30 | ಗುಜರಾತ್ ಟೈಟಾನ್ಸ್ | ಮುಂಬೈ ಇಂಡಿಯನ್ಸ್ | ಅಹಮದಾಬಾದ್ |
| ಮಾರ್ಚ್ 30 | ಭಾನುವಾರ | ಮಧ್ಯಾಹ್ನ 3.30 | ಡೆಲ್ಲಿ ಕ್ಯಾಪಿಟಲ್ಸ್ | ಸನ್ ರೈಸರ್ಸ್ ಹೈದರಾಬಾದ್ | ವಿಶಾಖಪಟ್ಟಣ |
| ಮಾರ್ಚ್ 30 | ಭಾನುವಾರ | ಸಂಜೆ 7.30 | ರಾಜಸ್ಥಾನ್ ರಾಯಲ್ಸ್ | ಚೆನ್ನೈ ಸೂಪರ್ ಕಿಂಗ್ಸ್ | ಗುವಾಹಟಿ |
| ಮಾರ್ಚ್ 31 | ಸೋಮವಾರ | ಸಂಜೆ 7.30 | ಮುಂಬೈ ಇಂಡಿಯನ್ಸ್ | ಕೋಲ್ಕತ್ತಾ ನೈಟ್ ರೈಡರ್ಸ್ | ಮುಂಬೈ |
| ಏಪ್ರಿಲ್ 1 | ಮಂಗಳವಾರ | ಸಂಜೆ 7.30 | ಲಕ್ನೋ ಸೂಪರ್ ಜಯಂಟ್ಸ್ | ಪಂಜಾಬ್ ಕಿಂಗ್ಸ್ | ಲಖನೌ |
| ಏಪ್ರಿಲ್ 2 | ಬುಧವಾರ | ಸಂಜೆ 7.30 | ರಾಯಲ್ ಚಾಲೆಂಜರ್ಸ್ ಬೆಂಗಳೂರು | ಗುಜರಾತ್ ಟೈಟಾನ್ಸ್ | ಬೆಂಗಳೂರು |
| ಏಪ್ರಿಲ್ 3 | ಗುರುವಾರ | ಸಂಜೆ 7.30 | ಕೋಲ್ಕತ್ತಾ ನೈಟ್ ರೈಡರ್ಸ್ | ಸನ್ ರೈಸರ್ಸ್ ಹೈದರಾಬಾದ್ | ಕೋಲ್ಕತ್ತಾ |
| ಏಪ್ರಿಲ್ 4 | ಶುಕ್ರವಾರ | ಸಂಜೆ 7.30 | ಲಕ್ನೋ ಸೂಪರ್ ಜಯಂಟ್ಸ್ | ಮುಂಬೈ ಇಂಡಿಯನ್ಸ್ | ಲಖನೌ |
| ಏಪ್ರಿಲ್ 5 | ಶನಿವಾರ | ಮಧ್ಯಾಹ್ನ 3.30 | ಚೆನ್ನೈ ಸೂಪರ್ ಕಿಂಗ್ಸ್ | ಡೆಲ್ಲಿ ಕ್ಯಾಪಿಟಲ್ಸ್ | ಚೆನ್ನೈ |
| ಏಪ್ರಿಲ್ 5 | ಶನಿವಾರ | ಸಂಜೆ 7.30 | ಪಂಜಾಬ್ ಕಿಂಗ್ಸ್ | ರಾಜಸ್ಥಾನ್ ರಾಯಲ್ಸ್ | ನವ ಚಂಡೀಗಢ |
| ಏಪ್ರಿಲ್ 6 | ಭಾನುವಾರ | ಮಧ್ಯಾಹ್ನ 3.30 | ಕೋಲ್ಕತ್ತಾ ನೈಟ್ ರೈಡರ್ಸ್ | ಲಕ್ನೋ ಸೂಪರ್ ಜಯಂಟ್ಸ್ | ಕೋಲ್ಕತ್ತಾ |
| ಏಪ್ರಿಲ್ 6 | ಭಾನುವಾರ | ಸಂಜೆ 7.30 | ಸನ್ ರೈಸರ್ಸ್ ಹೈದರಾಬಾದ್ | ಗುಜರಾತ್ ಟೈಟಾನ್ಸ್ | ಹೈದರಾಬಾದ್ |
| ಏಪ್ರಿಲ್ 7 | ಸೋಮವಾರ | ಸಂಜೆ 7.30 | ಮುಂಬೈ ಇಂಡಿಯನ್ಸ್ | ರಾಯಲ್ ಚಾಲೆಂಜರ್ಸ್ ಬೆಂಗಳೂರು | ಮುಂಬೈ |
| ಏಪ್ರಿಲ್ 8 | ಮಂಗಳವಾರ | ಸಂಜೆ 7.30 | ಪಂಜಾಬ್ ಕಿಂಗ್ಸ್ | ಚೆನ್ನೈ ಸೂಪರ್ ಕಿಂಗ್ಸ್ | ನವ ಚಂಡೀಗಢ |
| ಏಪ್ರಿಲ್ 9 | ಬುಧವಾರ | ಸಂಜೆ 7.30 | ಗುಜರಾತ್ ಟೈಟಾನ್ಸ್ | ರಾಜಸ್ಥಾನ್ ರಾಯಲ್ಸ್ | ಅಹಮದಾಬಾದ್ |
| ಏಪ್ರಿಲ್ 10 | ಗುರುವಾರ | ಸಂಜೆ 7.30 | ರಾಯಲ್ ಚಾಲೆಂಜರ್ಸ್ ಬೆಂಗಳೂರು | ಡೆಲ್ಲಿ ಕ್ಯಾಪಿಟಲ್ಸ್ | ಬೆಂಗಳೂರು |
| ಏಪ್ರಿಲ್ 11 | ಶುಕ್ರವಾರ | ಸಂಜೆ 7.30 | ಚೆನ್ನೈ ಸೂಪರ್ ಕಿಂಗ್ಸ್ | ಕೋಲ್ಕತ್ತಾ ನೈಟ್ ರೈಡರ್ಸ್ | ಚೆನ್ನೈ |
| ಏಪ್ರಿಲ್ 12 | ಶನಿವಾರ | ಮಧ್ಯಾಹ್ನ 3.30 | ಲಕ್ನೋ ಸೂಪರ್ ಜಯಂಟ್ಸ್ | ಗುಜರಾತ್ ಟೈಟಾನ್ಸ್ | ಲಖನೌ |
| ಏಪ್ರಿಲ್ 12 | ಶನಿವಾರ | ಸಂಜೆ 7.30 | ಸನ್ ರೈಸರ್ಸ್ ಹೈದರಾಬಾದ್ | ಪಂಜಾಬ್ ಕಿಂಗ್ಸ್ | ಹೈದರಾಬಾದ್ |
| ಏಪ್ರಿಲ್ 13 | ಭಾನುವಾರ | ಮಧ್ಯಾಹ್ನ 3.30 | ರಾಜಸ್ಥಾನ್ ರಾಯಲ್ಸ್ | ರಾಯಲ್ ಚಾಲೆಂಜರ್ಸ್ ಬೆಂಗಳೂರು | ಜೈಪುರ |
| ಏಪ್ರಿಲ್ 13 | ಭಾನುವಾರ | ಸಂಜೆ 7.30 | ಡೆಲ್ಲಿ ಕ್ಯಾಪಿಟಲ್ಸ್ | ಮುಂಬೈ ಇಂಡಿಯನ್ಸ್ | ದಿಲ್ಲಿ |
| ಏಪ್ರಿಲ್ 14 | ಸೋಮವಾರ | ಸಂಜೆ 7.30 | ಲಕ್ನೋ ಸೂಪರ್ ಜಯಂಟ್ಸ್ | ಚೆನ್ನೈ ಸೂಪರ್ ಕಿಂಗ್ಸ್ | ಲಖನೌ |
| ಏಪ್ರಿಲ್ 15 | ಮಂಗಳವಾರ | ಸಂಜೆ 7.30 | ಪಂಜಾಬ್ ಕಿಂಗ್ಸ್ | ಕೋಲ್ಕತ್ತಾ ನೈಟ್ ರೈಡರ್ಸ್ | ನವ ಚಂಡೀಗಢ |
| ಏಪ್ರಿಲ್ 16 | ಬುಧವಾರ | ಸಂಜೆ 7.30 | ಡೆಲ್ಲಿ ಕ್ಯಾಪಿಟಲ್ಸ್ | ರಾಜಸ್ಥಾನ್ ರಾಯಲ್ಸ್ | ದಿಲ್ಲಿ |
| ಏಪ್ರಿಲ್ 17 | ಗುರುವಾರ | ಸಂಜೆ 7.30 | ಮುಂಬೈ ಇಂಡಿಯನ್ಸ್ | ಸನ್ ರೈಸರ್ಸ್ ಹೈದರಾಬಾದ್ | ಮುಂಬೈ |
| ಏಪ್ರಿಲ್ 18 | ಶುಕ್ರವಾರ | ಸಂಜೆ 7.30 | ರಾಯಲ್ ಚಾಲೆಂಜರ್ಸ್ ಬೆಂಗಳೂರು | ಪಂಜಾಬ್ ಕಿಂಗ್ಸ್ | ಬೆಂಗಳೂರು |
| ಏಪ್ರಿಲ್ 19 | ಶನಿವಾರ | ಮಧ್ಯಾಹ್ನ 3.30 | ಗುಜರಾತ್ ಟೈಟಾನ್ಸ್ | ಡೆಲ್ಲಿ ಕ್ಯಾಪಿಟಲ್ಸ್ | ಅಹಮದಾಬಾದ್ |
| ಏಪ್ರಿಲ್ 19 | ಶನಿವಾರ | ಸಂಜೆ 7.30 | ರಾಜಸ್ಥಾನ್ ರಾಯಲ್ಸ್ | ಲಕ್ನೋ ಸೂಪರ್ ಜಯಂಟ್ಸ್ | ಜೈಪುರ |
| ಏಪ್ರಿಲ್ 20 | ಭಾನುವಾರ | ಮಧ್ಯಾಹ್ನ 3.30 | ಪಂಜಾಬ್ ಕಿಂಗ್ಸ್ | ರಾಯಲ್ ಚಾಲೆಂಜರ್ಸ್ ಬೆಂಗಳೂರು | ನವ ಚಂಡೀಗಢ |
| ಏಪ್ರಿಲ್ 20 | ಭಾನುವಾರ | ಸಂಜೆ 7.30 | ಮುಂಬೈ ಇಂಡಿಯನ್ಸ್ | ಚೆನ್ನೈ ಸೂಪರ್ ಕಿಂಗ್ಸ್ | ಮುಂಬೈ |
| ಏಪ್ರಿಲ್ 21 | ಸೋಮವಾರ | ಸಂಜೆ 7.30 | ಕೋಲ್ಕತ್ತಾ ನೈಟ್ ರೈಡರ್ಸ್ | ಗುಜರಾತ್ ಟೈಟಾನ್ಸ್ | ಕೋಲ್ಕತ್ತಾ |
| ಏಪ್ರಿಲ್ 22 | ಮಂಗಳವಾರ | ಸಂಜೆ 7.30 | ಲಕ್ನೋ ಸೂಪರ್ ಜಯಂಟ್ಸ್ | ಡೆಲ್ಲಿ ಕ್ಯಾಪಿಟಲ್ಸ್ | ಲಖನೌ |
| ಏಪ್ರಿಲ್ 23 | ಬುಧವಾರ | ಸಂಜೆ 7.30 | ಸನ್ ರೈಸರ್ಸ್ ಹೈದರಾಬಾದ್ | ಮುಂಬೈ ಇಂಡಿಯನ್ಸ್ | ಹೈದರಾಬಾದ್ |
| ಏಪ್ರಿಲ್ 24 | ಗುರುವಾರ | ಸಂಜೆ 7.30 | ರಾಯಲ್ ಚಾಲೆಂಜರ್ಸ್ ಬೆಂಗಳೂರು | ರಾಜಸ್ಥಾನ್ ರಾಯಲ್ಸ್ | ಬೆಂಗಳೂರು |
| ಏಪ್ರಿಲ್ 25 | ಶುಕ್ರವಾರ | ಸಂಜೆ 7.30 | ಚೆನ್ನೈ ಸೂಪರ್ ಕಿಂಗ್ಸ್ | ಸನ್ ರೈಸರ್ಸ್ ಹೈದರಾಬಾದ್ | ಚೆನ್ನೈ |
| ಏಪ್ರಿಲ್ 26 | ಶನಿವಾರ | ಸಂಜೆ 7.30 | ಕೋಲ್ಕತ್ತಾ ನೈಟ್ ರೈಡರ್ಸ್ | ಪಂಜಾಬ್ ಕಿಂಗ್ಸ್ | ಕೋಲ್ಕತ್ತಾ |
| ಏಪ್ರಿಲ್ 27 | ಭಾನುವಾರ | ಮಧ್ಯಾಹ್ನ 3.30 | ಮುಂಬೈ ಇಂಡಿಯನ್ಸ್ | ಲಕ್ನೋ ಸೂಪರ್ ಜಯಂಟ್ಸ್ | ಮುಂಬೈ |
| ಏಪ್ರಿಲ್ 27 | ಭಾನುವಾರ | ಸಂಜೆ 7.30 | ಡೆಲ್ಲಿ ಕ್ಯಾಪಿಟಲ್ಸ್ | ರಾಯಲ್ ಚಾಲೆಂಜರ್ಸ್ ಬೆಂಗಳೂರು | ದಿಲ್ಲಿ |
| ಏಪ್ರಿಲ್ 28 | ಸೋಮವಾರ | ಸಂಜೆ 7.30 | ರಾಜಸ್ಥಾನ್ ರಾಯಲ್ಸ್ | ಗುಜರಾತ್ ಟೈಟಾನ್ಸ್ | ಜೈಪುರ |
| ಏಪ್ರಿಲ್ | ಮಂಗಳವಾರ | ಸಂಜೆ 7.30 | ಡೆಲ್ಲಿ ಕ್ಯಾಪಿಟಲ್ಸ್ | ಕೋಲ್ಕತ್ತಾ ನೈಟ್ ರೈಡರ್ಸ್ | ದಿಲ್ಲಿ |
| ಏಪ್ರಿಲ್ | ಬುಧವಾರ | ಸಂಜೆ 7.30 | ಚೆನ್ನೈ ಸೂಪರ್ ಕಿಂಗ್ಸ್ | ಪಂಜಾಬ್ ಕಿಂಗ್ಸ್ | ಚೆನ್ನೈ |
| ಮೇ 1 | ಗುರುವಾರ | ಸಂಜೆ 7.30 | ರಾಜಸ್ಥಾನ್ ರಾಯಲ್ಸ್ | ಮುಂಬೈ ಇಂಡಿಯನ್ಸ್ | ಜೈಪುರ |
| ಮೇ 2 | ಶುಕ್ರವಾರ | ಸಂಜೆ 7.30 | ಗುಜರಾತ್ ಟೈಟಾನ್ಸ್ | ಸನ್ ರೈಸರ್ಸ್ ಹೈದರಾಬಾದ್ | ಅಹಮದಾಬಾದ್ |
| ಮೇ 3 | ಶನಿವಾರ | ಸಂಜೆ 7.30 | ರಾಯಲ್ ಚಾಲೆಂಜರ್ಸ್ ಬೆಂಗಳೂರು | ಚೆನ್ನೈ ಸೂಪರ್ ಕಿಂಗ್ಸ್ | ಬೆಂಗಳೂರು |
| ಮೇ 4 | ಭಾನುವಾರ | ಮಧ್ಯಾಹ್ನ 3.30 | ಕೋಲ್ಕತ್ತಾ ನೈಟ್ ರೈಡರ್ಸ್ | ರಾಜಸ್ಥಾನ್ ರಾಯಲ್ಸ್ | ಕೋಲ್ಕತ್ತಾ |
| ಮೇ 4 | ಭಾನುವಾರ | ಸಂಜೆ 7.30 | ಪಂಜಾಬ್ ಕಿಂಗ್ಸ್ | ಲಕ್ನೋ ಸೂಪರ್ ಜಯಂಟ್ಸ್ | ಧರ್ಮಶಾಲಾ |
| ಮೇ 5 | ಸೋಮವಾರ | ಸಂಜೆ 7.30 | ಸನ್ ರೈಸರ್ಸ್ ಹೈದರಾಬಾದ್ | ಡೆಲ್ಲಿ ಕ್ಯಾಪಿಟಲ್ಸ್ | ಹೈದರಾಬಾದ್ |
| ಮೇ 6 | ಮಂಗಳವಾರ | ಸಂಜೆ 7.30 | ಮುಂಬೈ ಇಂಡಿಯನ್ಸ್ | ಗುಜರಾತ್ ಟೈಟಾನ್ಸ್ | ಮುಂಬೈ |
| ಮೇ 7 | ಬುಧವಾರ | ಸಂಜೆ 7.30 | ಕೋಲ್ಕತ್ತಾ ನೈಟ್ ರೈಡರ್ಸ್ | ಚೆನ್ನೈ ಸೂಪರ್ ಕಿಂಗ್ಸ್ | ಕೋಲ್ಕತ್ತಾ |
| ಮೇ 8 | ಗುರುವಾರ | ಸಂಜೆ 7.30 | ಪಂಜಾಬ್ ಕಿಂಗ್ಸ್ | ಡೆಲ್ಲಿ ಕ್ಯಾಪಿಟಲ್ಸ್ | ಧರ್ಮಶಾಲಾ |
| ಮೇ 9 | ಶುಕ್ರವಾರ | ಸಂಜೆ 7.30 | ಲಕ್ನೋ ಸೂಪರ್ ಜಯಂಟ್ಸ್ | ರಾಯಲ್ ಚಾಲೆಂಜರ್ಸ್ ಬೆಂಗಳೂರು | ಲಖನೌ |
| ಮೇ 10 | ಶನಿವಾರ | ಸಂಜೆ 7.30 | ಸನ್ ರೈಸರ್ಸ್ ಹೈದರಾಬಾದ್ | ಕೋಲ್ಕತ್ತಾ ನೈಟ್ ರೈಡರ್ಸ್ | ಹೈದರಾಬಾದ್ |
| ಮೇ 11 | ಭಾನುವಾರ | ಮಧ್ಯಾಹ್ನ 3.30 | ಪಂಜಾಬ್ ಕಿಂಗ್ಸ್ | ಮುಂಬೈ ಇಂಡಿಯನ್ಸ್ | ಧರ್ಮಶಾಲಾ |
| ಮೇ 11 | ಭಾನುವಾರ | ಸಂಜೆ 7.30 | ಡೆಲ್ಲಿ ಕ್ಯಾಪಿಟಲ್ಸ್ | ಗುಜರಾತ್ ಟೈಟಾನ್ಸ್ | ದಿಲ್ಲಿ |
| ಮೇ 12 | ಸೋಮವಾರ | ಸಂಜೆ 7.30 | ಚೆನ್ನೈ ಸೂಪರ್ ಕಿಂಗ್ಸ್ | ರಾಜಸ್ಥಾನ್ ರಾಯಲ್ಸ್ | ಚೆನ್ನೈ |
| ಮೇ 13 | ಮಂಗಳವಾರ | ಸಂಜೆ 7.30 | ರಾಯಲ್ ಚಾಲೆಂಜರ್ಸ್ ಬೆಂಗಳೂರು | ಸನ್ ರೈಸರ್ಸ್ ಹೈದರಾಬಾದ್ | ಬೆಂಗಳೂರು |
| ಮೇ 14 | ಬುಧವಾರ | ಸಂಜೆ 7.30 | ಗುಜರಾತ್ ಟೈಟಾನ್ಸ್ | ಲಕ್ನೋ ಸೂಪರ್ ಜಯಂಟ್ಸ್ | ಅಹಮದಾಬಾದ್ |
| ಮೇ 15 | ಗುರುವಾರ | ಸಂಜೆ 7.30 | ಮುಂಬೈ ಇಂಡಿಯನ್ಸ್ | ಡೆಲ್ಲಿ ಕ್ಯಾಪಿಟಲ್ಸ್ | ಮುಂಬೈ |
| ಮೇ 16 | ಶುಕ್ರವಾರ | ಸಂಜೆ 7.30 | ರಾಜಸ್ಥಾನ್ ರಾಯಲ್ಸ್ | ಪಂಜಾಬ್ ಕಿಂಗ್ಸ್ | ಜೈಪುರ |
| ಮೇ 17 | ಶನಿವಾರ | ಸಂಜೆ 7.30 | ರಾಯಲ್ ಚಾಲೆಂಜರ್ಸ್ ಬೆಂಗಳೂರು | ಕೋಲ್ಕತ್ತಾ ನೈಟ್ ರೈಡರ್ಸ್ | ಬೆಂಗಳೂರು |
| ಮೇ 18 | ಭಾನುವಾರ | ಮಧ್ಯಾಹ್ನ 3.30 | ಗುಜರಾತ್ ಟೈಟಾನ್ಸ್ | ಚೆನ್ನೈ ಸೂಪರ್ ಕಿಂಗ್ಸ್ | ಅಹಮದಾಬಾದ್ |
| ಮೇ 18 | ಭಾನುವಾರ | ಸಂಜೆ 7.30 | ಲಕ್ನೋ ಸೂಪರ್ ಜಯಂಟ್ಸ್ | ಸನ್ ರೈಸರ್ಸ್ ಹೈದರಾಬಾದ್ | ಲಖನೌ |
| ಮೇ 20 | ಮಂಗಳವಾರ | ಸಂಜೆ 7.30 | ಕ್ವಾಲಿಫೈಯರ್ 1 | ಕ್ವಾಲಿಫೈಯರ್ 1 | ಹೈದರಾಬಾದ್ |
| ಮೇ 21 | ಬುಧವಾರ | ಸಂಜೆ 7.30 | ಎಲಿಮಿನೇಟರ್ | ಎಲಿಮಿನೇಟರ್ | ಹೈದರಾಬಾದ್ |
| ಮೇ 23 | ಶುಕ್ರವಾರ | ಸಂಜೆ 7.30 | ಕ್ವಾಲಿಫೈಯರ್ 2 | ಕ್ವಾಲಿಫೈಯರ್ 2 | ಕೋಲ್ಕತ್ತಾ |
| ಮೇ 25 | ಭಾನುವಾರ | ಸಂಜೆ 7.30 | ಫೈನಲ್ | ಫೈನಲ್ | ಕೋಲ್ಕತ್ತಾ |

## ವಿಟಾಕೀಸ್

# ಚಿತ್ರೀಕರಣ ಮುಗಿಸಿದ ದೂರ ತೀರ ಯಾನ

ಸಾಮಾಜಿಕ ಸಂದೇಶ ಸಾರುವ ವಿಭಿನ್ನ ಕಥೆಯ ಸಿನಿಮಾಗಳನ್ನು ನಿರ್ದೇಶಿಸಿ ಸೈ ಎನಿಸಿಕೊಂಡಿರುವ ಮಂಸೋರೆ, ದೂರ ತೀರ ಯಾನ ಸಿನಿಮಾವನ್ನು ನಿರ್ದೇಶಿಸಿದ್ದಾರೆ. ಈ ಚಿತ್ರದಲ್ಲಿ ವಿಜಯ್ ಕೃಷ್ಣ ನಾಯಕನಾಗಿ ನಟಿಸಿದ್ದು, ಪ್ರಿಯಾಂಕಾ ಕುಮಾರ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಖ್ಯಾತ ನಟ ಕಿಶೋರ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಬೆಂಗಳೂರು, ಉಡುಪಿ, ಕುಂದಾಪುರ, ಗೋಕರ್ಣ, ಮುರುಡೇಶ್ವರ, ಕಾರವಾರ, ಯಲ್ಲಾಪುರ, ದಾಂಡೇಲಿ, ಗೋವಾ ಸುತ್ತಮುತ್ತ ನಲವತ್ತು ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಇದೊಂದು ಪ್ರೇಮಕಥೆ ಆಧರಿಸಿದ ಸಿನೆಮಾ ಆಗಿದ್ದು, ಹರೆಯದ ಇಬ್ಬರು ಪ್ರೇಮಿಗಳು ಬೆಂಗಳೂರಿನಿಂದ ಗೋವಾಗೆ ಪಯಣ ಆರಂಭಿಸಿ, ಆ ಪ್ರಯಾಣದಲ್ಲಿ ತಮ್ಮ ಪ್ರೀತಿಯ ಅರ್ಥ ಹುಡುಕಿಕೊಳ್ಳುವುದು ಮೂಲ ಕಥೆಯಾಗಿದೆ. ಮಂಸೋರೆ ಬರೆದಿರುವ ಕಥೆಗೆ ಚೇತನಾ ತೀರ್ಥಹಳ್ಳಿ ಸಂಭಾಷಣೆ ಬರೆದಿದ್ದಾರೆ. ಈ ಸಿನಿಮಾದಲ್ಲಿ ಒಟ್ಟು ಆರು ಹಾಡುಗಳಿದ್ದು, ಬಕ್ಕೇಶ್ ಹಾಗೂ ಕಾರ್ತೀಕ್ ಹಾಡುಗಳನ್ನು ಸಂಯೋಜಿಸಿದ್ದಾರೆ. ಜಯಂತ್ ಕಾಯ್ಕಿಣಿ, ಕವಿರಾಜ್, ಪ್ರಮೋದ್ ಮರವಂತೆ ಹಾಗೂ ಕಿರಣ್ ಕಾವೇರಪ್ಪ ಸಾಹಿತ್ಯ ರಚಿಸಿದ್ದಾರೆ. ಈ ಚಿತ್ರದ ಶೀರ್ಷಿಕೆ ಗೀತೆಯನ್ನು ಅದ್ದೂರಿ ವೆಚ್ಚದಲ್ಲಿ ಚಿತ್ರೀಕರಿಸಿಕೊಳ್ಳಲಾಗಿದೆ. ಈ ಸಿನಿಮಾಗೆ ಸರವಣ ಕುಮಾರ್ ಕಲಾನಿರ್ದೇಶನವಿದ್ದು, ರಾಷ್ಟ್ರ ಪ್ರಶಸ್ತಿ ವಿಜೇತ ನಾಗೇಂದ್ರ ಕೆ ಉಜ್ಜನಿ ಸಂಕಲನ ನಿರ್ವಹಿಸಿದ್ದಾರೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿದ್ದು, ಜುಲೈನಲ್ಲಿ ದೂರ ತೀರ ಯಾನ ತೆರೆಗೆ ಬರಲಿದೆ. ಡಿ ಕ್ರಿಯೇಶನ್ಸ್ ನಿರ್ಮಾಣ ಸಂಸ್ಥೆಯಲ್ಲಿ, ಆರ್. ದೇವ ರಾಜ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.



# ಮಾದಪ್ಪನ ಭಕ್ತಿ ಲಹರಿ

ಮಹದೇಶ್ವರನ ಕುರಿತ ಹಲವು ಭಕ್ತಿ ಗೀತೆಗಳು ಮೂಡಿಬಂದಿವೆ. ಆ ಸಾಲಿಗೆ ಈಗ ಮುದ್ದುಗಾರ ಮಾದಪ್ಪ ಗೀತೆಯೂ ಸೇರಿದೆ. ಚೆಲ್ಲಾಟಗಾರ ಮಾದಪ್ಪ ಖ್ಯಾತಿಯ ಕಲಾಶ್ರೀ ಡಾ.ಜಯಶ್ರೀ ಅರವಿಂದ್ ಸಾಹಿತ್ಯ ಮತ್ತು ಸಂಗೀತದಲ್ಲಿ ಮೂಡಿಬಂದಿರುವ ಮುದ್ದುಗಾರ ಮಾದಪ್ಪ ಎಂಬ ಈ ಗೀತೆಯು ಜಾನಪದ ಶೈಲಿಯ ಸುಪ್ರಭಾತ ದೃಶ್ಯಗೀತೆ ಯಾಗಿ ಮೂಡಿಬಂದಿದೆ. ಗಾಯಕ ಅಜಯ್ ವಾರಿಯರ್ ಮತ್ತು ಶ್ರೀರಕ್ಷಾ ಪ್ರಿಯರಂ ಈ ಹಾಡಿಗೆ ದನಿಯಾಗಿದ್ದಾರೆ. ಮಲೆಮಹದೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ಹಾಡು ಬಿಡುಗಡೆಯಾಯಿತು. ಈ ಶುಭ ಸಂಧರ್ಭದಲ್ಲಿ ಸಂಗೀತ ನಿರ್ದೇಶಕಿ ಕಲಾಶ್ರೀ ಡಾ.ಜಯಶ್ರೀ ಅರವಿಂದ್, ಅರವಿಂದ್ ಕಿಗ್ಗಾಲ್, ಮಲೆ ಆಡಿಯೋ ವಿಡಿಯೋ ಸಂಸ್ಥೆಯ ಬಿ.ಅರುಣ್ ಕುಮಾರ್ ಸಿಂಗ್, ಎಂ.ಪ್ರಕಾಶ್, ಬಿ.ಹೇಮಾವತಿ ಮತ್ತು ತಲಕಾಡು ದೇವಸ್ಥಾನದ ಅಧ್ಯಕ್ಷರಾದ ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು. ಹೃಶಾಂಕ್ ಸಿಂಗ್ ಛಾಯಾಗ್ರಹಣ ಮತ್ತು ಸಂಕಲನ ಜವಾಬ್ದಾರಿ ನಿರ್ವಹಿಸಿದ್ದಾರೆ.

ನ್ಯಾಷನಲ್ ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ ಎಸ್‌ಸಿಆರ್ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾದ
ಡಾ| ಎಂ.ಎನ್. ರಾಜೇಂದ್ರ ಕುಮಾರ್ ಅವರಿಗೆ
ಹೃತ್ಪೂರ್ವಕ ಅಭಿನಂದನೆಗಳು

'ಸಹಕಾರ ರತ್ನ' ಡಾ| ಎಂ.ಎನ್. ರಾಜೇಂದ್ರ ಕುಮಾರ್
ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಬೆಂಗಳೂರು
ಅಧ್ಯಕ್ಷರು, ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಮಂಗಳೂರು

ಪರೋಪಕಾರಿ ಮನೋಭಾವನೆಗೆ ಹೊಸ ಸ್ವರೂಪ ನೀಡಿ, ತನ್ನ ಕ್ರಿಯಾಶೀಲ ನಾಯಕತ್ವದಿಂದ ಸಹಕಾರ ಕ್ಷೇತ್ರದ 'ಅನರ್ಘ್ಯ ರತ್ನ' ಎನಿಸಿದ ನಮ್ಮೆಲ್ಲರ ಆದರಣೀಯ ನಾಯಕರಾದ ತಾವು, ನ್ಯಾಷನಲ್ ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾಗೆ ಎಸ್‌ಸಿಆರ್ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಗೊಂಡ ಈ ಸಂದರ್ಭದಲ್ಲಿ ತಮಗೆ

ಹೃತ್ಪೂರ್ವಕ ಅಭಿನಂದನೆಗಳು

ವಿನಯ ಕುಮಾರ್ ಸೂರಿಂಜೆ
ಉಪಾಧ್ಯಕ್ಷರು

ಗೋಪಾಲಕೃಷ್ಣ ಭಟ್ ಕೆ.
ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

ನಿರ್ದೇಶಕರುಗಳಾದ ಸರ್ವಶ್ರೀ ಟಿ.ಜಿ. ರಾಜಾರಾಮ ಭಟ್, ಭಾಸ್ಕರ್ ಎಸ್. ಕೋಟ್ಯಾನ್, ಎಂ. ವಾದಿರಾಜ ಶೆಟ್ಟಿ, ಎಸ್. ರಾಜು ಪೂಜಾರಿ, ಶಶಿಕುಮಾರ್ ರೈ ಬಿ., ದೇವಿಪ್ರಸಾದ್ ಶೆಟ್ಟಿ, ಎಸ್.ಬಿ. ಜಯರಾಮ ರೈ, ಮೋನಪ್ಪ ಶೆಟ್ಟಿ ಎಕ್ಕಾರು, ಎಂ. ಮಹೇಶ್ ಹೆಗ್ಡೆ, ಬಿ. ಅಶೋಕ್ ಕುಮಾರ್ ಶೆಟ್ಟಿ, ಕೆ. ಜೈರಾಜ್ ಬಿ. ರೈ, ಕುಶಲಪ್ಪ ಗೌಡ ಪಿ., ಎಸ್.ಎನ್. ಮನ್ಮಥ, ರಾಜೇಶ್ ರಾವ್, ಸದಾಶಿವ ಉಳ್ಳಾಲ್, ರಮೇಶ್ ಹೆಚ್.ಎನ್. (ಸಹಕಾರ ಸಂಘಗಳ ಉಪನಿಬಂಧಕರು, ದ.ಕ.ಜಿಲ್ಲೆ, ಮಂಗಳೂರು) ಮತ್ತು ಸಿಬ್ಬಂದಿ ವರ್ಗ

ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ.
SCDCC BANK LTD.
H.O. MANGALORE
SCDCC BANK
ESTD:1913